
ಪಂಚಮ

ಸಂಪುಟ : 7 ನವಂಬರ್ 1983 ಬೆಲೆ : ರೂ. 5-00



ಪಂಚಮ

2514, ಕೆ. ಜಿ. ಕೊಪ್ಪಲು
ಮೈಸೂರು–570 014

'ಪಂಚಮ' ಪತ್ರಿಕೆಯ 'ಮಾನವ' ಮುದ್ರಣಾಲಯಕ್ಕಾಗಿ
ಒಂದು ಮನವಿ

ಬಂಧುಗಳೇ

ನಮ್ಮ ಬಹುದಿನದ ಕನಸೊಂದನ್ನು ನನಸು ಮಾಡಲು ಹೊರಟಿದ್ದೇವೆ. ಕಳೆದ ಏಳು ವರ್ಷಗಳಿಂದಲೂ 'ಪಂಚಮ' ಪತ್ರಿಕೆಯು ದೀನದಲಿತರ ಕಣ್ಣೀರು ಒರೆಸುತ್ತಾ ಬಂದಿದೆ. ನಾಡಿನ ಮೂಲೆ ಮೂಲೆಗಳಲ್ಲೂ ಜನಪ್ರಿಯವಾಗಿದೆ.

ಇದುವರೆಗೂ ತಿಂಗಳಿಗೊಮ್ಮೆ ಪ್ರಕಟವಾಗುತ್ತಿದ್ದ ಈ ನಿಮ್ಮ ಪತ್ರಿಕೆಯು ಈಗ ಹದಿನೈದು ದಿನಕ್ಕೊಮ್ಮೆ ಪ್ರಕಟವಾಗುತ್ತಿದೆ. ಇದರಿಂದಾಗಿ 'ಪಂಚಮ'ವು ವ್ಯವಸ್ಥಿತವಾಗಿ ಪರಿಣಾಮಕಾರಿಯಾಗಿ ಬರಲು ತನ್ನದೇ ಆದ ಮುದ್ರಣಾಲಯ ಹೊಂದುವುದು ಅತ್ಯಗತ್ಯವಾಗಿದೆ. ನಮ್ಮದೇ ಮುದ್ರಣಾಲಯವಾದಲ್ಲಿ ಪಂಚಮವನ್ನು ವಾರ ಪತ್ರಿಕೆ ಮಾಡಲೂ ಅನುಕೂಲವಾಗುತ್ತದೆ, ಮತ್ತು ನಮ್ಮೆಲ್ಲರ ಪ್ರಾಣವಾದ ಡಾ. ಅಂಬೇಡ್ಕರ್‌ರ ಸಮಗ್ರ ಸಾಹಿತ್ಯವನ್ನು ಕನ್ನಡದಲ್ಲಿ ಸಮರ್ಥವಾಗಿ ಅನುವಾದಿಸಿ ಪ್ರಕಟಿಸುವ ಬೃಹತ್ ಯೋಜನೆಯೊಂದನ್ನು ನಾವು ಕೈಗೊಳ್ಳಬಹುದು.

ಅದಕ್ಕಾಗಿ ಲಕ್ಷಾಂತರ ರೂಪಾಯಿ ವೆಚ್ಚವಾಗುವ ಮುದ್ರಣಾಲಯಕ್ಕೆ ತಮ್ಮಿಂದ ಉದಾರವಾಗಿ ಸಹಾಯವಾಗಬೇಕಿದೆ. ಈ ದೇಶದಲ್ಲಿ ಕೊಲೆ ಸುಲಿಗೆ ಅತ್ಯಾಚಾರ ಅನ್ಯಾಯ ದಬ್ಬಾಳಿಕೆಗೆ ತುತ್ತಾಗಿರುವ ನಮ್ಮ ಜನಾಂಗದ ಉಸಿರಾದ 'ಪಂಚಮ' ಪತ್ರಿಕೆಗೊಂದು ಮುದ್ರಣಾಲಯಕ್ಕೆ ತಾವೂ ತಮ್ಮ ಗೆಳೆಯರೂ ಉದಾರವಾಗಿ ಸಹಾಯ ಧನ ಸಹಕಾರ ನೀಡಿರಿ ಎಂದು ಪ್ರಾರ್ಥಿಸುವೆವು.

ನಿಮ್ಮ ನಂಬುಗೆಯ


ದೇವನೂರ ಮಹಾದೇವ
ವ್ಯವಸ್ಥಾಪಕ ಸಂಪಾದಕರು
ಪಂಚಮ ಪತ್ರಿಕೆ

ಸ್ನೇಹ ಪೂರ್ಣ
ಹರವೆ
ನೆನಪಿಗಾಗಿ....

ದಲಿತರು ಮತ್ತು ರೈತರ ನಡುವೆ
ಸ್ನೇಹಪೂರ್ಣ ಚರ್ಚೆಗಾಗಿ
ಈ "ದಲಿತರುಮತ್ತುರೈತಚಳುವಳಿ"
'ಪಂಚಮ' ವಿಶೇಷಾಂಕವನ್ನು
ಹುಟ್ಟು ಹಾಕಿದ
ನಮ್ಮೆಲ್ಲರ ಹರವೆ
ಈಗ ನಮ್ಮ ನಡುವೆ ಇಲ್ಲ !

ಅವರ ಸ್ನೇಹಪೂರ್ಣ ನೆನಪಿಗಾಗಿ
ಈ ವಿಶೇಷಾಂಕವನ್ನುಅರ್ಪಿಸುತ್ತಿದ್ದೇವೆ

—ಸಂಪಾದಕ




ದೇವಯ್ಯ ಹರವೆ

ಒಳಗೆ

‘ರೈತಮುನಿ’ ಶಿವಪ್ರಸಾದ್ ರೈತಸಂಘ ಬಿಟ್ಟಿದ್ದು ತಪ್ಪೆ?

ಕೆ. ಟಿ. ಶಿವಪ್ರಸಾದ್‌ರಂಥವರು ರೈತಸಂಘ ಬಿಡುವುದಕ್ಕಿಂತ ಅದರಲ್ಲೇ ಇದ್ದು ಅದನ್ನು ಸಾಂಸ್ಕೃತಿಕತೆ ಕಡೆಗೂ ಎಳೆಯುವುದು ನಮ್ಮ ಸಮಾಜದ ಆರೋಗ್ಯಕ್ಕೆ ಅಗತ್ಯ ಎಂದು ಭಾವಿಸಿರುವ ‘ಪಂಚಮ’ ವು ಶಿವಪ್ರಸಾದ್ ರೈತ ಸಂಘ ಬಿಟ್ಟದ್ದಕ್ಕಾಗಿ ನೋವಿನಿಂದಲೇ ಮಾತಾಡಿತು. **1980** ರಲ್ಲಿ ಇಡೀ ಕರ್ನಾಟಕದ ಮಿದುಳನ್ನು ರೈತಚಳುವಳಿ ಆವರಿಸುತ್ತಿದ್ದಾಗ, ರೈತ ಚಳುವಳಿ ಮುಂದಾಳುಗಳಾದ ಪ್ರೊ|| ಎಂ. ಡಿ. ನಂಜುಂಡಸ್ವಾಮಿ, ರುದ್ರಪ್ಪ, ಸುಂದರೇಶ್, ದತ್ತ, ಮೂರ್ತಿ ಮುಂತಾದವರ ನಡುವೆ ಇದ್ದ ಕಡಿದಾಳುಶಾಮಣ್ಣರಂಥ ಹಿಂದಾಳುವಿನೋಪಾದಿಯಲ್ಲಿ ಕಲಾವಿದ ಶಿವಪ್ರಸಾದ್ ರೈತ ಚಳುವಳಿಗೆ ಕೂಡಿಕೊಂಡಿದ್ದರು. ಕಡಿದಾಳು ಶಾಮಣ್ಣ ಋಷಿಯಂತೆ ರೈತಸಂಘದಲ್ಲಿದ್ದರೆ ಹೆಚ್ಚು ಕಮ್ಮಿ ಮುನಿಯಂತೆ ಇದ್ದ ಶಿವಪ್ರಸಾದ್ ಸ್ವಭಾವಕ್ಕನುಗುಣವಾಗಿ ಮುನಿದು ರೈತ ಸಂಘಕ್ಕೆ ಎಳ್ಳು ನೀರು ಬಿಟ್ಟರು.

ಪ್ರಸಾದ್‌ನಂಥ ಕಲಾವಿದರು, ಪ್ರಸಾದ್‌ನಂಥ ಕರಾರುವಾಕ್ಕುದಾರರು ಒಂದು ಸಂಘಟನೆಯಲ್ಲಿ ಇದ್ದರೆ, ಆ ಸಂಘಟನೆ ಗುಣಾತ್ಮಕವಾಗಿರಲು ಅಂಥವರು ಬಹಳ ಮಟ್ಟಿಗೆ ಕಾರಣರಾಗಿರುತ್ತಾರೆ. ಆದ್ದರಿಂದಲೇ ಪ್ರಸಾದ್ ರೈತಸಂಘ ಬಿಟ್ಟದ್ದನ್ನು ಯಾವನೊ ಒಬ್ಬ ಬಿಟ್ಟ ಎಂದು ರೈತಸಂಘ ಅಂದುಕೊಂಡರೆ ಆ ಸಂಘಟನೆಯ ಮಿದುಳಲ್ಲಿ ಐಬು ಇದೆ ಎಂದಾಗುತ್ತದೆ. ರೈತ ಸಂಘರ್ಷ ಬೆಳೆಯಲಿ, ಜಾತಿಮೀರಿ ದಲಿತರ ಹತ್ತಿರಕ್ಕೂ ಬರಲಿ ಎಂದು ಆಶಿಸುವ ಪಂಚಮದ ಆಶೆಯು ನಿಜವಾಗಲು ಪ್ರಸಾದ್ ಪ್ರಸಂಗವನ್ನು ರೈತಸಂಘವು ಗಂಭೀರವಾಗಿ ತೆಗೆದುಕೊಂಡರೆ ಮಾತ್ರ ಆಗುತ್ತದೆ.



ಈ ನಿಟ್ಟಿನಲ್ಲಿ ಪಂಚಮ ಸಂಪಾದಕರು ಹಾಗೂ ಶಿವಪ್ರಸಾದ್‌ರ ನಡುವೆ ನಡೆದ ಮಾತುಕತೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಗೋವಿಂದಯ್ಯ : ಶಿವಪ್ರಸಾದ್ ನೀವು ರೈತ ಸಂಘ ಬಿಟ್ಟಿರುವುದಕ್ಕೆ ನಮಗೆ ಬೇಸರವಾಗಿದೆ.... ಎಂದು ಆರಂಭವಾದ ಪ್ರಶ್ನೆಯನ್ನು ಪ್ರಸಾದ್ ನಿರೀಕ್ಷಿಸಿದ್ದಂತೆ ಕಾಣಲಿಲ್ಲ. ಸಾವರಿಸಿಕೊಂಡು ನಿಧಾನಕ್ಕೆ ಹೇಳಿದರು : ಬೇಸರ ನನ್ಗೂ ಆಗಿದೆ. ಮೂರು ವರ್ಷಗಳಿಂದ ಒಂದು ಸಂಘಟನೆಯಲ್ಲಿ ಕೆಲಸ ಮಾಡಿ ಅದನ್ನ ಬಿಡಬೇಕಾದರೆ ಯಾರಿಗಾದರೂ ಬೇಸರ ಆಗೇ ಆಗುತ್ತೆ. ಆದರೆ ನಾ ಬಿಡೋದಕ್ಕೆ ಕಾರಣಗಳಿದಾವೆ........ ಎನ್ನುತ್ತಾ ರೈತಸಂಘ ಶುರುವಾದ ಬಗೆಯನ್ನು ನೆನಪಿಸಿಕೊಂಡರು :

ನಾನು 1973ರಲ್ಲಿ ಜೆ. ಪಿ. ಚಳುವಳಿ ಮೂಲಕ ಈ ಸೋಷಲಿಸ್ಟರ ಸಹವಾಸಕ್ಕೆ ಬಿದ್ದು, ಪ್ರೊ||

ರೈತ ಚಳುವಳಿ : ಪಂಚಮದ ಆಶೆ ಮತ್ತು ನಿರಾಶೆ

ಪ್ರಿಯ ಪಂಚಮ ಓದುಗರೆ,

ಕಡೆಗಣಿಸಲ್ಪಟ್ಟ ಕತ್ತಲೆ ಜಗತ್ತಿನ ಕೂಗಾಗಲು ಪ್ರಯತ್ನಿಸುತ್ತಿರುವ ನಿಮ್ಮೆಲ್ಲರ ಪಂಚಮವು ಇಂಥ ಪುಟ್ಟ ಪ್ರಯತ್ನಗಳೊಂದಿಗೇ ಈ "ದಲಿತರು ಮತ್ತು ರೈತ ಚಳುವಳಿ" ವಿಶೇಷಾಂಕವನ್ನು ತಮ್ಮ ಕೈಗಿಡುತ್ತಿದೆ.

ಕತ್ತಲೆ ಜಗತ್ತಿನಅಸ್ಪೃಶ್ಯ ಮತ್ತು ಅವಮಾನಿತ ಮನುಷ್ಯ ಇಂದು ಬೆಳಕಿಗೆ ಕಣ್ಣುಬಿಡುವ ಸಂಕ್ರಮಣ ಸ್ಥಿತಿಯಲ್ಲಿದ್ದಾನೆ. ಕರ್ನಾಟಕದ ಎರಡು ಪ್ರಮುಖ ಪ್ರಗತಿಪರ ಚಳುವಳಿಗಳಾದ ರೈತ ಮತ್ತು ದಲಿತ ಚಳುವಳಿಗಳು ಈ ಬಗ್ಗೆ ಸ್ಪಷ್ಟ ಭರವಸೆ ಹುಟ್ಟಿಸಿವೆ. 1970 ರ ದಶಕದಲ್ಲಿ ಕರ್ನಾಟಕದಲ್ಲಿ ಜೆ. ಪಿ. ಚಳುವಳಿಯೊಂದಿಗೆ ಹೊಸದಾಗಿ ಚಿಗುರಿದ ಸಮಾಜವಾದಿ ಚಿಂತನೆ, ಕಾಲದ ಕುಲುಮೆಯಲ್ಲಿ ಕರಗಿ ಈಗ ರೈತ ಚಳುವಳಿಯಾಗಿ ಕಾಣಿಸಿಕೊಂಡಿದೆ. ಇನ್ನೊಂದು ಕಡೆ ಇದೇ ದಶಕದಲ್ಲಿ ಬೂಸಾ ಪ್ರಕರಣದೊಂದಿಗೆ ಮೊಳಕೆಯೊಡೆದ ದಲಿತ ಚಿಂತನೆ ಇಂದು ದಲಿತ ಚಳುವಳಿಯಾಗಿ ಕಾಣಿಸಿಕೊಂಡಿದೆ.

ಜಾತಿ ವ್ಯವಸ್ಥೆಯ ಅಂತಸ್ತುಗಳಲ್ಲಿ ಈ ಎರಡೂ ಚಳುವಳಿಗಳು ನಿಂತ ಭಿನ್ನ ನೆಲೆಗಳು ಮತ್ತು ಜಾತಿ ವ್ಯವಸ್ಥೆಯನ್ನು ತಮ್ಮ ಅನುಭವದ ಬೆಳಕಲ್ಲಿ ಕಂಡುಕೊಂಡ ಭಿನ್ನ ಬಗೆಗಳಿಂದಾಗಿ ಈ ಎರಡೂ ಚಳುವಳಿಗಳ ದಾರಿಗಳೂ ಭಿನ್ನಗೊಂಡಿವೆ ಮತ್ತು ಇದೇ ಕಾರಣವು ಇಂದು ಈ ಎರಡೂ ಸಂಘಟನೆಗಳನ್ನು ಪರಸ್ಪರ ಮುಖ ತಿರುಗಿಸಿ ನಿಲ್ಲಿಸಿದೆ.

ಇಷ್ಟಾದರೂ ಜಾತಿವ್ಯವಸ್ಥೆಯಿಂದ ಇಂಡಿಯಾದಲ್ಲಿ ಉಂಟಾಗಿರುವ ನರಕದ ರೊಚ್ಚಿನಿಂದ ಈಎರಡು ಚಳುವಳಿಗಳು ಮೂಡಿ ಬಂದಿರುವುದರಿಂದ ಇವುಗಳ ಗುರಿ ಮಾತ್ರ ಕಡೆಗಣಿಸಲ್ಪಟ್ಟ ಕತ್ತಲೆಯ ಮನುಷ್ಯನನ್ನು ಬೆಳಕಿಗೆ ತರುವುದು ಮತ್ತು ಆ ಮೂಲಕ ಒಂದರಿಂದ ಒಂದು ಕೊಳೆಯುತ್ತಿರುವ ಜಾತ್ಯಾಂಧ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಕೆಡವಿ, ಹೊಸದಾಗಿ ಜನಪರವಾಗಿ ಕಟ್ಟುವುದೇ ಆಗಿದೆ.

ಹಾಗೆ ನೋಡಿದರೆ, 1980 ರಲ್ಲಿ ಈ ಸಮಾಜದ ನೊಂದವರೆಲ್ಲರ ಆಶೆಯಂತೆ ಕಾಣಿಸಿಕೊಂಡ ರೈತ ಚಳುವಳಿ, ಸಂಪೂರ್ಣ ಕ್ರಾಂತಿಯ ಆಶಯವನ್ನು ತನ್ನೊಳಗೆ ಇಟ್ಟುಕೊಂಡಿದ್ದ ರೈತ ಚಳುವಳಿ ಈ ಮೂರು ವರ್ಷಗಳ ನಡಿಗೆಯಲ್ಲಿ ತನ್ನನ್ನು ತಾನು ಕೊಂದುಕೊಳ್ಳುವಂತ ಟ್ರೇಡ್ ಯೂನಿಯನ್ ಚಟುವಟಿಕೆಯ ಮಟ್ಟಕ್ಕೆ ಮಾತ್ರ ಇಳಿದಿದೆ. ಹಳ್ಳಿಗಳ ಕೃಷಿ ಜನಜೀವನವನ್ನು ತಿಂದು ಬೆಳೆಯುತ್ತಿರುವ ದೊಡ್ಡ ಕೈಗಾರಿಕೆಗಳ ಅರ್ಥಾತ್ ನಗರ ಸಂಸ್ಕೃತಿಯ ವಿರುದ್ಧ ಹೋರಾಟ ಆರಂಭಿಸಿದ ರೈತಸಂಘ ಈಗ ಈ ಹೋರಾಟದ ಆರ್ಥಿಕ ಆಯಾಮಕ್ಕೆ ಮಾತ್ರ ತನ್ನನ್ನು ಸೀಮಿತಗೊಳಿಸಿಕೊಂಡಂತೆ ಕಾಣುತ್ತಿದೆ. ಆರ್ಥಿಕ ಏಳಿಗೆಗಳೊಂದಿಗೆ ಪ್ರಾರಂಭವಾದರೂ ಜತೆಜತೆಗೆ ತನ್ನ ದಾರಿಗಳನ್ನು ವಿಸ್ತರಿಸಿಕೊಂಡು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಹಬ್ಬಬೇಕಾಗಿದ್ದ ರೈತಚಳುವಳಿ ಈಗ ಇನ್ನೂ ಕೆಳಕ್ಕೆ ಇಳಿದು, ವೈಜ್ಞಾನಿಕ ಬೆಲೆಯ ಹೆಸರಲ್ಲಿ ದೊಡ್ಡ ಕೈಗಾರಿಕೆ ಎದುರು ಪೈಪೋಟಿ ಮನೋಭಾವದಲ್ಲಿ ಮಾತ್ರ ರೈತರನ್ನು ನಿಲ್ಲಿಸಿದೆ.

ನಮ್ಮ ಮಾತು

ಈ ಮಿತಿಯನ್ನು ಮೀರಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಯಾಗಿ ಇದು ರೂಪುಗೊಂಡಿದ್ದರೆ ಇಷ್ಟೊತ್ತಿಗೆ ರೈತ ಚಳುವಳಿ ಕರ್ನಾಟಕದ ಪ್ರತಿಯೊಬ್ಬ ಮನುಷ್ಯನ ಚಳುವಳಿಯಾಗುತ್ತಿತ್ತೇನೊ ? ಮತ್ತು ಹಳೆಮೈಸೂರನ್ನು ಬಿಟ್ಟರೆ ಮಳೆಯನ್ನೇ ನಂಬಿನಿಂತ ಕರ್ನಾಟಕದ ಬರಡು ನೆಲಕ್ಕೂ ತನ್ನ ಬೇರುಗಳನ್ನು ಚಾಚುತ್ತಿತ್ತೇನೊ ? ಇಂಥ ಎಲ್ಲಾ ಸಾಧ್ಯತೆಗಳನ್ನು ಕಳಕೊಂಡು ರೈತಸಂಘವೇ ಬರಡಾಗುತ್ತಿದೆ ಎನ್ನಿಸಿದೆ. ಇಲ್ಲದಿದ್ದರೆ, ಒಂದು ಕಡೆ ಬಡ ಭಾರತೀಯನನ್ನು ನಿರುದ್ಯೋಗಕ್ಕೆ ನೂಕುತ್ತಿರುವ ಯಂತ್ರ ಸಂಸ್ಕೃತಿಯನ್ನು ನಿರಾಕರಿಸುತ್ತಾ, ಇನ್ನೊಂದು ಕಡೆ ಟ್ರ್ಯಾಕ್ಟರುಗಳ ಮೇಲೆ ರೈತ ಮೆರವಣಿಗೆ ನಡೆಸುವುದಕ್ಕೆ ರೈತ ನಾಯಕರು ನಾಚಿಕೆ ಪಡಬೇಕಿತ್ತು. ಒಂದು ಕಡೆ "ನಮ್ಮದು ಗ್ರಾಮ ಚಳುವಳಿ" ಎಂದು ಹೇಳಿಕೊಳ್ಳುತ್ತಾ ಇನ್ನೊಂದು ಕಡೆ ಗ್ರಾಮ ಜೀವನದ ಕ್ಯಾನ್ಸರಿನಂತಿರುವ ಅಸ್ಪೃಶ್ಯತೆಯನ್ನು, ಸಾಮಾಜಿಕ ಬಹಿಷ್ಕಾರಗಳನ್ನು ರೈತಸಂಘಗಳೇ ನಡೆಸುವಾಗ ರೈತ ನಾಯಕರುಗಳು ತಮ್ಮ ಜಾಣಕುರುಡಿಗೆ ತಾವೇ ಅಸಹ್ಯಪಡಬೇಕಿತ್ತು. ಇಂಡಿಯಾದ ಜಾತಿ ವ್ಯವಸ್ಥೆಯನ್ನು ಕಿತ್ತುಹಾಕದೆ ಇಂಡಿಯಾವನ್ನು ಪುನರ್ ನಿರ್ಮಿಸಲು ಸಾಧ್ಯವಿಲ್ಲ ಎಂದು ನಂಬಿರುವ ಸಮಾಜವಾದಿ ಚಿಂತಕರು ರೈತಸಂಘದಲ್ಲಿದ್ದಾಗಲೂ ನಾವು ಇಂಥ ಮಾತುಗಳನ್ನಾಡಬೇಕಾಗಿ ಬಂದಿರುವ ವಿಪರ್ಯಾಸಕ್ಕಾಗಿ ವಿಷಾದಿಸುತ್ತೇವೆ.

ಆದರೆ ಅಸ್ಪೃಶ್ಯ ಮತ್ತು ಅವಮಾನಿತ ಜಾತಿಗಳ ದೃಷ್ಟಿಯಿಂದ ಹೀಗೆ ಮಾತಾಡಲೇಬೇಕಾಗಿದೆ. ಏಕೆಂದರೆ ಅಸ್ಪೃಶ್ಯನ ದೃಷ್ಟಿಯ ಹಳ್ಳಿಗಾಡಿನ "ಶೋಷಕ" ಜಾತಿಗಳೆಲ್ಲ ರೈತಸಂಘದಡಿಯಲ್ಲಿ ಇಂದು ಒಂದಾಗಿ ನಿಂತಿವೆ. ಇವು ತಮ್ಮ ಹಿತಾಸಕ್ತಿಗಾಗಿ ಮಾತ್ರ ಹೋರಾಡುವುದಾದರೆ ಒಂದುಕಡೆ ಕೃಷಿ-ಕೈಗಾರಿಕಾಸಮತೆಗಾಗಿ ಪ್ರಯತ್ನಿಸುತ್ತಾ ಇನ್ನೊಂದು ಕಡೆ ಕೂಲಿಕಾರ ಅಸ್ಪೃಶ್ಯನನ್ನು ತುಳಿದು ಅವನ ಮೇಲೆ ನಿಂತು ಉಳಿಯಬೇಕಾಗುತ್ತದೆ. ಅಥವಾ ಇವೇನಾದರು ಒಂದು ಪಕ್ವ ಸಾಂಸ್ಕೃತಿಕ ಹೆಜ್ಜೆ ಹಾಕಿ ನಡೆದರೆ ಅಸ್ಪೃಶ್ಯನನ್ನು ತುಳಿದುಕೊಂಡು ಬದುಕುವಅಗತ್ಯಅನಿವಾರ್ಯವಾಗುವುದಿಲ್ಲ. ಜಾತಿಶ್ರೇಣೀಕರಣವಕಡೆ-ನಡೆದರಂತೂ ರೈತಸಂಘದಲಿತರ ಪ್ರಾಣರಕ್ಷಕನಾಗುತ್ತದೆ.

ಇನ್ನೊಂದು ಕಡೆ ದಲಿತ ಸಂಘರ್ಷ ಸಮಿತಿಯು ಆತಂಕ ಭೀತಿಯಿಂದ ರೈತಸಂಘದತ್ತ ನೋಡುತ್ತಾ, ರೈತ ಚಳವಳಿ ಬಗ್ಗೆ ಯಾವುದೇ ನಿಲುವನ್ನು ತೆಗೆದುಕೊಳ್ಳದೆ ನಿಂತಿದೆ ಹಾಗೆಯೇ ರೈತಸಂಘಕ್ಕೆ ದಲಿತ ಸಂಘದ ಬಗ್ಗೆ ಅಸಹನೆ ಇದ್ದಂತಿದೆ. ಒಂದರ ಮುಖ ಇನ್ನೊಂದು ನೋಡುತ್ತಿಲ್ಲ. ಎಷ್ಟೇ ಕಷ್ಟವಾದರೂ ಇವು ಒಂದನ್ನೊಂದು ನೋಡಿ ಪರಸ್ಪರ ಮಾತೊ ಜಗಳವೊ ಆಡಿದರೆ ನಿಂತ ಕಡೆ ನಿಂತು ಬಿಟ್ಟಿರುವ ಈ ಎರಡೂ ಭರವಸೆಯ ಸಂಘಟನೆಗಳು ಚಲಿಸಬಹುದೇನೋ.

— ಸಂಪಾದಕ

ಮುಂದಿನ ಸಂಚಿಕೆಗಳಲ್ಲಿ :

- ತೇಜಸ್ವಿ ಲಂಕೇಶರೊಟ್ಟಿಗೆ ದೇನು ಮಾತು
- ತ್ಯಾಗಿ, ದತ್ತ, ಮೂರ್ತಿಗಳ ತುಲನಾತ್ಮಕ ಬರಹ-ಇಂದೂಧರ
- ಗಾಂಧಿ ಚಿತ್ರ ಪ್ರತಿಕ್ರಿಯೆಗಳಿಗೆ ದೇವನೂರ್ ಉತ್ತರ
- ಕೆಂಡದ ನಡುವೆ ಮುನಿವೆಂಕಟಪ್ಪನವರೊಡನೆ ಗೋವಿಂದಯ್ಯ
- ಕೆನರಾಬ್ಯಾಂಕ್‌ನ ಜಕ್ಕಣ್ಣನವರ್ ಹೇಳುವ : "ಕಮ್ಯೂನಿಸ್ಟರು ತಮ್ಮ ಮೂಗು ಕುಯ್ದುಕೊಳ್ಳುತ್ತಿದ್ದಾರೆ"

ಎಂ. ಡಿ. ನಂಜುಂಡಸ್ವಾಮಿಯವರ ಜೊತೆ ಕೈಲಾದ ಕೆಲಸ ಮಾಡತೊಡಗಿದೆ. ಹಾಸನದಲ್ಲಿ ಸಮತಾ ವೇದಿಕೆ ಅಂತ ಶುರುಮಾಡ್ದೊ. ಅದರ ವಿಂಗ್ ಆಗಿ ಪ್ರೊ॥ ನಂಜುಂಡಸ್ವಾಮಿಯವರ ನಾಯಕತ್ವದಲ್ಲಿ ರೈತಸಂಘ ಅಂತ ಶುರುಮಾಡ್ದೊ. ಆ ಸಮಯಕ್ಕೆ ಭದ್ರಾವತಿಯಲ್ಲಿ ಕಬ್ಬು ಬೆಳೆಗಾರರ ಸಂಘ ಅಂತ ಇತ್ತು. ಅದರಲ್ಲಿ ರುದ್ರಪ್ಪ, ಸುಂದ್ರೇಶ್ ಇದ್ದರು. ಈ ರೈತಸಂಘ ಶುರುಮಾಡೊದಕ್ಕೆ ನಮಗಿದ್ದ ಮುಖ್ಯವಾದ ಕಾರಣ ಎಂದರೆ ಈ ಮೂಲಕ ಜೆ. ಪಿ. ಚಳುವಳಿ ಥರಾನೆ ಸಮಗ್ರ ಬದಲಾವಣೆಗಾಗಿ ಚಳುವಳಿ ರೂಪಿಸೋದು. ರೈತಸಂಘ ಪ್ರಾರಂಭದಲ್ಲಿ ಅದೇ ಥರ ಶುರುವಾಯ್ತು. ಆದರೆ ಅದೇ ಥರ ಮುನ್ನಡೆಯಲಿಲ್ಲ........

ಈಗ ನೋಡಿ ಏನಾಗಿದೆ: 19 ಬೇಡಿಕೆಗಳಿದಾವೆ, ಇವುಗಳಲ್ಲಿಕೂಲಿಕಾರರವು ಎಷ್ಟುಅಂದ್ರೆ 5ಅಂತಾರೆ. ಆದರೆ ಈ ಬೇಡಿಕೆಗಳಿಗೆ ಎಷ್ಟು ಸ್ಟ್ರೆಸ್ ಇದೆ ಮತ್ತು ಈ ಬೇಡಿಕೆಗಳನ್ನು ಕಾರ್ಯತಃ ಪಡೆಯೋಕೆ ಎಷ್ಟು ಪ್ರಯತ್ನ ಪಡ್ತಿದೀವಿಅನ್ನೋದು ತುಂಬಾ ಮುಖ್ಯ. ಜೊತೆಗೆ ಸಂಘಟನೇಲಿ ಕೆಲವು Basics ಇದಾವೆ, Whether this organisation is going in Domocratic direction ಅನ್ನೋದುತುಂಬಾ ಮುಖ್ಯ. ನೋಡಿ 4 ವರ್ಷಗಳಿಂದ ರೈತಸಂಘದವರು ಯಾವ ಚುನಾವಣೆನೂ ಮಾಡಿಲ್ಲ. ಎಲ್ಲಾ ನೇಮಕಾತಿ ಸಮಿತಿಗಳಾಗಿ ಕೆಲ್ಸ ಮಾಡ್ತಿದಾವೆ. ಇವರು ಡೆಮೊಕ್ರಸಿ ಬಗ್ಗೆ ಉದ್ದವಾಗಿ ಹೇಳುತ್ತಾ ಹೀಗೆ ಮಾಡ್ತಾ ಹೋದ್ರೆ Basic change ತರೋಕ್ಕಾಗಲ್ಲ. ಇದನ್ನ ನಾನು ಹೇಳ್ತಾನೆ ಬಂದೆ. ಆದರೆ ಅವರು ನಮಗೆ ಕಾಲಾವಕಾಶನೇ ಇಲ್ಲ, ಗೋಲಿಬಾರ್ ಆಗ್ತಿದಾವೆ ಅಂತ ಕಾರಣಕೊಡ್ತಾ ಬಂದ್ರು. But I think they are not enoughreasons.

ಒಂದು ಸಂಘಟನೇಲಿ dealing of money is very important. ದುರ್ವ್ಯವಹಾರಗಳು ಯಾವ್ದೂ ಇರಬಾರ್ದು ಅಂದ್ರೆ ಅಕೌಂಟ್ ಇರಬೇಕು. ಅಕೌಂಟ್ ಇಲ್ಲಾ ಅಂದ್ರೆ ದುರ್ವ್ಯವಹಾರಗಳು ಇದಾವೆ ಅಂತ ಅರ್ಥ. ನಮ್ಮ ಹಾಸನ ಯೂನಿಟ್‌ನಲ್ಲಿ ಅಕೌಂಟ್ ಇಟ್ಟಿಲ್ಲ! ಇದ್ನ 2 ವರ್ಷಗಳಿಂದ ಹೇಳ್ತಾ ಬಂದ್ವಿ; ಆದರೆ ಯಾರೂ ಏನೂ ಕ್ರಮ ತಗಳ್ಳಿಲ್ಲ.

ನಾನು ರೈತಸಂಘ ಬಿಡೋದಿಕ್ಕೆ ಇವೆಲ್ಲಕ್ಕಿಂತ ಮುಖ್ಯವಾದ ಕಾರಣ ಅಂದ್ರೆ—ನನಗೆ ಅನ್ನುಸ್ತು ಈ ಸಂಘಟನೆ Caste oriented ಆಗಿ ಅಂದರೆ Middle caste oriented ಆಗಿ ತುಂಬಾ ಪ್ರಬಲವಾಗಿ ಬೆಳಿತಾ ಇದೆ ಅಂತ. ಗೌಡ್ರು ಲಿಂಗಾಯಿತರ organisation ಆಗಿ ಬೆಳಿತಾ ಇದೆ ಅದ್ರೂ ನಡೆಯುತ್ತೆ. ಇಲ್ಲಿ ಬಡಗೌಡ್ರು, ಬಡ ಲಿಂಗಾಯಿತ್ರೂ ಇದಾರೆ, that's Why Iam not using middle class, middle caste ಅಂತೀದ್ದೀನಿ. ನನಗೆ ಗೊತ್ತಿದ್ದಂಗೆ ಹಾಸನ ಜಿಲ್ಲೇಲಿ ಯಾರೂ ಹರಿಜನ ಪದಾದಿಕಾರಿಗಳು ಇಲ್ಲ. ಇಡೀ ಕರ್ನಾಟಕದಲ್ಲಿ ಇದೇ ಸ್ಥಿತಿ ಇದೆ. ಇದೊಂದು ದೊಡ್ಡ ಕೊರತೆ. ಈ caste feelings ಹೋಗ್ಸೊದಿಕ್ಕೆ ರೈತಸಂಘ ಏನೂ ಕ್ರಮ ತಗಳ್ತಾ ಇಲ್ಲ. ಅದರ ಬದಲು ಈ caste feeling ನ ಭದ್ರ ಮಾಡ್ತಿದ್ದಾರೆ, ಏಕೆಂದರೆ they have a logic saying that Gowda and Linghyaths have cover most of the population of Karnataka...ಹೀಗೆ ಅದು ಭದ್ರ ಆಗ್ತಾ ಇದೆ.

ಇದೇಕಾರಣಕ್ಕೊಏನೋ caste orientation ನ ತೆಗೆದು ಹಾಕೊವಂತ ಯಾವ ಚಳುವಳಿನೂ ಮಾಡ್ಲಿಲ್ಲ, except inter-caste marriages. ಅದನ್ನೂ ಕೂಡ ಹಳ್ಳಿಗಳ ಮಟ್ಟದಲ್ಲಿ ಒಂದು ಕಾರ್ಯಕ್ರಮ ಆಗಿ ಪ್ರಚಾರ ಮಾಡ್ಲಿಲ್ಲ. ಪೆರಿಯಾರ್ ಮೂವ್‌ಮೆಂಟ್ ಥರದ ಕೆಲವು ಸಾಂಸ್ಕೃತಿಕ ಚಳುವಳಿಯ ಪ್ರಯತ್ನವನ್ನು ನಾವು ರೈತಸಂಘ ಶುರುವಾಗುವುದಕ್ಕೆ ಮುಂಚೆ ಮಾಡಿದ್ದೊ. ಆದ್ರೆ ರೈತಸಂಘ ಶುರುವಾದ ಮೇಲೆ ಆ ರೀತಿ ಮಾತಾಡಬೇಡಿ ಅಂತಲ್ಲೂ ನಮಗೆ ಆದೇಶಗಳು ಬಂದವು.

ನೂತು-ಕತೆ

ಏಕೆಂದರೆ it will affect the organisation, people wont join ಅಂತ. ನನಗೆ ಅನ್ನೋದು cultural movement ಅಂದ್ರೆ ಪೆರಿಯಾರ್ ಥರದ ಚಳುವಳಿ ಆಗ್ದೆ ಇದ್ರೆ ಈ caste barriar ನ ತೆಗೆಯೋದು ತುಂಬಾ ಕಷ್ಟ. ರೈತಸಂಘದ cultural wing ಅಂತಾನೆ ಮಾಡ್ಕೊಂಡು ಈ problem tackle ಮಾಡಬಹುದು. ಆದರೆ ರೈತಸಂಘ ಈ ಬಗ್ಗೆ ಏನೇನೂ ಚಿಂತಿಸಿದಂತೆ ಕಾಣಲಿಲ್ಲ. ಅಂದ್ರೆ ನನಗನ್ನಿಸ್ತು ಈ movementನಿಂದ total change ಸಾಧ್ಯವೇ ಇಲ್ಲಾ ಅಂತ.

ಗೋವಿಂದಯ್ಯ : ಅಂದ್ರೆ ಈಗ ನೀವು ರೈತ ಸಂಘ ಬಿಟ್ಟು ದಲಿತ ಸಂಘರ್ಷ ಸಮಿತಿ ಜತೆ ಕೆಲಸ ಮಾಡ್ತಾ ಇದೀರಾ ?

ಶಿವಪ್ರಸಾದ್ : ಹೌದು, ಬಾಳ್ಳುಪೇಟೆ ಘಟನೆಯಿಂದಾಗಿ ನಾನು ದಲಿತ ಸಂಘರ್ಷ ಸಮಿತಿಯಲ್ಲಿ involve ಆಗಿದ್ದೀನಿ. ಅಲ್ಲಿನ ಪರಿಹಾರ ಕಾರ್ಯಕ್ರಮಗಳು ನನ್ನ ಹೆಗಲ ಮೇಲೂ ಬಿದ್ದಿರುವುದರಿಂದ ಸಮಿತಿ ಜೊತೆ ಕೆಲಸ ಮಾಡ್ತಾ ಇದ್ದೀನಿ.

ಗೋವಿಂದಯ್ಯ : ನೀವು ರೈತಸಂಘ ಬಿಡೊಹಕ್ಕೆ ಏನೇನು ಕಾರಣ ಕೊಟ್ರೊ ಅವೆಲ್ಲ ದಲಿತ ಸಂಘರ್ಷ ಸಮಿತಿಯಲ್ಲೂ ಇದಾವಲ್ಲಾ ? ಉದಾಹರಣೆಗೆ ನೋಡಿ, ನೀವು ರೈತಸಂಘದಲ್ಲಿ democratic norms ಇಲ್ಲ ಅಂದ್ರಿ. ದಲಿತ ಸಂಘರ್ಷ ಸಮಿತಿಯಲ್ಲೂ ಅದಿಲ್ಲ. ಈವರೆಗೆ ಸಮಿತಿಯವರೂ ಚುನಾವಣೆ ನಡೆಸಿಲ್ಲ. ಜೊತೆಗೆ ಇವರೂ ಸಹ ಲೆಕ್ಕಾಚಾರವನ್ನು ಸರಿಯಾಗಿ ಇಟ್ಟಿಲ್ಲ !

ಶಿವಪ್ರಸಾದ್ : ನಿಮ್ಮ ಮಾತಲ್ಲೇ ಒಂದುಮುಖ್ಯವಾದ ವಿಚಾರವನ್ನು ಗಮನಿಸಿದ್ದೇನೆ. ನಿಮಗೆ ಕೊನೆಪಕ್ಷ ಲೆಕ್ಕಾಚಾರ ಸರಿಯಾಗಿ ಇಟ್ಟಿಲ್ಲ ತಪ್ಪಾಗಿದೆ ಎಂದು ಒಪ್ಪಿಕೊಳ್ಳುವ ಸ್ವವಿಮರ್ಶೆಯಾದರೂ ಇದೆ. ನಾನು ಹಾಸನ ಜಿಲ್ಲಾ ರೈತಸಂಘ ಸಭೆಯಲ್ಲಿ ಲೆಕ್ಕ ಕೇಳ್ದಾಗ ಕೆಲವು ಮುಖ್ಯಸ್ಥರು ಹೇಳಿದ್ರು: "ನಾವು ದುಡ್ಡೇಕಲೆಕ್ಟ್ ಮಾಡಿಲ್ಲಅಕೌಂಟ್ ಎಲ್ಲಿ ಬರುತ್ತೆ" ಅಂತ. ದಲಿತಸಂಘರ್ಷ ಸಮಿತಿ ಚುನಾವಣೆ ಬಗ್ಗೆ ಹೇಳೊದಾದರೆ If I become a member I will stress that it should be done.

ಗೋವಿಂದಯ್ಯ : ಇರಲಿ, ನೀವು ರೈತಸಂಘ ಬಿಡೋಡಕ್ಕೆ ಕಾರಣ ಹೇಳ್ತಾ ಇದು ಬರಿ ಗೌಡ್ರು ಲಿಂಗಾಯಿತರಿಗೆ ಸೀಮಿತವಾಗಿದೆ ಅಂದ್ರಿ, ದಲಿತ ಸಂಘರ್ಷ ಸಮಿತಿಯ ಚಳುವಳಿ ಕೂಡ ಎಲ್ಲಾ ಅಸ್ಪೃಶ್ಯ ಮತ್ತು ಅವಮಾನಿತ ಜಾತಿಗಳನ್ನು ಕೂಡಿಕೊಳ್ಳದೆ ಕೇವಲ ಹೊಲೆ-ಮಾದಿಗರಿಗೇ ಸೀಮಿತವಾಗಿದೆ ಅಂತ ನಮಗನ್ನಿಸಿದೆಯಲ್ಲಾ ?

ಶಿವಪ್ರಸಾದ್ : ದಲಿತ ಸಂಘರ್ಷ ಸಮಿತಿಯಲ್ಲೂ ಇದೇ ಸ್ಥಿತಿ ಇದ್ದರೆ ಇದನ್ನ ತಿದ್ದೋದಕ್ಕೂ ಹೊಡೆದಾಡಲೇ ಬೇಕಾಗುತ್ತೆ ಅಷ್ಟೆ.

ಗೋವಿಂದಯ್ಯ : ನೀವು ರೈತ ಸಂಘದಲ್ಲೇ ಹೊಡೆದಾಡಿದ್ರೆ ರೈತರು ಮತ್ತು ದಲಿತರು ತಮ್ಮ ಬಿಡುಗಡೆಗಾಗಿ ಒಂದೇ ದಿಕ್ಕಲ್ಲಿ ನಡೆವ ಸಾಧ್ಯತೆ ಹೆಚ್ಚಾಗುತ್ತಿರಲಿಲ್ಲವಾ ?

ಶಿವಪ್ರಸಾದ್ : ನನಗೇನೂ ಹಾಗೆ ಅನ್ಸಲ್ಲ. ನಾನೂ catalist ಆಗಿ ಕೆಲಸ ಮಾಡಲು ಬಾಳ ಪ್ರಯತ್ನಿಸಿದೆ. ರಾಜೇಂದ್ರಪುರದ ಘಟನೆಯಲ್ಲಿ ದಲಿತರು ಮತ್ತು ರೈತರು ಒಟ್ಟಿಗೆ ಕಾರ್ಯಕ್ರಮ ಮಾಡಿದ್ವಿ. ಸಕಲೇಶಪುರ ತಾಲ್ಲೂಕು ಒಂದರಲ್ಲೇ ಇಂಥ ಪ್ರಯತ್ನಗಳು ನಡೆದವು. ಆದರೆ ಹಾಸನ ಜಿಲ್ಲಾ ರೈತಸಂಘಕ್ಕೆ ಇದರ ಬಗ್ಗೆ ಕೂಡ ಅಸಮಾಧಾನ ಇತ್ತು !

ಗೋವಿಂದಯ್ಯ : ರೈತಸಂಘ ಹುಟ್ಟಿ ಹೆಚ್ಚು ಅಂದರೆ 3ವರ್ಷ ಆಗಿದೆ. ಆದರೆ ದಲಿತ ಸಂಘರ್ಷ ಸಮಿತಿ ಹುಟ್ಟಿ 6ವರ್ಷ ಕಳೆದಿವೆ. 3ವರ್ಷದ ರೈತ ಸಂಘದಲ್ಲಿ ಆಗದೇ ಇರೋದನ್ನು 6ವರ್ಷ ಕಳೆದಿರೂ

(ಮುಂದಿನ ಪುಟಕ್ಕೆ)

ಗುರಿ ನೋಡುತ್ತಾ ದಾರಿಯನ್ನು ಮರೆತ ರೈತಸಂಘ

ರೈತಸಂಘದಲ್ಲಿ Means And Ends ಸಿದ್ಧಾಂತವನ್ನು ಹೇಳ್ತಾರೆ. ಅಂದರೆ ಗುರಿ ಮತ್ತು ದಾರಿ ಒಂದಕ್ಕೊಂದು ಪೂರಕವಾಗಿರಬೇಕು ಅಂತ. ಅಂದರೆ ನಾವು ಒಂದು ಗುರಿಯನ್ನು ಇಟ್ಕಂಡಿದ್ರೆ ಆ ಗುರಿಯನ್ನ ನಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಕಾಣುವಂತಿರಬೇಕು. ಅಂದರೆ ಅಹಿಂಸೆ ನಮ್ಮ ಸಂಘಟನೆಯ ಆದರ್ಶ ಆಗಿದ್ದರೆ ನಮ್ಮ ಸಂಘಟನೆ ಮತ್ತು ಚಳುವಳಿಯ ಪ್ರತಿಹೆಜ್ಜೆಯೂ ಅದನ್ನೇ ತೋರಬೇಕು. ಆದೇ ರೀತಿ–ವಿಕೇಂದ್ರಿಕರಣದ ಗುರಿಯನ್ನ ನಾವು ಇಟ್ಕಂಡಿದ್ರೆ ನಮ್ಮ ಸಂಘಟನೆಯ, ಚಳುವಳಿಯ ಪ್ರತಿಹೆಜ್ಜೆಯೂ ವಿಕೇಂದ್ರಿಕರಣವನ್ನ ತೋರಿಸುತ್ತಿರಬೇಕು. ಕೇಂದ್ರಿಕರಣದಿಂದ ವಿಕೇಂದ್ರಿಕರಣಕ್ಕೆ ಹೋಗುವುದು ಸಾಧ್ಯವಿಲ್ಲ ಅಂತ ಗೊತ್ತಿರಬೇಕು.

ಆದರೆ ರೈತ ಸಂಘದ 'ಗುರಿ ಮತ್ತು ದಾರಿ' ಸಿದ್ಧಾಂತ ಬಾಯಿ ಮಾತಲ್ಲೇ ಉಳಿಯಿತು. ಗುರಿಯನ್ನು ಹೇಳ್ತಾ ದಾರಿಯನ್ನು ಮರೆತರು.

ನಮ್ಮ ಹಾಸನ ಜಿಲ್ಲೇಲಿ ರೈತಸಂಘ ಪ್ರಾರಂಭ ಆದಾಗ ರೈತಸಂಘದ ಮುಂದಾಳುಗಳೆಲ್ಲ ಎಲ್ಲಾ ಕಡೆ ಭಾಷಣ ಮಾಡ್ತಾ : "ಕಾಫಿ ಪ್ಲಾಂಟೇಷನ್ ಇರೋಕಡೆ ಒತ್ತುವರಿ ಜಾಸ್ತಿಯಾಗಿದೆ. ಇದನ್ನೆಲ್ಲ ಬಿಡ್ಸೋದಕ್ಕೆ ನಾವು ಹೋರಾಡ್ತೇವೆ. ಕೆಲಸಗಾರರಿಗೆ ಸರಿಯಾಗಿ ಕೂಲಿ ಕೊಡ್ತಾ ಇಲ್ಲ, ಸರಿಯಾದ ಕೂಲಿ ನಿಗದಿ ಮಾಡೋದಕ್ಕೂ ರೈತಸಂಘ ಹೋರಾಡುತ್ತೆ. ಆಮೇಲೆ ನೂರಾರು ಎಕರೆ ಭೂಮಿಯನ್ನ ಒಬ್ಬೊಬ್ಬ ಪ್ಲಾಂಟರುಗಳೇ ಹಿಡ್ಕಂಡಿದಾರೆ. ಇದನ್ನೆಲ್ಲ ಕೂಲಿಕಾರರಿಗೆ ಹಂಚಬೇಕು, ಸಮಾನತೆ ಬರಬೇಕು" ಇತ್ಯಾದಿ ಹೇಳಿಕೊಂಡು ಬಂದ್ರು, ಈ ಭಾಷಣಗಳಿಂದ ಪ್ಲಾಂಟರುಗಳು ಸಹಜವಾಗೇ ಗಾಬರಿಯಾದರು. ಆದರೆ....

ತಾನು ರೈತಸಂಘ ಬಿಟ್ಟದ್ದಕ್ಕೆ ಕಾರಣಗಳನ್ನು ಹೇಳಿರುವ ಕೆ. ಟಿ ಶಿವಪ್ರಸಾದ್ ಇಲ್ಲಿ ಒಂದೊಂದೆ ಘಟನೆಗಳನ್ನು ವಿವರಿಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇದು ಅವರ ಮಾತುಕತೆಯ ಮುಂದುವರೆದ ಭಾಗ

ರಾಜೇಂದ್ರಪುರ: ಪಾಳೆಗಾರಶಾಹಿಗೆ ಏಟು

ಇದೇ ಸಮಯಕ್ಕೆ ಬಾಳ್ಳುಪೇಟೆ ಹತ್ತಿರ ಬರೀ ಹರಿಜನರೇ ಇರೋ ರಾಜೇಂದ್ರಪುರ ಅಂತ ಒಂದು ಊರಿದೆ. ಈ ಊರಿನ ಪಕ್ಕದ ಎಸ್ಟೇಟಿನವನೊಬ್ಬ ಇಬ್ಬರುಹರಿಜನರ ಮನೆಗಳ್ನೂಸೇರಿಸ್ಕಂಡುಜನರು ತಿರುಗಾಡೊ ದಾರಿಗೆಲ್ಲ ಬೇಲಿ ಹಾಕಿ ತನ್ನ ಎಸ್ಟೇಟಿಗೆ ಸೇರಿಸ್ಕಂಡ. ಇದರ ವಿರುದ್ಧ ನಾವು ರೈತಸಂಘದವರು ಹೋರಾಡಿ ಗೆದ್ವಿ. ಎಷ್ಟರ ಮಟ್ಟಿಗೆ ಗೆದ್ವಿ ಅಂದ್ರೆ ನಮ್ಮ ಜಿಲ್ಲೆಯ ರೈತ ಮುಂದಾಳುಗಳೆಲ್ಲ ಬಂದು ಪಂಚಾಯ್ತಿ ಕೂತು ಆ ಪ್ಲಾಂಟರಿಗೆ ದಂಡ ಹಾಕಿ ಬೇಲಿಯನ್ನ ಕೀಳಿಸಿದ್ವಿ. ಪ್ಲಾಂಟರುಗಳಿಗೆ ಇದೊಂದು ದೊಡ್ಡ ಥ್ರೆಟ್ ಆಯ್ತು. ಅಲ್ಲಿ ನಡಿತಾ ಇದ್ದ ಪಾಳೆಗಾರಶಾಹಿಗೆ ಒಂದು ಏಟು ಬಿದ್ದಂಗಾಯ್ತು. ಇದನ್ನ ಪ್ಲಾಂಟರುಗಳು ಜ್ಞಾಪಕದಲ್ಲಿ ಇಟ್ಕಂಡು ಕಾಯ್ತಾ ಇದ್ರು.

ಸಂಕ್ಯಾಪುರ: ನೊಂದವರ ಭೂಮಿ ಕೀಳಲು ಸನ್ನಾಹ

ಇದಾದ ಮೇಲೆ ಸಂಕ್ಯಾಪುರ ಅಂತ ಬಾಳ್ಳುಪೇಟೆ ಹತ್ರನೆ ಇರೊ ಇನ್ನೊಂದು ಊರಲ್ಲಿ ಹರಿಜನರು ಕುರುಬರು ಮತ್ತು ಇತರೆ ಹಿಂದುಳಿದ ಜಾತಿಗೆ ಸೇರ್ದಂಗೆ ಒಟ್ಟು 14 ಜನಕ್ಕೆ ಎರಡೆರಡು ಎಕರೆಯಂತೆ ಸರ್ಕಾರದಿಂದ ಭೂಮಿ ಸಿಕ್ಕಿತ್ತು. ಇದ್ನ ಹೇಗಾದ್ರೂ ಮಾಡಿ ಇವರಿಂದ ಕಿತ್ಕೊಬೇಕು ಅಂತ ಕೆಲವು ಲಿಂಗಾಯಿತರು ಪ್ಲಾನ್ ಮಾಡಿದ್ರು. ಮಠಕ್ಕೆ ಜಮೀನು ಬೇಕು, ಸ್ಕೂಲಿಗೆ ಜಮೀನುಬೇಕು, ಅಂತ ನಾಟಕ ಆಡಿದ್ರು. ಆ 14 ಜನಕ್ಕೂ ಇನ್ನೂ ಸಾಗುವಳಿ ಚೀಟಿ ಸಿಕ್ಕಿರಲಿಲ್ಲ. ಆದ್ರಿಂದ ಹರಿಜನರೇನಾದ್ರೂ ಆ ಭೂಮಿಗೋಗಿ ಮನೆ ಕಟ್ಟಿದರೆ ಈ ಲಿಂಗಾಯಿತರು ಹೋಗಿ ಮನೆ ಕಿತ್ತಾಕೋದು ಇತ್ಯಾದಿ ಮಾಡ್ತ ಇದ್ರು. ಈ ವಿಷಯಾನ ನಾನು ವಿಶೇಷ ಜಿಲ್ಲಾಧಿಕಾರಿ ಹತ್ರ ಮಾತಾಡ್ದೆ. ಇದೇ ಸಮಯಕ್ಕೆ ಈ ಲಿಂಗಾಯಿತರೇನ್ಮಾಡಿದ್ರೂ, ನಮ್ಮ ಜಿಲ್ಲಾ ರೈತ ಸಂಘದವರಿಗೆ ಕಿವಿಊದಿ ನನ್ನ ವಿರುದ್ಧವೇ ಎತ್ತಿ ಕಟ್ಟಿದರು. ಇದರ ಪರಿಣಾಮ ಏನಾಯ್ತು ಅಂದರೆ ರೈತಸಂಘದ ಜಿಲ್ಲಾ ಸಭೆ ನಡೆಯೊವಾಗ ನಮ್ಮ ರೈತ ಸಂಘದವರೇ ಸ್ಕೂಲಿಗೆ ಈ ಭೂಮಿ ಬೇಕು ಅಂತ ವಾದ ಮಾಡೋದಿಕ್ಕೆ ಶುರು ಮಾಡಿದರು. ನಾನು "ನಮ್ಮ ಮೂಲಗುರಿ ಇರೋದು ಭೂಮಿ ಇಲ್ಲದವರಿಗೆ ಭೂಮಿ ಕೊಡ್ಬೇಕು ಅಂತ, ಇದು ಕೂಲಿಕಾರ್ಮಿಕರಿಗೂ ಸೇರ್ದಂತ ಕಾರ್ಯಕ್ರಮ. ಇದನ್ನ ಮರಿಬಾರ್ದು" ಅಂದೆ. ಆದರೆ ನಮ್ಮ ರೈತಸಂಘದವರು ಅದ್ನ ಕೇಳೊ ಮಟ್ಟದಲ್ಲಿ ಇರ್ಲಿಲ್ಲ.

ಅಬ್ಬಾ ಘಟನೆ : ದುಡ್ಡು ಕೊಟ್ಟು ದೌರ್ಜನ್ಯ ಮುಚ್ಚಿದ ಪ್ಲಾಂಟರ್ಸ್

ಇದಾದ್ ಮೇಲೆ ಅಬ್ಬಾ ಅನ್ನೊ ಊರಲ್ಲಿ ಇನ್ನೊಂದು ಘಟನೆ ನಡೆಯಿತು, ಇದೂ ಕೂಡ ಬಾಳ್ಳುಪೇಟೆ ಪಕ್ಕದಲ್ಲೇ ಇದೆ. ಇಲ್ಲಿ ಒಂದು ಹರಿಜನ ಹೆಂಗಸು ಏನೊ ಸೌದೆ ತಗಂಡ್ಳು ಅಂತೇಳಿ ಒಬ್ಬ ಪ್ಲಾಂಟರು ಆಕೆಗೆ ಸಕತ್ ಹೊಡ್ದು ದಾರಿಲೆಲ್ಲ ಒದ್ದ. ಇದು ನಮ್ಮ ಗಮನಕ್ಕೆ ಬಂದಾಗ ನಾವು ರೈತಸಂಘದಿಂದ ಆತನಿಗೆ ನೋಟಿಸ್ ಕಳಿಸ್ದೊ. ಆವಾಗ ಅಲ್ಲಿನ ಪ್ಲಾಂಟರುಗಳೆಲ್ಲ ಆ ಸಂಕ್ಯಾಪುರದವ್ರ ಜೊತೆ ಸೇರ್ಕಂಡು–ಅವ್ರು ಇವ್ರೆಲ್ಲಾ ಸಂಬಂಧಿಕರೇ–ಅವರೇ ಒಂದು

ದಲಿತ ಸಂಘರ್ಷ ಸಮಿತಿಯಿಂದ ಆಗುತ್ತೆ ಎಂದು ಏಕೆ ನಿರೀಕ್ಷಿಸುತ್ತೀರಿ ?

ಶಿವಪ್ರಸಾದ್ ; ಇದು ಮುಖ್ಯವಾದ ವಿಚಾರ. ದಲಿತ ಸಂಘರ್ಷ ಸಮಿತಿ Lower caste oriented ಆಗಿರೋದಿಂದ್ರ there are more hopes : ಹರಿಜನ ಗಿರಿಜನರು ಕೆಳಜಾತಿಯಾಗಿರುವುದರ ಜೊತೆಗೆ ಶೇ. 95ರಷ್ಟು ಕೆಳವರ್ಗ ಕೂಡ ಆಗಿರುವುದರಿಂದ ಜಾತಿ ವ್ಯವಸ್ಥೆಯನ್ನು ಮುರಿಯೊ ದಿಕ್ಕಲ್ಲಿ ಕೆಳಜಾತಿಗಳು most effective group ಆಗಿ ಕೆಲಸ ಮಾಡಬಹುದು. ಅವು ಸೀರಿಯಸ್ಸಾಗಿ ಪ್ರಯತ್ನಿಸಿದರೆ ಮಾತ್ರ. ಮಧ್ಯಮ ಜಾತಿಗಳಿಗೆ ಈ ಸಾಧ್ಯತೆ ಕಡಿಮೆ.

ಗೋವಿಂದಯ್ಯ : ರೈತಸಂಘದ ನಾಯಕತ್ವದ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಶಿವಪ್ರಸಾದ್ : ನನ್ನ ಪ್ರಕಾರ ಇದು centralised leadership. ತಾಲ್ಲೂಕು ಜಿಲ್ಲಾ ಸಮಿತಿಗಳು ಚೂರು ಸ್ವತಂತ್ರವಾಗಿಲ್ಲ. ಅವು ರಾಜ್ಯ ಸಮಿತಿಯ ನಿರ್ಧಾರ ಮತ್ತು ಸಲಹೆಗಳಿಗಾಗಿ ಕಾಯುತ್ತಿರುತ್ತವೆ ಅಷ್ಟೆ.

ಗೋವಿಂದಯ್ಯ : ರೈತಸಂಘದಲ್ಲಿ ಏನೆಲ್ಲಾ ನ್ಯೂನ್ಯತೆಗಳಿದ್ದರೂ ಅದರಲ್ಲಿ ಒಳ್ಳೆಯ ಅಂಶ ಏನಾದರೂ ಗುರುತಿಸಿದ್ದೀರಾ ?

ಶಿವಪ್ರಸಾದ್ : ಒಳ್ಳೆ ಅಂಶ ಅಂದ್ರೆ the idea of Raitha sangha itself a very grand thing. ಹಿಂದೆ ಯಾವ್ದು ಈ ಥರ ಆಗಿತ್ತಿಲ್ಲ.

ತಸಂಘ ಮಾಡ್ಕಂಡು, ಆ ಹರಿಜನ ಹುಡುಗಿ
ದೆಗೆ ಒಂದಿಷ್ಟು ದುಡ್ಡುಕೊಟ್ಟು ಸುಮ್ನೆ ಇರು
ಬುಟ್ರು. ಆದ್ರೆ ದುಃಖದ ವಿಚಾರ ಏನೂ
ಂದ್ರೆ, ಇದ್ಕೆಲ್ಲ ನಮ್ಮ ಜಿಲ್ಲಾ ರೈತಸಂಘದವರು
ಪೋರ್ಟ್ ಮಾಡಿದ್ದು. ಈ ಸಪೋರ್ಟಿಂದ
ಲ್ಯಾಂಟರ್ಸ್ಸೆಲ್ಲ ಮುಂದಾಲೋಚ್ನೆಯಿಂದ್ಲೆ ರೈತ
ಘದ ಒಳಗಡೆ ಬಂದೂ ಸೇರ್ಕಂಡ್ರು. ಈವಾಗ
ಾಗುತ್ತೆ ಅಂದ್ರೆ ಇವ್ರೆಲ್ಲ ದುಡ್ಡು ಕೊಡ್ತಾರೆ
ವು ಮಾಡಿದ್ನೆಲ್ಲಾ ಮುಚ್ಚಾಕ್ತಾ ಹೋಗ್ತಾರೆ.
ರಿಜನರು ಹಿಂದುಳಿದವರು ತಲೆ ಎತ್ತದಂಗೆ
ಗುತ್ತೆ. ಬಾಳ್ಳುಪೇಟೆಲಿ ಹೀಗೆ ಆಯ್ತು... ...

ಾಳ್ಳುಪೇಟೆ ಹಲ್ಲೆ : "ದೌರ್ಜನ್ಯ ಂಡಿಸಿದರೆ ರೈತಸಂಘ ಬಿಡು ್ತಾರೆ" ಎನ್ನುವ ರೈತನಾಯಕರು

ರಾಜೇಂದ್ರಪುರ ಮತ್ತು ಅಬ್ಬಾ ಘಟನೆಗಳು
ೀತಾ ಇದ್ದಂಗೆ ಬಾಳ್ಳುಪೇಟೆ ಪ್ಲಾಂಟರ್ಸ್
ೆಲ್ಲ ಎಚ್ಚೆತ್ಕಂಡ್ರು. ಏಕೊ ರೈತಸಂಘ ನಮ್ಮ
ರುದ್ಧವಾಗಿ ತಲೆ ಎತ್ತುತ್ತಾ ಇದೆ, ಇದ್ನ ಮಟ್ಟ
ಾಕ್ಬೇಕು ಅಂತ ಯೋಚ್ನೆ ಮಾಡ್ಕಂಡು ಕಾಯ್ತಾ
ದ್ರು. ಬಾಳ್ಳುಪೇಟೆ ಹರಿಜನರೆಲ್ಲ ರೈತಸಂಘ
ಲ್ಲೇ ಇದ್ರು. ಇದೇ ಸಮಯಕ್ಕೆ ರೋಟರಿ
ಬ್‌ನವರು, ಅಂದ್ರೆ ಈ ಪ್ಲಾಂಟರ್‌ಗಳೇ, ಹರಿ
ನೋದ್ಧಾರದ ಹೆಸರ್ನಲ್ಲಿ ಹರಿಜನರಿಗೆ ಬಟ್ಟೆ
ಂಚಿದರು. ಹಳೆಬಟ್ಟೆ ಹಂಚಿದರು ಅಂತ ಹರಿಜ
ರ ಕಡೆಯಿಂದ ಸ್ವಲ್ಪ ಗೊಂದಲ ಆಯ್ತು.
ದೆಲ್ಲಿ ಹಾಸನದ ಜನತಾ ಮಾಧ್ಯಮ ಪತ್ರಿಕೇಲಿ
ೊಡ್ಡದಾಗಿ ಬಂದು ವಾತಾವರಣ ಸ್ವಲ್ಪ ಬಿಸಿ
ೆಯಾಯ್ತು. ಇದರಿಂದ ಪ್ಲಾಂಟರ್‌ಗಳೆಲ್ಲ ತಮ್ಮದೇ
ಂದು ಕಮಿಟಿ ಮಾಡ್ಕಂಡು, ಈ 83ರ ಮಾರ್ಚಿ
ಲ್ಲಿ, ಸುಮಾರು ನೂರೈವತ್ತು ಜನ ಇದ್ರು ಅಂತ
ಣುತ್ತೇ 'ಹೊಲೆಯರಿಗೆ ದಿಕ್ಕಾರ' ಅಂತ
ೂಗ್ಕೊಂಡು ನಾಯಿ ಅಟ್ಟಿಸ್ಕಂಡು ಹೋದಂಗೆ
ೀದಿಬೀದಿಲೆಲ್ಲ ಹರಿಜನರಿಗೆ ಹೊಡೆದರು. ಮಾರನೆ
ದಿನ ಪೋಲೀಸಿನವರು ಬಂದು ಹೊಡೆದವರ
ಮೇಲೆ ಏನೂ ಕೇಸಾಕದೆ ಶಾಂತಿಸಭೆ ಕರೀಬೇಕು
ಅಂದ್ರು. ಅಷ್ಟೊತ್ತಿಗೆ ದಲಿತಸಂಘರ್ಷಸಮಿತಿಯು
ತ್ಯಾಗಿಯೂ ಅಲ್ಲಿಗೆ ಬಂದರು. ನಾನು ಮತ್ತು
ತ್ಯಾಗಿ ಹೊಡೆದವರ ಮೇಲೆ ಏನೂ ಕೇಸಾಕದೆ
ಶಾಂತಿಸಭೆ ಕರೆಯೋದು ತಪ್ಪು ಅಂದ್ವಿ. ರೈತ
ಸಂಘದ ದತ್ತ ಅಲ್ಲೇ ಒಂದು ಭಾಷಣಮಾಡಿ
"ಪ್ಲಾಂಟರುಗಳೆಲ್ಲ ನನ್ನ ಬೂಟಿಗೆ ಸಮಾನ"
ಅಂದ. ಇದರಿಂದ ಶಾಂತಿಸಮಿತಿಯೂ ಆಗ್ಲಿಲ್ಲ,
ರೈತಸಂಘದ ನಾಯಕರುಗಳೂ ಅವರವರ ಮನೆಗ
ಳಿಗೆ ಹೊರಟೋದರು. ಆದರೆ ಅಲ್ಲಿದ್ದ ನಾವು

ಪರಿಣಾಮವನ ಎದುರಿಸಬೇಕಾಯಿತು. ಪೋಲೀಸರು "ದೊಂಬಿ ಕೇಸು" ಅಂತ ಮಾಡಿ ಹೊಡಿಸ್ಕಂಡ ಹರಿಜನರ್ನೆ ಅರೆಸ್ಟು ಮಾಡಿ ಮೈಸೂರು ಜೈಲಿಗೆ ಹಾಕಿದರು. ಈ ಬಗ್ಗೆ ರೈತಸಂಘ ಏನೇನೂ ಮಾಡ್ಲಿಲ್ಲ. ಅಂತೂ ದಲಿತ ಸಂಘರ್ಷಸಮಿತಿ ಜೊತೆ ಸೇರ್ಕಂಡು ನಾವೇ ಹೇಗೋ ಇದನ್ನೆಲ್ಲ ಎದುರಿಸಿದ್ವಿ. ಒಂದಿನ ನಮ್ಮ ಸಕಲೇಶಪುರ ತಾಲ್ಲೂಕು ರೈತಸಂಘದ ಅದ್ಯಕ್ಷ ವಿಶ್ವನಾಥನ್ನ "ಯಾಕೆ ಎಲ್ಲಾ ಗೊತ್ತಿದ್ದೂ ನೀವು ಈ ಮೇಲ್ಜಾತಿಯವರ ದಬ್ಬಾಳಿಕೇನ ವಿರೋದಿಸ್ತಾ ಇಲ್ಲ ? ಒಂದು ಪತ್ರಿಕೆ ಹೇಳಿಕೆನಾದ್ರೂ ಕೊಡಿ" ಅಂತ ಕೇಳಿದೆ. ಅದಕ್ಕೆ ವಿಶ್ವನಾಥ—"ಇಲ್ಲಿ ಲಿಂಗಾಯಿತ್ರು ದೌರ್ಜನ್ಯ ಮಾಡಿರೊದ್ರಿಂದ ಇವರ ವಿರುದ್ಧ ಪೇಪರ್ ಸ್ಟೇಟ್‌ಮೆಂಟ್ ಕೊಟ್ರೆ ಲಿಂಗಾಯಿತರೆಲ್ಲ ರೈತಸಂಘ ಬಿಟ್ಟು ಹೋಗ್ತಾರೆ" ಎಂದು ಹೇಳಿ ನನ್ನನ್ನು ದಂಗು ಬಡಿಸಿದ.

ಇದಾದ ಮೇಲೆ ದೌರ್ಜನ್ಯದ ಮೇಲೆ ದೌರ್ಜನ್ಯ ಶುರುವಾಯ್ತು. ಪ್ಲಾಂಟರುಗಳು ಬಾಳ್ಳುಪೇಟೆಯ ಸಿದ್ಧಯ್ಯನ ಕೈಕಾಲುಗಳ ಕೊಚ್ಚಿದ್ರು. ಇಷ್ಟಾದರೂ ರೈತಸಂಘದವರ ಧೋರಣೆ ಬದಲಾಗಲಿಲ್ಲ. ಆದರೆ ಇಲ್ಲಿನ ಜನರನ್ನು ರಾಜಿ ಮಾಡಿಸಲು ಸಿದ್ಧ ಎನ್ನುವಂತೆ ಒಂದು ಪತ್ರಿಕೆ ಹೇಳಿಕೆ ಕೊಟ್ಟರು. ಇದಕ್ಕೋಸರ ಮೊದಲು ಏನೇನು ನಡೀತು ಚರ್ಚೆ ಮಾಡೋಣ ಅಂತ ರೈತಸಂಘದ ವೆಂಕಟೇಶಮೂರ್ತಿ ಹೇಳಿದರು. ಇದೆಲ್ಲದರಿಂದ ನನಗೆ ದುಃಖ ಆಯ್ತು. ಯಾಕೆಂದರೆ ಹರಿಜನರು ಹೊಡಿಸ್ಕಂಡಿರೋದು ಕೊಚ್ಚಿಸ್ಕಂಡಿರೋದು ಕಣ್ಣಿಗೆ ಒಡೆಯುವಂತೆ ಇದ್ದರೂ ಸಹ ಇದನ್ನೇನು ಚರ್ಚೆ ಮಾಡೊದು ? ಕೊಚ್ಚಿಸ್ಕಂಡಿರೋದು ಒಳ್ಳೇದೊ ತಪ್ಪೊ ಅಂತ ಚರ್ಚೆ ಮಾಡೋದು ಅಂದ್ರೆ ಏನು ?

ಯೋಚಿಸುತ್ತಾ ಹೋದಂತೆ ರೈತಸಂಘ ಇನ್ನು ಸರಿಹೋಗಲಾರದಷ್ಟು ಕೊಳೆತು ಹೋಗುತ್ತಿದೆಯೇನೊ ಅನ್ನಿಸಿತು. ಜೊತೆಗೆ ರೈತಸಂಘಕ್ಕೆ ಪಾಠವಾಗುವಂತೆ ಬಾಳ್ಳುಪೇಟೆ ಹೋರಾಟವನ್ನು ಕೊನೆತನಕ ಕೊಂಡೊಯ್ಯಬೇಕು ಅನ್ನಿಸಿತು.

ಬಾಳ್ಳುಪೇಟೆ : ದಲಿತ ಚಳುವಳಿ ರೈತ ಚಳುವಳಿಗಳ ಪ್ರಯೋಗಾಲಯ

ಕೆ. ಟಿ. ಶಿವಪ್ರಸಾದ್ ತನ್ನ ಕಾರ್ಯಕ್ಷೇತ್ರವಾಗಿ ಆಯ್ದುಕೊಂಡಿರುವ ಬಾಳ್ಳುಪೇಟೆಯು ಕರ್ನಾಟಕದ ರೈತಚಳುವಳಿ ಮತ್ತು ದಲಿತ ಚಳುವಳಿಗಳ ಪ್ರಯೋಗಾಲಯುವಾಗುವ ಸೂಚನೆಗಳನ್ನು ಕಾಣಿಸಿದೆ.

ದಲಿತ ಸಂಘರ್ಷ ಸಮಿತಿಯು ಹೇಳುತ್ತಾ ಆದರೆ ಮಾಡಿ ತೋರಿಸದಂಥ ದಲಿತರ ಆರ್ಥಿಕ ಸ್ವಾವಲಂಬನೆ ಹಾಗೂರೈತಸಂಘವುಹೇಳುತ್ತಾಆದರೆ ಮಾಡಿ ತೋರಿಸದಂತ ಸಣ್ಣ ಕೈಗಾರಿಗಳ ಪ್ರಯೋಗ, ಸಹಕಾರಿಬೇಸಾಯ, ಹಳ್ಳಿಯ ಆರ್ಥಿಕ ವಿಕೇಂದ್ರಿಕರಣ– ಇವುಗಳ ಏಕಕಾಲದ ಪ್ರಯೋಗ ಬಾಳ್ಳುಪೇಟೆಯಲ್ಲಿ ಈಗಾಗಲೇ ಪ್ರಾರಂಭವಾಗಿದೆ.

ಬಾಳ್ಳುಪೇಟೆ ಹೋರಾಟದಿಂದಾಗಿ ಈಗ ಇಲ್ಲಿನ ದಲಿತರಿಗೆ ದಕ್ಕಿರುವ ಸುಮಾರು 200 ಎಕರೆ ಭೂಮಿಯನ್ನ ಸಹಕಾರಿ ಬೇಸಾಯಕ್ಕೆ ಪರಿವರ್ತಿಸುವ ಕಾರ್ಯಪಾರಂಭವಾಗಿದ್ದು.ಜೊತೆಗೆ ಹಸು ಕುರಿ ಕೋಳಿ ಸಾಕಾಣಿಕೆ, ಮರಗೆಲಸ, ಹೊಲಿಗೆಕೇಂದ್ರ, ಅವಲಕ್ಕಿ ಕೈಗಾರಿಕೆ, ಚರ್ಮ ಕೈಗಾರಿಕೆ ಇತ್ಯಾದಿ ಹಲವಾರು ಸಣ್ಣಕೈಗಾರಿಕೆಗಳನ್ನು ಕಾರ್ಯರೂಪಕ್ಕಿಳಿಸಲಾಗುತ್ತಿದೆ.

"ಸರ್ಕಾರದವರು ತೋರಿಕೆಗಾಗಿ ಹೇಳುತ್ತಿರುವ ಇಂಥ ಕಾರ್ಯಗಳನ್ನೇ ನಾವು ಕೈಗೆತ್ತಿಕೊಂಡು ನಾವು ಕಟ್ಟಬೇಕಾಗಿರುವ ಚಳುವಳಿಗಳಿಗೆ ಸೈದ್ಧಾಂತಿಕ ತಳಪಾಯವನ್ನು ಸೃಷ್ಟಿಸಬೇಕಾಗಿದೆ" ಎನ್ನುವ ಕೆ. ಟಿ. ಶಿವಪ್ರಸಾದ್‌ರವರು "ಇದನ್ನು ನಾವು ಪ್ರಯೋಗ ಮಾಡುವುದರ ಮೂಲಕ ಮೊದಲನೆಯದಾಗಿ ನಮಗೆ ಸಣ್ಣ ಕೈಗಾರಿಕೆಗಳನ್ನ ಹಳ್ಳಿಗಳಲ್ಲಿ ಹೇಗೆ ನಡೆಸಬೇಕು ಅನ್ನೊ ಅನುಭವ ಬರುತ್ತೆ ; ಎರಡನೆಯದಾಗಿ ಇದರ ಮೂಲಕ ದೊಡ್ಡಕೈಗಾರಿಕೆಗಳನ್ನು ಹೇಗೆ ಎದುರಿಸಬೇಕಾಗುತ್ತೆ ಅನ್ನೋದು ಗೊತಾಗುತ್ತೆ ಮತ್ತು ಮೂರನೆಯದಾಗಿ ಇವೆಲ್ಲಕ್ಕಿಂತ ಮುಖ್ಯವಾಗಿ ಈ ಪ್ರಯೋಗದಿಂದ ಹರಿಜನರನ್ನು ತಮ್ಮ ಕಾಲ ಮೇಲೆ ತಾವೇ ನಿಲ್ಲೋದು ಹೇಗೆ ಅನೋದನ್ನ ಕಲಿಸಿದಂತೆ ಆಗುತ್ತೆ" ಎನ್ನುತ್ತಾರೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ರೈತಸಂಘ ಬಿಟ್ಟು ಮಾಡಬೇಕಾಗಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುವ ಪ್ರಸಾದ್ "ಈ ಎಲ್ಲಾ ಕಾರ್ಯಕ್ರಮಗಳಿಗೆ ರೈತಸಂಘ ಬೆಂಬಲಿಸುವುದಾದರೆ ರೈತಸಂಘದೊಟ್ಟಿಗೇ ಈ ಪ್ರಯೋಗವನ್ನು ಇನ್ನೂ ತೀವ್ರಗೊಳಿಸಬಹುದು"—ಎನ್ನುವ ಆಶಯವನ್ನೂ ಇಟ್ಟುಕೊಂಡಿದ್ದಾರೆ.

ದುರಹಂಕಾರ ಮೂಲ "ತ್ಯಾಗ" ಗುಮಾನಿ ಮತ್ತು ಅಸೂಯೆ ಮೂಲವಾದ "ಸ್ಟ್ರಾಟಜಿ" ಹೆಸರಲ್ಲಿ ವ್ಯಕ್ತಿ ಮತ್ತು ಆ ಮೂಲಕ ಸಮೂಹವನ್ನು ಅಪ್ರಾಮಾಣಿಕಗೊಳಿಸಬಲ್ಲ ಕಮ್ಯೂನಿಸಂ ಹಾವಳಿ ಇಂದು ದಲಿತ ಮತ್ತು ರೈತ ಚಳುವಳಿಗಳನ್ನೂ ಆವರಿಸಿ ಕುಳಿತಿದೆ. ಇನ್ನೊಂದು ಕಡೆ ಸ್ವಚ್ಛ ಸ್ವಂತಿಕೆ ಮೂಲಕ ಮಾತ್ರ ಸಾಮೂಹಿಕ ಸ್ವಚ್ಛತೆ ಮತ್ತು ಈ ಮೂಲಕ ಮಾತ್ರವೇ ಯಾವುದೇ ರೋಗಿಷ್ಟ ವ್ಯವಸ್ಥೆಯನ್ನು ಬದಲಿಸಬಲ್ಲ ಧೃಡ ಸಂಘಟನೆ ಎಂದು ನಂಬಿದ್ದ, ನಂಬಿದ್ದನ್ನು ಹೇಳಿದ, ತನ್ನ ಬದುಕಲ್ಲೇ ಮಾಡಿ ತೋರಿದಂಥ ಗಾಂಧಿ ಈ ನೆಲದ ಅಪಹಾಸ್ಯಕ್ಕೆ ಒಳಗಾಗಿದ್ದಾರೆ. ಇದೇ ಗುಂಗಿನಲ್ಲಿ ಮೊನ್ನೆ ಅಟೆನ್‌ಬರೊನ "ಗಾಂಧಿ" ಚಿತ್ರ ನೋಡಿದ ನಮ್ಮ ದೇವನೂರ ಮಹಾದೇವ ಮೇಲಿನ ಸ್ಥಿತಿಗಳಿಗೆ ಕಾರಣ ಮತ್ತು ಪರಿಹಾರ ಎರಡನ್ನೂ ಕಂಡಂತೆ, ಮೈಮೇಲೆ ಬಂದಂತೆ ರಾತ್ರಿಗಳಿಡೀ ನಿದ್ದೆಗೆಟ್ಟು ಬರೆದ ಚಿತ್ರ ವಿಮರ್ಶೆಯೊಂದಿಗೆ ಸ್ವವಿಮರ್ಶೆ ಮತ್ತು ದಲಿತ ಸಂಘರ್ಷ ಸಮಿತಿ ವಿಮರ್ಶೆ ಇಲ್ಲಿದೆ—ಸಂಪಾದಕ


ನಾನು ಗಾಂಧಿ ಚಿತ್ರ ನೋಡಿದೆ ಅಥವಾ

೧

ಆಕಾಶದೆತ್ತರಕ್ಕೆ ಎರಡು ಗೇಣು ಕಮ್ಮಿ

ನಾನು ಗಾಂಧಿ ಚಿತ್ರ ನೋಡಿದೆ. ದಲಿತ ಸಂಘರ್ಷ ಸಮಿತಿ ಈ ಚಿತ್ರವನ್ನು ಬಹಿಷ್ಕರಿಸಿರುವುದರಿಂದ ಈ ರೀತಿಯಾಗಿ ಹೇಳಬೇಕಾಗಿ ಬಂದಿದೆ. ಹೀಗಾಗಿ ನಾನು ಗಾಂಧಿ ಚಿತ್ರ ನೋಡಿರುವುದು ನಮ್ಮ ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪರಾದಿಯಾಗಿ ಗೆಳೆಯರಿಗೆ ಬೇಸರವಾಗಿರುತ್ತದೆ, ಆದರೆ ಆಶ್ಚರ್ಯ ಆಗಿರುವುದಿಲ್ಲ. ಯಾಕೆಂದರೆ ಈ ಅಶಿಸ್ತಿನ ಮಹಾದೇವ ಬಹಿಷ್ಕರಿಸಿದ್ದರೂ ನೋಡಿಬಿಡುತ್ತಾನೆ ಅಂತ ಅವರು ಮೊದಲೇ ಅಂದುಕೊಂಡಿರಲೂಬಹುದು. ಹಾಳಾಗಲಿ, ಅವ ಬೇಕಾದರೆ ಗುಟ್ಟಾಗಿ ನೋಡಿಕೊಳ್ಳಲಿ, ಅದನ್ನೂ ಯಾಕೆ ಬರೆದ, ಬರೆದು ಯಾಕೆ ಸಂಘಟನೆಯಲ್ಲಿ ಗಲಿಬಿಲಿ ಉಂಟುಮಾಡಿದ ಎಂಬ ಸಿಟ್ಟು ಅವರಲ್ಲೀಗ ಉಂಟಾಗಿರಬೇಕು. ಅವರಿಗೆ ಏನೇ ಆಗಿರಲಿ, ಬೇಸರವೊ ಕೋಪವೊ, ಸಂಘಟನೆಗೆ ನುಂಗಲಾರದ ತುತ್ತೊ, ಏನೇ ಆಗಿರಲಿ ನಾನು ಬರೆಯಲೇಬೇಕು ಅನ್ನಿಸಿದೆ, ಬರೆಯುತ್ತಿದ್ದೇನೆ:

ಮೊದಲನೆಯದಾಗಿ ಗಾಂಧಿಚಿತ್ರ ಬಹಿಷ್ಕರಿಸುವುದ ನಾನು ಬಯಸಿರಲಿಲ್ಲ. ವಿರೋಧಿಸಿದರೂ ನನ್ನ ಮಾತು ನಡೆಯುವ ಸ್ಥಿತಿಯಲ್ಲೂ ಇರಲಿಲ್ಲ. ಬಹಿಷ್ಕಾರ ಬಹುಮತದ ನಿರ್ಣಯವಾಗಿತ್ತು. ಹಾಗಿದ್ದೂ ನಮ್ಮ ಗೋವಿಂದಯ್ಯ, ಯಾವ ಸಿನಿಮಾ ಬಂದರೂ ಬಿಡದೆ ನೋಡುವ ಗೋವಿಂದಯ್ಯ, ಗಾಂಧಿ ಚಿತ್ರ ಬಂದಾಕ್ಷಣವೇ ಬೆಂಗಳೂರಿಗೆ ಹೋಗಿ ಕದ್ದು ಎರಡು ಸಲ ನೋಡಿಬಿಟ್ಟಿದ್ದನು. ಮೈಸೂರಿಗೆ ಗಾಂಧಿ ಚಿತ್ರ ಬಂದಾಗ ಲೋಕಸಭಾ ಸದಸ್ಯ ಶ್ರೀನಿವಾಸಪ್ರಸಾದ್‌ರ ತಮ್ಮ



ರಾಮಸ್ವಾಮಿ, ಮೊದಲೇ ಟಾಕೀಸ್ ಮಾಲೀಕ ನನ್ನು ನಡುಗಿಸಿ, ಇನ್ನು ಯಾವ ರೀತಿ ಪ್ರತಿಭಟಿಸಬೇಕೆಂದು ಕೇಳಲು ನನ್ನ ಬಳಿ ಬಂದರು. ಸರಳವಾದ ನೇರವಾದ ದುಡುಕುಸ್ವಭಾವದ ಹುಡುಗ ರಾಮಸ್ವಾಮಿ ನನಗೆ ಇಷ್ಟವಾದ ಹುಡುಗ. ಆತ, ಆತನ ಗುಂಪು ದುಡುಕಿ ಎಲ್ಲಿ ಟಾಕೀಸನ್ನೆ ಚರ್ಚೆ ಹಾಕಿಬಿಡುತ್ತದೊ ಎಂಬ ಆತಂಕ ನನಗುಂಟಾಗತೊಡಗಿತು. ಆಗ ನಮ್ಮ ರಾಜ್ಯ ಸಂಚಾಲಕ ಕೃಷ್ಣಪ್ಪನವರು ಮೈಸೂರಲ್ಲಿದ್ದರು. ಪರಿಸ್ಥಿತಿ ವಿವರಿಸಿದೆ. ಆಂಧ್ರದಲ್ಲೋ ಮದ್ರಾಸ್‌ನಲ್ಲೊ ಚಿತ್ರ


12ನೇ ಪುಟ ನೋಡಿ

ಶರದ್ ಜೋಷಿ ಮತ್ತು ಭಾರತ್ V/S ಇಂಡಿಯಾ

ಕರ್ನಾಟಕ ಸರ್ಕಾರದ ಗುಂಡೇಟಿನಿಂದ ನಿಪ್ಪಾಣಿಯ ಹೊಲ ಗದ್ದೆಗಳಲ್ಲಿ ರಕ್ತ ಚೆಲ್ಲಿದ ರೈತರು ತಮ್ಮ ಹೋರಾಟವನ್ನು ಹಲವಾರು ಮಜಲುಗಳಲ್ಲಿ ಬೆಳೆಸುತ್ತಿದ್ದಾರೆ. ಬೆಳಗಾಂ ಪೂನಾ ನಡುವಿನ ಹೆದ್ದಾರಿಯಲ್ಲಿರುವ ನಿಪ್ಪಾಣಿ ಬೀಡಿ ಹೊಗೆಸೊಪ್ಪಿನ ಬೆಳೆಗೆ ಪ್ರಸಿದ್ಧಿಯಾಗಿದ್ದದ್ದು ಈಗ ಅದು ಅತಿ ದೊಡ್ಡ ರೈತ ಚಳುವಳಿ ನಡೆಸಿ 'ಆಂದೋಲನ ನಗರ' ಎಂಬ ಹೆಸರಿನಿಂದ ಚಾರಿತ್ರಿಕ ಮಹತ್ವ ಪಡೆದು ಪ್ರಸಿದ್ಧಿಯಾಗಿದೆ.

1981ರಲ್ಲಿ ನಡೆದ ಈ ಚಳುವಳಿಯ ಹಿಂದೆ ಪ್ರೇರಕ ಶಕ್ತಿಯಾಗಿ ನಿಂತ ಏಕೈಕ ವ್ಯಕ್ತಿ ಎಂದರೆ ಶರದ್ ಜೋಷಿ. ಈ ಹೋರಾಟದಲ್ಲಿ ಅವರು ಎಂಥ ಮಹತ್ವದ ವ್ಯಕ್ತಿಯಾಗಿದ್ದರು ಅನ್ನುವುದಕ್ಕೆ 'ಆಂದೋಲನ ನಗರ' ಎಂದು ಹೆಸರು ಪಡೆದ ನಿಪ್ಪಾಣಿ ರೈತರ ಹೋರಾಟದ ರೀತಿಯನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಗೋಲೀಬಾರ್ ನಡೆಯುವುದಕ್ಕೆ 2 ದಿನ ಮುನ್ನ ನಾವು ಈ ಸ್ಥಳಕ್ಕೆ ಭೇಟಿ ಕೊಟ್ಟು ಆ ರೈತರ ತೀವ್ರವಾದ ಭಾವನೆ ಹಂಚಿಕೊಂಡೆವು. ಬೆಳಗಾಂ ಪೂನಾ ನಡುವಿನ ನಿಪ್ಪಾಣಿ ರಸ್ತೆಯಲ್ಲಿ ಸುಮಾರು 2 ಕಿ.ಮೀ. ನಷ್ಟು ಉದ್ದ ಜನ ತಡೆ ಒಡ್ಡಿಕೊಂಡು ಕುಳಿತಿದ್ದರು. ಸುಮಾರು ನೂರಕ್ಕಿಂತ ಹೆಚ್ಚು ಹಳ್ಳಿಗಳಿಂದ ಜನ ಬಂದು ರಸ್ತೆಯಲ್ಲಿ ಬಿಡಾರ ಹೂಡಿದ್ದರು. ಇಲ್ಲಿ ಜಾತಿ, ಭಾಷೆ, ದೊಡ್ಡ ರೈತ, ಸಣ್ಣ ರೈತ ಅನ್ನುವ ತಾರತಮ್ಯವಿಲ್ಲದೆ ಎಲ್ಲರೂ ಒಂದುಗೂಡಿಕೊಂಡು ರಸ್ತೆಯಲ್ಲೇ ಹೊಸ ಜೀವನ ಪ್ರಾರಂಭಿಸಿದ್ದರು. ಹಳ್ಳಿಗಳಿಂದ ಗಾಡಿಗಳು, ಸೈಕಲ್, ನೇಗಿಲು ಎಲ್ಲವನ್ನೂ ತಂದು ರಸ್ತೆಯಲ್ಲಿ ಅಡ್ಡ ಇಟ್ಟು ಹಗಲು ರಾತ್ರಿಗಳನ್ನು ಕಳೆಯುತ್ತಿದ್ದರು. ಪ್ರತಿಯೊಂದು ಊರಿನವರೂ ಒಂದೊಂದು ಬಿಡಾರಗಳನ್ನು ಕಟ್ಟಿಕೊಂಡಿದ್ದರು. ಇಲ್ಲಿ ಹೆಂಗಸರು ಮಕ್ಕಳಾದಿಯಾಗಿ ಬಂದು ಪಾಲ್ಗೊಳ್ಳುತ್ತಿದ್ದುದು ಒಂದು ವಿಶೇಷ. ಈ ಬಿಡಾರಗಳಲ್ಲಿ ರೈತ ಚಳುವಳಿಯ ಬಗ್ಗೆ ಕೂಲಂಕುಷವಾಗಿ ವಿವರಿಸಲಾಗುತ್ತಿತ್ತು. ಚರ್ಚೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶವಿರುತ್ತಿತ್ತು. ಚಳುವಳಿಯ ದಿನ ನಿತ್ಯದ ಮುನ್ನಡೆಯ ಬಗ್ಗೆ, ಪತ್ರಿಕಾ ಸುದ್ದಿಗಳ ಬಗ್ಗೆ, ಸರಕಾರದ ನಿಲುವಿನ ಬಗ್ಗೆ ಇವರಿಗೆ ವಿಷಯ ತಿಳಿಸುತ್ತಿದ್ದರು. ಈ ಗುಡಾರಗಳಲ್ಲಿ ಹಲವಾರು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ರೈತರು ತಮ್ಮ ಜೀವನದಲ್ಲಿ ಹೊಸ ಚೈತನ್ಯ ತುಂಬಿಕೊಳ್ಳುತ್ತಿದ್ದರು. ಹಳ್ಳಿಯ ಜೀವನಾಡಿಯಲ್ಲಿ ಈ ಹಿಂದೆ ಉಸಿರು ಕಳೆದುಕೊಂಡಿದ್ದ ಜಾನಪದ ಕಲೆಗಳೆಲ್ಲ ಇಲ್ಲಿ ಉಸುರಾಡತೊಡಗಿದ್ದವು. ಇದೆಲ್ಲದರ ಜೊತೆಗೆ ಚಳುವಳಿ ತಿಂಗಳಾನುಗಟ್ಟಲೆ ನಡೆದರೂ ಹುಮ್ಮಸ್ಸು ಉಳಿಸಿಕೊಳ್ಳುವ ಚೈತನ್ಯ ತುಂಬಿದವರೆಂದರೆ ಶರದ್ ಜೋಷಿ. ನಾವು ನೋಡಿದ ಹಲವಾರು ಗುಡಾರಗಳಲ್ಲಿ ಶರದ್ ಜೋಷಿಯ ಫೋಟೊ ಇಟ್ಟುಕೊಂಡಿದ್ದರು. ಶರದ್‌ಜೋಷಿ ಬರಿಯ ಫೋಟೊವಿನಲ್ಲಿ ಪ್ರಮುಖರಾದ ವ್ಯಕ್ತಿಯಾಗಿರದೆ ರೈತಚಳುವಳಿಯ ಬಗೆಗಿನ ವಿಚಾರದ ಬಗ್ಗೆ ಜೀವಂತವಾಗಿ ಸ್ಪಂದಿಸಿದ ವ್ಯಕ್ತಿಯಾಗಿದ್ದರು.

> ಹಳ್ಳಿಗಾಡಿನ ಪರಿಸ್ಥಿತಿಯಲ್ಲಿ ರೈತರೆಲ್ಲ ಒಂದೇ. ಇವರನ್ನು ವಿಭಾಗಿಸುವುದು ಸರಿಯಲ್ಲ. ಯಾಕೆಂದರೆ ನಾವು ಕೇಳುತ್ತಿರುವ ಬೇಡಿಕೆ ಅವರು ಬೆಳೆ ತೆಗೆಯಲು ಆಗುವ ವೆಚ್ಚದ ಆಧಾರದ ಮೇಲೆ ನಿಗದಿಯಾಗುವುದರಿಂದ ಅವರ ಬೆಳೆಗೆ ಸೂಕ್ತಬೆಲೆ ಸಿಕ್ಕುತ್ತದೆ. ಕೃಷಿ ಕಾರ್ಮಿಕರ ವಿಷಯಕ್ಕೆ ಬಂದರೆ, ರೈತರಿಗೆ ಸೂಕ್ತಬೆಲೆ ಸಿಕ್ಕರೆ ಇವರಿಗೂ ಹೆಚ್ಚಿನ ಬೆಲೆ ಕೊಡುತ್ತಾರೆ. ಆದ್ದರಿಂದ ಈ ಬೇಡಿಕೆ ಅವರಿಗೂ ಅನುಕೂಲವಾಗುವಂಥಹದು–ಎನ್ನುತ್ತಾರೆ ರೈತನಾಯಕ **ಶರದ್‌ಜೋಷಿ**



ಮಾತು–ಕಥೆ

ಈ ತಂಬಾಕು ಚಳುವಳಿಯ ಬಗೆಗೆ ಅವರ ವಿಚಾರಗಳ ಬಗೆಗೆ ಹಲವಾರು ರೀತಿಯ ಪ್ರಶ್ನೆಗಳು ಅನುಮಾನಗಳು ನಮ್ಮಲ್ಲಿಉಳಿದುಕೊಂಡೇ ಇದ್ದವು. ಅವರನ್ನು ಭೇಟಿಮಾಡಿ ಇದನ್ನೆಲ್ಲ ಚರ್ಚಿಸಿದರೆ ಒಳ್ಳೆಯದು ಎಂದುಕೊಂಡು ಅವರು ಹೂಡಿದ್ದ ಬಿಡಾರದತ್ತ ಹೆಜ್ಜೆ ಹಾಕಿದೆವು.

ಬಾಂಬೆಯಲ್ಲಿ ತಮ್ಮ ಶಾಲಾ ಕಾಲೇಜಿನ ವಿದ್ಯಾಭ್ಯಾಸ ಮಾಡಿದ ಜೋಷಿಯವರು ಅರ್ಥಶಾಸ್ತ್ರದಲ್ಲಿ ಅತ್ಯಂತ ಹೆಚ್ಚಿನ ಆಸಕ್ತಿವಹಿಸಿದ್ದರು. ಆಗ ಅವರು ಬರೆದ 'ಅಂತರಾಷ್ಟ್ರೀಯ ಬ್ಯಾಂಕ್ ವ್ಯವಸ್ಥೆ' ಅನ್ನುವ ಲೇಖನಕ್ಕೆ ಬಾಂಬೆ ವಿಶ್ವವಿದ್ಯಾನಿಲಯ ಚಿನ್ನದ ಪದಕ ಕೊಟ್ಟಿತು. ನಂತರ ಇವರು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕೆಲಸ ಪಡೆದು ಬರ್ನ್, ಸ್ವಿಡ್ಜರ್ಲೆಂಡ್‌ನಲ್ಲಿ ಸುಖಮಯವಾದ ಹೆಚ್ಚಿನ ಸಂಬಳದ ಜೀವನ ಸಾಗಿಸುತ್ತಿದ್ದರು. ಆದರೆ ಮೊದಲಿನಿಂದಲೂ ಭಾರತದ ಹಳ್ಳಿಗಾಡಿನ ಪರಿಸ್ಥಿತಿಯಬಗ್ಗೆ ಯೋಚಿಸುತ್ತಿದ್ದ ಜೋಷಿಯವರಿಗೆ ಭಾರತಕ್ಕೆ ವಾಪಾಸ್ಸು ಬಂದು ಇಲ್ಲಿ ಕಾರ್ಯೋನ್ಮುಖವಾಗಬೇಕು ಅನ್ನಿಸಿತು. ಹೀಗೆ ಅವರು ಭಾರತಕ್ಕೆ ವಾಪಾಸ್ಸು ಬಂದು ಹಳ್ಳಿಗಾಡಿನ ಪರಿಸ್ಥಿತಿಯ ಬಗ್ಗೆ ಗಂಭಿರವಾಗಿ ಚಿಂತಿಸಿ ಹಲವಾರು ರೀತಿಯ ಅಧ್ಯಯನಗಳನ್ನು ನಡೆಸಿ ತಮ್ಮದೇ ಆದ ಕೆಲವು ಚಳುವಳಿಯ ರೂಪುರೇಶೆಗಳನ್ನು ಹಾಕಿಕೊಂಡು ಆಂದೋಲನಕ್ಕಿಳಿದರು.

ಏಕಾಂಶ ಬೇಡಿಕೆ

ಕರ್ನಾಟಕ, ತಮಿಳುನಾಡು ಮತ್ತು ಪಂಜಾಬ್ ಮುಂತಾದ ರೈತ ಚಳುವಳಿಗಿಂತ ಇವರ ಚಳುವಳಿ ಭಿನ್ನವಾದದ್ದು. ಇವರೆಲ್ಲ ಬಹು ಅಂಶಗಳ ಬೇಡಿಕೆ ಇಟ್ಟುಕೊಂಡು ಅದರ ಸುತ್ತ ತೀವ್ರವಾದ ಹೋರಾಟವನ್ನು ಬೆಳೆಸಿದರೆ ಇವರ ಏಕಾಂಶ ಬೇಡಿಕೆಯೆಂದರೆ "ರೈತರು ಬೆಳೆದ ಬೆಳೆಗೆ ಸೂಕ್ತವಾದ ಬೆಲೆ ಸಿಕ್ಕಬೇಕು" ಇದಕ್ಕಾಗಿ ಅವರು ಒಂದೊಂದೆ ಬೆಳೆಯನ್ನು ಆಯ್ದುಕೊಂಡು ಅದರ ಮಾರುಕಟ್ಟೆಯ ಸಾಧ್ಯತೆ ಬಗ್ಗೆ, ಬೆಳೆಯಲು ತಗಲುವ ಖರ್ಚುವೆಚ್ಚದ ಬಗ್ಗೆ ಕೂಲಂಕುಶವಾದ ಅಧ್ಯಯನ ನಡೆಸಿ ಯಾವ ಹಂತದಲ್ಲಿ ಮಾರುಕಟ್ಟೆಗೆ ಈ ಗೊತ್ತಾದ ಬೆಳೆಯ ಸರಬರಾಜನ್ನು ನಿಲ್ಲಿಸಿದರೆ ಬೆಲೆ ಹೆಚ್ಚಬಹುದು ಅನ್ನುವುದನ್ನು ಲೆಕ್ಕಾಚಾರ ಹಾಕಿ ಹೋರಾಟಕ್ಕಿಳಿಯುತ್ತಾರೆ. ಇವರ

ಹೋರಾಟದ ಮುಖ್ಯ ಅಸ್ತ್ರವೆಂದರೆ ಸಾಗಣೆಯನ್ನು ನಿಲ್ಲಿಸುವ ರಸ್ತೆಬಂದ್ ಕಾರ್ಯಕ್ರಮ. ನಿಪ್ಪಾಣಿಯಲ್ಲೂ ಬೀಡಿ ಹೊಗೆಸೊಪ್ಪಿನ ಬೆಲೆಯನ್ನು ಹೆಚ್ಚಿಸಲು ಇದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ನಿಪ್ಪಾಣಿ ತಂಬಾಕುಚಳುವಳಿಯನ್ನು ಕೈಗೆತ್ತಿಕೊಳ್ಳುವುದಕ್ಕೆ ಮೊದಲು ಇವರಿಗೆ ಹಲವಾರು ಚಳುವಳಿಗಳನ್ನು ನಡೆಸಿ ವಿಜಯ ಸಾಧಿಸಿದ ಅನುಭವದ ಹಿನ್ನೆಲೆ ಇತ್ತು. ನಾಸಿಕ್‌ನಲ್ಲಿ ಇವರು ನಡೆಸಿದ ಈರುಳ್ಳಿ ಚಳುವಳಿ ಮತ್ತು ಮಹಾರಾಷ್ಟ್ರದ ಕಬ್ಬು ಬೆಳೆಯುವ ಬಗ್ಗೆ ಇವರ ಚಳುವಳಿ ಉದ್ದೇಶಿತ ಗುರಿಯನ್ನು ಮುಟ್ಟಿದ್ದವು. ಇವರ ಹೋರಾಟ ಪ್ರತಿಬಾರಿಯೂ ತಿಂಗಳಾನುಗಟ್ಟಲೆ ನಡೆಯುವ ಹೋರಾಟವಾಗಿತ್ತು.

ಈ ಹಿನ್ನೆಲೆಯನ್ನು ಯೋಚಿಸುತ್ತಾ ಅವರ ಬಿಡಾರದೊಳಗೆ ಕಾಲಿಟ್ಟಾಗ ನಗುಮುಖದಿಂದಲೇ ನಮ್ಮನ್ನು ಕರೆದು ತಮ್ಮ ಚಳುವಳಿಯ ರೂಪರೇಷೆಗಳನ್ನು ವಿವರಿಸುತ್ತಾಹೋದರು. ಗ್ರಾಮೀಣ ಜನ ಜೀವನದಲ್ಲಿ ಕಷ್ಟಪಟ್ಟು ದುಡಿದು ಬೆಳೆ ಬೆಳೆಯುವ ರೈತನಿಗೆ ಆಗುವ ಅನ್ಯಾಯದ ಬಗ್ಗೆ ವಿವರಿಸಿ ತಾವು ಬೆಳೆ ತೆಗೆಯಲು ತಗಲುವ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರಬೇಕಾದ ಮಾರುಕಟ್ಟೆಯ ವಿಷವೃತ್ತದ ಬಗ್ಗೆ ಹೇಳಿ–ಕಡಿಮೆ ಬೆಲೆಗೆ ಕೊಂಡುಕೊಂಡು ಇದೇ ವಸ್ತುವಿನಿಂದ ವ್ಯಾಪಾರಗಾರರ ಮತ್ತು ಕೈಗಾರಿಕೋದ್ಯಮಿಗಳು ಹೆಚ್ಚಿನ ಲಾಭಗಳಿಸುವ ಈ ವ್ಯವಸ್ಥೆಯನ್ನು ಬದಲಿಸಬೇಕು ಅಂದರು.

ಭಾರತ ವರ್ಸಸ್ ಇಂಡಿಯಾ :

ಇವರ ಇನ್ನೊಂದು ಮುಖ್ಯ ಚಳುವಳಿಯ ಅಂಶವೆಂದರೆ "ಭಾರತ್ ವರ್ಸಸ್ ಇಂಡಿಯಾ" ಅನ್ನುವುದು. ಇಲ್ಲಿಯ ಸರ್ಕಾರ ಪಟ್ಟಣಗಳಿಗೆ ಒದಗಿಸಿ ಕೊಟ್ಟಿರುವ ಅತ್ಯಂತ ಹೆಚ್ಚಿನ ಸವಲತ್ತುಗಳ ಪ್ರತೀಕವಾದರೆ ಭಾರತ್ ಅನ್ನುವುದು ಕಡೆಗಣಿಸಲ್ಪಟ್ಟ ಆರ್ಥಿಕವಾಗಿ ಶೋಷಣೆಗೆ ಒಳಗು ಮಾಡಿದ ಹಳ್ಳಿಗಳ ಪ್ರತೀಕವಾಗುತ್ತದೆ. ಪಟ್ಟಣದಲ್ಲಿ ವಾಸಿಸುವ ಜನಗಳ ಸವಲತ್ತು, ಐಶಾರಾಮ ಜೀವನ ಹಳ್ಳಿಗರಿಂದ ಮಾಡಿದ ಶೋಷಣೆಯ ಫಲ. ಆದ್ದರಿಂದ ಹಳ್ಳಿಗಾಡಿನ ರೈತರು ನಡೆಸುವ ಚಳುವಳಿಯಿಂದ ಪಟ್ಟಣದ ಜನ ಹೆಚ್ಚು ಹಣ ಕೊಟ್ಟು ಆಹಾರ ಪದಾರ್ಥಗಳನ್ನು ಕೊಳ್ಳುವ ಪರಿಸ್ಥಿತಿಯ ಬಗ್ಗೆ ನಾವು ಮರುಗಬಾರದು ಅನ್ನುತ್ತಾರೆ. ಫರ್ಲಾಂಗುಫರ್ಲಾಂಗಿಗೂ ಪಟ್ಟಣದಲ್ಲಿ ರಸ್ತೆ ಮತ್ತು ಬಸ್ಸುಗಳು ವ್ಯವಸ್ಥೆ ಇದ್ದರೆ ಬಸ್ಸು ಹೋಗಲಿ ಬಹಳಷ್ಟು ಹಳ್ಳಿಗಳಿಗೆ ಗಾಡಿ ಹೋಗುವ ರಸ್ತೆ ಕೂಡ ಇರುವುದಿಲ್ಲ. ಇಂಥ ಕೆಟ್ಟ ವ್ಯವಸ್ಥೆಯ ಬಗ್ಗೆ ಹಳ್ಳಿಗರು ಹೋರಾಡಬೇಕು ಎಂದು ವಾದಿಸುತ್ತಾರೆ.

ಆದರೆ ಇಂಥ ವಾದಗಳಿಂದ ಆಗುವ ಅಪಾಯಗಳನ್ನು ಅವರು ಹೆಚ್ಚು ಗಹನವಾಗಿ ತೆಗೆದುಕೊಳ್ಳದಿರುವುದು ಆಶ್ಚರ್ಯವಾಯಿತು. ಇವರ ವಾದದ ಪ್ರಕಾರ ಜನ ಸಂಘಟಿತರಾದರೆ ಹಳ್ಳಿಯ ರೈತರು ಪಟ್ಟಣದಲ್ಲಿ ವಾಸಿಸುವ ಬಹುಸಂಖ್ಯಾತರಾದ ಕಾರ್ಮಿಕರ ವಿರುದ್ಧವೇ ಹೋರಾಡುವ ದುರಂತಕ್ಕೆ ಇಳಿಯಬೇಕಾಗುತ್ತದೆ. ಇವರ ಹೋರಾಟ ಕೈಗಾರಿಕೋದ್ಯಮಿಗಳ ವಿರುದ್ಧ ಎಂದಾಗುವ ಬದಲಾಗಿ ಪಟ್ಟಣಿಗರ ವಿರುದ್ಧ ಎನ್ನುವುದು ಶೋಷಣೆಗೆ ಒಳಗಾದ ರೈತ ಮತ್ತು ಕಾರ್ಮಿಕರ ನಡುವೆಯೇ ವಿರಸ ತಂದಿಟ್ಟಂತಾಗುತ್ತದೆ.

ಹಳ್ಳಿಗರೆಲ್ಲ ರೈತರು :

ಶ್ರೀಮಂತ ರೈತ, ಬಡರೈತ ಮತ್ತು ಕೃಷಿ ಕಾರ್ಮಿಕರು ಇರುವ ಹಳ್ಳಿಯ ಪರಿಸ್ಥಿತಿಯಲ್ಲಿ ಏಕಮುಖವಾದ ಬೇಡಿಕೆ ಇವರಲ್ಲಿ ಹೆಚ್ಚಿನ ಅಂತರ ತರಬಹುದಲ್ಲವೆ. ಅಂದರೆ ಹೆಚ್ಚು ಜಮೀನು ಇಟ್ಟುಕೊಂಡು ಜಾಸ್ತಿ ಬೆಳೆಯುವವನಿಗೆ ಜಾಸ್ತಿ ಲಾಭ, ಕಡಿಮೆ ಜಮೀನು ಹೊಂದಿದ್ದು ಕಡಿಮೆ ಬೆಳೆಯುವವನಿಗೆ ಕಡಿಮೆ ಲಾಭ. ಕೃಷಿಕಾರ್ಮಿಕನಿಗೆ ಯಾವ ಉಪಯೋಗವೂ ಇಲ್ಲ, ಇಂಥ ಪರಿಸ್ಥಿತಿಯಾಗುವುದರಿಂದ ಶ್ರೀಮಂತರು ಶ್ರೀಮಂತರಾಗುವ ಬಡವರು ಬಡವರಾಗುವ ಪರಿಸ್ಥಿತಿ ಉಂಟಾಗಬಹುದಲ್ಲವೆ ಅಂತ ನಾವು ಕೇಳಿದ ಪ್ರಶ್ನೆಗೆ ಶರದ್‌ಜೋಷಿ – ಹಳ್ಳಿಗಾಡಿನ ಪರಿಸ್ಥಿತಿಯಲ್ಲಿ ರೈತರೆಲ್ಲ ಒಂದೇ. ಇವರನ್ನು ವಿಭಾಗಿಸುವುದು ಸರಿಯಲ್ಲ, ಯಾಕೆಂದರೆ ನಾವು ಕೇಳುತ್ತಿರುವ ಬೇಡಿಕೆ ಅವರು ಬೆಳೆ ತೆಗೆಯಲು ಆಗುವ ವೆಚ್ಚದ ಆಧಾರದ ಮೇಲೆ ನಿಗದಿಯಾಗುವುದರಿಂದ ಅವರ ಬೆಳೆಗೆ ಸೂಕ್ತ ಬೆಲೆ ಸಿಕ್ಕುತ್ತದೆ. ಇನ್ನು ಕೃಷಿಕಾರ್ಮಿಕರ ವಿಷಯಕ್ಕೆ ಬಂದರೆ ರೈತರಿಗೆ ಸೂಕ್ತ ಬೆಲೆ ಸಿಕ್ಕರೆ ಇವರಿಗೂ ಹೆಚ್ಚಿನ ಕೂಲಿ ಕೊಡುತ್ತಾರೆ. ಆದ್ದರಿಂದ ಈ ಬೇಡಿಕೆ ಅವರಿಗೂ ಅನುಕೂಲವಾಗುವಂಥದು. ಆದ್ದರಿಂದಲೇ ಈ ಆಂದೋಲನ ನಗರದಲ್ಲಿ ಕೃಷಿ ಕಾರ್ಮಿಕರಿಂದ ಹಿಡಿದು ದೊಡ್ಡರೈತರವರೆಗೂ ಪಾಲ್ಗೊಂಡಿದ್ದಾರೆ ಎಂದರು.

ಸಣ್ಣ, ದೊಡ್ಡ ರೈತರ ನಡುವಿನ ತಾರತಮ್ಯ ಹೋಗಲಾಡಿಸಲು ಭೂಹಿಡುವಳಿಗಳಲ್ಲಿ ಬದಲಾವಣೆ ಮಾಡಬೇಕು ಎನ್ನುವುದಾಗಲಿ ಕೃಷಿಕಾರ್ಮಿಕರಿಗೂ ಭೂಮಿ ಬೇಕು ಅನ್ನುವುದರ ಬಗ್ಗೆಯಾಗಲಿ ಕಾರ್ಯಕ್ರಮ ಹಾಕಿಕೊಳ್ಳದೆ ಇವರು ಬಯಸುವ ಮೂಲಭೂತ ಬದಲಾವಣೆಯಾಗಬೇಕು ಅನ್ನುವ ಉದ್ದೇಶ ಎಷ್ಟರಮಟ್ಟಿಗೆ ಈಡೇರುತ್ತದೆ ಎನ್ನುವುದು ಇನ್ನೂ ಪ್ರಶ್ನೆಯಾಗಿಯೇಉಳಿದುಕೊಂಡಿದೆ. ಅಲ್ಲದೆ ಇವರು ಹೇಳುವಂತೆ ಬೆಲೆ ಹೆಚ್ಚಿಗೆ ಸಿಕ್ಕರೆ ಕೂಲಿಯೂ ಹೆಚ್ಚುತ್ತದೆ ಅನ್ನುವ ಅಂಶ ಸುಳ್ಳು ಎಂದು ನಾವು ಅಲ್ಲಿ ಸಂಗ್ರಹಿಸಿದ ಅನುಭವಗಳಿಂದ ತಿಳಿಯಿತು.

ಶರಧ್‌ಜೋಷಿಯುವರ ನೇತೃತ್ವದಲ್ಲಿ ನಡೆದ ಇತ್ತೀಚಿನ ಹಾಲು ಬೆಲೆಏರಿಕೆ ಚಳುವಳಿ ಮಹಾರಾಷ್ಟ್ರದಲ್ಲಿ ವಿಫಲವಾದ ಘಟನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇವರ ಹೋರಾಟವನ್ನು ವಿಶ್ಲೇಷಿಸಿದರೆ ಸೂಕ್ತ ಅನಿಸುತ್ತದೆ. ಹಾಲಿನ ಚಳುವಳಿಗೂ ಇತರ ಚಳುವಳಿಗೂ ಹೋಲಿಸಿದರೆ ನಮಗೆ ಇಲ್ಲಿ ಸ್ಪಷ್ಟವಾದ ಒಂದು ವ್ಯತ್ಯಾಸ ಗೊತ್ತಾಗುತ್ತದೆ. ಕಬ್ಬು ತಂಬಾಕು ಮುಂತಾದ ವಾಣಿಜ್ಯ ಬೆಳೆಗಳ ಬೆಲೆ ಹೆಚ್ಚಾದಾಗ ಜನಸಾಮಾನ್ಯರಿಗೆ ನೇರವಾಗಿ ಇದರ ಹೊರೆ ಬೀಳುವುದಿಲ್ಲ. ಇದು ಕೈಗಾರಿಕೋದ್ಯಮಿಗಳ ಲಾಭದಿಂದ ಕಡಿತಗೊಂಡು ಬೆಳೆದ ರೈತರಿಗೆ ತಲುಪುತ್ತದೆ. ಬೆಳೆದ ಬೆಳೆಯ ಬೆಲೆ ಜಾಸ್ತಿಯಾದ ಕೂಡಲೆ ಕೈಗಾರಿಕೆಯಲ್ಲಿ ತಯಾರಾಗುವ ಇದರ ಸಿದ್ಧವಸ್ತುವನ್ನು ಏಕ್‌ದಂ ಬೆಲೆ ಹೆಚ್ಚಿಸಿ ಮಾರಲಾಗುವುದಿಲ್ಲ. ಯಾಕೆಂದರೆ ಸಾಮಾಜಿಕವಾಗಿ ನಿಗದಿಗೊಂಡ ಮೌಲ್ಯ ಹಾಗೂ ಪೈಪೋಟಿ ಇರುವ ಮಾರುಕಟ್ಟೆಯಲ್ಲಿ ಬೆಲೆ ಏರಿಸಿದಾಗ ಈ ವಸ್ತುವಿಗೆ ಇರುವ ಮಾರುಕಟ್ಟೆಯ ಬೇಡಿಕೆಯನ್ನು ಕಳೆದು ಕೊಳ್ಳಬೇಕಾಗುತ್ತದೆ. ಹೀಗಾಗಿ ಬೆಳೆಗಾರನಿಗೆ ತನ್ನ ಬೆಳೆಗೆ ಹೆಚ್ಚು ಬೆಲೆ ಸಿಕ್ಕರೂ ಕೊಂಡುಕೊಳ್ಳುವವನಿಗೆ ಇದು ಹೊರೆಯಾಗುವುದಿಲ್ಲ.

ಆದರೆ ಕೈಗಾರಿಕಾ ತಯಾರಿಕೆಗೆ ಒಳಪಡದೆ ನೇರವಾಗಿ ಬಳಕೆಯಾಗುವ ಆಹಾರ ಪದಾರ್ಥಗಳ ಬೆಲೆ ಹೆಚ್ಚಾದಾಗ ಕೊಂಡುಕೊಳ್ಳುವ ಬಡರೈತ, ಕೃಷಿ ಕಾರ್ಮಿಕರ ಮೇಲೆ ಇದರ ಹೊರೆ ಬೀಳುತ್ತದೆ. ಹೀಗಾಗಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಿ ಎಂದು ಇಡುವ ಬೇಡಿಕೆಯ ಬಗ್ಗೆ ಈ ಮೇಲೆ ಹೇಳಿದ ಜನ ವಿರೋಧಿಗಳಾಗುತ್ತಾರೆ. ಈ ಕಾರಣದಿಂದಲೇ ಹಾಲಿನ ಬೆಲೆ ಏರಿಕೆಯ ಚಳುವಳಿ ಕುಸಿದುಬಿದ್ದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ರೈತ ಚಳುವಳಿ ತನ್ನ ಬೇಡಿಕೆಗಳು ಸಾಮಾನ್ಯ ಜನರ ಬದುಕಿಗೆ ಮಾರಕವಾಗದಂತೆ ನೋಡಿಕೊಳ್ಳುವ ಅಗತ್ಯ ಬಹಳ ಇದೆ.

ಶರದ್ ಜೋಷಿಯುವರನ್ನು ಕಂಡು ಮಾತನಾಡಿ ಎರಡು ವರ್ಷ ಕಳೆಯುತ್ತಿದೆ. ದಲಿತರ ಪ್ರಜ್ಞಾಪೂರ್ವಕ ಒಳಗೊಳ್ಳುವಿಕೆ ಅಭಾವದಿಂದಲೋ ಏನೊ ಅಂತೂ ಶರದ್ ಜೋಷಿಯುವರ ರೈತ ಚಳುವಳಿ ಕರ್ನಾಟಕದಲ್ಲಿ ಸಂಪೂರ್ಣ ಸತ್ತಂತೆ ಕಾಣುತ್ತಿದೆ. ನಂಜುಂಡಸ್ವಾಮಿಯುರ ಸಂಘಕೂ ಇದೇ ಗತಿ ಆದರೆ !

– ಕ್ಷೀರಸಾಗರ

ಮಂದಿರದೊಳಕ್ಕೆ ಹಾವು ಬಿಟ್ಟಿದ್ದು ನನಗೆ ಹೇಸಿಗೆ ತರಿಸಿತ್ತು. ಈಗಾಗಲೇ ಬೆಂಗಳೂರಲ್ಲಿ ಪ್ರತಿಭಟಿಸಿರುವುದರಿಂದ, ಪ್ರತಿಭಟನೆ ಸಾಂಕೇತಿಕವಾದುದರಿಂದ ಇಲ್ಲೂ ಮಾಡುವುದು ಅನಗತ್ಯ ಎಂದೆ. ಅದಕ್ಕೆ ಕೃಷ್ಣಪ್ಪನವರು "ಮಾಡಲಿ ಬಿಡಯ್ಯ, ಗಲಾಟೆ ಆದರೆ ಆಗುತ್ತೆ, ನೀನು ಯಾಕೆ ತಡೆಯುತ್ತಿ ?" ಎಂದರು. ನನ್ನ ಗಾಬರಿ ಹೆಚ್ಚಿತು. ನಾನು ರಾಮಸ್ವಾಮಿ ಬಳಿಬಂದು "ಟಾಕೀಸ್‌ಗೆ ಏನೂ ಜಖಂ ಮಾಡಬೇಡಿ, 'ಅಂಬೇಡ್ಕರ್ ಇಲ್ಲದ ಗಾಂಧಿ ಅಪೂರ್ಣ' ಎಂದಷ್ಟೆ ಹೇಳಿ" ಎಂದು ಇಪ್ಪತ್ತುಸಲ ವಿನಂತಿಸಿ ಬೆಂಗಳೂರಿಗೆ ಹೊರಟೆ. ಬೆಂಗಳೂರಲ್ಲಿ ಇದ್ದರೂ ಏನಾಗಿರುತ್ತದೋ ಎಂಬ ಕಿಡಿ ನನ್ನನ್ನು ಸುಡುತ್ತಿತ್ತು.

೨

ಇನ್ನು ಗಾಂಧಿ ಚಿತ್ರದ ಬಗ್ಗೆ : ಒಂದು ಮಿತಿಯೊಳಗೆ ಗಾಂಧಿಯನ್ನೆ ಕೇಂದ್ರವಾಗಿಸಿಕೊಂಡು ಗಾಂಧಿಯನ್ನಷ್ಟೆ ತೆಗೆದಿರುವ ಚಿತ್ರವಿದು. ಗಾಂಧಿ ಬಿಟ್ಟು ಉಳಿದುದೆಲ್ಲ ಉಳಿದವರೆಲ್ಲ ಇಲ್ಲಿ ಇಲ್ಲವಾಗಿದ್ದಾರೆ. ಗಾಂಧಿ ಪಾತ್ರಧಾರಿಯಂತು ಗಾಂಧಿಯೇ ಆಗಿಬಿಟ್ಟು ಎಲ್ಲೂ ಅಭಿನಯಿಸಿಯೇ ಇಲ್ಲ. ಗಾಂಧಿ ಅನುಯಾಯಿಗಳಾದ ನೆಹರೂ, ಪಟೇಲರುಗಳು ಕಮಂಗಿಗಳಾಗಿ ಕೊನೆಗೆ ಅಧಿಕಾರದಾಹಿಗಳಾಗಿ, ಇಂದಿರಾಗಾಂಧಿಯವರು ಇಷ್ಟಪಡದಷ್ಟು ಚೆನ್ನಾಗಿ ಮೂಡಿವೆ. ಜಿನ್ನಾರ ಅಭಿನಯ ಸರಿಯಾಗಿದ್ದು ಅಂಬೇಡ್ಕರರ ದುಃಖದಾಳವನ್ನು ಅರಿಯದವ ಅಂಬೇಡ್ಕರರನ್ನು ಚಿತ್ರಿಸಿದ್ದರೆ ಜಿನ್ನಾರಂತಾಗಿ ಬಿಡುತ್ತಿದ್ದ ಚಿತ್ರದಲ್ಲಿ ಅಂಬೇಡ್ಕರ್ ಇಲ್ಲದಿರುವುದು ಒಂದುರೀತಿಯಲಿಒಳ್ಳೆಯದಾಯ್ತು ಅನ್ನಿಸಿತು, ಅಲ್ಲದೆ ಗಾಂಧಿ ಕಾಲದ ಮುಖ್ಯರಾದ ವಿನೋಬಾ, ಸುಭಾಷ್‌ಚಂದ್ರಬೋಸ್, ಜೆ. ಪಿ, ಲೋಹಿಯಾ ಮುಂತಾದ ಪಾತ್ರಗಳೂ ಚಿತ್ರದಲ್ಲಿ ಇಲ್ಲದಿರುವಾಗ ಅಂಬೇಡ್ಕರ್ ಇಲ್ಲದಿರುವಿಕೆಯಲ್ಲಿ ದುರುದ್ದೇಶವಿದೆ ಎಂದೇನೂ ನನಗನ್ನಿಸಲಿಲ್ಲ. ಆದರೆ ಸಾಮಾಜಿಕವಾಗಿ ಕೆಳಸ್ತರದತ್ತ ಗಾಂಧಿ ಚಲಿಸುವಂತಾಗಲು ಅಂಬೇಡ್ಕರ್‌ರ ಅದಮ್ಯ ಚೇತನ ಕಾರಣ ಎಂಬದರಲ್ಲೇನು ನನಗೆ ಅನುಮಾನವಿಲ್ಲ.

ಇದನ್ನೆಲ್ಲ ಯೋಚಿಸುತ್ತ ಆ ಕಾಲದಲ್ಲಿ ನಾನು ಇದ್ದಿದ್ದರೆ ನಾನು ಯಾರ ಕಡೆ ಇರುತ್ತಿದ್ದೆ ಎಂಬುದು ನನ್ನ ತಲೆ ತಿಂದಿತು. ಅದೆಷ್ಟೊ ಯೋಚಿಸಿದರೂ ನಿಲುಕದೆ ತಳಮಳಿಸಿದೆ. ನಿದ್ದೆಯಲ್ಲು ಈ ಚಿಂತೆ ನನ್ನನ್ನು ಬಿಡುತ್ತಿರಲಿಲ್ಲ. ಎದ್ದಾಗ, ನಾನು ಗಾಂಧಿ ಜತೆ ಇದ್ದು–ಅಂಬೇಡ್ಕರ್‌ರನ್ನು ಅರ್ಥ ಮಾಡಿಕೊಳ್ಳಬೇಕೆಂದು ಗಾಂಧಿಯೊಡನೆ ಅಂಬೇಡ್ಕರ್‌ರ ಪರವಾಗಿ ವಾದಿಸುತ್ತಿದ್ದೆನೇನೋ ಎನ್ನಿಸಿತು.

೩

ಗಾಂಧಿಯದು ಭೂಮಿಯಂತೆ ಒಂದು ಕ್ಷಣವೂ ನಿಲ್ಲದ ಚಲಿಸುವ ಚೇತನವು. ಈ ಚೇತನವ ನಿರ್ದೇಶಕ ಹೇಗೆ ಅದ್ಭುತವಾಗಿ ಹಿಡಿದಿದ್ದಾನೆಂದರೆ–ಮೋಹನದಾಸನು ಮೊದಲು ಕೆಂಪು ಮನುಷ್ಯನನ್ನು ಅನುಕರಿಸಲು ಹೋಗಿ ಆ ಪ್ರಯಾಣದಲ್ಲಿ ಕ್ರೂರವಾಗಿ ತಳ್ಳಿಸಿಕೊಂಡು ಅವಮಾನಿತನಾಗಿ 'ಗಾಂಧಿ' ಯಾಗಲು ಆರಂಭಿಸುತ್ತಾನೆ. ಭಾರತೀಯ ಅಸ್ಪೃಶ್ಯತನದ ಬೀಜ ಆವನ ಎದೆಗೆ ಆಗ ಬಿತ್ತಿದಂತಾಗಿರಬೇಕು. ಕೇವಲ ಈ ಒಂದು ಅವಮಾನಕ್ಕೆ ಆ ಮೋಹನದಾಸನು 'ಮಹಾತ್ಮಗಾಂಧಿ' ಯಾಗಿ ಪರಿವರ್ತನೆಗೊಳ್ಳುವುದಾದರೆ, ದೇಹವಿಡೀ ಜೀವನವಿಡೀ ಅವಮಾನದಿಂದಲೇ ಮಾಡಲ್ಪಟ್ಟ ಅಸ್ಪೃಶ್ಯ ಬೆಳೆದರೆ ಆದರೆ ಅದೆಷ್ಟು ಎತ್ತರಕ್ಕೆ ಬೆಳೆಯಬಹುದೆಂಬುದು ನನ್ನ ಊಹೆ ಅಳತೆಗಳಿಗೆ ನಿಲುಕದಷ್ಟು ಎತ್ತರದ್ದಾಗಿಬಿಟ್ಟಿತ್ತು.

ಆಫ್ರಿಕಾದಲ್ಲಿ ಕರಿಯನಾದ ಮೋಹನದಾಸ್‌ಗೆ ಆ ಕರಿಯತನವೆ ಅವಗೆ ದಿಕ್ಕು ತೋರಿಸುತ್ತದೆ. ಸಹನೆ, ದೃಢತೆ, ಅಹಿಂಸೆ ಇವುಗಳೊಡನೆ ಎದುರಾಳಿಯನ್ನೂ ಮಾನವವಾಗಿಸುವ ಅಪೂರ್ವತೆ, ಇದರೊಟ್ಟಿಗೇ ಹೊಸತಾಗಿ ಸಹಜೀವನ ಕಟ್ಟುವ ಒಳಗಣ್ಣು ಗಾಂಧಿಗೆ ಅಲ್ಲುಂಟಾಗುತ್ತದೆ. ಆ ಕಾಗದ ಸುಡುವ ಸಂದರ್ಭದಲ್ಲಿ ಮೋಹನದಾಸ್ ಗಾಂಧಿಗೆ ಬಿಳಿಪೋಲೀಸ್ ಹೊಡೆದೂ ಹೊಡೆದೂ ಸುಸ್ತಾಗಿ ಗಾಂಧಿಯ ನಿರ್ಲಿಪ್ತ ಕಾಯಕಕ್ಕೆ ಆ ಕ್ರೂರ ಪೋಲೀಸ್‌ನಲ್ಲೂ 'ಮಾನವ ಇಣುಕುವುದ'ರ ಎಳೆಯೇ ಗಾಂಧಿಯನ್ನು ಮುಂದೆ ನಡೆಸಿಕೊಂಡು ಹೋಗುತ್ತದೆ.

ಆಮೇಲೆ ಮೋಹನದಾಸ್‌ಗಾಂಧಿ ಮೊದಲನೆಯ ದರ್ಜೆಯ ಗುಜರಾತಿಯಾಗಿ ಭಾರತಕ್ಕೆ ಬಂದು ಆತನ ಪ್ರಯಾಣದಲ್ಲಿ ರೈಲು ನಿಂತಾಗ–ಉಟ್ಟ ಸೀರೆಯನ್ನೇ ಒಗೆದುಕೊಳ್ಳುತ್ತಿದ್ದ ಹೆಂಗಸಿಗೆ ತನ್ನ ಪೇಟ ಬಿಚ್ಚಿ ಕೊಟ್ಟು–ಎರಡನೆಯ ದರ್ಜೆಯ ಭಾರತೀಯನಾಗುತ್ತಾನೆ. ಅಲ್ಲಿಂದ ಚಂಪಾರಣ್ಯವು ಆತನಿಗೆ ಲಂಗೋಟಿ ಮಾತ್ರದಷ್ಟು ಉಳಿಸಿಕೊಟ್ಟು ಮೂರನೆ ದರ್ಜೆಗೆ ಇಳಿಸಿ ಮಹಾತ್ಮನನ್ನಾಗಿಸುತ್ತದೆ. ಗರೀಬತನದ ದೇಹ ಮನಸು ಚಿಂತನೆ ಪಡೆದು ಮೋಹನದಾಸ್ ಕರಮಚಂದ ಗಾಂಧಿಯು ಮಹಾತ್ಮಗಾಂಧಿಯಾಗುತ್ತಾರೆ.

ಮಾನವನ ಒಂದು ಜೀವಿತದಲ್ಲಿ ಇಷ್ಟೆಲ್ಲ ಆಗುವುದೂ ಒಂದು ಪವಾಡವೇ. ತನ್ನ ಒಂದು ದೇಹದಲ್ಲಿ ಇಷ್ಟೆಲ್ಲ ರೂಪಾಂತರವಾದ ಗಾಂಧಿ ತನ್ನ ಜೀವಿತವ ಪ್ರಯೋಗಕ್ಕಿಟ್ಟುಕೊಂಡ ಗಾಂಧಿ–ಯಾಕೆ ಅಸ್ಪೃಶ್ಯನ ದೇಹ ಮನಸ್ಸು ಪಡೆಯಲಿಲ್ಲ ಎಂಬುದು ನನ್ನ ಖಿನ್ನನನ್ನಾಗಿಸಿದೆ. ಗಾಂಧಿಯು ಅಸ್ಪೃಶ್ಯರ ಬಗ್ಗೆ ಅತ್ಯಂತ ಕಳಕಳಿ ಅತ್ಯಂತ ಅನುಕಂಪ ತೋರಿಸುತ್ತಾರೋ ಹೊರತು ಗಾಂಧಿಯು ಅಸ್ಪೃಶ್ಯ ಸ್ಥಿತಿಯೇ ಆಗಿ ಅದರ ದನಿಯಾಗುವುದಿಲ್ಲ. 'ಬಗ್ಗೆ' ಯಿಂದ ಗಾಂಧಿ 'ಅದಾ'ಗುವುದಿಲ್ಲ. ಅಸ್ಪೃಶ್ಯ ಆಗಲು ಮುಂದಿನ ಜನ್ಮ ಬಯಸುತ್ತಾರೆ. ಅದಕ್ಕಾಗಿ ಗಾಂಧಿ ಬಗ್ಗೆ ಅಂಬೇಡ್ಕರರಿಗೆ ಇರುವ ಕಠೋರತೆಯನ್ನೂ ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ.

"ಭಾರತ ಎರಡಾಗುವುದಾದರೆ ನನ್ನ ಹೆಣದ ಮೇಲಾಗಬೇಕೆಂದು ನುಡಿದ ಗಾಂಧಿ ತಮ್ಮ ನುಡಿಯನ್ನು ಉಳಿಸಿಕೊಂಡಿದ್ದರೆ ಕ್ರಿಸ್ತನ ಮಟ್ಟಕ್ಕೆ ಮುಟ್ಟುತ್ತಿದ್ದರು" ಎನ್ನುವ ಡಾ. ಲೋಹಿಯಾರ ಮಾತಿನ ಸತ್ಯತೆ–ಅಂದರೆ ಗಾಂಧಿಯ ಈ ಒಂದು ಕೊರತೆ ಮತ್ತು ಗಾಂಧಿ ಈ ನಾಡ ತಳದ ಮಾನವ ಅಸ್ಪೃಶ್ಯನ ದೇಹ ಮನಸ್ಸು ಚಿಂತನೆ ಪಡೆಯದೆ ಅದಕ್ಕಾಗಿ ಮುಂದಿನ ಜನ್ಮ ಆಶಿಸುವುದು–ಈ ಎರಡೂ ಕೊರತೆಯಿಂದಾಗಿ ನಮ್ಮ ಯುಗದ ಎತ್ತರದ ಪುರುಷ ಗಾಂಧಿಯ ಎತ್ತರ ಆಕಾಶ ಮುಟ್ಟಲು ಎರಡು ಗೇಣು ಕಮ್ಮಿಯಾಗುತ್ತದೆ.

೪

ನಾನು ಅಹಿಂಸೆಯ ಪರವಾಗಿದ್ದು ಉದ್ವಿಗ್ನತೆಯ ದಲಿತ ಸ್ನೇಹಿತರೊಡನೆ–'ಅಂಬೇಡ್ಕರ್ ಕೂಡ ಅಹಿಂಸೆಯನ್ನು ಹಿಡಿದಿದ್ದರು. ಅದಕ್ಕೇ ಅವರು ಬೌದ್ಧರಾದುದು' ಎಂದು ಒಪ್ಪಿಸುತ್ತಿದ್ದೆ. ಆದಾಗ್ಯೂ ಅನೇಕರು ಒಪ್ಪುತ್ತಿರಲಿಲ್ಲ. ಆಗ ವಾಸ್ತವತೆ ಉದಾಹರಣೆ ಕೊಟ್ಟು, ಅಂದರೆ–"ನೋಡಿ, ನಾವು ಅಸ್ಪೃಶ್ಯರು ಕಮ್ಮಿ ಸಂಖ್ಯೆಯಲ್ಲಿದ್ದೇವೆ. ಪೋಲೀಸು ಮಿಲ್ಟ್ರಿ ಎದುರಿಸುವುದು ಆಗದ ಮಾತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಅಕ್ಕಪಕ್ಕದ ವಾಸಿಗಳಾದ ಸವರ್ಣೀಯರು ನಾವು ಇರುವುದನ್ನೇ ಸಹಿಸರು. ಹೀಗಿರುವಾಗ ನಾವು ಹಿಂಸೆ ಹಿಡಿದರೆ ನಮಗೆ ಉಳಿಗಾಲವಿಲ್ಲ" ಎಂದು ತಂತ್ರವಾಗಿಯಾದರೂ ಅಹಿಂಸೆ ಒಪ್ಪಿಸಲು ಹೆಣಗುತ್ತಿದ್ದೆ. ಗಾಂಧಿ ಚಿತ್ರ ನೋಡಿದ ಮೇಲೆ ನನ್ನ ಈ ತಂತ್ರವಾದವೂ ತಪ್ಪೆನ್ನಿಸಿತು. ಚಳವಳಿಕಾರರು ಪೋಲೀಸ್‌ನನ್ನು ಕೊಂದಾಗ, ನೆಹರೂ ಪಟೇಲ್ ಜಿನ್ನಾರು ವಿರೋಧಿಸಿದರೂ, ಗಾಂಧಿ ಉಪವಾಸ ಮಾಡಿ, ಚಳವಳಿ ಹಿಂತೆಗೆದುಕೊಂಡದ್ದು ನನ್ನನ್ನು ಬದಲಿಸಿತು. ಬಿಳಿ ನ್ಯಾಯಾಧೀಶ ಕರಿಯ ಗಾಂಧಿಗೆ ಎದ್ದು ನಿಂತಿತು. ನನಗಾಗ ಅಹಿಂಸೆ ತಂತ್ರವಲ್ಲ, ಅದು ಬದುಕು ಅನ್ನಿಸಿತು.

೫

ಸಾಹಿತ್ಯ ಲೋಕದ ಮಂದಣ್ಣ ಉರುಫ್ ಗಾಂಧಿ ಗೋವಿಂದಯ್ಯ "ಹೇಗಿದೆ ಗಾಂಧಿ

ಚಿತ್ರ ಎಂದು ನೆಗಾಡಿದನು. ಅದಕ್ಕೆ ನಾನು 'ಸಾಯಲು ಮಾನಸಿಕವಾಗಿ ದೃಢವಾಗಿ ಸಿದ್ಧವಾದವನು ಮಾತ್ರ ಗಾಂಧಿಯಾಗಬಲ್ಲ' ಎಂದೆ. ಅಹಿಂಸಾವಾದಿಯಾದ ಗಾಂಧಿಯು ದೇಹದ ಒಂದು ರೋಮದಲ್ಲೂ ಹೇಡಿತನದ ಸುಳಿವು ಇಲ್ಲದಿರುವುದು ನಮ್ಮನ್ನು ನಡುಗಿಸಿತು. ಹೇಡಿಯಾದವನು ಅಹಿಂಸಾವಾದಿಯಾಗುವುದು ಅಸಾಧ್ಯ ಎಂಬ ನಿಜವು ಅರಿವಾಗಿ ನಮ್ಮನ್ನು ಬೆವರಿಸಿತು. ಇಂಥ ಗಾಂಧಿಯನ್ನು ಅಪಾರ್ಥಕ್ಕೊಳಗಾಗಿಸಿದ ಸೈತಾನ ನಮಗೆ ಸಿಗಲಿಲ್ಲ. ಅಥವಾ ನಮ್ಮ ಹೇಡಿತನವೇ ಆ ಸೈತಾನ ಆಗಿರಬೇಕು. ನಮ್ಮ ದಲಿತ ಸ್ನೇಹಿತರ ಕಣ್ಣೂ ಗಾಂಧಿಯ ಬಗ್ಗೆ ಸಂಪೂರ್ಣವಾಗಿ ಮುಚ್ಚಿಕೊಂಡಿರುವುದು ನಮ್ಮನ್ನು ಖಿನ್ನರನ್ನಾಗಿಸಿತು. ಕಸ್ತೂರಿಬಾರವರು ಅಸ್ಪೃಶ್ಯನೊಬ್ಬನ ಕೆಲಸ ಎಂದು ಕಕ್ಕಸ್ಸು ಎತ್ತಲು ನಿರಾಕರಿಸಿದಾಗ, ಗಾಂಧಿಯು ತನ್ನನ್ನೇ ತಾನು ಕಳೆದುಕೊಂಡು ಉದ್ವಿಗ್ನನಾಗಿ ಆಕೆಯನ್ನು ಮನೆಯಿಂದಲೇ ದೂಡುವ ಚಿತ್ರ ನಮ್ಮಿರ್ವರ ಕಣ್ಮುಂದೂ ನಿಂತಿತ್ತು.

೬

ದಲಿತ ಸಂಘರ್ಷ ಸಮಿತಿಗೆ ತನ್ನದೆ ರೂಪಿಲ್ಲದೆ ತನ್ನವೆ ದಾರಿಗಳಿಲ್ಲದೆ ದಿಕ್ಕೆಡುತ್ತಿದೆ. ಮೊನ್ನೆ ದೇವಲಾಪುರದ ಕಾಡು ಸಂಬಂಧಿಸಿ, ದಲಿತ ಸಂಘದ ಸ್ನೇಹಿತರು ನಡೆಸಿದ ಧರಣಿಯಲ್ಲಿ ಕಾಡಿನ ಅಧಿಕಾರಿಯನ್ನು ಸಿಕ್ಕಾಪಟ್ಟೆ ಬೈದು ಆತನನ್ನು ಕುಪಿತಗೊಳಿಸಿದರು ಎಂದು ಕೇಳಿದೆ. ಇದು ಅನಗತ್ಯವಾಗಿತ್ತು.

ದೇವಲಾಪುರದ ಭೂಚಳವಳಿಯು ಕಾಡಿಗೆ ವಿರೋಧವಲ್ಲ. ರೆವಿನ್ಯೂ ಭೂಮಿ ಎಂದಾಗಿ ದಾಖಲಾತಿ ಸಿಕ್ಕಿದ್ದರಿಂದಲೇ ಆರಂಭಿತವಾದ ಚಳುವಳಿ ಅದು. ಜೀವಿಜಯ, ಜಿಗಜಿಣಗಿ, ಜಿಲ್ಲಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ ಉಪವಿಭಾಗಾಧಿಕಾರಿಗಳು ನಮ್ಮಂಥ ಗರೀಬರ ಪರದವರಾಗಿದ್ದರು.

ಇತರರಿಗೆ ಸೌಂದರ್ಯಕ್ಕೆ, ಕೇಂದ್ರ ಸರ್ಕಾರಕ್ಕೆ ನೀಲಗಿರಿ ಬೆಳೆಸಿ ಟಾಟಾ ಬಿರ್ಲಾರಿಗೆ ಕೊಡಲು ಕಾಡು ಬೇಕಾದರೆ ದಲಿತರಿಗೆ ರೈತಾಪಿ ಜನದ ಬದುಕಿಗೆ ಮಳೆ ಬೆಳೆಗೆ ಸೌದೆ ಸೊಪ್ಪು ಸೊದೆಗೆ ಕಪಾಲೆಗೆ ಬೇಕಾದಂತಹದು ಕಾಡು,

ಕಾಡ ಅಧಿಕಾರಿಗಳ ಬಳಿ–
ಭೂಮಾಲಿಕರು ಕಾಡಿನ ಕಲ್ಲುಕಿತ್ತು ಕಾಡನ್ನು ಒತ್ತರಿಸಿರುವುದನ್ನು ಮುಟ್ಟದ ಕಾಡಿನ ಅಧಿಕಾರಿಗಳೇ

ಹಾಗೇ ಸರ್ಕಾರದ ಬಳಿ–
ಕಾಡನ್ನು ನುಂಗುತ್ತಿರುವ ಕಾಡಿನ ಅಧಿಕಾರಿಗಳನ್ನು ಮುಟ್ಟದ ಸರ್ಕಾರವೇ

ರೆವಿನ್ಯೂ ಭೂಮಿ ಎಂದು ಗರೀಬರು ಬಂದಾಗ ಅದ ಕಾಡು ಭೂಮಿ ಮಾಡುತ್ತಿ ? ಕಾಡುಭೂಮಿಯನ್ನು ಒತ್ತರಿಸುವ ಭೂಮಾಲಿಕರಿಗೆ ಅದ ರೆವಿನ್ಯೂ ಭೂಮಿ ಮಾಡುತ್ತಿ ? ಹೊಟ್ಟೆಗಿಲ್ಲದ ನಮ್ಮ ಹೊಟ್ಟೆಯನ್ನೇಕೆ ತುಳಿಯುತ್ತಿ ? ನಿನ್ನ ನಿಜ ಏನು ?

—ಎಂದಷ್ಟು ಕೇಳಿದ್ದರೆ ಸಾಕಾಗಿತ್ತು. ಆಗ ಅಧಿಕಾರಿಯೂ ಸರ್ಕಾರವೂ ಕನಿಷ್ಟ ಯೋಚಿಸುವಂತಾದರೂ ಆಗುತ್ತಿತ್ತು. ಅವು ತಮ್ಮನ್ನು ತಾವು ಮುಟ್ಟಿ ನೋಡಿಕೊಳ್ಳುತ್ತಿದ್ದವು.

ಆದಕ್ಕಾಗೆ ನಮ್ಮ ದಲಿತ ಸಂಘದ ವಿಭಾಗ ಸಂಚಾಲಕ ಶ್ರೀಹರಿಹರಆನಂದಸ್ವಾಮಿಯವರು ದ್ವೇಷ ಅನುಮಾನದ ಪ್ರವೃತ್ತಿಉಳ್ಳವರಾದ್ದರಿಂದ ಅವರಿಗೆ 'ದಯವಿಟ್ಟು ಗಾಂಧಿ ಚಿತ್ರ ನೋಡಿ' ಎಂದು ಎರಡು ಸಲ ವಿನಂತಿಸಿದೆ. ಹಾಗೆಯೇ ಇನ್ನೊಬ್ಬ ಕಾಂಗ್ರೈ ಗೂಂಡಾಗಿರಿಯಿಂದ ಪರಿವರ್ತಿತನಾಗಿ ದಲಿತ ಸಂಘವ ಸೇರಿ ದಿನದಿನಕ್ಕೂ ಬೆಳೆಯುತ್ತ ವಿವೇಕವಂತನಾಗುತ್ತ ಬೆಳೆಯುತ್ತ ದಲಿತ ಸಂಘದ ನಾಯಕನಾಗುತ್ತಿರುವ ಕೋಟೆಯ ಬೆಟ್ಟಯ್ಯ ಎಂಬ ಚೈತನ್ಯದ ಸೆಲೆಯಂತಿರುವ ಹುಡುಗನಿಗೂ ಸಿಕ್ಕಾಗ ಗಾಂಧಿ ಚಿತ್ರ ನೋಡು ಎಂದು ಹೇಳಬೇಕೆಂದಿರುವೆ, ನನ್ನೆಲ್ಲ ದಲಿತ ಸಂಘದ ಗೆಳೆಯರಿಗೂ ನಾನು ಹೇಳುವುದು ಹೀಗೆಯೇ.

೭

ಯಾಕೆಂದರೆ ನಮಗಿನ್ನೂ ಸ್ವಾತಂತ್ರ್ಯ ಎಂಬುದು ಬಂದಿಲ್ಲ. ನಮಗೆ ವಿಮೋಚನೆಯು ಆಗಬೇಕಾಗಿದೆ. ಗಾಂಧಿಯು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದದ್ದು ಒಂದು ರೀತೀಲಿ ಸುಲಭದ್ದು. ಗಾಂಧಿಯೊಡನೆ ಸಮಸ್ತ ಜನರಿದ್ದರು. ಮತ್ತು ಈ ನೆಲದಲ್ಲದವ ವೈರಿಯಾಗಿದ್ದನು. ಆದರೆ ನಮ್ಮ ಇರುವಿಕೆಯನ್ನು ಸಹಿಸದಿರುವ ಸವರ್ಣೀಯ ಜನಸ್ತೋಮವ ಗೆಲ್ಲುತ್ತ ಅದರ ಮನ ವಶಪಡಿಸಿಕೊಳ್ಳುತ್ತ ನಾವು ನಮ್ಮ ವಿಮೋಚನೆ ಕಡೆಗೆ ನಡೆಯಬೇಕಾಗಿದೆ. ನಮ್ಮೊಡನೆಯೂ ಬೆರಳೆಣಿಕೆಯಷ್ಟು ಮಾತ್ರ ಸವರ್ಣೀಯರು ಬರಬಹುದು. ಇಂಥಹದರಲ್ಲಿ ಹೀಗಿರುವಾಗ ನಮ್ಮ ಬಿಡುಗಡೆಯು ನೂರು 47ರ ಸ್ವಾತಂತ್ರ್ಯ ಹೋರಾಟಕ್ಕೂ ಮಿಗಲು ಪಡೆದುಕೊಂಡಿರುತ್ತದೆ. ಇಂಥಹದರಲ್ಲಿ ಹೀಗಿರುವಾಗ ನಮ್ಮ ವಿಮೋಚನೆಗಾಗಿ ಸಾವಿರಾರು ರೀತಿಗಳನ್ನು ನಾವು ತಡುಕಬೇಕಾಗಿದೆ. ಇಂಥಹದರಲ್ಲಿ ಹೀಗಿರುವಾಗ ಗಾಂಧಿಯೂ ನಮಗೆ ದಿಕ್ಕಾಗಬಹುದು.

—ದೇವನೂರ ಮಹಾದೇವ

ರೈತ ಚಳುವಳಿ : ತಾಯಿ ಬೇರಿಲ್ಲದ ಆಶೆಯ ಹೂ

ಬ್ರಿಟೀಷರು ರೈತನ ಸುಲಿಗೆ ಮಾಡಿ ಬಿಟ್ಟಲ್ಲಿಂದ ನಮ್ಮವರು ಆರಂಭಿಸಿದರು. ಪ್ರತಿ ವರುಷ ಒಂದೊಂದೇ ತೆರಿಗೆಗಳನ್ನು ಹಾಕುತ್ತಾ ಒಂದುದಿನ ರಾತ್ರೋರಾತ್ರಿ ಅವನಿಗೆ ಕೊಡುವ ಗೊಬ್ಬರ ಬೀಜ, ಔಷಧಿಗಳ ಬೆಲೆ ಡಬಲ್ಲು ಮಾಡಿದರು. ಅವನ ಮೈಮೇಲಿನ ಅಂಗಿಯನ್ನೂ ಕಸಿದುಕೊಂಡು ಲಂಗೋಟಿಯನ್ನು ಮಾತ್ರ ಬಿಟ್ಟಿದ್ದಾರೆ. ಈ ವರ್ಷ ಅದನ್ನೂ ಕಸಿದುಕೊಂಡರೆ ಉಪಕಾರವಾಗುವುದು. ಅವನು ನಂಗಾ ಆದ ಮೇಲೆ ಕಸಿದುಕೊಳ್ಳುವುದಾದರೂ ಏನಿದೆ ?

ಕಳೆದ ಎರಡೂವರೆ–ಮೂರು ವರ್ಷಗಳಿಂದ ಕರ್ನಾಟಕದ ನೆಲದಲ್ಲಿ ಎದ್ದಿರುವ ರೈತ ಬಂಡಾಯದ ಹಿನ್ನೆಲೆಯನ್ನು, ಬೆಳಗಾವಿ ಜಿಲ್ಲೆಯಲ್ಲಿ ರೈತಸಂಘಟನೆ ಮಾಡುತ್ತಿರುವ ಕುಂದರನಾಡ ಪಾಟೀಲರು ಬರೆದಿರುವ "ಹಾಳಾದ ರೈತ ಬೋಳಾದ ನಾಡು" (ರೈತ ಶೋಷಣೆಯ ಸಮೀಕ್ಷೆ) ಎಂಬ ಕಿರುಪುಸ್ತಕದ ಮೇಲಿನ ಸಾಲುಗಳು ಸೂಕ್ಷ್ಮವಾಗಿ ಹೇಳುತ್ತವೆ. ಎರಡೂವರೆ ವರ್ಷಗಳ ಹಿಂದೆ ಘಟಪ್ರಭ–ಮಲಪ್ರಭ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಕರದ ವಿರುದ್ಧ ಒಮ್ಮೆಗೇ ಸ್ಫೋಟಗೊಂಡ ರೈತನ ರೊಚ್ಚು ಹಲವಾರು ಅವತಾರಗಳನ್ನು ತಾಳಿ ಸದ್ಯಕ್ಕೆ ಕರ್ನಾಟಕ ರೈತ ಸಂಘದ ಆಶ್ರಯದಲ್ಲಿ ರೈತ ಚಳುವಳಿಯಾಗಿ ವ್ಯವಸ್ಥಿತವಾಗಿ ನಾಡಿನ ನಾಲ್ಕಾರು ಜಿಲ್ಲೆಗಳಲ್ಲಿ ಬೇರು ಬಿಟ್ಟಿದೆ; ಇದರಿಂದಾಗಿ ರೈತನ ಮೈಮೇಲೆ ಲಂಗೋಟಿಯಾದರೂ ಉಳಿದಿದೆ. ಈ ಕಾರಣದಿಂದಲೇ ರಾಜಕೀಯ ಪೂರ್ವಾಗ್ರಹಗಳಿಗೆ ಸಿಕ್ಕಿದ ಕೆಲವು ಮೂಲೆಗಳ ಹೊರತಾಗಿ ಎಲ್ಲ ಪ್ರಗತಿಪರ ವಲಯಗಳಿಂದ ರೈತ ಚಳುವಳಿಗೆ ವಿಶಾಲ ತಳಹದಿಯ ಸಹಾನುಭೂತಿ ದೊರಕಿದೆ. ಈ ಮಧ್ಯೆ ಕರ್ನಾಟಕದಲ್ಲಿ ದೆವ್ವದಂತಷ್ಟೇ ಸುಳಿದಾಡುತ್ತಿದ್ದ ಜನತಾ ಪಕ್ಷವೆಂಬ ಅಡ್ನಾಡಿ ರಾಜಕೀಯ ಸಂಘಟನೆಯೊಂದು ರೈತ ಚಳುವಳಿಯ ಆವೇಶದಲ್ಲಿ ಆಡಳಿತಕ್ಕೆ ಹಾರಿಬಂದು ತನಗೆ ಒಡಲೆಂಬುದೊಂದನ್ನು ನಿರ್ಮಿಸಿದ ಕೈಗಳಲ್ಲಿ ಒಂದಾದ ರೈತ ಚಳುವಳಿಯ ಜುಟ್ಟನ್ನೇ ಹಿಡಿಯ ಹೊರಟಿರುವ ವಿಪರ್ಯಾಸವೂ ಉಂಟಾಗಿದೆ. ಏನೇ ಇರಲಿ ಸದ್ಯಕ್ಕಂತೂ, ರೈತ ಚಳುವಳಿಯ ಗಂಡುಮೆಟ್ಟಿನ ನೆಲಗಳೆಂದು ಹೇಳಲಾಗುವ ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ನಿಷ್ಕ್ರಿಯತೆ ಎಂದಲ್ಲದಿದ್ದರೂ ಮೌನವೆಂದೇ ಕರೆಯಬಹುದಾದ ಸ್ತಬ್ಧತೆ ಆವರಿಸಿದೆ; "ಕಟ್ಟುವ" ಮನಸ್ಸಿಗಿಂತ "ಕಾದು ನೋಡುವ" ಮನಸ್ಸೇ ಎದ್ದು ಕಾಣುತ್ತಿದ್ದಂತಿದೆ. ಈ ಹಿನ್ನೆಲೆಯಲ್ಲಿ ರೈತ ಚಳುವಳಿಯ ಚೌಕಟ್ಟು, ಆಧಾರ ಮತ್ತು ಗುರಿಗಳ ಬಗ್ಗೆ ಜಿಜ್ಞಾಸೆ ನಡೆದಿದೆ. ಈ ಎಲ್ಲ ಜಿಜ್ಞಾಸೆಯೂ ರೈತಚಳುವಳಿ ಬಗ್ಗೆ ಆಸೆ ಇಟ್ಟುಕೊಂಡೇ ನಡೆದಿರುವಂತಹವು.

ಎರಡೂವರೆ ವರ್ಷಗಳ ಹಿಂದೆ ರೈತ ಚಳುವಳಿ ಕರ್ನಾಟಕ ರೈತಸಂಘದ ಹೆಸರಿನಡಿ ಒಂದು ಸಂಘಟನೆಯಾಗಿ ಬೆಳೆಯತೊಡಗಿದಾಗ ಎಲ್ಲವನ್ನೂ ವಿಷಗೊಳಿಸತೊಡಗಿರುವ ಪ್ರಸ್ತುತ ಭ್ರಷ್ಟ ವ್ಯವಸ್ಥೆಯ ವಿರುದ್ಧ ಮೊಳೆಯತೊಡಗಿದ್ದ ಒಂದು ಆಶಾಕಿರಣವಾಗಿ ಅದು ಕಂಡಿತು. ಬೆಳೆಯಬಲ್ಲ ಯಾವುದೇ ಸಂಘಟನೆ ತೋರುವ ಶಿಸ್ತು, ಸಂಯಮ ಮತ್ತು ಮಿಗಿಲಾದ ಕೆಚ್ಚು ನಾಡಿನ ಉದ್ದಗಲಕ್ಕೂ ಬತ್ತಿ ಹೋಗುತ್ತಿದ್ದ ಹಲವಾರು ಎದೆಗಳಲ್ಲಿ ಆಸೆಯ ಕಿಚ್ಚು ಹೊತ್ತಿಸಿತು. ಪರಾಜಿಗಿಟ್ಟಂತಿದ್ದ ಹಳ್ಳಿಗಾಡಿನ ಲಂಗೋಟಿ ರೈತನ ಮಾನಮರ್ಯಾದೆ

ನಾಗಭೂಷಣ್

ಇದ್ದಕ್ಕಿದ್ದಂತೆ ದಂ ಎಳೆದುಕೊಂಡು ಸೆಟೆದು ಕಣ್ಣರಳಿಸಿ ನಿಂತಾಗ ಯಾವ ಕನಸಿಗ ತಾನೇ ಹೆಮ್ಮೆಯಿಂದ ಬೀಗುವುದಿಲ್ಲ ?

ಆದರೆ ರೈತ ಚಳುವಳಿಯ ಕನಸು ಎರಡೂವರೆ ವರ್ಷಗಳ ನಂತರವೂ ಕನಸಾಗಿಯೇ ಇನ್ನಷ್ಟು ಬೆಳೆಯ ತೊಡಗಿರುವುದು ನಿಜವಾಗಿಯೂ ತಲ್ಲಣದ ಸಂಗತಿಯಾಗಿದೆ. ಈ ಕನಸನ್ನು ಹುಟ್ಟುಹಾಕಿದ ಕರ್ನಾಟಕ ರಾಜ್ಯ ರೈತಸಂಘ ಬೆಲೆ ಬೇಡಿಕೆ ಮತ್ತು ಸಾಲಮನ್ನಾ ಸಂಘವಾಗಿ ವಿಜೃಂಭಿಸುವಂತೆ ತೋರುತ್ತಿರುವುದು ಕಳವಳಕ್ಕೆಡೆಮಾಡಿಕೊಟ್ಟಿದೆ. ರೈತ ಸಂಘ ಪ್ರಕಟಿಸಿರುವ "ರೈತ ಚಳುವಳಿ ಏಕೆ ?" ಎಂಬ, ಸಂಘಟನೆಯ ಪ್ರಣಾಳಿಕೆಯಂತಿರುವ ಕಿರುಪುಸ್ತಕದಲ್ಲೇನೂ ಸರ್ವಾಂಗೀಣ ಅಥವಾ ಮೂಲಭೂತ ಬದಲಾವಣೆಯ ತೋರಿಕೆಗಳೇನೂ ಇಲ್ಲ, ನಿಜ, ಅದೊಂದು ನಿರ್ದಿಷ್ಟ ಬೇಡಿಕೆಗಳ ತಾರ್ಕಿಕ ಮಂಡನೆ, ಸೋದಾಹರಣ ವಿವರಣೆ ಮತ್ತು ಈ ಬೇಡಿಕೆಗಳ ಈಡೇರಿಕೆಗಾಗಿ ನಡೆಸಬೇಕಾದ ಹೋರಾಟಕ್ಕೆ ಅಗತ್ಯವಾದ ಮಾರ್ಗಸೂಚಿಗಳನ್ನೊಳಗೊಂಡ ಒಂದು ಥರದ ವ್ಯಾವಹಾರಿಕ ಕೈಪಿಡಿ. ಆದರೆ ನಿಜವಾಗಿಯೂ ಈ ಕೈಪಿಡಿಯೇ ಈ ಚಳುವಳಿಯ ಬೇರು ಬಳ್ಳಿಗಳನ್ನು ನಿರ್ಧರಿಸಿರುವ ದಾಖಲೆಯೇ? ರೈತ ಚಳುವಳಿ ತನ್ನ ಒಡಲಿನಲ್ಲಿಟ್ಟುಕೊಂಡಿರುವ ಬೆಂಕಿಯ ಕಾವನ್ನು ಬಲ್ಲವರ್ಯಾರೂ ಇದನ್ನು ನಂಬಲಾರರು, ಹೋಗಲಿ, ಈ ದಾಖಲೆಯಲ್ಲಿರುವ 19 ಬೇಡಿಕೆಗಳಾದರೂ ಬರೀ ಬೇಡಿಕೆಗಳೇ ? ಅವನ್ನು ಒಂದೊಂದಾಗಿ ಸರಿಯಾದ ಆದ್ಯತೆಯಲ್ಲಿಟ್ಟು ಒಂದಕ್ಕೊಂದು ತಾರ್ಕಿಕ ಕೊಂಡಿ ಹಾಕಿ ಅವನ್ನು ನಮ್ಮ ಹಳ್ಳಿಗಾಡಿನ ಬ್ರಾಹ್ಮಣರ ಒಕ್ಕಲಿಗರ, ಲಿಂಗಾಯ್ತರ, ಕುರುಬರ, ನೇಯ್ಗೆಯವರ, ಬೇಡರ, ಕಮ್ಮಾರ–ಕುಂಬಾರರ, ಕೊರಮ–ಕೊರಚರ, ಹೊಲೆ–ಮಾದಿಗರ ಕೇರಿಗಳ ಧೂಳಿನಲ್ಲಿ; ಈ ಹಳ್ಳಿಗಾಡನ್ನು ಅವುಚಿಕೊಂಡು ಅವನ್ನು ಪೊರೆಯುತ್ತಿರುವ ಹೊಲಗದ್ದೆ ತೋಟಗಳ ಮಣ್ಣಲ್ಲಿ ಹೆಜ್ಜೆ ಹಾಕಿಸಿಕೊಂಡು ಬಂದರೆ ಅದೊಂದು ಅಲ್ಲೋಲ ಕಲ್ಲೋಲ ಸ್ಥಿತಿ ತಲುಪಿರುವ ನಮ್ಮ ಗ್ರಾಮೀಣ ಬದುಕಿನ ವಿಜಯ ಯಾತ್ರೆಯ ಕನಸಿನಂತಿದ್ದೀತು. ಹೌದು, ಇದು ಇನ್ನೂ ಕನಸೇ. ಇದೇ ರೈತ ಚಳುವಳಿ ಈಗ ಎದುರಿಸುತ್ತಿರುವ ಅತ್ಯಂತ ದುರಂತವಾಗಿದೆ.

ಈ ದುರಂತ ರೈತ ನಾಯಕರ ಕಣ್ಣಿಗೇಕೆ ಕಾಣುತ್ತಿಲ್ಲ ; ಅರ್ಥವಾಗುತ್ತಿಲ್ಲ? ನಮ್ಮ ರೈತನಾಯಕರು ಇದನ್ನು ಅರ್ಥಮಾಡಿಕೊಳ್ಳಲಾಗದಷ್ಟು ಮೂರ್ಖರು ಎಂದರೆ ನಂಬುವುದು ಕಷ್ಟ.

ಸಮಾಜವಾದೀ ರೈತಸಂಘದ ಸಂಚಾಲಕರಾದ ಪ್ರೊ॥ ಎಂ. ಡಿ. ನಂಜುಂಡಸ್ವಾಮಿಯಂತಹವರಿಂದ ಇದು ಅರ್ಥವಾಗದ ಸಂಗತಿ ಎಂದರೆ ನಂಬುವುದಾದರೂ ಹೇಗೆ ? ಸಾಲ ಮನ್ನಾ ಮಾಡಿಸಿಕೊಂಡು ಮತ್ತು ವೈಜ್ಞಾನಿಕವೆಂದು ಹೇಳಲಾದ ಬೆಳೆ–ಬೆಲೆಗಳನ್ನು ಪಡೆದುಕೊಂಡ ದಿನವೇ ರೈತರ ಸುದಿನಗಳು ಆರಂಭವಾದವು ; ಹಳ್ಳಿಗಾಡಿನಲ್ಲಿ ಸುಭಿಕ್ಷ–ಶಾಂತಿಯ ಯುಗ ತೆರೆದುಕೊಂಡಿತೆಂದು ಇವರೆಲ್ಲಾ ನಂಬಿದ್ದಾರೋ ಹೇಗೆ ? ರೈತನನ್ನು ಭೂಹೀನ ಕೂಲಿಕಾರನಿಂದ ಬೇರೆ ಇಟ್ಟು ; ರೈತ–ಭೂಹೀನ ಕೂಲಿಕಾರರಿಬ್ಬರನ್ನೂ ಹಳ್ಳಿಯ ಆರ್ಥಿಕ–ಸಾಂಸ್ಕೃತಿಕ ಚೌಕಟ್ಟಿನಿಂದ ಹೊರಗಿಟ್ಟು ; ಹಳ್ಳಿಯನ್ನು ಇಡೀ ಸಮಾಜದ–ಮಾಯಜಾಲದಂತೆ ತೋರುವ ಅನೇಕಾನೇಕ ಚೈತನ್ಯಗಳ ನರನಾಡಿಗಳಿಂದ ದೂರ ಇಟ್ಟು ಪ್ರಯೋಗಮಾಡಿ ನೋಡುವ ಹುಚ್ಚುತನಕ್ಕೇನಾದರೂ ರೈತ ಚಳುವಳಿ ಒಳಗಾಗಿದೆಯೇ ?

ತ ಚಳುವಳಿಯನ್ನು ಶ್ರೀವಂತ ರೈತರ, ಮೋತಿ ಭೂಮಾಲಿಕರ, ಕೇವಲ ಚಳುವಳಿಕೋರರ, ಾಶ ಸಿದ್ಧಾಂತ ಶೂರರ ಹಾವಳಿ ಎಂದು ತಳ್ಳಿಕುವ ಸಿನಿಕರದ್ದಲ್ಲ ಈ ಪ್ರಶ್ನೆಗಳು. ರೈತ ಚಳು ತನ್ನ ಬೆಲೆ-ಸಾಲ ಬೇಡಿಕೆಗಳನ್ನು ಆರಗಿಸಿ ಂಡು ಹಳ್ಳಿಗಾಡಿನ ಇಡೀ ಬದುಕನ್ನು ಎಲ್ಲ ಮಾನವರ ನೆಮ್ಮದಿಗಾಗಿ ಪುನರ್‌ವಿನ್ಯಾಸಗೊಳಿ ರ ಸಾಧನವಾಗಿ ರೂಪುಗೊಳ್ಳಬೇಕಾದ ಮಾಧ್ಯ ಎಂಬ ಸದ್ಭಾವನೆ ಉಳ್ಳವರು ಎತ್ತುವ ಪ್ರಶ್ನೆ ಇವು.

ರೈತಸಂಘವು ವ್ಯವಸಾಯವನ್ನು ಒಂದು ಕೈಗಾ ಯೆಂದು ಘೋಷಿಸಿ ನಮ್ಮ ಅರ್ಥ ವ್ಯವಸ್ಥೆ ನ್ನೂ ಜೊತೆ ಜೊತೆಗೆ ಮನುಷ್ಯತ್ವವನ್ನೂ ಹಿಪ್ಪೆ ಮಾಡುತ್ತಿರುವ ಕೈಗಾರಿಕೆಗೆ ಕೊಡುವ ಸವಲತ್ತುಗಳನ್ನೂ ಅದಕ್ಕೂ ಕೊಡಬೇಕೆಂದು ಹಪಡಿಸುತ್ತಿರುವ ಸಂಗತಿ ಭವಿಷ್ಯದ ಬಗ್ಗೆ ಇಟ್ಟುಕೊಂಡಿರುವ ಯಾರನ್ನಾದರೂ ಅಲು ಿಸುತ್ತದೆ. "ವೈಜ್ಞಾನಿಕತೆ" ಎಂಬ ದೆವ್ವವನ್ನು ಮೇಲೆ ಎಳೆದುಕೊಂಡಿರುವ ರೈತಸಂಘ, ಬೆಳೆ ಗೆ "ವೈಜ್ಞಾನಿಕ" ವಾಗಿ ಬೆಲೆ ಅಂದಾಜು ಡಿರುವ ರೀತಿ ಯಾವುದೇ ಅಧಮ ಬಂಡವಾಳಿ ನ್ನೂ ನಾಚಿಸುವಂತಿದೆ. ಈ "ವೈಜ್ಞಾನಿಕ" ದಾಜಿನ ಆಧಾರದ ಮೇಲೇ ಬೆಲೆ ಮೋಸ, ರುಕಟ್ಟೆ ಮೋಸಗಳ ಲೆಕ್ಕ ಹಾಕಿ "ರೈತನ ಸಾಲ ಸ್ತಾ" ಎಂಬ ವಾದವನ್ನು ರೂಪಿಸಿರುವುದು ಬುದನ್ನು ನೋಡಿದಾಗ ರೈತ ಚಳುವಳಿ ಕಾಣು ಬಹುದಾದ ಕನಸಿನ ಬಗ್ಗೆ ಭಯವಾಗುತ್ತದೆ.

ರೈತ ಚಳುವಳಿಯನ್ನು ಎಂದೋ ಹಳ್ಳಿಗಳನ್ನು ಕಕ್ಕೆ ತಳ್ಳಿರುವ ರಾಕ್ಷಸ ಸದೃಶ್ಯ ಭೂಮಾಲಿಕರ ತ್ತು ಹಳ್ಳಿಯಲ್ಲೊಂದು ಹಾಗೂ ಪಟ್ಟಣದ ಲ್ಲೊಂದು ಕಾಲು ಇಟ್ಟುಕೊಂಡು ಹಳ್ಳಿಗಳ ಉಸಿ ್ನೇ ಎಳೆದು ಹಾಕುತ್ತಿರುವ ತಲೆಹಿಡುಕ ಶೋಕೀ ತರ ಚಳುವಳಿಯೆಂದು ತಿರಸ್ಕರಿಸಬಹುದಿತ್ತು. ರೆ ಈ ರೈತ ಚಳುವಳಿಯ ನಾಯಕ ಗಣವ ್ನೊಮ್ಮೆ ನೋಡಿ: ಅಧ್ಯಕ್ಷರಾದಂಥ ಪ್ರೀತಿ ರಿವ ತಾತನಂತಿರುವ ಎಚ್. ಎಸ್. ರುದ್ರಪ್ಪ ಕೀ ಕಾಂಗ್ರೆಸ್ ಧುರೀಣರಾದರೂ ಎಂಜಲು ್ತಯೆಂದರೆ ಮಾರು ದೂರವೇ ಉಳಿಯುವ ಕಿಯುವರೆಂದು ಹೆಸರಾದವರು. ಇನ್ನು ಕಾರ್ಯ ರ್ಶಿಗಳಾದಂಥ ಮಾಜಿ ಸೊಗಸುಗಾರ ಪುಟ್ಟಸ್ವಾ ಎಂಬ ಪ್ರೀತಿಯ ಬಿರುದಿಗೆ ಪಾತ್ರರಾದ ಎನ್. ಸುಂದರೇಶ್, ಎಲ್ಲೆಲ್ಲೂ ನಗೆ ಚೆಲ್ಲುತ್ತಾ ತಾವು ಾತ್ರ ಗಂಭೀರ ವದನರಾಗಿ ಪರದಾಡುವ ಗಡ್ಡದ ಿದಾಳ್‌ಶಾಮಣ್ಣ ಮತ್ತು ಸಂಚಾಲಕರಾದಂಥ ಪ್ರಸಿದ್ಧ ತ್ರಿಕಾಲ ಬ್ರಹ್ಮದ್ವೇಷಿ ಪ್ರೊ॥ ಎಂ. ಡಿ. ನಂಜುಂಡಸ್ವಾಮಿ ಸಮಾಜವಾದಿ ಗರಡಿಯಲ್ಲಿ ಕಸರತ್ತು ಮಾಡಿದವರು. ಹಾಸನದ ದತ್ತ, ಮೂರ್ತಿ, ಶಿವಪ್ರಸಾದ್, ರಾಜೇಗೌಡ, ವಿಜಯ ಕುಮಾರ್, ಪಾಂಡುರಂಗ ವಿಟ್ಟಲ, ವಿಶ್ವನಾಥ್, 'ಮುಚ್ಚು' ಹನುಮಂತೇಗೌಡ, ಶಿವಮೊಗ್ಗದ ಗಂಗಾಧರ್, ತೀರ್ಥಹಳ್ಳಿಯ ವೆಂಕಟೇಶ್ ಮುಂತಾದವರೆಲ್ಲ ಸಹಜ ಪ್ರೀತಿ ಮಾತ್ರ ಮನುಷ್ಯನನ್ನು ಆಳುವಂತಾಗಬೇಕೆಂದು ನಂಬಿರುವ ಕನಸಿಗರು. ಇಂತಹ ಯಾರಾದರೂ ಕರುಬುವಂತಹ ಅನುಭವದ, ಯೌವ್ವನದ ನಾಯಕತ್ವ ಹೊಂದಿ ರೈತ ಚಳುವಳಿ ಏಕೆ ದಡ್ಡ ಧಾಂಡಿಗನಂತಿದೆ? ಶಿವಪ್ರಸಾದ್ ಯಾಕೆ ದೂರವಾದರು? ರೈತರನ್ನು ತಿಗಣೆಗಳಂತೆ ಹೊಸಕಿಹಾಕುತ್ತಿರುವ ಈ ವ್ಯವಸ್ಥೆಯ ಮೂಲ ಸ್ರೋತದಂತಿರುವ ಬಂಡವಾಳಶಾಹಿ ಕೈಗಾರಿಕೆಯ ಮತ್ತೊಂದು ಅವತಾರವಾಗಲೆಣಿಸುವ ರೈತ ಚಳುವಳಿಗೆ ವಿವೇಕ ಎಂಬುದೊಂದೇನಾದರೂ ಇದೆಯೆ? ಇವರು "ವೈಜ್ಞಾನಿಕ" ಬೆಲೆ ಲೆಕ್ಕಾಚಾರಗಳ ವೈಭವದ ಮಧ್ಯೆ ಮೈಮರೆತು ಕೈಹಾಕುತ್ತಿರುವುದಾದರೂ ಯಾವ ಸಂಸ್ಕೃತಿಯ ಹೆಗಲ ಮೇಲೆ ಎಂಬುದರ ಪರಿವೆಯೇನಾದರೂ ಈ ನಾಯಕ ಶಿಖಾಮಣಿಗಳಿಗಿದೆಯೇ? ಯಾರೆಂದರವರು, ಎಲ್ಲೆಂದರಲ್ಲಿ, ಹ್ಯಾಗೆಂದರೆಹಾಗೆ ದೋಚಲು ಆಸ್ಪದವಿರುವ ಇಂದಿನ ಅರ್ಥ/ವ್ಯವಸ್ಥೆಯಲ್ಲಿ ವೈಜ್ಞಾನಿಕ ಲೆಕ್ಕಾಚಾರವೆಂಬುದೇ ಅವೈಜ್ಞಾನಿಕ, ವೈಜ್ಞಾನಿಕತೆ ಎಂಬುದರಲ್ಲಿ (ಆವರಣ) ಗ್ರಹಿಕೆ ಎಂಬುದೊಂದೇನಾದರೂ ಇದ್ದಲ್ಲಿ—ಎಂಬ ಸಂಗತಿ ಪ್ರಖರ ಲೋಹಿಯಾವಾದಿ ಎಂದು ನಂಬಲಾಗಿರುವ ಪ್ರೊ॥ ಎಂ. ಡಿ. ನಂಜುಂಡಸ್ವಾಮಿಯಂತವರಿಗಾದರೂ ಏಕೆ ಹೊಳೆಯುವುದಿಲ್ಲ? ಸಮಾಜವಾದಿಗಳೆನಿಸಿಕೊಂಡವರು ರಾತ್ರೋರಾತ್ರಿ ರೈತನಾಯಕರಾಗಿಬಿಡುವ ಜಾದೂವಿನ ಪರಿಣಾಮ ಇದಿರಬೇಕು.



ಜೀವನಾಧಾರಕ್ಕೆ ಕೈಕಾಲುಗಳನ್ನೇ ನಂಬಿ ನಿಂತಿರುವ ಕೃಷಿಕಾರ್ಮಿಕರು ಅರ್ಥಾತ್ ದಲಿತರು

ದುಡಿಯುವ ರೈತನಿಗೆ ದುಡಿಮೆಗೆ ತಕ್ಕ ಪ್ರತಿಫಲವಿಲ್ಲ. ಇದಕ್ಕೆ ಯಾರೂ ದುಸರಾ ಮಾತೇ ಇಲ್ಲ. ಹಾಗಾದರೆ ರೈತನ ದುಡಿಮೆಯ ಫಲವೆಲ್ಲಾ ಎಲ್ಲಿ ಹಂಚಿಹೋಗಿದೆ? ಯಾರು ಆತನನ್ನು ಲೂಟಿ ಮಾಡಿದವರು? ರೈತ ಚಳುವಳಿಗೆ ಆತ್ಮಸಾಕ್ಷಿ ಎಂಬುದೇನಾದರೂ ಇದ್ದರೆ ಅದು ಈ ಪ್ರಶ್ನೆಯನ್ನು ಹಳ್ಳಿಯ ಭೂಮಾಲಿಕನ ಕೊಟ್ಟಿಗೆಯಲ್ಲಿ ಮಲಗುವ ಜೀತದಾಳು, ಜಗುಲಿಯಾಚೆ ನಿಂತು ಕೂವ ಕೇಳುವ ಹೊಲೆಮಾದಿಗರು, ಬಂಜರು ಭೂಮಿ ಕೆರೆದು ಆಕಾಶ ನೋಡುವ ಲಂಗೋಟಿ ರೈತ, ಬೆಳೆದದ್ದನ್ನು ಆರುತಿಂಗಳು ಉಂಡು ಇನ್ನಾರುತಿಂಗಳು ಕೂಲಿಗಾಗಿ ಅಲೆಯುವ ನಾಮ ಮಾತ್ರ ರೈತ-ಇವರಿಂದ ಶುರುಮಾಡಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಬೋರ್ಡು, ಸಹಕಾರೀ ಸಂಘಗಳು, ಭೂ ಅಡಮಾನ ಬ್ಯಾಂಕುಗಳು, ರೆಗ್ಯುಲೇಟೆಡ್ ಮಾರುಕಟ್ಟೆ ಸಂಸ್ಥೆಗಳು ಮುಂತಾದವುಗಳನ್ನು ಮುಳುಗಿಸಿ ಹಳ್ಳಿ ಮತ್ತು ಪಟ್ಟಣಗಳ ನಡುವೆ ಪುಢಾರಿತನ ಮಾಡಿಕೊಂಡು ಹಲವು ಹನ್ನೊಂದು ಕುಟುಂಬಗಳನ್ನು ನೆಲಸಮ ಮಾಡಿ ಹಳ್ಳಿ ಮತ್ತು ಪಟ್ಟಣಗಳೆರಡರದ್ದೂ ಮಜಾ ಉಡಾಯಿಸುತ್ತಿರುವ ನವ ಪಾಳೇಗಾರರನ್ನೂ ವಿಚಾರಿಸಿಕೊಂಡ ವರ್ತಕರು, ಸಂಪೂರ್ಣ ಪಟ್ಟಣವಾಸಿಗಳಾದ ಸರ್ಕಾರೀ ನೌಕರರು, ಅಧಿಕಾರಿಗಳು, ರಾಜಕಾರಣಿಗಳು, ಕಾರ್ಖಾನೆ ದುಡಿಮೆಗಾರರು, ಕೈಗಾರಿಕೋದ್ಯಮಿಗಳು-ಇವರವರೆಗೆ ಎಲ್ಲರನ್ನೂ ಕೇಳಿಕೊಂಡು

ಬರಲಿ. ನಂತರ ಎಲ್ಲ ಉತ್ತರಗಳನ್ನೂ ವಿಶ್ಲೇಷಿಸಲಿ. ಆಗ ಅವರಿಗೆ ಗೊತ್ತಾಗುತ್ತದೆ, ಹಲವಾರು ಹಂತಗಳಲ್ಲಿ ಹಲವಾರು ಥರಗಳಲ್ಲಿ ಒಬ್ಬರನ್ನೊಬ್ಬರು ಲೂಟಿ ಮಾಡಿಕೊಂಡು ಬದುಕುತ್ತಿರುವ ವ್ಯವಸ್ಥೆ ಇದೆಂದು. ಈ ವಿಶ್ಲೇಷಣೆಯಲ್ಲಿ ಅಪರಾಧಿಗಳ ಸಾಲಿನಲ್ಲಿ ಕೈಗಾರಿಕೋದ್ಯಮಿಗಳ, ಅಧಿಕಾರಿಗಳ, ರಾಜಕಾರಣಿಗಳ ಜೊತೆ ಜೊತೆಯಲ್ಲಿ ಒಂದೇ ಮಾತಿನಲ್ಲಿ ರೈತ ಚಳುವಳಿ ರೈತ ಎಂದು ಕರೆಯುತ್ತಿರುವವರಲ್ಲಿ ಅನೇಕರು ನಿಲ್ಲಬೇಕಾಗುತ್ತದೆ. ಒಬ್ಬರನ್ನೊಬ್ಬರು ಲೂಟಿಹೊಡೆಯುತ್ತಾ ಕೊನೆಗೆ ಈಗ ರೈತನ ಲಂಗೋಟಿಯನ್ನೂ ಕಿತ್ತುಕೊಳ್ಳಲು ಉದ್ಯುಕ್ತವಾಗಿರುವ ಈ ಹಲಾಲ್ಖೋರ ವ್ಯವಸ್ಥೆಗೆ ಜಾತಿಯ ಹೆಸರಿನಲ್ಲಿ, ಆಸ್ತಿಯ ಹೆಸರಿನಲ್ಲಿ, ಅಧಿಕಾರದ ಹೆಸರಿನಲ್ಲಿ, ರೈತರೂ ನೀರೆರೆದು ಪೋಷಿಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ 19 ಬೇಡಿಕೆಗಳ ಸಿಂಹಾಸನದ ಮೇಲೆ ಕೂತು ಸಾಲ ಮನ್ನಾ, ವೈಜ್ಞಾನಿಕ ಬೆಲೆ ಎಂಬೆರಡೇ ವರಗಳಿಗಾಗಿ ತಪಸ್ಸು ನಡೆಸುತ್ತಿರುವ ರೈತ ಚಳುವಳಿ ಯಾರಿಗೆ ಶಾಪವಾಗಬೇಕೆಂದಿದೆ ?

ರೈತ ಚಳುವಳಿ ಈಗ ಕೊಂಚ ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ. ಬಾಳ್ಳುಪೇಟೆಯ ಪ್ಲಾಂಟರುಗಳು ಮತ್ತು ದಲಿತ ಕೂಲಿಕಾರರ ನಡುವಣ 'ಘರ್ಷಣೆ' ಯಲ್ಲಿ ತನ್ನನ್ನು ಕಮಕ್ ಕಿಮಕ್ ಎನ್ನದೆ ಕೂರಿಸಿದ ಶಕ್ತಿ ಯಾವುದು ಎನ್ನುವುದನ್ನು ಯೋಚಿಸಬೇಕಾಗಿದೆ. ಕಲ್ಲೂರಿನ ಪುಂಡಾಟಿಕೆ, ಮಳವಳ್ಳಿಯ ಹೊಡೆದಾಟ, 'ದಾರಿದೀಪ' ಪುಟ್ಟರಾಮುವಿನ ಮೇಲೆ ಹಲ್ಲೆ-ಇವುಗಳ ಹಿನ್ನೆಲೆಯ ಸೂಕ್ಷ್ಮಗಳು ಯಾವುವು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಅನುಕೂಲಸ್ಥ ರೈತನೊಬ್ಬನ ಮನೆ ಜಪ್ತಿ ಆಗುವವರೆಗೂ ಜಪ್ತಿ ಕಾರ್ಯಾಚರಣೆಯನ್ನು ಕ್ರಿಯಾತ್ಮಕವಾಗಿ, ವಿರೋಧಿಸದೇ ಇದ್ದ ತಾಳ್ಮೆ ಯಾವುದು ಎಂಬುದನ್ನು ಗುರುತಿಸಬೇಕಾಗಿದೆ. ಬಡ್ಡಿ ಮನ್ನಾದ ಆಸೆ ತೋರಿಸಿದೊಡನೆ ನೂರು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಸಾಲ ಸರ್ಕಾರಕ್ಕೆ ಮರುಪಾವತಿಯಾದದ್ದರ ರಹಸ್ಯವನ್ನು ಭೇದಿಸಬೇಕಾಗಿದೆ. ಭೂಸುಧಾರಣೆ ಕಾಯಿದೆ ಜಾರಿಯಾದ ಮೇಲೆ ಭಾರೀ ಭೂಮಾಲಿಕರು ಇಲ್ಲವಾಗಿದ್ದಾರೆ ಎಂಬ ಬುರುಡೆಯನ್ನೂ, ರೈತರ ಕಷ್ಟ ರೈತರಿಗೆ ಮಾತ್ರ ಗೊತ್ತು ಎಂಬ ಭೋಳೆಯನ್ನೂ, ವೈಜ್ಞಾನಿಕ ಬೆಲೆ ಲೆಕ್ಕಾಚಾರಗಳ ಭಾಷಣಗಳಲ್ಲಿ 'ಒಬ್ಬರಿಗೆ ಒಂದು ದಿನಕ್ಕೆ 10 ರೂ. ಕೂಲಿ' ಎಂದು ಹೇಳುವ ಕ್ರೌರ್ಯವನ್ನೂ, ಹರಿಜನ ಭೂ ಪರಭಾರೆ ಕೇಸಿನಲ್ಲಿ ನ್ಯಾಯಕ್ಕಾಗಿ ಸುಪ್ರೀಂ ಕೋರ್ಟಿನ ಮೆಟ್ಟಿಲು ಹತ್ತುವುದಾಗಿ ಹೇಳುವ ಅವಿವೇಕವನ್ನೂ ಕೂಡಲೇ ನಿಲ್ಲಿಸಬೇಕಾಗಿದೆ.

ಹಳ್ಳಿಗಳು ಇಂದು ಭೂಕಂಪಗಳ ಮೇಲೆ ಕುಂತಿವೆ. ಜಾತಿದ್ವೇಷಗಳ ದಳ್ಳುರಿಯಲ್ಲಿ ಕುದಿಯುತ್ತಿವೆ; ಭೂವಿವಾದಗಳ ಕುರುಕ್ಷೇತ್ರ ನಡೆದೆ ಇದೆ. ಒಮ್ಮೆಗೆ ದುಃಖದ ಮಾತುಗಳಲ್ಲಿ ಹೇಳುವುದಾದರೆ ಹಳ್ಳಿಗಳು ಒಡೆದು ಚೂರಾಗಿವೆ, ಆತ್ಮವಿಲ್ಲದ ದೇಹದ ಭಾಗಗಳಂತೆ. ರೈತನ ಅಂದರೆ ಹಳ್ಳಿಯ ಪುನರುಜ್ಜೀವನ ಯಾವುದೋ ಕೆಲಸ ಮೊದಲು ಇಲ್ಲಿಂದ ಆರಂಭವಾಗಬೇಕಿದೆ. ಹಳ್ಳಿಯನ್ನು ಒಂದುಗೂಡಿಸಿ ಅದಕ್ಕೊಂದು ಆತ್ಮ ಕೊಡುವ ಕೆಲಸ ಇದು. ರೈತ ಚಳುವಳಿ ಈ ಎರಡೂವರೆ ವರ್ಷಗಳಲ್ಲಿ ನಡೆಸಿರುವ ಚಟುವಟಿಕೆಗಳನ್ನು ಒಟ್ಟಾರೆ ಗಮನಿಸಿದರೆ ಅದು ಹಳ್ಳಿಯ ಈ ಅಂತರಪಿಶಾಚಿತನವನ್ನು ಗುರುತಿಸಿದೆ ಎಂದು ಹೇಳುವುದು ಕಷ್ಟ. ನಾಲ್ಕಾರು ರೈತ ಮುಖಂಡರ ಜತೆ ಮೊಕ್ತಾ ಮಾತನಾಡಿದಾಗಲೇನೋ ಚರ್ಚೆ ಈ ಕಡೆ ಹೊರಳುವುದುಂಟು. ಈ ಚರ್ಚೆಯ ಒಟ್ಟು ಆಶಯ ಆ ಆತ್ಮದ ಕಡೆಯೇ ಬೊಟ್ಟು ಮಾಡುವುದು ಉಂಟು. ಆದರೆ ಅಷ್ಟೇ. ಅಷ್ಟೇ. ನಂಗಾ (ಬೆತ್ತಲೆ) ಆಗಿಬಿಡಲಿರುವ ಲಂಗೋಟಿ ರೈತನನ್ನು ನೆನಪಿಸಿದೊಡನೆ 'ಇದೆಲ್ಲಾ ರೈತ ಚಳುವಳಿಯನ್ನು ಒಡೆಯುವ ಕುತಂತ್ರ' ಎಂಬ ಅಹಂಕಾರದ ಟೀಕೆಯನ್ನೂ ಕೆಲವು ವಲಯಗಳಲ್ಲಿ ಎದುರಿಸಬೇಕಾಗಿದೆ. ಆದರೆ ಈ ಅಹಂಕಾರ ಅವರನ್ನಲ್ಲ, ಇಡೀ ಚಳುವಳಿಯನ್ನು ಎಲ್ಲಿಗೆ ಕೊಂಡಯ್ಯಬಲ್ಲದು ಎಂಬುದನ್ನು ಪರ್ಯಾಲೋಚಿಸಬೇಕಾಗಿದೆ.

ತಾಯಿ ಬೇರಿಲ್ಲದೆ ಅರಳಿ ನಿಂತಿರುವ ಆಸೆಯ ಹೂವಿನಂತಿರುವ ರೈತ ಚಳುವಳಿ ತಾನು ನಿಂತಿರುವ ನೆಲದ ಸಾರವನ್ನು ತನಗಾರು ಕೊಡಬಲ್ಲರು ಎಂಬುದನ್ನು ಹುಡುಕಿ ನೋಡಬೇಕು. ನಾಡಿನ ಉದ್ದಗಲಕ್ಕಲ್ಲದಿದ್ದರೂ ಅಲ್ಲಲ್ಲಿ ಹಳ್ಳಿಬದುಕಿಗೆ ಉಸಿರು ತುಂಬುವ ಕೆಲಸ ಮಾಡುತ್ತಿರುವ ದಲಿತ ಸಂಘರ್ಷ ಸಮಿತಿಯ ಜೊತೆಗೂಡಬೇಕು. ಬಿದರೆ ಕಾವಲಿನ ಪ್ರಯೋಗ ಈ ಸಂಯುಕ್ತ ಜವಾಬ್ದಾರಿಯೆಡೆಗೆ ಸ್ಫೂರ್ತಿಯಾಗಬೇಕು. ಹಳ್ಳಿಗಳಿಗೆ ವಿಷವುಣಿಸುತ್ತಿರುವ ಜಾತಿವ್ಯವಸ್ಥೆಯನ್ನು ಹರಿದು ಹಾಕಲು ದಲಿತರ ನೋವು, ರೈತ ಚಳುವಳಿಯ ಕಿಚ್ಚು ಮಿಲನವಾಗಬೇಕು. ಭೂಸಂಬಂಧಗಳ ತಗಾದೆಗಳ ಬಗ್ಗೆ ರೈತ ಚಳುವಳಿ ಹಾಗೂ ದಲಿತ ಸಂಘರ್ಷ ಸಮಿತಿಯ ಪ್ರತಿನಿಧಿಗಳು ಹಳ್ಳಿಗಳಲ್ಲಿ ಕೂತುಕೇಳಿ ಒಂದು ನಿರ್ಣಯಕ್ಕೆ ಬರಬೇಕು. ಇಬ್ಬರ ಕನಸೂ ಒಂದೇ ಆಗಿರುವಾಗ ಆ ಕನಸಿನೆಡಿಗೆ ಇಬ್ಬರೂ ಜೊತೆಯಾಗಿ ಯಾಕೆ ಹೆಜ್ಜೆಹಾಕಬಾರದು ?

ಇದಕ್ಕೆ ಪೂರ್ವಭಾವಿಯಾಗಿ ದಲಿತ ಚಳುವಳಿ ರೈತ ಚಳುವಳಿಗಳೆರಡೂ ತಂತಮ್ಮ ಧೋರಣೆ – ಕಾರ್ಯಕ್ರಮಗಳನ್ನು ಪುನರ್ರೂಪಿಸಿಕೊಳ್ಳಬೇಕಾಗಿದೆ. ವಿಶಾಲ ತಳಹದಿಯ ಸಂಯುಕ್ತ ಸಂಘಟನೆಯೊಂದನ್ನು ಕಟ್ಟಬೇಕಾಗಿದೆ. ಯಾವುದಕ್ಕೆ ಯಾರು ಹೊಣೆ, ಯಾರ ಸುಲಿಗೆ ಯಾರಿಂದ ಆಗುತ್ತಿದ್ದೆ, ಯಾರ ಕನಸು ಯಾರಿಂದ ಯಾವುದರಿಂದ ಬತ್ತಿ ಹೋಗುತ್ತಿದೆ, ಇತ್ಯಾದಿ ಅಡಿಪಾಯದ ಪ್ರಶ್ನೆಗಳನ್ನು ಕೂಲಂಕುಶವಾಗಿ ಸಮೀಕ್ಷೆ, ಅಧ್ಯಯನ, ಸಮೀಕರಣಗಳ ಆಧಾರದ ಮೇಲೆ ಚರ್ಚಿಸಬೇಕಾಗಿದೆ. ಆ ಮೂಲಕ ಯಾವ ಭ್ರಷ್ಟ ವ್ಯವಸ್ಥೆಯಿಂದ ರೈತ ಮತ್ತು ದಲಿತರಿಬ್ಬರೂ ಬೀದಿಪಾಲಾಗುತ್ತಿರುವರೊ ಆ ಭ್ರಷ್ಟ ವ್ಯವಸ್ಥೆಯ ವಿರುದ್ಧ ಸಮರ ಸಾರಬೇಕಾಗಿದೆ.

ಇಲ್ಲದೇ ಹೋದಲ್ಲಿ ರೈತನನ್ನು ಮುಳುಗಿಸಿರುವ ಭ್ರಷ್ಟ ವ್ಯವಸ್ಥೆಯ ವ್ಯವಸ್ಥಾಪಕನಂತಿರುವ ಸರ್ಕಾರದೊಂದಿಗೆ ಚಿಲ್ಲರೆ ವ್ಯಾಪಾರ ಕುದುರಿಸುತ್ತಾ ಕೊಳೆತು ನಾರತೊಡಗುತ್ತದೆ ನಮ್ಮೆಲ್ಲರ ಕನಸಿನ ರೈತ ಚಳುವಳಿ.

ರೈತ ಚಳುವಳಿ: 'ಒಡೆದು ಆಳುವ' ಹಾರವರ ಬಗ್ಗೆ ಎಚ್ಚರ!

ಆಳುವ ವರ್ಗಗಳ ಸತತ ದಬ್ಬಾಳಿಕೆಯ ವಿರುದ್ಧ ಈಗ ಶೋಷಿತ ಸಮಾಜಗಳು ಒಕ್ಕಟ್ಟಿನಿಂದ ಹೋರಾಡುತ್ತಿರುವುದು ಸ್ವಾಭಾವಿಕವಾಗಿಯೆ ಚರಿತ್ರೆಯ ರೂಪು–ರೇಷೆಗಳನ್ನು ಬದಲಾಯಿಸುವ ಪ್ರಕ್ರಿಯೆಯಾಗಿದೆ. ಶತಮಾನಗಳ ವರೆಗೆ ಅನ್ನ ಉತ್ಪಾದನೆ ಮಾಡಿ ಹೆರವರಿಗೆ ತಿನಿಸುತಲೇ ತಾನು ಕಂಗಾಲಾಗಿ ಬಡವಾಗುತ್ತಿದ್ದ ರೈತರಶೂದ್ರ ಸಮೂಹ ಈಗ ಹೋರಾಟದ ಅನಿವಾರ್ಯ ಹಾದಿ ಹಿಡಿದಿದೆ.

ಇಂಡಿಯಾದ ಅರ್ಥವ್ಯವಸ್ಥೆಯ ಭದ್ರಬುನಾದಿ ರೈತ. ವ್ಯವಸಾಯದ ಮೂಲ ಕೇಂದ್ರದ ಸುತ್ತಲೂ ಉಳಿದ ಆರ್ಥಿಕ ಚಟುವಟಿಕೆಗಳು ಹರಡಿಕೊಂಡಿದ್ದು, ಇಂಡಿಯದ ಭೂಹೀನ ದಲಿತ ಕಾರ್ಮಿಕರ ದಿನನಿತ್ಯದ ಉಪಜೀವನಕ್ಕೆ ಹಾದಿಯಾಗಿವೆ. ಹೀಗೆ, ತರ್ಕಬದ್ಧವಾಗಿ ವಿಚಾರಿಸಿದರೆ, ರೈತರ ಹೋರಾಟ ದಲಿತರಹೋರಾಟವನ್ನು ಒಳಗೊಂಡೇ ಮುಂದುವರಿಯಬೇಕಾಗುತ್ತದೆ.

ಆದರೆ ನಮ್ಮ ದೇಶದ 'ಜಾತಿ ಪದ್ಧತಿ' ಎಂಬ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಇಲ್ಲೂ ತನ್ನ ಕೈವಾಡ ನಡೆಯಿಸಿ, ಸಮಗ್ರ ಹೋರಾಟವನ್ನು ಒಡೆಯಲು ಪ್ರಯತ್ನಿಸುತ್ತಿದೆ. ಭೂಮಿಯ ಮೇಲೆ ನಿಯಂತ್ರಣವುಳ್ಳ ಮಧ್ಯಮ ಜಾತಿಗಳು ತಮ್ಮ ಹೋರಾಟದ ಒಂದು ಸೆಳೆತಿಗಾದರೂ ಕೆಳಜಾತಿಯ ಭೂಹೀನ ಕಾರ್ಮಿಕರನ್ನು ಗುರಿಯನ್ನಾಗಿ ಮಾಡಿಕೊಂಡಿವೆ. ಇದು ವಿಷಾದನೀಯವಾದ ಸತ್ಯ.

ಇದಕ್ಕೆ ಒಂದೇ ಒಂದು ಪರಿಹಾರ : ರೈತರ ಹೋರಾಟದ ಮುಖಂಡರು ರೈತರಿಗೆ ಇಡೀ ವ್ಯವಸ್ಥೆಯ ಬಗ್ಗೆ ಸೈದ್ಧಾಂತಿಕವಾದ ಪರಿಕಲ್ಪನೆ ಕೊಡುವುದು ; ದಲಿತ ಮುಖಂಡರೂ ಕೂಡ ದಲಿತರಿಗೆ ರೈತ ಸಮೂಹದ ಬಗ್ಗೆ ಇರುವ ಅನಗತ್ಯವಾಗಿರುವ ರೋಷವನ್ನು ಬಿಟ್ಟು ಕೊಡಲು ಹೇಳುವುದು ; ರೈತರಿಗೂ, ದಲಿತರಿಗೂ ಕೂಡಿಯೇ ವೈರಿಗಳಾಗಿರುವ ಬಂಡವಾಳಶಾಹಿಗಳು, ಉಚ್ಚಜಾತಿಯ ಕಾರಸ್ಥಾನಿಗಳು, ನೌಕರಶಾಹಿಗಳು ಇವರನ್ನೇ ಕೇಂದ್ರವಾಗಿಟ್ಟುಕೊಂಡು ಹೋರಾಟಬಲಪಡಿಸುವುದು.

ರೈತಸಂಘದವರು ರೈತ ಕಾರ್ಮಿಕರ ಸಮಸ್ಯೆಗಳನ್ನು ತಮ್ಮ ಪ್ರಣಾಳಿಕೆಯ ಪ್ರಮುಖ ಅಂಗವಾಗಿ ಮಾಡಿಕೊಂಡು, ಅವರ ಪ್ರತಿನಿಧಿಗಳನ್ನು ರೈತ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಸೇರಿಸಿಕೊಂಡು ಎಲ್ಲರ ವಿಶ್ವಾಸಕ್ಕೆ ಪಾತ್ರವಾಗಬೇಕು. ರೈತರ ಹಾಗೂ ದಲಿತರ ಸಂಯುಕ್ತ ಹೋರಾಟವೂ ಒಂದೆಡೆ ಆರ್ಥಿಕ ಹೋರಾಟವೂ ಇನ್ನೊಂದೆಡೆ ಜಾತಿ–ವಿನಾಶದ ಗುರಿ ಹೊಂದಿರುವ ಸಾಮಾಜಿಕ ಹೋರಾಟವೂ ಆಗಬೇಕಾಗಿದೆ. ಈ ಹಂತದ ಇಂಥದೊಂದು ಸ್ಪಷ್ಟವಾದ ಚೌಕಟ್ಟು ನಿರ್ಮಾಣವಾಗದಿದ್ದರೆ, ಈ ದೇಶದ ಸಾಮಾಜಿಕ ವೈಪರೀತ್ಯವನ್ನು ಗೌಣವಾಗಿ ಕಾಣುವ ಇಂಡಿಯದ ಎಡಬಿಡಂಗಿ ಕಮ್ಯುನಿಸ್ಟರು ರೈತ–ವಿರುದ್ಧ– ರೈತಕಾರ್ಮಿಕ' ಎಂಬ ಹುಯಿಲೆಬ್ಬಿಸಿ ಸಾವಿರಾರು ವರ್ಷಗಳಿಂದ ಹಾರವರು ಮಾಡುತ್ತ ಬಂದಿರುವ 'ಒಡೆದು ಆಳುವ' ಪರಂಪರೆಯನ್ನೇ ಮುಂದುವರಿಸಿಕೊಂಡು ಹೋಗುವುದು ಖಂಡಿತ.

ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನಾಯಕರು ಸಾಕಷ್ಟು ಪ್ರಜ್ಞಾವಂತರಿದ್ದಾರೆ. ಅವರ ನಡುವೆ ಸಂಭಾಷಣೆ ಈಗ ಪ್ರಾರಂಭವಾಗಬೇಕು.

–ಚಂದ್ರಶೇಖರ ಪಾಟೀಲ

ಕೃಷಿ ಕಾರ್ಮಿಕರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಈ ರೈತ ಚಳುವಳಿ ಇಡೀ ರಾಜ್ಯವನ್ನು ಆವರಿಸಿದ್ದರೆ........

ರೈತ ಚಳುವಳಿ: ಎರಡು ಮುಖ

ಜಿ. ಪಿ. ಬಸವರಾಜು

೧

ಘಟನೆ 1 : ಒಂದು ಮಧ್ಯಾಹ್ನ ; 1980 ರಲ್ಲಿ. ಶಿವಮೊಗ್ಗೆಯ ಬೀದಿಗಳಲ್ಲಿ ಒಂದು ಅಪರೂಪದ ಮೆರವಣಿಗೆ ನಡೆಯಿತು. ಲಂಚ ತೆಗೆದುಕೊಳ್ಳುತ್ತಿದ್ದ ಗುಮಾಸ್ತನನ್ನು ಹಿಡಿದು, ಇನ್ನೇನು ಅವನ ಜೇಬು ಸೇರಲಿದ್ದ ಹತ್ತರ ನೋಟುಗಳನ್ನು ವಶಪಡಿಸಿಕೊಂಡ ರೈತರು ಆ ನೋಟುಗಳ ಮೆರವಣಿಗೆ ನಡೆಸಿದರು. ಆಗ ರೈತ ಚಳುವಳಿ ಬಿರುಸಿನಿಂದ ನಡೆಯುತ್ತಿದ್ದ ಕಾಲ. ಹೀಗಾಗಿ ಹಸಿರು ವಸ್ತ್ರಗಳ ಮೆರವಣಿಗೆ ದೊಡ್ಡದಾಗಿಯೇ ಇತ್ತು. ಲಂಚ ತೆಗೆದುಕೊಂಡ ವ್ಯಕ್ತಿಯ ವಿರುದ್ಧ ಘೋಷಣೆಗಳು ; ತನಿಖೆಗೆ ಒತ್ತಾಯ ; ಕೆಲಸದಿಂದ ವಜಾ ಮಾಡಿ ಎಂದು ಆಗ್ರಹ. ಇಡೀ ಊರಿಗೆ ಲಂಚ ತೆಗೆದುಕೊಂಡ ವ್ಯಕ್ತಿಯ ಹೆಸರು ತಿಳಿದುಹೋಗಿತ್ತು. ಅವಮಾನದಲ್ಲಿ ಆತ ಬೆಂದು ಹೋಗಿದ್ದ. ಹಿರಿಯ ಸರ್ಕಾರಿ ಅಧಿಕಾರಿಗಳೂ ಅದನ್ನು ಮುಚ್ಚಿ ಹಾಕುವಂತಿರಲಿಲ್ಲ. ಇಲಾಖೆಯ ತನಿಖೆಯಾದರೂ ನಡೆಯುವುದು ಅನಿವಾರ್ಯವಾಯಿತು.

ಘಟನೆ 2 : ರೈತ ಚಳವಳಿ ಬಿರುಸಿನಿಂದ ನಡೆಯುತ್ತಿದ್ದ ದಿನಗಳಲ್ಲೇ ಇನ್ನೊಂದು ಮಧ್ಯಾಹ್ನ. ಸುತ್ತಲಿನ ಹಳ್ಳಿಗಳಿಂದ ಆಗಾಗ ರೈತರ ತಂಡಗಳು ಶಿವಮೊಗ್ಗೆಗೆ ಬಂದು ಮೆರವಣಿಗೆ ನಡೆಸಿ ಪಟ್ಟಣಿಗರ ಗಮನ ಸೆಳೆದು ಹೋಗುತ್ತಿದ್ದವು. ರಸ್ತೆ ಸತ್ಯಾಗ್ರಹ ನಡೆಸಲು ಅವಕಾಶ ಸಿಗದಿದ್ದಾಗ- ಅಂದರೆ ಆ ಊರಿಗೆ ಬಸ್ಸುಗಳೇ ಹೋಗದಿದ್ದರೆ ಚಳವಳಿಕಾರರು ಶಿವಮೊಗ್ಗಕ್ಕೆ ಜಾತಾ ಥರ ಬರುತ್ತಿದ್ದರು. ಅಂಥ ಒಂದು ತಂಡ ಬಂತು. ವಿಶೇಷ ಎಂದರೆ ಆ ತಂಡದ ಹಾಡುಗಳು. ಲಾವಣಿಯ ಮಾದರಿಯಲ್ಲಿದ್ದ ಆ ಹಾಡುಗಳು ಹೋರಾಟದ ಪದಗಳಾಗಿದ್ದವು. ಆ ಊರಿನ ಶಾಸಕ ಭ್ರಷ್ಟನಾದ, ಭಂಡನಾದ ವರ್ಣನೆಯನ್ನು ಬಿಚ್ಚುತ್ತ ಆ ಹಾಡು ಶಾಸಕನನ್ನು ಮೆಟ್ಟಿನಿಂದ ಹೊಡೆಯಲು ಹುರಿದುಂಬಿಸುತ್ತಿತ್ತು. ಆ ಹಾಡನ್ನು ಹರುಕಲು ಅಂಗಿಯ ಕುರುಚಲು ಗಡ್ಡದ, ಎಲುಬಿನ ಹಂದರವಾಗಿದ್ದ ಮಧ್ಯವಯಸ್ಕನೊಬ್ಬ 'ಕಟ್ಟಿದ್ದ'. ಹಾಡಲು ಬರುತ್ತಿದ್ದ ಚಿಗುರುಮೀಸೆಯ ಹತ್ತಾರು ಹುಡುಗರು ದನಿ ಎತ್ತಿ ಹಾಡುತ್ತಿದ್ದರು. ಆ ಹಾಡೇ ಪ್ರಮುಖ ಆಕರ್ಷಣೆಯಾಗಿ ಜನರನ್ನು ಸೆಳೆದಿತ್ತು.

ಘಟನೆ 3 : ಚಳವಳಿ ಮುಗಿದ ನಂತರದ ಒಂದು ದಿನ. ಪುಟ್ಟಹಳ್ಳಿ. ಬ್ಯಾಂಕ್ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಬಂದಿದ್ದಾರೆ. ಅವರ ಬೆನ್ನಿಗೆ ಒಂದು ಪೋಲೀಸ್ ವ್ಯಾನು, ಸಶಸ್ತ್ರ ಪೋಲೀಸು ಪಡೆ. ನಿಧಾನಕ್ಕೆ ಭಯಗೊಂಡವರಂತೆ ನಡೆದು ಬಂದ ಜನ ಪಂಚಾಯಿತಿ ಹಾಲ್ ಬಳಿ ಸೇರಿದರು. ನಿಧಾನಕ್ಕೆ ಮಾತುಕತೆ ಸುರುವಾದವು. ಅರ್ಧಗಂಟೆ ಕಳೆಯುವುದರ ಒಳಗಾಗಿ ಇಡೀ ಊರು ಅಲ್ಲಿತ್ತು. ಬಿಸಿಬಿಸಿ ಚರ್ಚೆ. ಅಧಿಕಾರಿಗಳ ದನಿ ಕುಗ್ಗಿತ್ತು. ಎರಡು ವರ್ಗ ಅಲ್ಲಿ ನಿರ್ಮಾಣವಾಗಿತ್ತು—ಒಂದು ಆಳುವ ಜನರದು ; ಇನ್ನೊಂದು ದುಡಿಯುವ ಜನರದು. ನಮ್ಮ ಸ್ಥಿತಿ ಯಾಕೆ ಹೀಗೆ, ನೀವೇಕೆ ಸುಖವಾಗಿದ್ದೀರಿ ? ಬಹುಪಾಲು ನೀವೆಲ್ಲಾ ಹಳ್ಳಿಗಳಿಂದಲೇ ಹೋದವರಲ್ಲವೇ ? ಈಗ ಯಾಕೆ ಹಳ್ಳಿಗಳನ್ನು ಮರೆತಿರಿ. ನಮ್ಮ ಊರಿಗೆ ಸ್ಕೂಲು ಕಟ್ಟಡ ಯಾಕೆ ಕೊಡಿಸಲಿಲ್ಲ ? ರಸ್ತೆಗಳೇಕೆ ಹೀಗಿವೆ ? ಹೀಗೆಲ್ಲ ಚರ್ಚೆ. ಅಧಿಕಾರಿಯೊಬ್ಬ ತಾಳ್ಮೆ ಕಳೆದುಕೊಂಡು, ಮಾತುಗಳು ಕಾವೇರಿದಾಗ ಒಬ್ಬ ತರುಣನೆಂದ–"ನೀವೆಲ್ಲ ಸಂಬಳದ ಆಳುಗಳು ; ನಾವು ಸಂಬಳ ಕೊಡೋರು, ನಮಗೆ ಬೆಲೆ ಕೊಟ್ಟು ಮಾತನಾಡಿ." ಪೋಲೀಸರ ಲಾಠಿಗಳು, ಗುಂಡುಗಳು ತನ್ನ ನೆರವಿಗಿದ್ದರೂ ಅಧಿಕಾರಿ ಪೆಚ್ಚಾದ ; ಮೌನವಾದ.

ಮೇಲಿನ ಮೂರು ಘಟನೆಗಳು ರೈತ ಚಳವಳಿಗೆ ಸಂಬಂಧಿಸಿಯೇ ನಡೆದವು. ಶಿವಮೊಗ್ಗ ಜಿಲ್ಲೆಯಲ್ಲೇ ನಡೆದವು. ಇಂಥ ಅನೇಕ ಘಟನೆಗಳನ್ನು ಉದಾಹರಿಸಬಹುದಾದರೂ ಮಾದರಿಗಾಗಿ ಈ ಘಟನೆಗಳನ್ನು ಆಯ್ದುಕೊಂಡಿದ್ದೇನೆ.

ಚಳವಳಿಯ ಇನ್ನೊಂದು ಮುಖವನ್ನು ಚರ್ಚಿಸುವ ಮುನ್ನ, ಈ ಮುಖವನ್ನು ವಿಶ್ಲೇಷಿಸುತ್ತಿದ್ದೇನೆ: ರೈತ ಚಳವಳಿ ದೊಡ್ಡ ರೈತರದು, ದೊಡ್ಡ ಭೂಹಿಡುವಳಿದಾರರದು, ಶ್ರೀಮಂತರದು ಎಂದು ಹೇಳುವಾಗಲೆಲ್ಲ ನಾವು ಈ ಇನ್ನೊಂದು ಮುಖವನ್ನು ಮರೆಯುತ್ತೇವೆ.

ಯಾವುದೇ ಚಳವಳಿ ಜನರ ಮಧ್ಯೆ ಹುಟ್ಟಿದಾಗ ಅದಕ್ಕೆ ಅನೇಕ ಆಯಾಮಗಳಿರುತ್ತವೆ. ಚಳವಳಿಯನ್ನು ನಡೆಸುವ ಸಂಘ ಅಥವಾ ನಾಯಕರು ಮುಂದಿಟ್ಟುಕೊಂಡ ಬೇಡಿಕೆಗಳು ಈಡೇರದೆ ಹೋಗಬಹುದು. ಆದರೆ ಚಳವಳಿ ಬಗೆಬಗೆಯ ಫಲಶ್ರುತಿ ನೀಡಿರುತ್ತದೆ ; ಜನರ ಮೇಲೆ ವಿಶಿಷ್ಟ ಪರಿಣಾಮ ಬೀರಿರುತ್ತವೆ. ಇದಕ್ಕೆ ಇತಿಹಾಸದಲ್ಲಿ ನಡೆದು ಹೋದ ಅನೇಕ ಚಳವಳಿಗಳು ಉದಾಹರಣೆಯಾಗುತ್ತವೆ. ಸ್ವಾತಂತ್ರ್ಯ ಚಳವಳಿ ನಮಗೆ ಕೇವಲ ಸ್ವಾತಂತ್ರ್ಯವನ್ನು ತಂದುಕೊಡಲಿಲ್ಲ ; ಅದರ ಜೊತೆಗೇ ಅನೇಕ ಲಾಭಗಳನ್ನು ತಂದುಕೊಟ್ಟಿದೆ.

1980ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ರೈತ ಚಳವಳಿ ಜನರ ಮಧ್ಯೆ ಹುಟ್ಟಿದ ಚಳವಳಿ. ಚಳವಳಿಯನ್ನು ಆರಂಭಿಸಿದವರು, ಅದರ ನಾಯಕತ್ವ ಹಿಡಿದವರು ಯಾರು, ಅದರಿಂದಾಗುವ ಲಾಭನಷ್ಟಗಳೇನು ಎಂಬುದು ನಂತರದಪ್ರಶ್ನೆ. ಮೊದಲ ಬಾರಿಗೆ ಈ ಚಳವಳಿ ಹಳ್ಳಿಗಳನ್ನು ತಲುಪಿದಾಗ ಜನ ಬಹಳ ಉತ್ಸಾಹದಲ್ಲಿದ್ದರು. ಭೂಮಾಲಿಕರು ಗೇಣಿದಾರರು, ಕೃಷಿಕಾರ್ಮಿಕರು ಎಲ್ಲರಲ್ಲೂ ಈ ಉತ್ಸಾಹ ಕಂಡುಬರುತ್ತಿತ್ತು. ಮೊದಲ ಬಾರಿಗೆ ಸರ್ಕಾರವನ್ನು ಆ ಮೂಲಕ ಪೋಲೀಸರನ್ನು, ಅಧಿಕಾರಿಗಳನ್ನು ಎದುರಿಸುವ ಹುಮ್ಮಸ್ಸು (ಅದರಿಂದ ನಮಗೆಷ್ಟು ಲಾಭ ಎಂದು ಯೋಚಿಸುವ ಮುನ್ನವೇ) ಎದ್ದು ಕಾಣುತ್ತಿತ್ತು. ಅನೇಕ ವರ್ಷಗಳಿಂದ ಹುದುಗಿಸಿಟ್ಟಿದ್ದ ಸಿಟ್ಟು ಒಮ್ಮೆಗೇಅಭಿವ್ಯಕ್ತಿ ಕಂಡುಕೊಂಡಂತೆ ನುಗ್ಗಿ ಬರುತ್ತಿತ್ತು. ರಸ್ತೆ ಸತ್ಯಾಗ್ರಹ ಆರಂಭವಾದಾಗ, ರೈತ ಚಳವಳಿ ನಾಯಕರು ಮುಟ್ಟದಂಥ ಹಳ್ಳಿಗಳಿಂದಲೂ ಜನ ಸ್ವಪ್ರೇರಿತರಾಗಿ ಚಳವಳಿಗೆ ಧುಮುಕಿದ ನಿದರ್ಶನಗಳಿವೆ.

ಈ ಚಳವಳಿ ಮೊದಲ ಬಾರಿಗೆ ಸರ್ಕಾರವನ್ನು ಪ್ರಶ್ನಿಸುವ ಧೈರ್ಯವನ್ನು ಶ್ರೀ ಸಾಮಾನ್ಯನಿಗೆ ತಂದಕೊಟ್ಟಿತ್ತು ; ಹಾಗೆಯೇ ಹಳ್ಳಿಗರೆಂದರೆ ಹೀನವಾಗಿ ಕಾಣುತ್ತಿದ್ದ, ಎಲ್ಲ ರೀತಿಯ ಸುಲಿಗೆಗಳಿಗೂ ಬಲಿಪಶುಮಾಡುತ್ತಿದ್ದ ಅಧಿಕಾರಶಾಹಿ ರೈತನನ್ನು ಹಳ್ಳಿಗನನ್ನು ಕಂಡು ಬೆಚ್ಚುವಂತೆ ಮಾಡಿತ್ತು. ಹಳ್ಳಿಯ ಜನ ನಿಧಾನಕ್ಕೆ ಭ್ರಷ್ಟ ಅಧಿಕಾರಶಾಹಿಯ ಬಗ್ಗೆ, ಕಲುಷಿತ ವ್ಯವಸ್ಥೆಯ ಬಗ್ಗೆ, ಓಟಿನ ರಾಜಕಾರಣೆಯ ಬಗ್ಗೆ ಹಾಗೆಯೇ ತಮ್ಮ ಸ್ಥಿತಿ–ಗತಿಗಳ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮಾಡಿತ್ತು. ಇದು, ಸಣ್ಣ ಪ್ರಮಾಣದ ಲಾಭ ಎಂದು ನಾನಂತೂ ಭಾವಿಸುದಿಲ್ಲ.

ಇನ್ನೊಂದು ಲಾಭವನ್ನು ಎರಡನೆಯ ಘಟನೆ ಹೇಳುತ್ತದೆ. ಸಮಕಾಲೀನ ಪ್ರಜ್ಞೆಗೆ ಸ್ಪಂದಿಸುವ ಜಾನಪದ ಜಗತ್ತಿನಿಂದ ಬಂದದ್ದು ಅದು. ಪದವನ್ನು ಕಟ್ಟಿದಾತ ದೊಡ್ಡ ರೈತನೆ, ಗೇಣಿದಾರನೇ ಕೃಷಿಕಾರ್ಮಿಕನೆ ? ಅದು ಬೇರೆಯ ಪ್ರಶ್ನೆ. ಸಮುದಾಯದ ಹೋರಾಟಕ್ಕೆ ಸ್ಪಂದಿಸಿದ ದನಿ ಅದು. ಸಮುದಾಯದ ಸಾಂಸ್ಕೃತಿಕ ಕೊರಳು ಅದು. ಸಾಹಿತ್ಯಿಕವಾಗಿ ಅದೆಷ್ಟು ಮೌಲಿಕ ಎಂಬುದಕ್ಕಿಂತ ಮುಖ್ಯವಾದದ್ದು ಬದುಕಿಗೆ ಸ್ಪಂದಿಸಿದ ಗುಣ ಅದಕ್ಕಿರುವ ಕಾರಣ ಮತ್ತು ಜನತೆಯ ಮಧ್ಯೆ ಅದು ಹುಟ್ಟಿದ ಕಾರಣ. [ಹೀಗೆಬಂದ ಹಾಡುಗಳಲ್ಲಿ ಕೆಲವು 'ಲಂಕೇಶ್ ಪತ್ರಿಕೆ'ಯಲ್ಲಿ ಆಗ ಪ್ರಕಟಗೊಂಡವು.] ಜೊತೆಗೆ ಈ ಹಾಡುಗಳು ಭ್ರಷ್ಟ ಶಾಸಕರಿಗೆ ಕೊರಂಬುಗಳಾಗಿದ್ದವು.

೨

ಚಳವಳಿಯ ಮುಖ್ಯ ಬೇಡಿಕೆಗಳ ಆಚೆಗಿನ ಲಾಭಗಳ ಕಡೆಗೇ ದೃಷ್ಟಿಹರಿಸಿ ಒಟ್ಟಾರೆ ಚಳವಳಿಯ ಮುಖ್ಯ ಆಶಯವನ್ನು, ಕಾಳಜಿಯನ್ನು, ಧೋರಣೆಯನ್ನು ಮರೆಮಾಚಲು ಯತ್ನಿಸುತ್ತಿಲ್ಲ. ಕೃಷಿ ಕಾರ್ಮಿಕರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹೋರಾಟದ ಕ್ಷೇತ್ರವನ್ನು ವಿಸ್ತರಿಸಿಕೊಂಡು ಈ ಚಳವಳಿ ಇಡೀ ರಾಜ್ಯವನ್ನು ಆವರಿಸಿದ್ದರೆ........ ಎಂದೆಲ್ಲ ಅನೇಕ ಬಾರಿ ಯೋಚಿಸಿ ವ್ಯಥೆಗೊಂಡಿದ್ದೇನೆ. ಈ ಚಳವಳಿ ಹಿಡಿದ ತಪ್ಪು ದಿಕ್ಕನ್ನು ಅನೇಕ ಬಾರಿ ನಾನೇ ವಿಶ್ಲೇಷಿಸಿಕೊಂಡಿದ್ದೇನೆ.

ಹಾಗೆ ನೋಡಿದರೆ ಈ ಚಳವಳಿಯ ನಾಯಕರು ಆರಂಭದಲ್ಲಿಯೇ ತಪ್ಪುಮಾಡಿದರು. ಹುಬ್ಬಳ್ಳಿಯಲ್ಲಿ 1980ರ ಆಗಸ್ಟ್ 11ರಂದು ರೈತ ಸಮನ್ವಯ ಸಮಿತಿ ರೂಪಿಸಿದ (ಈ ಸಭೆಯಲ್ಲಿ ಮಲಪ್ರಭಾ ನೀರಾವರಿ ರೈತರು, ರಾಯಚೂರು, ಶಿವಮೊಗ್ಗ, ಬೆಳಗಾಂ, ಬಿಜಾಪುರ, ಬಳ್ಳಾರಿ ಮತ್ತು ಧಾರವಾಡದ ರೈತಪ್ರತಿನಿಧಿಗಳಿದ್ದರು) 19 ಬೇಡಿಕೆಗಳಲ್ಲಿಯೇ ಕೃಷಿ ಕಾರ್ಮಿಕರ ಹಿತವನ್ನು ಕಡೆಗಣಿಸಿದ್ದು ಸ್ಪಷ್ಟವಾಗುತ್ತದೆ. ಮುಂದೆ ಅಲ್ಲಿಂದ ಇಲ್ಲಿಯವರೆಗೆ ಅನೇಕ ಬದಲಾವಣೆಗಳಾದರೂ ರೈತ ಮುಖಂಡರು ತಮ್ಮ ಹೋರಾಟದ ದಿಕ್ಕನ್ನು ಬದಲಾಯಿಸಲು ಪ್ರಯತ್ನಿಸಲಿಲ್ಲ. ತಾತ್ವಿಕ ನೆಲೆಯನ್ನು ಮತ್ತೆ ಕಂಡುಕೊಳ್ಳಲಿಲ್ಲ. ನಮ್ಮ ಬೇಡಿಕೆಗಳಲ್ಲಿ ಕೃಷಿ ಕಾರ್ಮಿಕರ ಬೇಡಿಕೆಗಳೂ ಇವೆ ಎಂದು ಆಗಾಗ ಹೇಳುತ್ತ ಈ ರೈತ ಮುಖಂಡರು ಟೀಕೆ ಮಾಡುವವರಿಗೆ ಸಮಾಧಾನ ಹೇಳಿದಂತೆ ಮಾಡಿದರು.

ಮೂಲಭೂತವಾಗಿ ಇದು ಕೃಷಿ ಕಾರ್ಮಿಕರ ಚಳವಳಿಯಾಗಲೇ ಇಲ್ಲ. ಚಳವಳಿಯ ಮುಖಂಡರು ಏನನ್ನೇ ಹೇಳುತ್ತಿರಲಿ, ಕಳೆದ ಮೂರು ವರ್ಷಗಳಿಂದ ಚಳವಳಿ ನಡೆಯುತ್ತಿರುವ ದಿಕ್ಕನ್ನು, ರೀತಿಯನ್ನು ಗಮನಿಸಿದರೆ ಸಾಕು, ಇದು ಸ್ಪಷ್ಟವಾಗುತ್ತದೆ. ಕೃಷಿ ಕಾರ್ಮಿಕನನ್ನು ಕೇಂದ್ರ ಮಾಡಿಕೊಂಡು ಒಮ್ಮೆಯೂ ಈ ಚಳವಳಿಗಾರರು ಹೋರಾಟ ನಡೆಸಲಿಲ್ಲ. ಗುಂಡೂರಾಯರ ಸರ್ಕಾರದ ಅಥವಾ ಈಗಿನ ಜನತಾ ಸರ್ಕಾರದ ಜೊತೆಗೆ ಚರ್ಚೆ ನಡೆದಾಗಲೂ ಕೃಷಿ ಕಾರ್ಮಿಕ ಚರ್ಚೆಯ ಪ್ರಧಾನ ವ್ಯಕ್ತಿಯಾಗಲಿಲ್ಲ. ಶಿವಮೊಗ್ಗ ಜಿಲ್ಲೆಯೂ ಸೇರಿದಂತೆ ರಾಜ್ಯದ ಅನೇಕ ಹಳ್ಳಿಗಳಲ್ಲಿ ಗೋಮಾಳಗಳಿವೆ; ಬಗರ್‌ಹುಕುಂ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಸಾವಿರಾರು ಹರಿಜನ/ಗಿರಿಜನ ಹಾಗೂ ದುರ್ಬಲ ವರ್ಗಗಳ ಕೃಷಿಕಾರ್ಮಿಕ ಕುಟುಂಬಗಳಿವೆ. ಈ ಕುಟುಂಬಗಳಿಗೆ ಸಾಗುವಳಿ ಚೀಟಿ ಕೊಡಿಸಲು ಅಥವಾ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಕೊಡಿಸಲು, ಅವರಿಗೆ ಮನೆಗಳನು ಕೊಡಿಸಲು ಅಥವಾ ಅವರಿಗೆ ಇತರ ಸೌಲಭ್ಯಗಳನ್ನು ಕೊಡಿಸಲು ರೈತ ಚಳವಳಿ ಒಮ್ಮೆಯೂ ಹೋರಾಟ ನಡೆಸಲಿಲ್ಲ; ಅಷ್ಟೇಕೆ ರೈತ ಚಳವಳಿಯನಾಯಕರು ತಮ್ಮ ಕಾರ್ಯಕಾರಿ ಸಮಿತಿ ಸಭೆಗಳಲ್ಲೂ ಇಂಥ ಬೇಡಿಕೆಗಳ ಬಗ್ಗೆ ಚರ್ಚಿಸಲಿಲ್ಲ; ಗಮನವನ್ನೂ ಅತ್ತ ಹರಿಸಲಿಲ್ಲ.

ರೈತರ ಯಾವುದೇ ಹಿತಕ್ಕೆ ಪೆಟ್ಟುಕೊಡುವ ಘಟನೆಗಳು ನಡೆದರೆ, ಇಲ್ಲವೆ ಸರ್ಕಾರ ರೈತರ ವಿರುದ್ಧವಾಗಿ ಮಾತನಾಡಿದರೆ ಕೂಡಲೇ ಹೇಳಿಕೆ ನೀಡಿ ಪ್ರತಿಕ್ರಿಯೆ ವ್ಯಕ್ತಪಡಿಸುವ ರೈತಸಂಘ ಕೃಷಿ ಕಾರ್ಮಿಕರ, ಗೇಣಿದಾರರ ಪ್ರಶ್ನೆ ಬಂದಾಗ ಮೌನವಾಗಿರುತ್ತದೆ. ಈ ಮಾತಿಗೆ ಅನೇಕ ಉದಾಹರಣೆ ಸಿಗುತ್ತವೆ. ತೀರ್ಥಹಳ್ಳಿ ತಾಲ್ಲೂಕಿನ ಸೇಡ್‌ಗಾರ್‌ನಲ್ಲಿ ಇತ್ತೀಚೆಗೆ ನಡೆದ ಬಡಗೇಣಿದಾರನ ಕುಟುಂಬದ ಸಾಮೂಹಿಕ ಹತ್ಯೆಯ ಪ್ರಯತ್ನದ ಘಟನೆ ಬಗ್ಗೆ ರೈತ ಸಂಘ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದಿರುವುದು ಇತ್ತೀಚಿನ ಉದಾಹರಣೆ ಅಷ್ಟೆ.

ಆರಂಭದಿಂದಲೇ ಈ ಚಳವಳಿಯ ನಾಯಕತ್ವದಲ್ಲಿ ಕೃಷಿ ಕಾರ್ಮಿಕರು, ಬಡ ಗೇಣಿದಾರರು ಪಾಲುದಾರರಾಗಿದ್ದರೆ ಬಹುಶಃ ಚಳವಳಿಯ ದಿಕ್ಕು ಮತ್ತು ಸ್ವರೂಪ ಬೇರೆಯಾಗುವ ಸಾಧ್ಯತೆ ಇತ್ತು. ಆದರೆ ಅದು ಹಾಗಾಗಲೇ ಇಲ್ಲ. ಕಬ್ಬು ಬೆಳೆಗಾರರ ಸಂಘದ ಬಹುಪಾಲು ಪದಾಧಿಕಾರಿಗಳು ರಾಜ್ಯ ರೈತ ಸಂಘದ ಪದಾಧಿಕಾರಿಗಳಾಗಿಯೇ ಮುಂದುವರೆದದ್ದು, ಈ ಚಳವಳಿಯನ್ನು ವಿಶಾಲ ತಳಹದಿಯ ಮೇಲೆ ಕಟ್ಟಲು ಸಾಧ್ಯವಾಗದಂತೆ ತಡೆಯಿತು.

ಈ ಹಿಂದೆ ರೈತ ಸಂಘ ನಡೆಸಿದ 'ಅಧಿಕಾರಿಗಳ ಮನೆ ಜಪ್ತಿ' ಚಳವಳಿಯನ್ನೇ ತೆಗೆದುಕೊಳ್ಳಿ. ಇದು ಆರಂಭವಾದದ್ದು ಹೇಗೆ? ರೆವಿನ್ಯೂ ಮತ್ತು ಬ್ಯಾಂಕ್ ಅಧಿಕಾರಿಯಳು ರೈತರ ಮನೆ ಜಪ್ತಿಗೆ ತೊಡಗಿದಾಗ. ಅಧಿಕಾರಿಗಳು ಜಪ್ತಿ ಕಾರ್ಯಕ್ರಮವನ್ನು ನಡಸಿಯೇ ಇದ್ದರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯ ಕೆಲವು ಗೇಣಿದಾರರ ಹಾಗೂ ಸಣ್ಣ–ಪುಟ್ಟ ರೈತರ ಮನೆಗಳ ಜಪ್ತಿ ನಡೆದೇ ಇತ್ತು. ಒಂದು ದಿನ ಅನಿರೀಕ್ಷಿತವಾಗಿ ರೈತ ಚಳವಳಿಯ ನಾಯಕರೊಬ್ಬರ ಹತ್ತಿರದ ಬಂಧುಗಳ ಮನೆ ಜಪ್ತಿಯಾಯಿತು. ನಂತರ ನಾಯಕರೊಬ್ಬರ ಮನೆಯು ಜಪ್ತಿ. ಕೂಡಲೇ ರೈತ ಸಂಘ 'ಅಧಿಕಾರಿಗಳ ಮನೆ ಜಪ್ತಿ' ಕಾರ್ಯಕ್ರಮಕ್ಕೆ ಕರೆ ಕೊಟ್ಟಿತು. ಅಂದರೆ ಇಂಥ ಚಳವಳಿ ನಡೆಯಬಾರದು ಎಂದು ನಾನು ಹೇಳುತ್ತಿಲ್ಲ. ಚಳವಳಿಯ ತಕ್ಷಣದ ಕರೆಗೆ, ಚಳವಳಿಯ ನಾಯಕರ ಮನೆಗಳವರೆಗೂ ಜಪ್ತಿ ಬರುವುದನ್ನು ಕಾಯಬಾರದಿತ್ತು ಎನ್ನುವುದು ನನ್ನ ವಾದ. ಗೇಣಿದಾರರು ಮತ್ತು ಕೃಷಿ ಕಾರ್ಮಿಕರು ಈ ಚಳವಳಿಯ ಮುಂಚೂಣಿಯಲ್ಲಿದ್ದಿದ್ದರೆ ಬಹುಶಃ ಹೀಗಾಗುತ್ತಿರಲಿಲ್ಲವೇನೋ.

ಜನರ ಮಧ್ಯೆ ಹುಟ್ಟಿಕೊಂಡ ಈ ಚಳವಳಿಯನ್ನು ಜನರ ಮಧ್ಯದಲ್ಲೇ ಬೆಳೆಯಲು ಬಿಡದೆ ತಡೆದದ್ದು ಈ ನಾಯಕತ್ವ. ಹೀಗಾಗಿ ಈ ಚಳವಳಿ ಕೃಷಿ ಕಾರ್ಮಿಕರನ್ನು ಮತ್ತು ಬಡ ಗೇಣಿದಾರರನ್ನು ತಲುಪುವಲ್ಲಿ ವಿಫಲವಾಯಿತು.

ಇಷ್ಟೆಲ್ಲ ವಿಮರ್ಶೆ ಮಾಡುವಾಗಲೂ ಒಂದು ಸಮಾಧಾನವಿದೆ : ಕೈಗಾರಿಕಾ ಕ್ಷೇತ್ರದಂತೆಯೇ ಕೃಷಿ ಕ್ಷೇತ್ರದಲ್ಲೂ ರೈತರು ಸಂಘಟಿತರಾಗುವುದು ತಮ್ಮ ಬೆಳೆಗೆ ಯೋಗ್ಯ ಬೆಲೆ ಕೇಳುವುದು ಈ ಸಮಾಜದ ಆರೋಗ್ಯಕರ ಬೆಳವಣಿಗೆಯೇ. ಅನಕ್ಷರ ಕುಕ್ಷಿ ರೈತನಲ್ಲಿ ಈ ಬಗೆಯ ಎಚ್ಚರ ಮೂಡುವುದು ಒಳ್ಳೆಯದೇ.

ದಲಿತ ನಾಯಕತ್ವದ ಮಹತ್ವ: ಒಂದು ಚಿಂತನೆ

ದಲಿತರೇ ಮುಂಚೂಣಿಯಲ್ಲಿರಬೇಕು....ಬೇರೆ ಯಾರ ಕೈಗೆ ಮುಂದಾಳತ್ವ ಹೋದರೂ ಅವರು ಸಮಾಜಶ್ರೇಣಿಯಲ್ಲಿ ತಮ್ಮ ಸ್ಥಾನದವರೆಗೆ ವ್ಯಾಪಿಸಿದ ಅನ್ಯಾಯಗಳ ಬಗ್ಗೆ ಮಾತ್ರ ಜಾಗೃತರಾಗಿದ್ದು, ಆಮೇಲೆ ಎಂಥ ಪ್ರಾಮಾಣಿಕ ಕಳಕಳಿಯಿದ್ದರೂ ಮೈಮುರಿಯುವ ಸಾಧ್ಯತೆ ಇದೆ. ನಮ್ಮ ಸಂಧರ್ಭದಲ್ಲಿ ಹೀನಾತಿಹೀನ ಸ್ಥಾನದಲ್ಲಿರುವ ದಲಿತರು ಮಾತ್ರ ಉದ್ಧಾರ ಸಾಧಿಸಬೇಕಾದರೆ ಇಡೀ ಸಮಾಜ ವ್ಯವಸ್ಥೆಯನ್ನೇ ಸಮಗ್ರವಾಗ ತೊಳೆಯಬೇಕಾದ ವಿಶಿಷ್ಟ ಅನಿವಾರ್ಯತೆ ಹೊಂದಿವಂತಹವರು....

ಎನ್. ಎಸ್. ಶಂಕರ್

ಮನುಷ್ಯನನ್ನು ತಮ್ಮ ಚಿಂತನೆಯ ಕೇಂದ್ರವಾಗಿರಿಸಿಕೊಂಡ ಜಗತ್ತಿನ ಎಲ್ಲ ಮಹಾಮಾನವವಾದಿಗಳ ಕಾಳಜಿಯಿಷ್ಟೆ : ಸಮಾಜ-ವ್ಯವಸ್ಥೆಯು ಮನುಷ್ಯತ್ವದ ಸ್ವತಂತ್ರ ವಿಕಾಸಕ್ಕೆ ಒತ್ತಾಸೆಯಾಗಿ ನಿಲ್ಲುವ ಸಾಮುದಾಯಿಕ ಚೌಕಟ್ಟಾಗಿ ರೂಪುಗೊಳ್ಳಬೇಕು. ಈ ಆಶಯವನ್ನೇ ನಾವು ನಮ್ಮದಾಗಿ ಮಾಡಿಕೊಳ್ಳುವುದಾದರೆ, ಅಂಥ ಆದರ್ಶದಿಂದ ನಾವು ಎಷ್ಟು ದೂರ ಉಳಿದಿದ್ದೇವೆ, ಏಕೆ ಎಂಬ ಪ್ರಶ್ನೆಗಳನ್ನು ವಿಶ್ಲೇಷಿಸಿ ಮುಂದುರೆಯುವುದು ನಮ್ಮ ಕರ್ತವ್ಯವಾಗುತ್ತದೆ.

ಆದರೆ ಈ ಸೆಣಸಾಟದ ಹುಟ್ಟುವುದು ಹಲವರ "ಪರೋಪಕಾರ" ಮನೋಭಾವದಿಂದ ಎನ್ನುವ ಅಹಂಕಾರಕ್ಕೆ ತಡೆ ಹಾಕುವುದಕ್ಕಾಗಿ ಸ್ವಲ್ಪ ವಿವರಣೆ ; ಸಮಾಜವೆಂದರೇ ಮನುಷ್ಯ-ಮನುಷ್ಯರ ಒಳಸಂಬಂಧಗಳ ಮೊತ್ತವಾದ್ದರಿಂದ, ಅದರ ಎಲ್ಲ ಎಳೆಗಳೂ ಒಂದರೊಡನೊಂದು ಹೆಣೆದುಕೊಂಡು ಪರಸ್ಪರ ನಿಯಂತ್ರಿಸುತ್ತಾ ಚಲಿಸುತ್ತವೆ "ಪರಂಪರೆ"-"ಇತಿಹಾಸದ ಚಲನೆ"-ಎನ್ನುವಂಥ ಪ್ರಕ್ರಿಯೆಗಳು ಸಂಭವಿಸುವುದೇ ಈ ವಿಧಾನದಲ್ಲಿ ಎಂಬ ಗ್ರಹಿಕೆ ನನ್ನದು. ಇದನ್ನೇ ಸರಳವಾಗಿ ಹೇಳುವುದಾದರೆ, ಒಬ್ಬ ವ್ಯಕ್ತಿ ಸಮಾಜಶ್ರೇಣಿಯ ಯಾವ ಮೆಟ್ಟಿಲಿನಲ್ಲಿದ್ದರೂ, ಇಡೀ ಸಮುದಾಯದೊಡನೆ ಕೊಂಡು-ಕೊಳ್ಳುವ ಸಂಬಂಧ ಇಟ್ಟುಕೊಡಿರಲೇಬೇಕು. ವ್ಯಕ್ತಿ-ಸಮುದಾಯದ ಈ ಅಂತರಕ್ರಿಯೆಯಿಂದಾಗಿ, ವ್ಯಕ್ತಿಯ ಮಾನಸಿಕ ಸಂರಚನೆಯ ಆಧಾರದ ಮೇಲೆ ಸಾಮಾಜಿಕ ಪ್ರವೃತ್ತಿಗಳು ರೂಪುಗೊಳ್ಳುವುದೂ, ಸಾಮುದಾಯಿಕ ಸೆಳೆತಗಳ ಫಲವಾಗಿ ವ್ಯಕ್ತಿಗತ ಪ್ರೇರಣೆಗಳು ಜನ್ಮತಾಳುವುದೂ-ಎಲ್ಲರಿಗೂ ಗೊತ್ತಿರುವ ವಿಚಾರವೇ.

ಇದರ ಸಾರಾಂಶ ಇಷ್ಟೇ : ಒಂದು ಸಮಾಜ ವ್ಯವಸ್ಥೆ-ನಮ್ಮದರಂತೆ-ರೋಗಗ್ರಸ್ತವಾಗಿದ್ದರೆ ಆ ರೋಗದ ಛಾಯೆ ಎಲ್ಲರನ್ನೂ ಒಳಗೊಂಡಿರುತ್ತದೆ. ಹಾಗಾಗಿ ಅಲ್ಲಿ ಯಾವ ಹಂತದಲ್ಲೂ ಮನುಷ್ಯತ್ವದ ಸ್ವತಂತ್ರ ವಿಕಾಸ ಕೈಗೂಡುವುದಿಲ್ಲ.....

ಈ ಜಾಡ್ಯ-'ನನ್ನ' ಖಾಸಗಿಯನ್ನು ಬಿಡದೆ ಪ್ರವೇಶಿಸುವುದರಿಂದ, 'ನನ್ನ' ಅಸ್ತಿತ್ವದ ಅರ್ಥವಂತಿಕೆಯನ್ನು ಹಿಡಿದು ಜಗ್ಗುವುದರಿಂದ, 'ನನ್ನ' ವೈಯಕ್ತಿಕ ಸಮಸ್ಯೆಯೂ ಆಗುತ್ತದೆ. ಹೀಗೆ ಒಂದು ಸಾರ್ವತ್ರಿಕವಾದ, ವ್ಯಾಪಕವಾದ ಪೀಡೆ ವೈಯಕ್ತಿಕ ಸಂಬಂಧಗಳನ್ನು ಕುಲಗೆಡಿಸುತ್ತಿರುವ ವಿಧಾನಕ್ಕೆ ಪ್ರತಿಯೊಬ್ಬರ ಜೀವನದಿಂದಲೂ ಗಾಡಿಗಟ್ಟಲೆ ನಿದರ್ಶನ ಹೆಕ್ಕಿ ತೋರಬಹುದು. ಕೋಮುದ್ವೇಷ, ನಗರಜೀವನದ ಅವಿಭಾಜ್ಯ ಅಂಗವಾಗಿ ಕಾಣುವ ಗೂಂಡಾಗಿರಿ, ಇವೆಲ್ಲವೂ ನಮ್ಮ ವ್ಯಕ್ತಿಗತ ಸಣ್ಣತನ, ಹುಳುಕುಗಳ ವ್ಯಕ್ತರೂಪವೆಂದು ಅರ್ಥೈಸಬಹುದು. ಎಲ್ಲೆಲ್ಲೂ ವಿರಾಟ ರೂಪದಲ್ಲಿ ದರ್ಶನ ನೀಡುತ್ತಿರುವ ಭ್ರಷ್ಟಾಚಾರ-ನಮ್ಮಲ್ಲಿ ಅಂತರ್ಗವಾಗಿರುವ,-ಮೇಲು-ಕೀಳು ಎಣಿಸುವ ಆತ್ಮಕೇಂದ್ರಿಕಾರದ ಫಲವೆಂದು ಮನಗಾಣಬಹುದು...... ...

ಆದ್ದರಿಂದಲೇ ಪರಿವರ್ತನೆಯ ಹಂಬಲ-ಸಮಾಜದ ದೋಷ ದೌರ್ಬಲ್ಯಗಳು ನನ್ನ ಒಳಗನ್ನು ದಹಿಸುವ ಯಾತನೆಯಿಂದ ಬಿಡುಗಡೆ ಪಡೆಯಲೆಳಸುವ ವೈಯಕ್ತಿಕ ಜರೂರಾಗುವುದು. ಇದರ ವಿರುದ್ಧ ಬಡಿದಾಡಬೇಕಿದ್ದರೆ-ಪ್ರಥಮತಃ ಅದು ನನ್ನ ಸಲುವಾಗಿ'. ಅಂದರೆ ಇಂಥದೇ ಶಾಖಕ್ಕೆ ಒಡ್ಡಿಕೊಂಡಿರುವ ಒಂದು ಇಡೀ ಜನ ಸಮುದಾಯದಲ್ಲೊಬ್ಬನಾಗಿ ಅಲ್ಲದೆ?

ಮನುಷ್ಯರೆಲ್ಲರೂ ಮೂಲತಃ ಒಂದೇ ಆದ್ದರಿಂದ ಈ ಎಲ್ಲ ಏರುಪೇರುಗಳಿಗೆ ಉತ್ತರ-ಸಮಾನತೆ-ಎಂಬುದಕ್ಕೆ ಯಾವ ವಿವರಣೆಯೂ ಬೇಕಿಲ್ಲ. ಅದು ಸ್ವಯಂಸಿದ್ಧವಾದ ಸಿದ್ಧಾಂತ ತಾನೇ ? ಆದರೆ ಪರಸ್ಪರ ಪ್ರೀತಿ ಗೌರವಗಳಿಂದ ಪ್ರೇರಿತವಾದ ಸಮಾನತೆ ಸಾಧ್ಯವಾಗುವ ಮುನ್ನ, ಅದಕ್ಕೆ ಹತ್ತಿರವಾದ ಸಾಮಾಜಿಕ-ಆರ್ಥಿಕ ಸಮಾನತೆ ನಮ್ಮ ಗುರಿ ಎಂದಿಟ್ಟುಕೊಳ್ಳಬಹುದು. ಆದರೆ ನಮ್ಮ ಅಂತಿಮ ಸಾರ್ಥಕ್ಯ ಇಷ್ಟು ಮಾತ್ರವಲ್ಲ ಎನ್ನುವುದಕ್ಕಾಗಿ ಒಂದೆರಡು ಮಾತು :

ಕೇವಲ ಇಂದ್ರಿಯಗಮ್ಯವಾದಆರ್ಥಿಕ-ಸಾಮಾಜಿಕ ಸಮಾನತೆ 'ಯಾರೊಬ್ಬರೂ ಇನ್ನೊಬ್ಬರಿಗಿಂತ ಮೇಲೆರಬಾರದು' ಎನ್ನುವ ಪೈಪೋಟಿಯನ್ನು ಆಧರಿಸಿದ್ದೆಂದು ನನ್ನ ಗ್ರಹಿಕೆ, ತಪ್ಪಿರಬಹುದು, ಆದಾಗ್ಯೂ ಕೇವಲ ಇನ್ನೊಬ್ಬನ ಸ್ಥಿತಿ-ಗತಿಯ ಅಳತೆಗೋಲಿನ ಮೇಲೆ ನನ್ನ ನೆಮ್ಮದಿ ಅವಲಂಬಿಸಿದ್ದರೆ ನನ್ನ ಸ್ವತಂತ್ರ ವಿಕಾಸ ಸಾಧ್ಯವೇ ? ಎನ್ನುವುದೊಗಿದು ಪ್ರಶ್ನೆ. ಇದು 'ಅಸಾಧ್ಯ ಆದರ್ಶ' ಎಂದು ವಾದ ಮಾಡುವವರಿಗೆ- 'ಸುಂದರ ಕನಸನ್ನೂ ಕಟ್ಟಲಾರದವರು ಸುಂದರ ಸಮಾಜವನ್ನು ಕಟ್ಟಲಾರರು' ಎಂದು ಮಾತ್ರ ಹೇಳಬಯಸುತ್ತೇನೆ ಇರಲಿ.

ಈ 'ಕನಸುಗಾರಿಕೆ' ಯೊಡನೆ ನನ್ನಲ್ಲಿ ಮೊಳೆತ ಕೆಲವು ಪ್ರಾಥಮಿಕ ವಿಚಾರಗಳನ್ನು ನಿಮ್ಮ ಮುಂದಿಡುತ್ತೇನೆ. ಇದು ವಿಸ್ತೃತ ಚರ್ಚೆಗೆ-ತನ್ಮೂಲಕ ನಿಖರ ಕ್ರಿಯೆಗೆ ದಾರಿಯಾಗಲೆಂಬ ಹಂಬಲನನ್ನದು.

ನಮ್ಮ ಎಲ್ಲ ಸಮಸ್ಯೆಗಳ ಸಾಂಕೇತಿಕ ಮತ್ತು ವಾಸ್ತವಿಕ ರೂಪವಾದ ಅಸಮಾನತೆಯ ತಾಯಿಬೇರಿರುವುದು ನಮ್ಮ ಜಾತಿವ್ಯವಸ್ಥೆಯಲ್ಲಿ ಅಂದುಕೊಂಡಿದ್ದೇನೆ. ಏಕೆಂದರೆ ಈ ನಾಡಿನಲ್ಲಿ ಆರ್ಥಿಕ ಅಸಮಾನತೆಯು ವರ್ಗ ವಿಂಗಡಣೆಯ ಸುವ್ಯಕ್ತ ಸ್ಥಿತಿ ತಲುವುವ ಮುನ್ನವೇ-ಧಾರ್ಮಿಕ ತಂತ್ರಗಳಿಗೆ ಜೋತುಬಿದ್ದ ಸಾಮಾಜಿಕ ಅಸಮಾನತೆ ಇಲ್ಲಿ ನೆಲೆಗೊಂಡಿತ್ತು. ಇದಕ್ಕೆ ಸಮರ್ಥನೆಯಾಗಿ, ಇಂದಿಗೂ ನಮ್ಮಲ್ಲಿನ ವರ್ಗಗಳು ಜಾತಿಗಳ ಮೂಲಕವೇ ವ್ಯಕ್ತವಾಗುತ್ತಿರುವ ಪರಿಸ್ಥಿತಿಯನ್ನು ನೋಡಬಹುದು (ಅಂಕಿ-ಅಂಶಗಳ ಆಧಾರಕ್ಕೆ ನೋಡಿ: ಅನಿಲ ಭಟ್ ಅವರ Caste, Class & Politics 1975) ಮೇಲಿನ ಸ್ತರದ ಎರಡು ಉನ್ನತ ಜಾತಿಗಳನ್ನು ಬಿಟ್ಟರೆ, ಉಳಿದೆಲ್ಲ ಜಾತಿಗಳ ಆರ್ಥಿಕ ಸ್ಥಾನಮಾನ ಜಾತಿಶ್ರೇಣಿಗೆ ಅನುಗುಣವಾಗಿದ್ದು ಅದೇ ಕ್ರಮದಲ್ಲಿದೆ. ಆದ್ದರಿಂದ ಜನಸಂಖ್ಯಾ ಸಮಸ್ಯೆಯ ಹೊರತಾಗಿ ಉಳಿದೆಲ್ಲ ಸಮಸ್ಯೆಗಳೂ(ಗಂಡು-ಹೆಣ್ಣಿನ ತಾರತಮ್ಯಕ್ಕೆ ಜಾತಿಮೂಲ ಪ್ರೇರಣೆಗಳೇ

ಮೂಲ ಕಾರಣ ಎಂದು ನನ್ನ ಭಾವನೆ) ಜಾತಿ ವ್ಯವಸ್ಥೆಯಿಂದಲೇ ಎದ್ದುಬಂದಂಥವೆಂದು ನಿರ್ಧರಿಸಬಹುದು. ಅಷ್ಟಕ್ಕೂ, ಜನಸಂಖ್ಯೆ ಕೂಡಾ ಸಮಸ್ಯೆ ಹೌದೋ ಅಲ್ಲವೋ ತಿಳಿಯಬೇಕಾದರೆ, ಅದಕ್ಕೆ ಪೂರ್ವಭಾವಿಯಾಗಿ ವಿತರಣೆಯಲ್ಲಿನ ಅನ್ಯಾಯ ನೀಗಬೇಕಲ್ಲವೆ ? ಆದ್ದರಿಂದ ಸದ್ಯಕ್ಕೆ ಅದನ್ನೂ ಬದಿಗಿರಿಸಬೇಕು. (ಜನಸಂಖ್ಯೆಯ ಪ್ರಮಾಣ ಯಾವಾಗಲೂ ನಾಡಿನ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆನ್ನುವ ವಾದದ ಮೂಲಕ ಫ್ರೆಡರಿಕ್ ಎಂಗಲ್ಸ್-ಮಾಲ್ಥೂಸಿಯನ್ ಜನಸಂಖ್ಯಾ ಸಿದ್ಧಾಂತವನ್ನು ತಳ್ಳಿಹಾಕುತ್ತಾನೆ.)

ಆಧುನೀಕರಣ ಕಾಲಿಟ್ಟೊಡನೆ – ಪಾರಂಪರಿಕ ವೃತ್ತಿಗಳ ಅವಲಂಬನೆ ದೂರವಾಗಿ, ಜಾತಿಗಳೂ ಕರಗಿ ಹೋಗುತ್ತದೆನ್ನುವ ವಾದ ಸಹ ಈಗ ಪೊಳ್ಳಾಗಿದೆ. ಆಧುನಿಕ ಎನ್ನಬಹುದಾದ ಸರ್ಕಾರಿ ಕೆಲಸಗಳು, ಕಾರ್ಖಾನೆಯ ಕಾರ್ಮಿಕರ ಕೆಲಸ – ಇಂಥ ಕಡೆಯೂ 'ದಲಿತ ಅನುಭವ' ಗಳಿಗೆ ಯಾವುದೇ ಕೊರತೆಯುಂಟಾಗಿಲ್ಲದಿರುವುದನ್ನು ಕಾಣುತ್ತಿದ್ದೇವೆ–ಕೇಳುತ್ತಿದ್ದೇವೆ. ಹಾಗೆ ನೋಡಿದರೆ ಜಾತಿಮೂಲವಾದ ತಾತ್ಸಾರ–ಪೊಗರುಗಳು ಹಿಂದಿನ ಒರಟುತನ ಕಳೆದುಕೊಂಡು ಇನ್ನಷ್ಟು ನಯವಾಗಿ ಸೂಕ್ಷ್ಮವಾಗಿ ರೂಪಾಂತರಗೊಳ್ಳುತ್ತಿವೆ. ಇಂಥ ಸೂಕ್ಷ್ಮತೆ (Subtlety) ಯಾವಾಗಲೂ ಸುಭದ್ರ ನೆಲೆಯ ಚಿಹ್ನೆಯಲ್ಲವೇ ? ('ಅವನು ಹರಿಜನನಾದರೂ ಸಭ್ಯ' ಎಂಬಲ್ಲಿನ–ತಟ್ಟನೆ ಗಮನಕ್ಕೆ ಬಾರದ–ತಣ್ಣನೆ ಕ್ರೌರ್ಯವನ್ನು ಗಮನಿಸಬೇಕು)

ಜಾತಿವ್ಯವಸ್ಥೆಗೆ ಮೂಲತಃ ಕರ್ಮಸಿದ್ಧಾಂತದಂತಹ ಮೋಸ, ಜತೆಗೆ ವಿವೇಕವನ್ನು ಹತ್ತಿರ ಬಿಟ್ಟುಕೊಳ್ಳದ ಅಂಧಶ್ರದ್ಧೆಗಳೇಊರುಗೋಲಾದ್ದರಿಂದ ಕೇವಲ ವರ್ಗಹೋರಾಟದ ಪರಿಕರಗಳು ಜಾತಿ ವಿನಾಶಕ್ಕೆ ಸಾಲದೇ ಹೋಗಬಹುದು ಎಂದು ಮಾತ್ರ ಇಲ್ಲಿ ಸೂಚಿಸಬಯಸುತ್ತೇನೆ. ಜೊತೆಗೆ ಇದು ಒಬ್ಬರನ್ನು ತುಳಿದು ಇನ್ನೊಬ್ಬರು ಮೇಲೆ ಬರುವ ಸಂಕುಚಿತ ಅರ್ಥದ ಸರಳ ಬಂಡಾಯ ಅಲ್ಲವಾದ್ದರಿಂದ, ಕ್ರಮಕ್ರಮೇಣವಾದರೂ ಅಕ್ಷರಶಃ ಎಲ್ಲರನ್ನೂ ಒಳಗೊಳ್ಳುವ–ಅರಿಯುವ-ಸಂಘರ್ಷಿಸುವ ಸೂಕ್ಷ್ಮ ಒಳಹೋರಾಟದ ಮೂಲಕವೇ ಪರಿವರ್ತನೆ ಸಾಧ್ಯ. ಯಾವುದೇ ಅರ್ಥಪೂರ್ಣ ಸಂಘರ್ಷದ ವಿಧಾನ ಮತ್ತು ಉದ್ದೇಶ- ಎಲ್ಲರನ್ನೂ ಸೆಳೆದುಕೊಂಡು, ಅವರ ಒಳ್ಳೆಯತನವನ್ನು ಉದ್ದೀಪಿಸಿ ವ್ಯಕ್ತಿತ್ವದ ವಿಕಸನಕ್ಕೆ ಅನುವು ಮಾಡಿಕೊಡುವ ಮೂಲಕ ಆದರ್ಶವನ್ನು ನಿಜವಾಗಿಸುವ ಕ್ರಿಯೆ ಅಲ್ಲವೇ ?

ಇಲ್ಲಿ ಬಹುಮುಖ್ಯ ಪ್ರಶ್ನೆಯೆಂದರೆ– ಈ ಸಂಘರ್ಷದ ಮುಂಚೂಣಿಯಲ್ಲಿ ಯಾರಿರಬೇಕು ? ಯಾರ ನೇತೃತ್ವದಲ್ಲಿ ನಾವು ನಮ್ಮ ಗುರಿಗೆ ಹೆಚ್ಚು ಸಮೀಪರಾಗಬಲ್ಲೆವು ?–ಎನ್ನುವುದು.

ಈಗ ನೋಡಿ. ನಾನು ಹುಟ್ಟಿದ ಗಳಿಗೆಯೇ ನನ್ನ ಜಾತಿ ನಿರ್ಧಾರವಾಗುತ್ತದೆ ಎಂದರೆ ಅದರರ್ಥ ಇಷ್ಟೇ : ನಾನು ಬೆಳೆಯುವ ಪರಿಸರ, ನನ್ನ ಮೇಲೆ ದಾಳಿ ಮಾಡುವ ನಂಬಿಕೆ-ಪೂರ್ವಾಗ್ರಹಗಳು, ಜೀವನ ವಿಧಾನ, ಆಲೋಚನಾ ಕ್ರಮ–ಇವೆಲ್ಲವೂ ಶತಮಾನಗಳ ಕಾಲ ಪಾಕಗಟ್ಟಿ ನನ್ನವರೆಗೆ ಇಳಿದುಬಂದಿರುತ್ತವೆ. ಅಂದ ಮೇಲೆ ನನ್ನ ವ್ಯಕ್ತಿತ್ವ ಈ ಎಲ್ಲ ಒತ್ತಡಗಳ ಕೆಳಗೆ ಪಳಗಿ ರೂಪುಗೊಳ್ಳುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ನಾನು ಪ್ರತಿನಿಧಿಸುವ ಜಾತೀವರ್ಗದ ಹಿತಾಸಕ್ತಿಗಳು ನಾನು ಸ್ವತಂತ್ರವಾಗಿ - ಪ್ರಜ್ಞಾಪೂರ್ವಕವಾಗಿ ಯೋಚಿಸಲು ತೊಡಗುವ ಮುನ್ನವೇ ನನ್ನ ರಕ್ತದಲ್ಲಿ ಸೇರಿಹೋಗಿರುತ್ತವೆ ಮತ್ತು ಒಂದು ಹಂತದಲ್ಲಿ ನನ್ನ ಆಲೋಚನೆಯನ್ನೂ ನಿಯಂತ್ರಿಸುತ್ತವೆ. ಇದರ ಪರಿಣಾಮ ನಾವು ಪರಿವರ್ತನೆಗಾಗಿ ಹಂಬಲಿಸುತ್ತಿದ್ದರೂ ನಮ್ಮ ಆದರ್ಶಸಮಾಜದ ಕಲ್ಪನೆ ನಮ್ಮ ಹಿತಾಸಕ್ತಿಗಳ ಹೊಡೆತದಿಂದ ಬಚಾವಾಗಿರುವುದಿಲ್ಲ. ಮನುಷ್ಯರೆಲ್ಲ ಒಟ್ಟುಗೂಡುವ ನೆಲೆಯೇ ಇಲ್ಲ ಎಂದು ನನ್ನ ಮಾತಿನ ಅರ್ಥವಲ್ಲ. ಆದರೆ ನಮ್ಮ ಚಿಂತನೆಯನ್ನು ಸಮಗ್ರಗೊಳಿಸಬಲ್ಲ ನೈಜ ಅನುಭವವೇ ನಮಗೆ ಒದಗಿರುವುದಿಲ್ಲ ಎಂದಷ್ಟೇ ಇದರ ತಾತ್ಪರ್ಯ. (ಒಂದು ಅಂದೋಳನದ ಕಾವಿನಲ್ಲಿ ಮಾತ್ರ ಇಂಥ ಪೂರ್ವಾಗ್ರಹಗಳುಕರಗಬಲ್ಲವು)

ದಲಿತರೇ ಮುಂಚೂಣಿಯಲ್ಲಿರಬೇಕು ಮತ್ತು ಏಕೆ ಎಂಬುದರ ಕಾರಣಗಳು ಇಲ್ಲಿ ಸಿಕ್ಕುತ್ತವೆ. ಬೇರೆ ಯಾರ ಕೈಗೆ ಮುಂದಾಳತ್ವ ಹೋದರೂ ಅವರು ಸಮಾಜಶ್ರೇಣಿಯಲ್ಲಿ ತಮ್ಮ ಸ್ಥಾನದವರೆಗೆ ವ್ಯಾಪಿಸಿದ ಅನ್ಯಾಯಗಳ ಬಗ್ಗೆ ಮಾತ್ರ ಜಾಗೃತರಾಗಿದ್ದು, ಆಮೇಲೆ ಎಂಥ ಪ್ರಾಮಾಣಿಕ ಕಳಕಳಿಯಿದ್ದರೂ ಮೈಮರೆಯುವ ಸಾಧ್ಯತೆ ಇದೆ. ಇದಕ್ಕೆ ನಾನು ಮೊದಲೇ ಹೇಳಿದ ಹಾಗೆ ಅನುಭವದ ಅಭಾವವೇ ಕಾರಣ. ಅಂದರೆ, ಅತ್ಯಂತ ಕೆಳವರ್ಗ ಬಿಟ್ಟು ಉಳಿದೆಲ್ಲ ವರ್ಗಗಳೂ 'ಸಂಪೂರ್ಣ' ಬದಲಾವಣೆಯ ಆವಶ್ಯಕತೆ ಇಲ್ಲದೆಯೇ ತಮ್ಮ ಹಿತ ಪೂರೈಸಿಕೊಳ್ಳಬಲ್ಲವು. ನಮ್ಮ ಸಂದರ್ಭದಲ್ಲಿ ಹೀನಾತಿಹೀನ ಸ್ಥಾನದಲ್ಲಿರುವ ದಲಿತರು ಮಾತ್ರ ತಮ್ಮ ಉದ್ಧಾರ ಸಾಧಿಸಬೇಕಾದರೆ ಇಡೀ ಸಮಾಜವ್ಯವಸ್ಥೆಯನ್ನೇ ಸಮಗ್ರವಾಗಿ ತೊಳೆಯಬೇಕಾದ ವಿಶಿಷ್ಟ ಅನಿವಾರ್ಯತೆ ಹೊಂದಿರುವಂತಹವರು. ಅರ್ಥಾತ್, ಇಡೀ ಸಂರಚನೆ ಬದಲಾಗದ ಹೊರತು ಅವರ ಪರಿಪೂರ್ಣ ವಿಕಾಸ ಸಾಧ್ಯವಿಲ್ಲ. ಇಂಥ ತುರ್ತು ಬೇರೆ ಯಾರಿಗೂ ಇಲ್ಲದ್ದರಿಂದಲೇ ದಲಿತರಿಗೆ. ದಲಿತ ಚಳುವಳಿಗೆ ಅಪೂರ್ವ ಐತಿಹಾಸಿಕ ಮಹತ್ವ.

ಈ ವಾದವನ್ನು ಒಪ್ಪುವ ಪ್ರಜ್ಞಾವಂತ ಹೃದಯಶೀಲರ ಮುಂದಿರುವ ಜವಾಬ್ದಾರಿ – ದಲಿತ ಹಿತಾಸಕ್ತಿಗಳಿಗೆ ನೀರೆರೆಯುವುದು ಅವರ ಚಿಂತನೆ–ಕನಸುಗಾರಿಕೆಗಳಿಗೆ ಕುಮ್ಮಕ್ಕು ಕೊಡುವುದು ಮತ್ತು "ಆ" ಗಳಿಗೆಗಾಗಿ ಕಾಯುತ್ತಾ ಅನುವಾಗುವುದು. ಇಷ್ಟೆ.

ಈಗ ನಾವು ಅರಿಸಿಕೊಳ್ಳಬಹುದಾದ ಜೀವನ ಮೌಲ್ಯ ಇದೇ.

ಕೃಷಿ ಕಾರ್ಮಿಕರನ್ನು ಮುಟ್ಟದ ರೈತಸಂಘ

ಸರ್ಕಾರಕ್ಕೆ ತಮ್ಮ ಸಾಲ ಮನ್ನಾ ಮಾಡಿ ಎಂದು ರೈತರು ಕೇಳುತ್ತಿರುವುದರಲ್ಲಿ ಸಕಾರಣಗಳಿವೆ. ಆದರೆ ಅದೇ ಸಾಲ ಕೃಷಿ ಕಾರ್ಮಿಕರ ಶೋಷಣೆಗೆ ಬಳಕೆಯಾಗುತ್ತಿದ್ದು, ಸರ್ಕಾರ ಅವರ ಸಾಲ ಮನ್ನಾ ಮಾಡಿದರೂ ಅವರು ಕೃಷಿ ಕಾರ್ಮಿಕರಿಗೆ ತಾವು ಕೊಟ್ಟ ಸಾಲವನ್ನು ಮನ್ನಾ ಮಾಡುತ್ತಾರೆಯೆ ?

ವಿಶೇಷ ಸಮೀಕ್ಷೆ

ಕ್ಷೀರಸಾಗರ
ಹೆಚ್. ಎಸ್. ರಾಜೇಂದ್ರಸಿಂಗ್

ಕರ್ನಾಟಕದಲ್ಲಿ ರೈತಸಂಘ ತೀವ್ರವಾಗಿ ಮತ್ತು ವ್ಯಾಪಕವಾಗಿ ಬೆಳೆಯುತ್ತಿದ್ದಂತೆ ಅದರ ಬೆಳವಣಿಗೆಯ ದಿಕ್ಕುಗಳು, ಒಳಗೊಂಡಿರುವ ವೈರುಧ್ಯಗಳು ಮತ್ತು ಭೂರಹಿತರ ಸಮಸ್ಯೆಗಳಿಗೆ ರೈತಸಂಘದ ಸ್ಪಂದನೆ ಮುಂತಾದ ವಿಷಯಗಳನ್ನು ಕುರಿತು ಚಿಂತನೆಮಾಡುವ ಅಗತ್ಯ ಬಹಳವಿದೆ. ಸರ್ಕಾರವು ಕೈಗಾರಿಕೋದ್ಯಮಿಗಳಿಗೆ ಅನುಕೂಲವಾಗುವ ಯೋಜನೆಗಳನ್ನು ರೂಪಿಸಿ ರೈತಾಪಿ ಜನರ ಆರ್ಥಿಕ ಸ್ಥಿತಿಯನ್ನು ಕಡೆಗಣಿಸಿರುವುದರ ಬಗ್ಗೆ ರೈತಸಂಘ ಕಣ್ಣು ತೆರೆಸಿತು. ಇಂತಹ ಯೋಜನೆಗಳ ವಿರುದ್ಧವಷ್ಟೆ ಅಲ್ಲ ಸ್ವತಹ ಕೈಗಾರಿಕೋಧ್ಯಮಿ ವ್ಯವಸಾಯದ ಕಚ್ಚಾ ಪದಾರ್ಥಗಳನ್ನು ಅತಿ ಕಡಿಮೆ ಬೆಲೆಗೆ ಪಡೆದು ಇದರಿಂದ ಸಿದ್ಧಪಡಿಸಿದ ವಸ್ತುಗಳನ್ನು ಅತಿ ಹೆಚ್ಚಿನ ಬೆಲೆಗೆ ಮಾರುವ ವಿಷವೃತ್ತದ ಬಗ್ಗೆ ಕೈಗಾರಿಕೋತ್ಪಾದನೆಯ ವಸ್ತುಗಳ ಬೆಲೆ ನಿಗದಿ ಮಾಡುವಲ್ಲಿ ಇವರಿಗೆ ಇರುವ ಅವಕಾಶ ವ್ಯವಸಾಯೋತ್ಪನ್ನ ಬೆಲೆಗಳಿಗೆ ಇಲ್ಲದಿರುವುದರ ಬಗ್ಗೆ ಆರ್ಥಿಕ ಯೋಜನೆಗಳನ್ನುಯ ಬಹುಪಾಲು ಪಟ್ಟಣಗಳ ಅನುಕೂಲಕ್ಕಾಗಿ ವಿನಿಯೋಗಿಸಿ ಹಳ್ಳಿಗಳ ಹಿತವನ್ನು ಕಡೆಗಣಿಸಿರುವುದರ ಬಗ್ಗೆ ಈ ಎಲ್ಲ ವಿಷಯಗಳ ಬಗ್ಗೆ ರೈತಸಂಘದ ನಾಯಕರು ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಇಂತಹ ಅನ್ಯಾಯಗಳ ವಿರುದ್ಧ ಹೋರಾಡುವ ಮನಸ್ಸು ಮಾಡಿರುವುದು ಸ್ವಾಗತಾರ್ಹ.

ರೈತಸಂಘದ ಇನ್ನೊಂದು ಕ್ರಿಯಾತ್ಮಕವಾಗಿರುವ ಈಗ ಪ್ರಚಲಿತವಿರುವ ಬೇಡಿಕೆಗಳ ಮೊಗ್ಗಲನ್ನು ಹೊರಳಿಸಿ ನೋಡುವುದು ಬಹಳ ಅಗತ್ಯ. ಯಾಕೆಂದರೆ ಚಾಲನೆಯಲ್ಲಿರುವ ಬೇಡಿಕೆಗಳು ಒಂದು ಹಳ್ಳಿ ಮಟ್ಟದಲ್ಲಿ ನರಗಳಂತೆ ಹಬ್ಬಿಕೊಂಡಿರುವ ಹಲವಾರು ಜಾತಿ ಮತ್ತು ವರ್ಗದಲ್ಲಿ ಯಾವ ರೀತಿಯ ಪರಿಣಾಮ ಬೀರುತ್ತದೆ ಅನ್ನುವುದನ್ನು ನೋಡಿದಾಗಲೇ ಅದರ ನಿಜಸ್ಥಿತಿ ಗೊತ್ತಾಗುವುದು.

ಈ ವಿಷಯದ ಬಗ್ಗೆ ಪ್ರಾಯೋಗಿಕವಾಗಿ ವಿಷಯ ತಿಳಿಯಲು ರೈತಸಂಘ ಪ್ರಬಲವಾಗಿ ಬೆಳೆಯುತ್ತಿರುವ ಮಂಡ್ಯಜಿಲ್ಲೆಯಲ್ಲಿ ಪಾಲಹಳ್ಳಿ ಅನ್ನುವ ಹಳ್ಳಿಯನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಿದ ನಂತರ ಈ ಲೇಖನ ಬರೆಯುತ್ತಿದ್ದೇವೆ.

ಪಾಲಹಳ್ಳಿಯ ರೈತಸಂಘ

ಪಾಲಹಳ್ಳಿ ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ್ದು ಮೈಸೂರಿನಿಂದ 12 ಕಿ.ಮೀ. ದೂರದಲ್ಲಿರುವ ಹಳ್ಳಿ. ಈ ಊರಿನ ಸುತ್ತ ವಿರಿಜಾನಾಲೆ ಮತ್ತು ಆರ್. ಬಿ. ಎಲ್. ಎಲ್. ನಾಲೆ ರಚನೆಯಾಗಿರುವುದರಿಂದ ಇಲ್ಲಿಯ ಶೇಕಡಾ 95 ಭಾಗದ ಜಮೀನು ನೀರಾವರಿಯಾಗಿದೆ. ಇಲ್ಲಿಯ ಮುಖ್ಯ ಬೆಳೆ ಕಬ್ಬು ಮತ್ತು ಬತ್ತ. ಈ ಊರಿನಲ್ಲಿ 1,200 ಕುಟುಂಬಗಳಿದ್ದು 6 ಸಾವಿರ ಜನಸಂಖ್ಯೆಯನ್ನು ಹೊಂದಿದೆ.

ಒಕ್ಕಲಿಗರು : ಇವರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರದು ಒಂದು ಸಾವಿರ ಕುಟುಂಬಗಳಿವೆ. ಹೆಚ್ಚಿನ ಭೂಮಿ ಕೇಂದ್ರೀಕೃತವಾಗಿರುವುದು ಇವರಲ್ಲೇ. ಆದರೂ ಒಕ್ಕಲಿಗರಲ್ಲಿ ಶೇಕಡಾ ಇಪ್ಪತ್ತರಷ್ಟು ಭೂರಹಿತರಿದ್ದಾರೆ. ಹತ್ತು ಎಕರೆಗಿಂತ ಮೇಲ್ಪಟ್ಟವರು ಶೇಕಡಾ 15 ಕುಟುಂಬಗಳು. ಉಳಿದ ಶೇಕಡಾ 65 ಕುಟುಂಬಗಳು ನಾಲ್ಕು-ಐದು ಎಕರೆ ಹೊಂದಿ ಮಧ್ಯಮ ರೈತರಾಗಿದ್ದಾರೆ. ರೈತಸಂಘದ ರಚನೆಯಲ್ಲಿ ಇವರೇ ನಾಯಕತ್ವದಲ್ಲಿದ್ದು ಇವರ ಬೆಂಬಲ ಹೆಚ್ಚಾಗಿದೆ. ಇವರಲ್ಲಿ ಸಾಕಷ್ಟು ಕುಟುಂಬಗಳು ವ್ಯವಸಾಯದ ಜೊತೆಗೆ ವ್ಯಾಪಾರವನ್ನು ಮಾಡುತ್ತಾರೆ. (ಎಕರೆಗಳೆಂದರೆ ಇಲ್ಲಿ ಗದ್ದೆ ಭೂಮಿ ಎಂದು ತಿಳಿಯಬೇಕು. ಏಕೆಂದರೆ ಎಲ್ಲಾ ನೀರಾವರಿ ಜಮೀನು)

ಕ್ರಿಶ್ಚಿಯನ್ನರು : ಇವರು ಸಂಖ್ಯೆಯಲ್ಲಿ 30 ಕುಟುಂಬಗಳಿದ್ದರೂ ಹೆಚ್ಚಿನ ಭೂಮಿಯನ್ನು ಹೊಂದಿದ್ದು ಹೆಚ್ಚು ಮಂದಿ ಭೂ ಮಾಲೀಕರಾಗಿದ್ದಾರೆ.

ಮುಸ್ಲಿಮರು : ಸುಮಾರು 90 ಕುಟುಂಬಗಳಿರುವ ಮುಸ್ಲೀಮರಲ್ಲಿ ಐದು ಕುಟುಂಬಗಳು ಮಾತ್ರ ಭೂಮಿ ಹೊಂದಿದ್ದು ಉಳಿದ 85 ಕುಟುಂಬಗಳು ಸಂಪೂರ್ಣವಾಗಿ ಭೂರಹಿತ ಕುಟುಂಬಗಳಾಗಿವೆ. ಈ ಎಲ್ಲ ಕುಟುಂಬಗಳು ವ್ಯವಸಾಯ ಕೂಲಿಗಳಾಗಿದ್ದು ಸಮಯ ಬಂದಾಗ ಅಲ್ಪ ಕಾಲದ ವ್ಯಾಪಾರಿಗಳಾಗಿದ್ದಾರೆ. ಅಂದರೆ ಆಯಾ ಕಾಲಗಳಲ್ಲಿ ಹುಣಸೆಹಣ್ಣು ಮತ್ತು ಮಾವಿನಹಣ್ಣುಗಳ ವ್ಯಾಪಾರದಲ್ಲಿ ತೊಡಗುತ್ತಾರೆ. ಆರ್ಥಿಕವಾಗಿ ಹರಿಜನರಷ್ಟೆ ಹೀನಸ್ಥಿತಿಗಿಳಿದಿದ್ದಾರೆ. ಆದರೆ ಅಸ್ಪೃಶ್ಯತೆ ಇಲ್ಲದಿರುವುದರಿಂದ ಒಕ್ಕಲಿಗರು ಮುಂತಾದವರೊಡನೆ ಒಡನಾಟವಿಟ್ಟುಕೊಂಡಿದ್ದಾರೆ. ಸಾಮಾಜಿಕವಾಗಿ ಅಷ್ಟೊಂದು ತಿರಸ್ಕೃತರಾಗಿಲ್ಲ.

ಹರಿಜನರು : 25 ಕುಟುಂಬಗಳಿರುವ ಹರಿಜನರಲ್ಲಿ 22 ಕುಟುಂಬಗಳು ಸಂಪೂರ್ಣವಾಗಿ ಭೂರಹಿತ ಕೃಷಿಕಾರ್ಮಿಕರಾಗಿದ್ದಾರೆ. ಭೂಮಿ ಇರುವ ಮೂರು ಕುಟುಂಬಗಳಿಗೂ ಹೆಚ್ಚಿನ ಭೂಮಿ ಏನಿಲ್ಲ. ಮೂರು ಕುಟುಂಬಗಳಿಂದ ಐದು ಎಕರೆ ಜಮೀನಿದೆ.

ಭೂಮಿಯಿಲ್ಲದ ಹರಿಜನರು ಬೇರೆ ಯಾವ ಉಪಕಸುಬುಗಳೂ ಇಲ್ಲದೆ ಕೇವಲ ವ್ಯವಸಾಯಕೂಲಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಇವರಲ್ಲಿ ಬಹಳ ಮಂದಿ ಜೀತಗಾರರಾಗಿದ್ದವರು. 1975ರ ಜೀತ ವಿಮುಕ್ತಿ ಕಾಯಿದೆಯಿಂದ ಬಿಡುಗಡೆ ಹೊಂದಿದ್ದರೂ ಒಬ್ಬರಿಗೂ ಪರಿಹಾರ ದೊರಕಿಲ್ಲ. ಈಗ ಮತ್ತೆ ಇಬ್ಬರು ಹರಿಜನರು ಜೀತಕ್ಕಿದ್ದಾರೆ. ಉದಾ:- ನರಸಯ್ಯ ಮಗಳ ಮದುವೆಗೆ 1,500 ರೂ. ಸಾಲ ಮಾಡಿದ್ದರಿಂದ ಆದರ ಬಡ್ಡಿಗೆ ಜೀತದಲ್ಲಿದ್ದಾನೆ. ಇವನ ಹತ್ತು ವರ್ಷದ ಮಗ ಇವರ ಮನೆಯಲ್ಲಿ ಜೀತಕ್ಕಿದ್ದು ಎಮ್ಮೆದನ ಕಾಯುತ್ತಿದ್ದಾನೆ.

ಹಿಂದಿನ ರೀತಿಯ ಜೀತ ಮತ್ತೆ ಜೀವಂತವಾಗಿರುವುಲ್ಲದದೆ ಇದು ಬೇರೆ ಸ್ವರೂಪ ಪಡೆದುಕೊಂಡು ಹಲವಾರು ವಿಧಾನಗಳಲ್ಲಿ ಹರಿಜನರ ಜೀವ ಹಾಡುತ್ತಿರುವುದನ್ನು ನಾವು ಕಾಣಬಹುದು. (ಸಾಲದ ಬಗ್ಗೆ ಹೇಳುವಾಗ ಇದನ್ನು ವಿವರಿಸುತ್ತೇವೆ.) ಈ ಊರಿಗೆ ಸೇರಿದ್ದ 'ಸರ್ಕಾರಿ ಜಮೀನನ್ನು ರೈತರು ಒತ್ತುವರಿ ಮಾಡಿಕೊಂಡು ತಮ್ಮಂತೆ ಮಾಡಿಕೊಂಡಿದ್ದಾರೆ. ನಮಗೆ ಒಂದಿಂಚು ಸರ್ಕಾರಿ ಜಮೀನು

ದಕ್ಕಿಲ್ಲ' ಅಂದರು. ರೈತರು ಎಂದರೆ ಯಾರು ? ಎಂದು ನಾವು ಕೇಳಿದ ಪ್ರಶ್ನೆಗೆ 'ಒಕ್ಕಲಿಗರು' ಎಂದರು. ಯಾಕೆ ನೀವು ರೈತರಲ್ಲವಾ ? ಎಂದು ಕೇಳಿದ ಪ್ರಶ್ನೆಗೆ ಇಂತಹ ಪೆದ್ದು ಪ್ರಶ್ನೆ ಕೇಳುತ್ತಾರಲ್ಲ ಎಂದುಕೊಂಡು 'ಅದ್ಯಾಕೆ ನಿಮಗೆ ಗೊತ್ತಿಲ್ಲವಾ ? ನಾವೆಂಗೆ ರೈತರಾಗಾಕಾಯ್ತದೆ ? ನಮ್ಮತ್ರ ಜಮೀನು ಇದ್ದವಾ ? ಎತ್ತುಗಳಿದ್ದವಾ ? ನಾವೇನು ಒಕ್ಕಲಿಗರ ?' ಎಂದಾಗ 'ಹೌದಾ ?' ಎಂದುಕೊಂಡು ಸುಮ್ಮನಾಗಬೇಕಾಯಿತು.

ಬೆಸ್ತರು : ಸುಮಾರು 60 ಕುಟುಂಬಗಳಿರುವ ಬೆಸ್ತರಲ್ಲಿ ಅರ್ಧಕರ್ಧ ಕುಟುಂಬಗಳು ಮಧ್ಯಮ ರೈತರಾಗಿದ್ದು ಉಳಿದವರು ವ್ಯವಸಾಯಕೂಲಿಗಳಾಗಿದ್ದಾರೆ. ಇವರು ಹೆಚ್ಚಾಗಿ ಕೃಷಿಕೂಲಿಯನ್ನೇ ಅವಲಂಭಿಸಿಕೊಂಡಿದ್ದಾರೆ.

ಉಳಿದವು ಐದು-ಹತ್ತು ಕುಟುಂಬಗಳಷ್ಟೆ ಇರುವ ಬ್ರಾಹ್ಮಣರು, ಮೇಧರು, ಚಮ್ಮಾರರು ಮತ್ತು ದರ್ಜಿಗಳು ತಮ್ಮ ಕಸುಬು ಹಾಗೂ ವ್ಯವಸಾಯ ಮಾಡಿಕೊಂಡು ಬದುಕುತ್ತಿದ್ದಾರೆ.

ಎರಡು ಊರುಗಳು ಸೇರಿ 15 ಮಂದಿ ಸದಸ್ಯರಿರುವ ಚುನಾಯಿತ ಪಂಚಾಯಿತಿ ಅಸ್ತಿತ್ವದಲ್ಲಿದ್ದರೂ– ಊರಿನ ಹತ್ತು ಜನಗಳ ಪಂಚಾಯ್ತಿ ಹಾಗೂ ರೈತ ಸಂಘಗಳ ಜಗಳ, ಕಲಹ ಮುಂತಾದವುಗಳ ನ್ಯಾಯ ತೀರ್ಮಾನ ಮಾಡುವ ಅಂಗಗಳಾಗಿವೆ. ಇಲ್ಲಿ ರೈತಸಂಘ ಪ್ರಾರಂಭವಾಗಿ ಒಂದು ವರ್ಷವಾಯಿತು.

ಜೀವಂತ ಹಾಗೂ ಜಡವಾದ ಬೇಡಿಕೆಗಳು :

ಸ್ಥೂಲವಾಗಿ ಹುಂಡಿಸಿದ ಈ ಜಾತಿ ಮತ್ತು ವರ್ಗದ ಹಿನ್ನೆಲೆಯಲ್ಲಿ ರೈತ ಸಂಘದ ಪಾತ್ರ ನೋಡೋಣ;

ರೈತಸಂಘದ 19 ಬೇಡಿಕೆಗಳನ್ನು ಅವಲೋಕಿದಾಗ ಹಳ್ಳಿಯ ಎಲ್ಲ ವರ್ಗದ ಜನತೆಗು, ಕೃಷಿಕಾರ್ಮಿಕರನ್ನು ಒಳಗೊಂಡು ಅಲ್ಪಸ್ವಲ್ಪ ಅನುಕೂಲವಾಗುವ ಬೇಡಿಕೆಗಳಿವೆ. ಆದರೆ ನಾಮಕಾವಸ್ಥೆಗೆ ಮಾತ್ರ ಇದ್ದು ಬಸಿರು ಕಟ್ಟಿಸಿಕೊಂಡು ಕಾಗದದ ಮೇಲೆ ಉಳಿದ ಬೇಡಿಕೆಗಳೇ ಬಹಳ. ಬಹಳಷ್ಟು ಬೇಡಿಕೆಗಳು ಚಾಲನೆಯಿಲ್ಲದೆ ಕಾಗದದ ಮೇಲೆ ಮಾತ್ರ ಉಳಿದಿರುವುದರಿಂದ ಬರೀ ಭರವಸೆ ಹುಟ್ಟಿಸುವ ಎಲ್ಲ ಜಾತಿ ಮತ್ತು ವರ್ಗದ ಜನರನ್ನು ತಮ್ಮ ಸಂಘಟನೆಯೊಳಕ್ಕೆ ಆಹ್ವಾನ ಮಾಡುವ ತಂತ್ರ ಇದಾಗಿರಬಹುದಾ ಅನ್ನುವ ಅನುಮಾನ ಬರುತ್ತದೆ. ಯಾಕೆಂದರೆ ಕಾಗದದಲ್ಲಿ ಮಾತ್ರ ಉಳಿದ ಬೇಡಿಕೆಗಳಲ್ಲಿ ಪ್ರಮುಖವಾಗಿ ಕೃಷಿಕಾರ್ಮಿಕರ ಬೇಡಿಕೆಗಳು ಅಕ್ಟೋಬರ್ 17, 1980ರಂದು ರಾಜ್ಯಸರ್ಕಾರದ ಮುಂದಿಟ್ಟ ಒತ್ತಾಯದ ಪಟ್ಟಿಯನ್ನು ನೋಡಿದಾಗ ಈ ಕೆಳಕಂಡವು ಕೃಷಿಕಾರ್ಮಿಕರಿಗೆ ಸಂಬಂಧ ಪಟ್ಟ ಬೇಡಿಕೆಗಳು. ಇವು ಜೀವ ಕಳೆದುಕೊಂಡು ಕಡೆಗಣಿಸಲ್ಪಟ್ಟ ಬೇಡಿಕೆಗಳು ಎನ್ನುವುದು ಮನದಟ್ಟಾಗುತ್ತದೆ.

"ರೈತ ಕಾರ್ಮಿಕರಿಗೂ ಕೈಗಾರಿಕಾ ಕಾರ್ಮಿಕರಿಗೆ ದೊರೆಯುತ್ತಿರುವಂತೆ ಕೂಲಿ ಹಾಗೂ ಇತರ ಎಲ್ಲ ಸೌಲಭ್ಯಗಳು ದೊರೆಯಬೇಕು. ನ್ಯಾಯಬದ್ದವಾದ ಬೆಲೆನೀತಿ ರೂಪಿಸುವ ಜೊತೆಗೆ ನ್ಯಾಯಬದ್ದ ವೇತನ ನೀತಿಯನ್ನು ಕೃಷಿಕಾರ್ಮಿಕರಿಗೆ ರೂಪಿಸಬೇಕು"

ಈ ಬೇಡಿಕೆ ಸರ್ಕಾರದ ಮುಂದೆ ಇಡುವ ಬೇಡಿಕೆಯಲ್ಲಿ ಭೂಮಿ ಹೊಂದಿರುವ ಕೂಲಿಯನ್ನು ನೇಮಿಸಿಕೊಳ್ಳುವ ಎಲ್ಲರ ಮುಂದೆ ಇಡುವ ಬೇಡಿಕೆ ಹಾಗೂ ರೈತ ಸಂಘ ತನ್ನ ಸದಸ್ಯರಿಗೆ ಕಟ್ಟುನಿಟ್ಟಾಗಿ ಕೂಲಿ ಕೊಡುವಂತೆ ಒತ್ತಾಯಿಸಬೇಕಾದಂತಹದು. ರೈತಸಂಘ ಕೂಲಿ ಜಾಸ್ತಿ ಮಾಡುವುದು ಹೋಗಲಿ ಕೂಲಿಯ ದರವನ್ನು ಪರೋಕ್ಷವಾಗಿ ಇಳಿಸಿರುವ ಬಗೆಯನ್ನು ಪಾಲಳ್ಳಿ ರೈತ ಸಂಘದ ಮೂಲಕ ನೋಡಬಹುದು. ಉದಾಹರಣೆಗೆ 1 ಎಕರೆ ಭತ್ತಬೆಳೆಯಲು ತಗಲುವ ಖರ್ಚು ಜಾಸ್ತಿಯಾಗುತ್ತಿದೆ. ಈ ವೆಚ್ಚ ಮುಖ್ಯವಾಗಿ ಗೊಬ್ಬರ, ರಾಸಾಯನಿಕ ಗೊಬ್ಬರ, ಬೀಜ, ಔಷಧ, ವ್ಯವಸಾಯೋಪಕರಣಗಳು, ಕೂಲಿ ಈ ಅಂಶಗಳ ಬಗೆ ಆಗಿರುತ್ತದೆ. ಬೇರೆ ಯಾವುದೇ ಅಂಶದಲ್ಲೂ ಬೆಲೆ ಇಳಿಸಲು ಅಸಮರ್ಥವಾದ ರೈತ ಸಂಘ ಸುಲಭವಾಗಿ ತಮ್ಮ ಅಧೀನಕ್ಕೊಳಪಟ್ಟಿರುವ ಹರಿಜನ ಹಾಗೂ ಮುಸ್ಲಿಂ ಮುಂತಾದ ಕೋಮುಗಳ ಕೃಷಿ ಕಾರ್ಮಿಕರ ಕೂಲಿಯನ್ನು ಕಡಿಮೆ ಮಾಡುವುದರ ಮೂಲಕ ಭತ್ತ ಬೆಳೆಯಲು ತನಗೆ ತಗಲುತ್ತಿದ್ದ ವೆಚ್ಚವನ್ನು ಕಡಿತಗೊಳಿಸುವ ಯೋಚನೆ ಮಾಡಿ ಹಿಂದೆ ಒಂದು ಎಕರೆ ಭತ್ತದ ಗದ್ದೆಯಲ್ಲಿ ನಾಟಿ ಹಾಕಲು 12 ಆಳುಗಳು ಬೇಕಿದ್ದರೆ, ಅಷ್ಟು ಆಳುಗಳು ಬೇಕಿಲ್ಲ ಎಂದು ಹತ್ತು ಆಳುಗಳಿಗೆ ಇಳಿಸಿತು. 12 ಆಳುಗಳ ಬದಲಾಗಿ 10 ಆಳುಗಳ ಕೂಲಿಯನ್ನು ಕೊಡುತ್ತಾರೆ. ಇದಷ್ಟೆ ಅಲ್ಲದೆ ಇತರ ಭಾಗಗಳಲ್ಲೂ ಇಂತಹ ಬದಲಾವಣೆಯಾಗಿವೆ. ಹರಿಜನರೊಬ್ಬರು 'ರೈತ ಸಂಘ ಬಂದ ಮೇಲೆ ನಮಗೆ ಆಗಿರುವ ಅನುಕೂಲ ಎಂದರೆ ಕೂಲಿ ಕಡಿಮೆ ಮಾಡಿ ನಾವು ತಿನ್ನುವ ಹಿಟ್ಟು ಅನ್ನದ ಬೆಲೆ ಜಾಸ್ತಿ ಮಾಡಿದ್ದು' ಎಂದು ವ್ಯಂಗ್ಯವಾಗಿ ನುಡಿದಾಗ ಅದರ ಹಿಂದಿರುವ ಸತ್ಯದ ಅಂಶ ಅವರ ಹಸಿವಿನ ಬವಣೆ ಹೆಚ್ಚಿರುವುದರ ಬಗ್ಗೆ ಅರಿವಾಯಿತು.

ರೈತಸಂಘದ 13 ನೇ ಬೇಡಿಕೆ ನೋಡಿ :—
'ಭೂಮಿಯ ಮೇಲಿನ ಒತ್ತಡ ತಪ್ಪಿಸಲು ಕೃಷಿಯೋಗ್ಯ ಸರ್ಕಾರಿ ಭೂಮಿಯನ್ನು ಭೂಹೀನ ಕೃಷಿ ಕಾರ್ಮಿಕರಿಗೆ ಕೊಟ್ಟು ಅವರು ಸರ್ಕಾರದ ಆಶ್ರಯದಲ್ಲೇ ಸಾಗುವಳಿ ಮಾಡುವಂತೆ ಏರ್ಪಾಡಾಗಬೇಕು. ಬೇಸಾಯ ಕೂಲಿಗಾರರಿಗೆ ಉಚಿತ ಮನೆ, ಉಚಿತ ಶಿಕ್ಷಣ, ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದಲ್ಲದೆ ಅವರಿಗಾಗಿ ಹಳ್ಳಿಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಮತ್ತು ಉದ್ಯಮಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿಸಬೇಕು.

ಕರ್ನಾಟಕದಲ್ಲಿ ಸರ್ಕಾರದ ಬಹುಪಾಲು ಭೂಮಿ ಪ್ರಬಲ ಕೋಮುಗಳಾದ ಒಕ್ಕಲಿಗರು ಹಾಗೂ ಲಿಂಗಾಯಿತರ ವಶಕ್ಕೆ ಹೋಗಿದೆ. ಹರಿಜನರಿಗೆ ಹಂಚಿದ ಭೂಮಿನ್ನು ಕೂಡ ಇವರು ಅತಿ ಕಡಿಮೆ ಬೆಲೆಗೆ ಕೊಂಡುಕೊಂಡು ತಮ್ಮ ಸ್ವಾದೀನಕ್ಕೆ ತೆಗೆದುಕೊಂಡಿದ್ದಾರೆ. ಒಬ್ಬೊಬ್ಬರೇ 15–20 ಕುಟುಂಬಗಳಿಗೆ ಹಂಚಿಕೆಯಾಗಿದ್ದ ಹರಿಜನರ ಜಮೀನುಗಳನ್ನು ಲಪಟಾಯಿಸಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಹೆಗ್ಗೂರಿನಲ್ಲಿ 21 ಹರಿಜನರಿಗೆ ಹಂಚಿಕೆಯಾಗಿದ್ದ ದರಖಾಸ್ತು ಜಮೀನನ್ನು ಅಂಕನಹಳ್ಳಿ ಬೋರೇಗೌಡ ಅನ್ನುವ ಒಬ್ಬನೆ ಆಸಾಮಿ ಲಪಟಾಯಿಸಿಕೊಂಡಿದ್ದಾನೆ. (ಪಂಚಮ-ಸೆ-20 ನೋಡಿ.)

ಹರಿಜನರಿಗೆ ಹಂಚಿದ್ದ ಬಗರ್‌ಹುಕುಂ ಜಮೀನನ್ನು ಒಕ್ಕಲಿಗರು ವಶಪಡಿಸಿಕೊಂಡಿದ್ದರ ಬಗ್ಗೆ 'ದಾರಿದೀಪ' ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಸಂಪಾದಕ ಪುಟ್ಟರಾಮು ಅವರ ಮೇಲೆ ನಡೆದ ಹಲ್ಲೆ ಇನ್ನೂ ಜೀವಂತವಾಗಿದೆ.

ತರಿಕಲ್ ರಂಗಯ್ಯನಕೊಪ್ಪಲು, ಹೊಸವಾರಂಚಿ, ಬಲ್ಲೇನಹಳ್ಳಿ, ದಾಸನಪುರ ಮತ್ತು ಇತರ ಕಡೆಗಳಲ್ಲಿ ಜಮೀನುಗಳನ್ನು ಜಮೀನ್ದಾರರು ಕಬಳಿಸಿ ನಿರ್ಗತಿಕರನ್ನಾಗಿಸಿದ್ದಾರೆ. ತರಿಕಲ್ ರಂಗಯ್ಯನ ಕೊಪ್ಪಲಿನಲ್ಲಿ ಕಡ್ಲೆಪುರಿ ಕೊಡಿಸಿ, ಹೆಂಡ ಕುಡಿಸಿ, ಬೆದರಿಕೆ ಹಾಕಿ 33 ಕುಟುಂಬಗಳಿಂದ ಸರ್ವೆ ನಂ. 1 ಮತ್ತು 43ರಲ್ಲಿ ಜಮೀನನ್ನು ನುಂಗಿಹಾಕಿರುವುದರ ಬಗ್ಗೆ 20–9–82ರಂದು ಹುಣಸೂರಿನಲ್ಲಿ ದಲಿತ ಸಂಘರ್ಷ ಸಮಿತಿಯವರು ಪ್ರತಿಭಟನಾ ಮೆರವಣಿಗೆ ಮಾಡಿದ್ದನ್ನು ನೆನೆಸಿಕೊಳ್ಳಬಹುದು. ಹೀಗೆ ಹರಿಜನ–ಗಿರಿಜನರಿಂದ ಭೂಮಾಲೀಕರು–ಭೂಮಿ ಕಸಿದುಕೊಂಡಿರುವ ಘಟನೆಗಳು ಕರ್ನಾಟಕದಲ್ಲಿ ಹೇರಳವಾಗಿವೆ.

THE KARNATAKA SCHEDULED CASTE AND SCHDULED TRIBES (PROHIBITION OF CERTAIN LANDS) ACT 1978 ರ ಪ್ರಕಾರ ಪರಭಾರೆಯಾದ ಜಮೀನನ್ನು ವಾಪಸ್ಸು ಪಡೆಯುವ ಹಕ್ಕಿದೆ. ಇಂತಹ ಸಂದರ್ಭದಲ್ಲಿ ಭೂಮಾಲೀಕರು ಹೈಕೋರ್ಟಿನಿಂದ 'ತಡೆಯಾಜ್ಞೆ' ತಂದು ತಾವೆ ಅನುಭವಿಸುತ್ತಿದ್ದರು. ಹಲವಾರು ವರ್ಷಗಳು ದಲಿತರು ಹೋರಾಟ ಧರಣಿ ಮುಷ್ಕರಗಳನ್ನು ಮಾಡಿದ ಪರಿಣಾಮವಾಗಿ ಹೈಕೋರ್ಟು, ಸರ್ಕಾರ ಹರಿಜನ

ಗಿರಿಜನರಿಗಾಗಿ ಹಂಚಿರುವ ಜಮೀನನ್ನು ವಾಪಸ್ಸು ಬಿಡುವಂತೆ ತೀರ್ಮಾನ ಕೊಟ್ಟಿತು. ಇದರ ಬಗ್ಗೆ ರೈತಸಂಘದ ನಾಯಕರ ಹೇಳಿಕೆ ನಿಜಕ್ಕೂ ಆಶ್ಚರ್ಯ ಹುಟ್ಟಿಸುತ್ತದೆ. ತಮ್ಮ 13ನೇ ಬೇಡಿಕೆಯಲ್ಲಿ ಕೃಷಿ ಕಾರ್ಮಿಕರಿಗೆ ಸರ್ಕಾರಿ ಜಮೀನು ಹಂಚಿಕೆಯಾಗಬೇಕೆಂದು ಹೇಳಿಕೊಂಡಿದ್ದರೂ 17.10.82 ರಂದು ಬೆಂಗಳೂರಿನಲ್ಲಿ ರೈತ ಚಳುವಳಿಯ ಬಗ್ಗೆ ಸಮಾಜವಾದಿ ಅಧ್ಯಯನ ಕೇಂದ್ರ ಏರ್ಪಡಿಸಿದ್ದ ಚರ್ಚೆಯಲ್ಲಿ ಪ್ರೊ॥ ಎಂ. ಡಿ. ನಂಜುಂಡಸ್ವಾಮಿಯವರು ಈ ಬಗ್ಗೆ ಕಾನೂನು ಪ್ರಕಾರ ನಡೆದುಕೊಳ್ಳುತ್ತೇವೆ. ಹೈಕೋರ್ಟು ಇಲ್ಲದಿದ್ದರೆ ಸುಪ್ರೀಂ ಕೋರ್ಟು ಇದ್ದೇ ಇದೆ. ಅಲ್ಲಿಂದ ತಡೆಯಾಜ್ಞೆ ತರಬಹುದು ಎಂದ ಮಾತು ಅವರಿಟ್ಟ ಬೇಡಿಕೆಗಳ ವಿರುದ್ಧವಾದದ್ದು ಒಂದು ದುರಂತ. ಇದೇ ವೇದಿಕೆಯ ಮೇಲೆ ಕೆ. ರಾಮಯ್ಯ ದೇವನಹಳ್ಳಿಯಲ್ಲಿ ಹರಿಜನರಿಗೆ ಹಂಚಿಕೆಯಾಗಬೇಕಿದ್ದ ಜಮೀನು ಹಂಚಿಕೆಯಾಗದಂತೆ ಅಲ್ಲಿನ ರೈತರು ತಡೆಗಟ್ಟಿದರು ಅಂದ ಉದಾಹರಣೆಯನ್ನು ನೋಡಿದರೆ ಇವರ ಧೋರಣೆ ಇನ್ನು ಸ್ಪಷ್ಟವಾಗುತ್ತದೆ.

ಇನ್ನು ಪಾಲಳ್ಳಿಯ ವಿಷಯಕ್ಕೆ ಬಂದರೆ ನಾಲೆಯ ಅಂಚಿನಲ್ಲಿದ್ದ ಎಲ್ಲ ಸರ್ಕಾರಿ ಜಮೀನನ್ನು ಭೂಮಿಯಿರುವ ಭೂಮಾಲೀಕರೇ ಒತ್ತುವರಿ ಮಾಡಿಕೊಂಡು ಎಲ್ಲವನ್ನು ತಮ್ಮ ಖಾತೆಗೆ ಮಾಡಿಕೊಂಡಿದ್ದಾರೆ. ಭೂಮಿ ಇಲ್ಲದ ಕೃಷಿ ಕಾರ್ಮಿಕರಿಗೆ ಭೂಮಿ ಸಿಕ್ಕಬೇಕು ಅಂತ ಬೇಡಿಕೆಯಿಟ್ಟು ಭೂಮಾಲೀಕರು ಸರ್ಕಾರಿ ಜಮೀನನ್ನು ಲಪಟಾಯಿಸುವುದಕ್ಕೆ ಅವಕಾಶ ಕೊಟ್ಟು ಕೆಲವು ಕಡೆ ಇವರಿಗೆ ಕುಮ್ಮಕ್ಕು ಕೊಟ್ಟಿರುವುದು ರೈತಸಂಘದ ಕೃಷಿ ಕಾರ್ಮಿಕ ವಿರೋದಿ ನೀತಿಯನ್ನು ತೋರಿಸುತ್ತದೆ.

ಸಾಲ ಹಾಗೂ ಬೆಲೆ ಏರಿಕೆಯ ವಿಷವೃತ್ತದಲ್ಲಿ ಸಿಲುಕಿಕೊಂಡಿರುವ ದಲಿತರು

ಇನ್ನೂ ಜೀವಂತ ಬೇಡಿಕೆಗಳನ್ನು ನೋಡುವುದಾದರೆ ಇಲ್ಲಿ ಎರಡು ಪ್ರಮುಖ ಬೇಡಿಕೆಗಳು ಚಾಲನೆಯಲ್ಲವೆ. 1. ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಪಡೆದುಕೊಂಡಿರುವ ಸಾಲ ಪೂರ್ತಿ ಮನ್ನ ಮಾಡಬೇಕು. 2. ರೈತರು ಬೆಳೆದ ಬೆಳೆಗೆ ಹೆಚ್ಚಿನ ಬೆಲೆ ನಿಗದಿ ಮಾಡಬೇಕು. ರೈತರ ಬೇಡಿಕೆಯ ಪಟ್ಟಿಯಲ್ಲಿ 2ನೇ ಹಾಗೂ 6ನೇ ಕ್ರಮಸಂಖ್ಯೆಯಲ್ಲಿರುವ ಈ ಬೇಡಿಕೆಗಳಲ್ಲಿ ಮೊದಲನೆಯದಾಗಿ ಸಾಲದ ಮನ್ನ ಬಗ್ಗೆ ನೋಡೋಣ. ರೈತಸಂಘ ಹೇಳುವಂತೆ 'ಲೆವಿಯಿಂದಾಗಿ 1967ರಿಂದ 1980 ರವರೆವಿಗೆ ಪೇಟೆಧಾರಣೆಗಿಂತ 30 ಕಡಿಮೆಗೆ ಕೊಂಡು ಸರ್ಕಾರ 450 ಕೋಟಿ ರೂ. ಲೂಟಿ ಮಾಡಿದೆ. ಜೊತೆಗೆ ಪೇಟೆಧಾರಣೆ ವ್ಯತ್ಯಾಸ ಮಾಡುವುದರ ಮೂಲಕ 3000 ದಿಂದ 4000 ಕೋಟಿ ರೂ.ಗಳನ್ನು ಸಂತೆಪೇಟೆಯವರ ಜೊತೆಗೆ ಪಾಮಿಲಾಗಿ ಕಬಳಿಸಿದೆ. ಈ ದರೋಡೆಯನ್ನು ಹೋಲಿಸಿದಾಗ ರೈತರು ವಾಪಸ್ಸು ಕೊಡಬೇಕಾಗಿರುವ 100 ಕೋಟಿ ರೂ. ಹೆಚ್ಚೇನಲ್ಲ. ಹಾಗೆ ನೋಡಿದರೆ ಸರ್ಕಾರವೆ ರೈತನಿಗೆ ಸಾಲಗಾರನಾಗಿದೆ. ಆದ್ದರಿಂದ ಈ ಸಾಲವೆಲ್ಲ ರದ್ದಾಗಬೇಕು' ಅನ್ನುವ ವಾದವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ಷ್ಮವಾಗಿ ಸಾಲದ ಸುತ್ತ ಹೆಣಿಕೆಯಾಗಿರುವ ಜೀವ ಹಿಂಡುವ ಕುಣಿಕೆಗಳನ್ನು ಬಿಡಿಸಿ ನೋಡಬೇಕಾಗಿದೆ.

ಪಾಲಳ್ಳಿಯ ವ್ಯವಸಾಯ ಸಹಕಾರಿ ಬ್ಯಾಂಕಿನಿಂದ 9 ಲಕ್ಷ ರೂ.ಗಳ ಸಾಲ ಬರಬೇಕಾಗಿದೆ. ಈ ಸಾಲವನ್ನು ಕಬ್ಬು ಮತ್ತು ಭತ್ತ ಬೆಳೆಯುವ ರೈತರಿಗೆ ಕೊಡಲಾಗಿದೆ. ಜಮೀನು ಹೊಂದಿ ಸಾಲ ತೆಗೆದುಕೊಂಡಿರುವ ರೈತನನ್ನು ಪ್ರಶ್ನಿಸಿದಾಗ ಈ ಸಾಲವನ್ನು ಇವರು ಬಳಸುವ ಹಲವು ವಿಧಗಳು ಹೀಗಿವೆ. ಗೊಬ್ಬರ, ಬೀಜ, ಕೂಲಿ ಮುಂತಾದುವುಗಳಿಗೆ ಕೂಲಿಯವರು ಸಿಕ್ಕದಿದ್ದರೆ ಏನು ಮಾಡುತ್ತೀರಿ ? ಎನ್ನುವ ಪ್ರಶ್ನೆಗೆ ವ್ಯವಸಾಯ ಕೂಲಿಗಳಾದ ಹರಿಜನರು ಮತ್ತು ಮುಸ್ಲಿಮರಿಗೆ ಮುಂಗಡವಾಗಿ ಸಾಲ ಕೊಟ್ಟು ಆಯಾ ಸಮಯದಲ್ಲಿ ನಮ್ಮ ಹೊಲಗದ್ದೆಗಳಲ್ಲಿಯೇ ದುಡಿಯುವಂತೆ ಮಾಡುತ್ತಿವೆ. ಅಂದರೆ ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲದ ಬಹುಪಾಲು ಕೃಷಿ ಕಾರ್ಮಿಕರಿಗೆ ಬಡ್ಡಿಯ ರೂಪದಲ್ಲಿ ಕೊಡಲಾಗುತ್ತದೆ. ಇದಕ್ಕೆ ಉದಾಹರಣೆಗಳನ್ನು ನೋಡಿ.

1. 26 ವರ್ಷದ ಯುವಕ ಹರಿಜನ ಮರಿಯಯ್ಯ ಹೆಂಡತಿಯ ಹೆರಿಗೆ ಸಮಯಕ್ಕೆಂದು ರೈತರೊಬ್ಬರಿಂಧ 2 ಸಾವಿರ ರೂಪಾಯಿ ಸಾಲ ಪಡೆದ. ಇದಕ್ಕೆ ಬಡ್ಡಿಯಾಗಿ ಅವನು ಅವರಲ್ಲಿಗೆ ಕೂಲಿಗೆ ಹೋಗಬೇಕು. ಇತರರು 5 ರೂ. ಕೂಲಿ ಕೊಟ್ಟರೆ ಇವರು ದಿನಕ್ಕೆ 4ರಂತೆ ಲೆಕ್ಕ ಹಾಕಿಕೊಳ್ಳುತ್ತಾರೆ. ಇವರು ಬೇರೆಲ್ಲಿಯೂ ಕೂಲಿ ಮಾಡುವಂತಿಲ್ಲ.

2. 30 ವರ್ಷದ ಹರಿಜನ ಮುದ್ದಯ್ಯನದು ಇದೆ ಕತೆ. ಮದುವೆಗೆ ಮತ್ತು ಕಾಯಿಲೆ ಬಿದ್ದಾಗ ಗೌಡರಿಂದ 800 ರೂ. ಸಾಲ ತಂದ. ಇದಕ್ಕೆ ಬಡ್ಡಿಯಾಗಿ ಗದ್ದೆ ಕೆಲಸ ಹೆಚ್ಚಿಕೊಂಡಿರುವ ಜೂನ್‌ನಲ್ಲಿ ಒಂದು ತಿಂಗಳು ಜುಲೈನಲ್ಲಿ ಹದಿನೈದು ದಿನ ಅವರ ಮನೆಯಲ್ಲೇ ದುಡಿಯಬೇಕು. ಈ ಸಮಯದಲ್ಲಿ 5 ರೂ. ಬದಲಿಗೆ 4 ರೂ. ಕೂಲಿ ಕೊಡುತ್ತಾರೆ.

3. ಮಹ್ಮದ್ ಘೋಷ್ ಅನ್ನುವವರದು 9 ಜನಗಳ ದೊಡ್ಡ ಕುಟುಂಬ. 2 ವರ್ಷಗಳ ಹಿಂದೆ 4 ಸಾವಿರ ರೂ. ಸಾಲ ಮಾಡಿದ್ದರು. ಇದು ತಂಗಿಯ ಮದುವೆಗೆಂದು ಮಾಡಿದ ಸಾಲ. ಈ ಸಾಲ ತೀರಿಸಲು ಅಣ್ಣ ತಮ್ಮಂದಿರು ಮೂವರು ಜೀತಕ್ಕಿದ್ದು ಅರ್ಧ ಸಾಲ ಚುಕ್ತ ಮಾಡಿದರು. ಬಾಕಿಯಿರುವ ಎರಡು ಸಾವಿರ ರೂ.ಗಳಿಗೆ ಹಣದ ರೂಪದಲ್ಲಿ ಬಡ್ಡಿ ಕಟ್ಟುತ್ತಿದ್ದಾರೆ. ಹೀಗೆ ಉದಾಹರಿಸುತ್ತಾ ಹೋದರೆ ನೂರಾರು ಮನೆಯವರು ಇಂತಹ ಹೊಸ ರೀತಿಯ ಜೀತಕ್ಕೆ ಸಿಲುಕಿದ್ದಾರೆ. ಕುಯ್ಲು, ನಾಟಿ ಮುಂತಾದ ಸಮಯಗಳಲ್ಲಿ ಧಾನ್ಯ ಅಥವಾ ಹೆಚ್ಚಿನ ಕೂಲಿಗೆ ದುಡಿಯುವ ಸಾಧ್ಯತೆ ಇರುತ್ತದೆ. ಆದರೆ ಸಾಲಕ್ಕೆ ಇವರು ಬಲಿಯಾಗಿರುವುದರಿಂದ ಕಡಿಮೆ ಕೂಲಿಗೆ ಅವರಲ್ಲಿಗೆ ನೇರ ಹೋಗಿ ದುಡಿಯುವುದು ಮರುಕಳಿಸುತ್ತಿರುವ ಜೀತದ ಹೊಸ ವಿಧಾನವಾಗಿದೆ.

ಸರ್ಕಾರಕ್ಕೆ ತಮ್ಮ ಸಾಲ ಮನ್ನಾ ಮಾಡಿ ಎಂದು ರೈತರು ಕೇಳುತ್ತಿರುವುದರಲ್ಲಿ ಸಕಾರಣಗಳಿವೆ. ಆದರೆ ಅದೇ ಸಾಲ ಕೃಷಿ ಕಾರ್ಮಿಕರ ಶೋಷಣೆಗೆ ಬಳಕೆಯಾಗುತ್ತಿದ್ದು, ಸರ್ಕಾರ ರೈತರ ಸಾಲ ಮನ್ನಾ ಮಾಡಿದರೂ ಅವರು ಕೃಷಿ ಕಾರ್ಮಿಕರಿಗೆ ತಾವು ಕೊಟ್ಟ ಸಾಲವನ್ನು ಮನ್ನಾ ಮಾಡುತ್ತಾರೆಯೆ ? ಎನ್ನುವ ಪ್ರಶ್ನೆಗೆ ಇಲ್ಲಿ ಉತ್ತರ ಹೇಳುವ ಆಗತ್ಯವಿಲ್ಲ. ಹರಿಜನರ ಪ್ರಕಾರ "ಅಸಲು ಮಾಫ್ ಮಾಡುವುದು ಹೋಗಲಿ ಧರ್ಮದ ಬಡ್ಡಿಗೆ ಒಪ್ಪಿದರೆ ಹೇಳ್ತೀವಿ" ಎನ್ನುತ್ತಾರೆ. ಕೃಷಿಕಾರ್ಮಿಕರು ತಾವು ತೆಗೆದುಕೊಂಡ ಸಾಲಕ್ಕೆ ಜೀತದ ಚೀಪ್ ರೇಟ್ ದುಡಿಮೆಯಷ್ಟೆ ಅಲ್ಲ ಬಹಳ ಅನ್ಯಾಯದ ಬಡ್ಡಿ ತೆರಬೇಕು. ತಿಂಗಳಿಗೆ 100ರೂ.ಗೆ 15 ರೂ. ಬಡ್ಡಿ ಅಂದರೆ ವರ್ಷಕ್ಕೆ ಶೇಕಡಾ 180 ರೂ. ಬಡ್ಡಿಯ ದರವನ್ನು ತೆರಬೇಕಾಗುತ್ತದೆ. ಊಹೆಗೂ ನಿಲುಕದ ಈ ಬಡ್ಡಿದರದಲ್ಲಿ ಉಸಿರು ಸಿಕ್ಕಿಕೊಳ್ಳುತ್ತಿರುವ ಹರಿಜನರು ಮತ್ತು ಮುಸ್ಲಿಮರು ಪ್ರತಿ ಉಚ್ಛಾಸ ನಿಶ್ವಾಸಕ್ಕೂ ವಿಪರೀತ ಸಂಕಟ ಅನುಭವಿಸಬೇಕಾಗಿದೆ.

ಭೂಮಿ ಹೊಂದಿರುವ ರೈತರು ತಾವು ಪಡೆದ ಸಾಲವನ್ನು ಉತ್ಪಾದನಾ ವೆಚ್ಚವಾಗಿ ವ್ಯವಸಾಯ ಮತ್ತು ವ್ಯಾಪಾರದಲ್ಲಿ ಹಾಗೂ ಕಡಿಮೆ ಕೂಲಿಯ ಶ್ರಮಗಳಿಗೆ ತೊಡಗಿಸುತ್ತಾರೆ. ಆದರೆ ಕೃಷಿಕಾರ್ಮಿಕರು ಮಾಡಿದ ಯಾವುದೇ ಸಾಲ ಅನುತ್ಪಾದಕ ಕಂಗತಿಗಳಾದ ಮದುವೆ, ಕಾಯಿಲೆ ಮತ್ತು ತಿಥಿಗಳಿಗೆ ಆದ್ದರಿಂದ ತೀರಿಸಲಾಗದೆ ದಿನದಿನಕ್ಕೆ ಭೂಮಾಲೀಕರ ದಾಸನಾಗಿ ಅವರ ದೈನ್ಯತೆಯಲ್ಲಿ ಬದುಕುವ ವಿಷವೃತ್ತದಲ್ಲಿ ಸಿಲುಕಿ ಪ್ರತಿಭಟನೆಯ ಧ್ವನಿಯನ್ನು ಕಳೆದುಕೊಳ್ಳುತ್ತಾನೆ.

ಹೀಗೆ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿರುವ ರೈತಸಂಘ ಎಲ್ಲ ಸಮಸ್ಯೆಗಳತ್ತ ಎಷ್ಟು ಮಟ್ಟಿಗೆ ಕಣ್ಣು ತೆರೆದು ನೋಡಲು ಸಿದ್ಧವಾಗಿದೆ ಎನ್ನುವುದು ಸಮಸ್ಯೆಯಾಗಿಯೇ ಉಳಿಯುತ್ತದೆ.

ಕರ್ನಾಟಕದಲ್ಲಿ ಜೀತ

ಅಂಕಿ ಅಂಶ

ಕರ್ನಾಟಕದಲ್ಲಿ ಈಗ 1,93000 ಜೀತಗಾರರಿದ್ದಾರೆ. ಅಂದರೆ ಇಲ್ಲಿರುವ ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ ಇವರು ಶೇಕಡ 7.6ರಷ್ಟಾಗುತ್ತಾರೆ.

ಶೇಕಡ 91 ಮಂದಿ ಗಂಡಸು ಜೀತದಾಳುಗಳು ಶೇಕಡ 6 ಮಂದಿ ಹೆಣ್ಣು ಜೀತದಾಳುಗಳು. ಶೇಕಡ 25 ಜೀತದಾಳುಗಳು 20 ವರ್ಷದ ಒಳಗಿನವರು. ಶೇಕಡ 50 ಜೀತದಾಳುಗಳು 27 ವರ್ಷದ ಒಳಗಿನವರು.

ಜೀತಕ್ಕೆ ಬಂಧನವಾದ ಕುಟುಂಬಗಳು ಸದಾ ಜೀತದ ವಿಷವೃತ್ತದಲ್ಲಿ ನರಳಾಡುತ್ತಾರೆ. ಜೀತ ವಂಶ ಪಾರಂಪರ್ಯವಾಗಿ ಮುಂದುವರೆಯುತ್ತಾ ಹೋಗುತ್ತದೆ. ಉದಾಹರಣೆಗೆ ಈಗಾಗಲೇ ಜೀತಕ್ಕಿರುವ ಶೇಕಡ 48 ಕುಟುಂಬಗಳು ತಮ್ಮ ಕುಟುಂಬದ ಒಬ್ಬನನ್ನು, ಶೇಕಡ 25 ಕುಟುಂಬಗಳು ಇಬ್ಬರನ್ನು ಶೇಕಡ 8.4 ಕುಟುಂಬಗಳು ನಾಲ್ವರನ್ನು ತಮ್ಮ ಕುಟುಂಬದಿಂದ ಜೀತಕ್ಕೆ ಕಳಿಸುತ್ತವೆ.

ಶೇಕಡ 32.1 ಜೀತಗಾರರು 5ರಿಂದ 10 ವರ್ಷಗಳವರೆಗೆ ಜೀತ ಮಾಡಿದ್ದಾರೆ. ಶೇಕಡ 13.6 ಮಂದಿ 15 ವರ್ಷಗಳವರೆಗೂ ಜೀತಗಾರರಾಗಿ ಕೆಲಸ ಮಾಡಿದ್ದಾರೆ.

ಶೇಕಡ 40 ಮಂದಿ ಜೀತಗಾರರು ಅವರ ಅಪ್ಪ ಮಾಡಿದ ಸಾಲಕ್ಕೆ, ಅಪ್ಪನ ಬಲವಂತಕ್ಕೆ ಜೀತ ಸೇರಿದ್ದಾರೆ. ಸ್ವಇಚ್ಛೆಯಿಂದ ಸೇರಿರುವುದು ಶೇಕಡ 28 ಮಂದಿ ಮಾತ್ರ.

ಶೇಕಡ 66 ಮಂದಿ ಹಸಿವಿನಿಂದ ಸಾಯುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸಾಲ ಮಾಡಿ ಜೀತಗಾರರಾಗಿದ್ದಾರೆ. ಶೇಕಡ 7.8 ಮಂದಿ ಹಬ್ಬಹರಿದಿನಗಳಿಗಾಗಿ ಸಾಲ ಮಾಡಿ ಜೀತಗಾರರಾಗಿದ್ದಾರೆ.

ಶೇಕಡ 48 ಮಂದಿ ಜೀತಗಾರರು ಭೂರಹಿತರು.

ಶೇಕಡ 41 ಮಂದಿ ಜೀತಗಾರರಿಗೆ ವಾಸ ಮಾಡಲು ಗುಡಿಸಲುಗಳಾಗಲಿ, ಮನೆಯಾಗಲಿ ಏನೂ ಇಲ್ಲ. ಇಷ್ಟೊಂದು ಹೆಚ್ಚಿನ ಸಂಖ್ಯೆಯ ನಿರ್ವಸಿತ ಜೀತಗಾರರು ಇನ್ನು ಯಾವ ರಾಜ್ಯದಲ್ಲೂ ಇಲ್ಲ.

ಜೀತಕ್ಕಿಟ್ಟುಕೊಳ್ಳುವ ಶೇ. 75.4 ಮಂದಿ ಭೂಮಾಲಿಕರು ಸವರ್ಣೀಯರು. ಶೇ 10.2 ಮಂದಿ ಭೂಮಾಲಿಕರು ಹರಿಜನ/ಗಿರಿಜನರು.

ಜೀತಕ್ಕಿರುವವರಲ್ಲಿ :	ಶೇಕಡಾವಾರು
ಹರಿಜನರು	64.7
ಗಿರಿಜನರು	9.6
ಹಿಂದುಳಿದವರು	2.4
ಸವರ್ಣೀಯರು	6.0
ಮುಸ್ಲಿಮರು	3.6

ಆಧಾರ : Bonded laboure in India by Sharma Marla-1981

ಇನ್ನು ಎರಡನೇ–ಮುಖ್ಯ ಬೇಡಿಕೆಯಾದ ಬೆಳೆದ ಬೆಳೆಗೆ ಬೆಲೆ ಜಾಸ್ತಿ ಮಾಡುವುದರ ಬಗ್ಗೆ ರೈತ ಸಂಘ ಈ ಕೆಳಕಂಡ ಕಾರಣಗಳನ್ನು ಕೊಡುತ್ತದೆ.

'ರೈತರ ಪ್ರತಿಯೊಂದು ಬೆಳೆಗೂ ಕೃಷಿ ಉತ್ಪಾದನಾ ವೆಚ್ಚವನ್ನು ಅನುಸರಿಸಿ ವೈಜ್ಞಾನಿಕವಾಗಿ ಕೈಗಾರಿಕೋದ್ಯಮಗಳಲ್ಲಿ ನಿಗದಿ ಮಾಡುವಂತೆ ಮಾನವ ತಾಸುಗಳ ಆಧಾರದ ಮೇಲೆ ಬೆಲೆ ನಿಗದಿ ಮಾಡಬೇಕು. ಇಂತಹ ಬೆಲೆನಿಗದಿ ಕೆಲಸ ಮಾಡುವಾಗ ಎರಡು ಕ್ಷೇತ್ರಗಳಲ್ಲಿ ಮಾನವ ತಾಸುಗಳ ಮೌಲ್ಯೀಕರಣ ಸಮಾನವಾಗಿರಬೇಕು ಮತ್ತು ಮಾರಾಟದ ಬೆಲೆ ನಿಗದಿ ಮಾಡುವಾಗ ಎರಡು ಕ್ಷೇತ್ರದ ವಸ್ತುಗಳಿಗೆ ಸಮಾನ ಲಾಭಾಂಶವನ್ನು ನಿಗದಿ ಮಾಡಬೇಕು'.

ಮೇಲುನೋಟಕ್ಕೆ ಇದು ಸೂಕ್ತವಾದ ಬೇಡಿಕೆಯಾಗಿ ಕಂಡರೂ ಮಾನವ ತಾಸುಗಳನ್ನು ಕೈಗಾರಿಕಾ ಕಾರ್ಮಿಕರ ತಾಸುಗಳಿಗೆ ಸಮಮಾಡಿದರೆ ಭಾರತದಲ್ಲಿ ಸಣ್ಣಪುಟ್ಟ ಹಿಡುವಳಿ ಇರುವ 60% ಕುಟುಂಬಗಳು ಎಷ್ಟು ಮಟ್ಟಿಗೆ ಈ ವೆಚ್ಚವನ್ನು ಭರಿಸಬಲ್ಲರು ಅನ್ನುವುದು ಪ್ರಶ್ನೆಯಾಗುತ್ತದೆ. (ಕೈಗಾರಿಕಾ ಕಾರ್ಮಿಕನಿಗೆ ಉದಾಹರಣೆಗೆ ದಿನಕ್ಕೆ 30 ರೂ ಕೂಲಿಯಾದರೆ ಕೃಷಿಕಾರ್ಮಿಕರಿಗೂ 30 ರೂ. ಕೊಡಬೇಕು). ಒಂದು ಎಕರೆ ಭತ್ತ ಬೆಳೆಯ ಲ್ಲಿ ಬೇಕಾಗುವ ಮಾನವತಾಸುಗಳು ದಿನದಲ್ಲಿ ಲೆಕ್ಕ ಹಾಕಿದರೆ ೨0 ದಿನಗಳು ಎಂದಿಟ್ಟುಕೊಳ್ಳೋಣ. ಇದರ ಆಧಾರದ ಮೇಲೆ ಭತ್ತದ ಬೆಲೆನಿಗದಿ ಮಾಡಿದಾಗ ವ್ಯವಸಾಯ ಕೂಲಿಯೊಳಗೆ ಹಾಗೂ ಬೆಳೆದ ಬೆಳೆಗೆ ಎರಡಕ್ಕೂ ಒಳ್ಳೆಯ ಬೆಲೆ ಸಿಗುತ್ತದೆ. ಆಗ ಉದಾಹರಣೆಗೆ ಭತ್ತಕ್ಕೆ ಕ್ವಿ.ಗೆ 500ರೂ.ಆಗುತ್ತದೆ, ಎಂದಿಟ್ಟುಕೊಳ್ಳೋಣ. ಸಣ್ಣಪುಟ್ಟ ಹಿಡುವಳಿಯಿರುವ ಶೇಕಡಾ 60 ವ್ಯವಸಾಯಗಾರರಿಗೆ ಇದರಿಂದ ಲಾಭವೂ ಆಗುವುದಿಲ್ಲ. ನಷ್ಟವೂ ಆಗುವುದಿಲ್ಲ. ಆದರೆ ಟ್ರಾಕ್ಟರ್ ಮುಂತಾದ ಯಂತ್ರೋಪಕರಣಗಳನ್ನು ಬಳಸಿ 30 ಶ್ರಮದ ದಿನಗಳಲ್ಲೇ ಒಂದು ಎಕರೆ ವ್ಯವಸಾಯ ಮಾಡುವಶ್ರೀಮಂತರೈತರಿಗೂ ಕ್ವಿಂಟಾಲ್ ಭತ್ತಕ್ಕೆ 500 ರೂ ಬೆಲೆಸಿಗುವುದರಿಂದ ಇದೊಂದು ದೊಡ್ಡ ದರೋಡೆಯಾಗುತ್ತದೆ. ಇವರ ಜೊತೆಗೆ ಪ್ರತಿಸ್ಪರ್ಧಿಸಲು ಸಾಧ್ಯವಿಲ್ಲದ ಸಣ್ಣರೈತರು ಕ್ರಮೇಣ ದಿವಾಳಿಯಾಗಿ ಕೃಷಿಕಾರ್ಮಿರಾಗುತ್ತಾರೆ. ಒಟ್ಟಿನಲ್ಲಿ ಈ ಬೇಡಿಕೆ ಶ್ರೀಮಂತರಿಗೆ ಅನುಕೂಲವಾಗುತ್ತದೆಯೇ ಹೊರತು ಕ್ವಿಂಟಾಲ್ ಭತ್ತದ ಬೆಲೆ 500 ರೂ. ಆದಾಗ 30ರೂ. ಕೂಲಿ ಸಿಕ್ಕಿದರೂ ಕಿಲೋಗೆ 12 ರೂ. ಅಕ್ಕಿಕೊಳ್ಳಲೇ ಬೇಕಾಗುವ ಕೃಷಿ ಕಾರ್ಮಿಕನಿಗಲ್ಲ. ಅವನು ಮತ್ತಷ್ಟು ಪಾತಾಳಕ್ಕೆ ತುಳಿಯಲ್ಪಟ್ಟಂತಾಗುತ್ತದೆ.

ಹಳ್ಳಿಯ ರೈತಾಪಿಗಳಲ್ಲಿ ಹಲವಾರು ಮಟ್ಟದ ಹಿಡುವಳಿಗೆ ಹಲವಾರು ವರ್ಗಗಳಿರುವ ಸತ್ಯವನ್ನು ಮರೆತು ಏಕರೂಪತೆಯ ಬೆಲೆಏರಿಕೆ ನೀತಿ ತಂದರೆ ಹೆಚ್ಚಿನ ಜನಸಂಖ್ಯೆಗೆ ಮಾರಕವಾಗುತ್ತದೆ ಅನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಉತ್ಪಾದನೆಯ ವೆಚ್ಚ ಹಾಗೂ ಬೆಳೆದ ಬೆಳೆಗೆ ದೊರಕುತ್ತಿರುವ ಬೆಲೆ ಎರಡನ್ನು ಹೋಲಿಸಿದಾಗ ಕೈಗಾರಿಕೋದ್ಯಮಿಗೆ ಸಿಗುವಷ್ಟು ಲಾಭ ಸಿಗುತ್ತಿಲ್ಲ ಅನ್ನುವುದು ನಿಜವಾದರೂ ಇದನ್ನು ಸರಿತೂಗಿಸಿಕೊಳ್ಳಲು ಬೇರೆ ರೀತಿಯಲ್ಲಿ ಯೋಚಿಸಬೇಕಾಗುತ್ತದೆ. ಇಲ್ಲದಿದ್ದರೆ ಆಹಾರೋತ್ಪಾದನೆಗಳನ್ನು ಕೊಳ್ಳುವ ಕೃಷಿಕಾರ್ಮಿಕರು ಹಾಗೂ ಸಣ್ಣರೈತರು ಬೆಲೆಏರಿಕೆಯ ಭಾರದಿಂದ ನೆಲಕ್ಕೆ ಕುಸಿಯುತ್ತಾರೆ. ಬೆಳೆಯುವವರಿಗೂ, ಕೊಳ್ಳುವವರಿಗೂ ನಡುವೆಯಿರುವ ದಲ್ಲಾಳಿ ವ್ಯಾಪಾರಗಾರರನ್ನು ತಪ್ಪಿಸುವ, ರಾಸಾಯನಿಕ ಗೊಬ್ಬರಗಳ ಬೆಲೆ ಇಳಿಸುವುದರ ಬಗ್ಗೆ ಹೋರಾಟ ಮಾಡಿದಾಗ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬೆಳೆದ ಬೆಳೆಗೆ ಸೂಕ್ತ ಬೆಲೆಸಿಕ್ಕಂತಾಗುತ್ತದೆ. ಬದಲಾಗಿ ಬೆಳೆದ ಬೆಳೆಯ ಬೆಲೆಯನ್ನು ಹೆಚ್ಚಿಸಿ ಕೂಲಿ ಕೊಟ್ಟರೆ ಅವರಿಗೆ ಆಗಬಹುದಾದ ಅನ್ಯಾಯ ಅಪಾರವಾದುದು. ಬೆಳೆದ ಬೆಳೆಗಳ ಬೆಲೆ ಜಾಸ್ತಿಯಾದರೂ ಕೂಲಿ ಮಾತ್ರ ಅಷ್ಟೇ ಇರುವ ಅಂಶ ಪಾಲಳ್ಳಿಯ ವ್ಯವಸಾಯ ಕೂಲಿಯವರಿಂದ ತಿಳಿಯಿತು. ಹೀಗಾಗಿ ಬೆಲೆ ಏರಿಕೆ ಕೊಳ್ಳುವವರ ಪಾಲಿಗೆ ಚೂರಿ ಇರಿತವಾಗುತ್ತದೆ ಅನ್ನುವುದನ್ನು ರೈತಸಂಘ ಯೋಚಿಸಬೇಕಾಗಿದೆ.

ಜೀತದ ಸರಪಳಿಯಲ್ಲಿ ಪಾಲಳ್ಳಿಯ ನರಸಯ್ಯ

'ದಲಿತರು ದುಡಿಯುವುದಕ್ಕಾಗಿಯೇ ಜನ್ಮ ತಳೆದವರು. ಮೇಲ್ಜಾತಿ ಹಣವಂತರ ಮನೆಯಲ್ಲಿ ದುಡಿದರೇ ಈ ಜನಕ್ಕೆ ಸ್ವರ್ಗ ಪ್ರಾಪ್ತಿ. ಇದು ಅವರ ಅಚಲ ನಂಬಿಕೆ. ಅದೆಂತಹ ದುಡಿತ ? ಒಂದು ದಿನದ್ದೆ ? ಎರಡು ದಿನದ್ದೆ ? 'ಇಲ್ಲಿ' ಹುಟ್ಟಿ ಉಸಿರಾಡಿದ ದಿನದಿಂದ ಉಸಿರು ಮಣ್ಣಾಗುವವರೆವಿಗೂ ತನ್ನೆಲ್ಲಾ ಸ್ವಾತಂತ್ರ್ಯಗಳನ್ನು ಒಡೆಯನ ಹಿಡಿತಕ್ಕಿಟ್ಟು ಗಾಣದೆತ್ತಿನಂತೆ ದುಡಿದು ಮೈಕರಗಿಸಿಕೊಳ್ಳುವ ದುಡಿತ. ಅದೇ ನಮ್ಮ ನಿಮ್ಮೆಲ್ಲರಿಗೂ ಪರಿಚಿತವಾದ ಜೀತ'. ಇದಕ್ಕೆ ದಕ್ಕುವ ಲಾಭವಾದರೂ ಏನು ? ಎರಡು ಹೊತ್ತಿನ ಕೂಳು (ಹಳಸಿದ್ದ ಹಿಟ್ಟು, ಕಲಗೊಚ್ಚಿನಂತಹ ಹೆಸರು) ವರ್ಷಕ್ಕೆರಡು ಜೋಗ ಮಾರ್ಕೆ ಅಂಗಿ, ಮಂಡಿ ಮಟ್ಟದ ಚಡ್ಡಿ. ತನ್ನ ಹೆಂಡತಿ ಮಕ್ಕಳು ಎನ್ನಿಸಿಕೊಂಡವರ ವರ್ಷಪೂರ್ತಿ ಸುಖಕ್ಕೆ ಐವತ್ತೋ, ಅರವತ್ತೋ ರೂಪಾಯಿಗಳು. ನೂರಕ್ಕೆ 99ರಷ್ಟು ಜೀತ ಮಾಡುತ್ತಿರುವವರು ಹರಿಜನರೇ ಆಗಿದ್ದಾರೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

'1975ರ ಜೀತ ವಿಮುಕ್ತಿ ಕಾಯ್ದೆ'ಯ ಅನ್ವಯ ಈಗ ಜೀತ ನಿರ್ಜೀವ. ಇದು ಸರ್ಕಾರದ ಘೋಷಣೆ ಆದರೆ ವಾಸ್ತವಿಕವಾಗಿ ಅದಿನ್ನೂ ಸಜೀವ. ಅಷ್ಟೆ ಅಲ್ಲ ಅದು ದಿನ ದಿನಕ್ಕೆ ಹೆಮ್ಮರವಾಗಿ ಬೆಳೆಯುತ್ತಾ ಹೊಸ ಹೊಸ ರೂಪ ಪಡೆದುಕೊಳ್ಳುತ್ತಿದೆ. ಸರ್ಕಾರದ ಈ ಕಾನೂನಿಂದ ಆದ ಲಾಭವೇನು ? ಕಾನೂನು ಪುಸ್ತಕದಲ್ಲೇ ಬೆಚ್ಚಗೆ ಉಳಿದದ್ದರಿಂದ ದಲಿತರ ಜೀತವನ್ನು ಮತ್ತಷ್ಟು ಜೀವಂತಗೊಳಿಸುತ್ತಿರುವುದರ ಒಂದು ಚಿಕ್ಕ ಉದಾಹರಣೆಯನ್ನು ನೋಡಿ.

ಶ್ರೀರಂಗಪಟ್ಟಣದ ಪಾಲಳ್ಳಿಯ ನರಸಯ್ಯ ತನ್ನ 15ನೇ ವರ್ಷದಿಂದಲೇ ಜೀತ ಪ್ರಾರಂಭಿಸಿದವನು. ಸುಮಾರು 60 ವರ್ಷದ ಗಡಿ ದಾಟುತ್ತಿರುವ ಈತನ ದೇಹ ಕೃಶವಾಗಿ ತಲೆ ಗಡ್ಡ ನೆರೆತುಕೊಂಡಿದ್ದರೂ ಆತನ ದುಡಿತ ಮಾತ್ರ ಯಾವುದೇ ಮುಪ್ಪನ್ನು ಕಂಡುಕೊಂಡಿಲ್ಲ. ಆತನನ್ನು ನಾವು ಇತ್ತೀಚೆಗೆ ಭೇಟಿ ಮಾಡಿದಾಗ ಆತ ತನ್ನ ಹಾಲಿ ಜೀತದ ವಿಷಯವನ್ನು ಧೈರ್ಯವಾಗಿ ಹೇಳಿಕೊಳ್ಳಲು ಹಿಂದೆ ಮುಂದೆನೋಡಿದ. ಕಾರಣ ಜೀತಭಯಕ್ಕಿಂತ ಜೀವ ಭಯವೇ ಅವನಲ್ಲಿ ಹೆಚ್ಚಾಗಿ ಅಡಗಿಕೊಂಡಿರುವುದು.



ನರಸಯ್ಯನ ಅಪ್ಪ ಅವನಿಗಾಗಿ ಬಿಟ್ಟು ಹೋದದ್ದು ಎಂದರೆ ಒಂದು ಹುಲ್ಲು ಗುಡಿಸಲು. ಒಕ್ಕಲಿಗ ರಾಜಣ್ಣನ ಮನೆಯ ಜೀತ. ಅಪ್ಪನ ಸಾಲದ ಬಾಬ್ತಿಗೆ. ಸುಮಾರು ನಾಲ್ಕು ವರ್ಷಗಳ ಕಾಲ ಜೀತ ಮಾಡಿದ. ನಂತರ ತನ್ನ ಮದುವೆಗೆಂದೇ ಸುಮಾರು 300 ರೂಪಾಯಿಗಳ ಸಾಲ ಪಡೆದ ನರಸಯ್ಯ ಇನ್ನೂ ಐದು ವರ್ಷಗಳು ರಾಜಣ್ಣನ ಮನೆಯಲ್ಲಿ ಜೀತ ಮಾಡಿದ.

ಸರ್ಕಾರ ಜಮೀನು ಕೊಡುತ್ತದೆ ಎಂದು ಅದರ ಲಂಚಕ್ಕಾಗಿ ಎರಡು ಸಾವಿರ ರೂಪಾಯಿಗಳನ್ನು ಸಾಲ ಮಾಡಿದ ನರಸಯ್ಯ ಲಂಚ ಕೊಟ್ಟು ದುಡ್ಡು ಕಳೆದುಕೊಂಡನೇ ವಿನಃ ಮಣ್ಣಿನ ವಾಸನೆಯು ಅವನ ಮೂಗಿಗೂ ಬಡಿಯಲಿಲ್ಲ. ಜೀತ ಮಾಡಿಯೇ ಸಾವಿರ ರೂಪಾಯಿಯನ್ನು ರಾಜಣ್ಣನಿಗೆ ತೀರಿಸಿದ. ಮದುವೆಗೆ ಬಂದ ಮಗಳ ಮದುವೆ ಮಾಡಬೇಕು. ರಾಜಣ್ಣನ ಮನೆಯಲ್ಲಿ ದುಡ್ಡು ದೊರಕಲಿಲ್ಲ. ಶ್ಯಾನುಭೋಗರ ಮನೆಯಲ್ಲಿ 2000 ಸಾಲ ಪಡೆದುಕೊಂಡ ಅದೇ ಹಣದಲ್ಲಿ ಒಂದು ಸಾವಿರ ರೂಪಾಯಿಯನ್ನು ರಾಜಣ್ಣನಿಗೆ ಕೊಟ್ಟು ಇನ್ನೊಂದು ಸಾವಿರ ರೂಪಾಯಿಯಲ್ಲಿ ಮಗಳ ಮದುವೆ ಮುಗಿಸಿದ. ಈ ಹಣದ ಬಾಬ್ತಿಗೆ ಶಾನುಭೋಗರ ಮನೆಯಲ್ಲಿ ಜೀತ ಪ್ರಾರಂಭಿಸಿದ ನರಸಯ್ಯ ಕೆಲಸವಿಲ್ಲದ ಅಳಿಯನನ್ನು ರಾಜಣ್ಣನ ಮನೆಗೆ ಸೇರಿಸಿದ. ಸಾವಿರ ರೂಪಾಯಿ ಪಡೆದುಕೊಂಡಿದ್ದ ಅಳಿಯ 6 ತಿಂಗಳ ನಂತರ ಜೀತದ ಹಿಂಸೆಗೆ ಹೆದರಿ ಪರಾರಿಯಾದ. ರಾಜಣ್ಣ ಸಾಲ ಹಿಂತಿರುಗಿಸುವಂತೆ ಒತ್ತಾಯಿಸಿದರು. ಅದಕ್ಕಾಗಿ ನರಸಯ್ಯ ತನ್ನ ಕೊನೆಯ ಮಗ ಎಂಟು ವರ್ಷದ ಚೆಲುವನನ್ನು ರಾಜಣ್ಣನ ಮನೆಯಲ್ಲಿ ಜೀತಕ್ಕಿಟ್ಟ. ನಾವು ನರಸಯ್ಯನ ಜೊತೆ ಮಾತನಾಡುತ್ತಿದ್ದಾಗಲೇ ಚೆಲುವ ಎಲ್ಲಿಂದಲೋ ಓಡಿಬಂದ. 'ಚೆಲುವ ನಿನಗೆ ಓದಬೇಕು ಅನ್ನೊಲ್ವಾ ?' ಎಂದು ಕೇಳಿದ್ದಕ್ಕೆ 'ಅನ್ಸುತ್ತೆ ಹಿಟ್‌ಗೇನ್ ಮಾಡದು ?' ಎಂದ ಅವನ ಪ್ರಶ್ನೆ ನಮ್ಮನ್ನು ತಬ್ಬಿಬ್ಬುಗೊಳಿಸಿತು. 'ಟೇಮ್ ಆಯ್ತು' ಎಂದು ರಾಜಣ್ಣನ ಮನೆಯತ್ತ ಓಡಿದ. ನರಸಯ್ಯ ಮಿಷನ್ ಸ್ವಾಮಪ್ಪನ ಮನೆಯಲ್ಲಿ ಈಗ ಜೀತ ಮಾಡುತ್ತಿದ್ದಾನೆ. ಅದಕ್ಕಾಗಿ ಅವನು ಪಡೆದಿರುವ ಹಣ ಸಾವಿರದೈನೂರು. ಅದರಲ್ಲಿ ಶ್ಯಾನುಭೋಗರಿಗೆ ಸಾವಿರ ರೂಪಾಯಿ ಕೊಟ್ಟು ಮಿಕ್ಕ ಐನೂರು ರೂಗೆ ಜೀತ ಮಾಡುತ್ತಿದ್ದಾನೆ. ನರಸಯ್ಯನನ್ನು ಜೀತಕ್ಕಿಟ್ಟುಕೊಂಡಿರುವವರು ಅವರ ಹೆಂಡತಿಯನ್ನು ಅಗತ್ಯಬಿದ್ದಾಗ ಬಿಟ್ಟಿಯಾಗಿ ದುಡಿಸಿಕೊಳ್ಳುತ್ತಾರೆ. ಇದು ಉಳ್ಳವರ ಶೋಷಣೆಯ ಸಂವಿಧಾನದ ಕಾನೂನು. ಒಬ್ಬರ ಹಣದಿಂದ ಮತ್ತೊಬ್ಬರ ಸಾಲ ತೀರಿಸುತ್ತಾ ಎರಡು ಹೊತ್ತಿನ ಕೂಳಿಗಾಗಿ ಮನೆಯಿಂದ ಮನೆಗೆ ಜೀತ ಮಾಡುತ್ತಲೇ ಹೋಗುತ್ತಿರುವ ನರಸಯ್ಯನನ್ನು—

"ಈಗ ಐದಾರು ವರ್ಷದ ಹಿಂದೆ ಸರ್ಕಾರದವರು ಜೀತ ಬಿಡಿಸಿದ್ರಲ್ಲಾ....ನೀವೇಕೆ ಜೀತ ಬಿಡಲಿಲ್ಲ ?" ಎಂದದ್ದಕ್ಕೆ ನರಸಯ್ಯ ಅಳುಕುತ್ತಾ–"ಶ್ಯಾನುಭೋಗರು ಹೇಳಿದ್ರೂ ಬುದ್ಧಿ ಹುಷಾರು ಯಾರು ಕೇಳ್ದ್ರೂವೆ ಜೀತಕ್ಕಿವ್ನಿ ಅನ್ನಬ್ಯಾಡ ಕೂಲಿ ಮಾಡ್ತಿದ್ದಿ ಅನ್ನು" ಅಂದ್ರು ಅದು ಬ್ಯಾರೆ ಜೀತ ಬುಟ್ರೆ ನಮ್ಗೆ ಇನ್ನೇನಿದ್ದದು ಗತಿ ? ಕಷ್ಟ ಬಂದೊತ್ನಲ್ಲಿ ಕೈಕಟ್ಟವ್ರಾರು ?"


'ಅಲ್ಲ ವಿಮುಕ್ತಿಯಾದವರಿಗೆ ಸರ್ಕಾರ ಪರಿಹಾರ ಕೊಡುತ್ತಿತ್ತಲ್ಲ !'

'ನೋಡಿ ಬುದ್ಧಿ ನಮ್ಮಲ್ಲಿ ಕೆಲವರು ಜೀತ ಬುಟ್ರು. ಅವರಿಗೆಲ್ಲ ಪರಿಹಾರ ಸಿಕ್ಕಿದ್ದದ್ದೆ ? ಬೀಡಿ ಸಾಹೇಬ್ರು ಆಪೀಸಿಗಲ್ದು ಕೆಲವರು ಹಂಗೇ ಸಾಯ್ತವ್ರೆ....ನಮ್ಗ ತಂಗ್ಲೊ ಗಿಂಗ್ಲೊ ಹಿಟ್ಟಾರು ಸಿಕ್ತಾ ಇದೆ, ಅವ್ರುಗ್ ಕಾಫಿ ಕೆಳ್ಳಪುರಿಯೇ ಗತಿ' ಎಂದು 'ಹೋಯ್ತಿನಿ ಬುದ್ಧಿ ಸ್ವಾಮಪ್ಪ ತಡ ಆದ್ರ ಬೈಯ್ತಾರ. ಈ ಇಸಯನ ಯಾರ್ಗೂ ಹೇಳ್ ಬ್ಯಾಡಿ ನಮ್ಗತಿ ಗನ್ಗತಿ ಆಗೋಯ್ತು' ಎಂದು ಕಣ್ಣಿಂದ ಇಳಿದ ನೀರನ್ನು ಒರೆಸಿಕೊಳ್ಳುತ್ತ ಹೊರಟ.

ಪ್ರಿಯ ಓದುಗರೇ ಗಮನಿಸಿ ಇದು ಒಂದು ಹಳ್ಳಿಯ ಒಬ್ಬ ನರಸಯ್ಯನ ಕತೆಯಲ್ಲ. ಅನೇಕ ಹಳ್ಳಿಗಳ ಅನೇಕ ನರಸಯ್ಯರ ಕತೆ. ನರಸಯ್ಯನಿಗೆ ಸಾಲ ಕೊಟ್ಟಿರುವ ಶ್ರೀಮಂತ ರೈತರು ಉತ್ಪಾದನೆಯ ದೃಷ್ಟಿಯಿಂದ ಸಾಲ ಪಡೆದಿರುವುದು ಸಹಕಾರಿ ಸೊಸೈಟಿಗಳಿಂದ. ಆದರೆ ನರಸಯ್ಯ ಇವರಿಂದ (ರೈತರಿಂದ) ಪಡೆದಿರುವುದು ಅನುತ್ಪಾದಿತವಾದ ಮದುವೆ, ತಿಥಿ ಮುಂತಾದುವುಗಳ ವೆಚ್ಚಕ್ಕೆ. ರೈತ ಸಂಘದ ಬೇಡಿಕೆಯಂತೆ ಸರ್ಕಾರ ಸಾಲ ಮನ್ನಾ ಮಾಡಿದರೆ ಆಗುವ ಲಾಭ ಯಾರಿಗೆ ?

ಮಾತು-ಕತೆ

ಮೂಲಭೂತ ಬದಲಾವಣೆಗಾಗಿ ಹೋರಾಡಬೇಕು



ಕಾಂಗ್ರೆಸ್-ಇಂದಿರಾ-ಕಮ್ಯುನಿಷ್ಟ ಹಣಾಹಣಿಯಲ್ಲಿ ನಂದಿ ಹೋದ ಬೆಂಕಿಯಲ್ಲಿ ಒಂದು ಕಿಡಿಯನ್ನಾದರೂ ತಮ್ಮ ಹೃದಯದೊಳಗೆ ಇಟ್ಟುಕೊಂಡು ಓಡಾಡುತ್ತಿರುವವರು ಕಿಷನ್‌ಪಟ್ನಾಯಕರು. ಸರಳವಾದ ನೇರವಾದ ಕಿಷನ್‌ರು ಈ ಪತನದ ರಾಜಕಾರಣದಲ್ಲೂ ಒಂದು ಆಸೆಯ ಕಿಡಿಯಾಗಿ ಉಳಿದುಕೊಂಡು ಬರುತ್ತಿದ್ದಾರೆ. ರೈತ-ದಲಿತರ ನಡುವಿನ ಕಂದಕವನ್ನು ಮುಚ್ಚುವತ್ತ ಇರುವ ಅವರ ಆಲೋಚನೆಗಳನ್ನು ತಮು ಮುಂದಿಡುತ್ತಿದ್ದೇವೆ. 'ಪಂಚಮದ' ಪರವಾಗಿ ನಮ್ಮ ಕೆ. ಬಿ. ಸಿದ್ದಯ್ಯ ಕಿಷನ್‌ರೊಂದಿಗೆ ಮಾತನಾಡಿ ಇಲ್ಲಿ ಬರೆದಿದ್ದಾರೆ.

ಕರ್ನಾಟಕದ ನೆಲದಲ್ಲಿ ರೈತ ಚಳುವಳಿ, ಸಮತಾ ವಿದ್ಯಾಲಯ ಮೊಳಕೆಯೊಡೆಯುತ್ತಿರುವ ಈ ಸಂದರ್ಭದಲ್ಲಿ ಒರಿಸ್ಸಾದ ಕಿಷನ್‌ಪಾಟ್ನಾಯಕ್ ಕರ್ನಾಟಕಕ್ಕೆ ಒಂದು ವರ್ಷದಲ್ಲಿ ಎರಡು ಭಾರಿ ಭೇಟಿ ಕೊಡುವ ಶಪಥ ಮಾಡಿದ್ದೇನೆಂದು ತಿಳಿಸಿದರು. ತೂಕ ಮಾಡಿದಂತೆ ಮಾತಾಡುವ ಅವರು ತಿಪಟೂರು ತಾಲ್ಲೂಕಿನ ಹುಣಿಸೆ ಘಟ್ಟದಲ್ಲಿ ನಡೆದ ರೈತ ಸಂಘದ ಕಾರ್ಯಕರ್ತರ ಸಭೆಗೆ ಆಹ್ವಾನಿತರಾಗಿದ್ದರು. ಇಂಡಿಯಾದ ಪ್ರಸ್ತುತ ಸಾಂಸ್ಕೃತಿಕ ಸನ್ನಿವೇಶ ನಮ್ಮನ್ನು ಪತನದ ಅಂಚಿಗೆ ನಡೆಸುತ್ತಿದೆ. ಈ ಪ್ರಶ್ನೆ ನನ್ನ ಸದಾ ಕಾಡುತ್ತದೆಂದು ಆತಂಕ ವ್ಯಕ್ತಪಡಿಸಿ ಈ ಸಂಸ್ಕೃತಿ ಪಶ್ಚಿಮದ ಅಂಧಾನುಕರಣೆ, ಹಾಗೂ ಬುದ್ಧಿಚಮತ್ಕಾರದಿಂದ ಜನ್ಮ ತಾಳಿದ್ದರಿಂದಾಗಿ ಇದು ವಾಸ್ತವವಲ್ಲ, ಶುದ್ಧವಲ್ಲ, ಬುದ್ಧಿಶಕ್ತಿಯೊಂದಿಗೆ ಹೃದಯವಂತಿಕೆ, ನೆಲದ ಅನುಭವಗಳು ಬೆರೆತಾಗ ಹೊಸ ಆಲೋಚನೆಗಳು ಹುಟ್ಟುತ್ತವೆ. ಹೊಸ ಮಾನವೀಯ ಸಂಸ್ಕೃತಿಯೊಂದರ ಸ್ಥಾಪನೆ ಸಾಧ್ಯವಿದೆಯೆಂದು ಹೇಳಿದರು. ಇಂತಹ ಕಾರಣಗಳಿಂದಾಗಿಯೇ ಇಂಡಿಯಾದ ರೈತನನ್ನು ಮಾನಸಿಕವಾಗಿ, ಶಾರೀರಿಕವಾಗಿ ಸಂಪೂರ್ಣ ಶೋಷಿಸಿದ್ದಲ್ಲದೆ 'ದುಡಿಮೆಯೆ ಸುಖದ ದಾರಿ' ಎಂಬ ಭ್ರಮೆಯಲ್ಲಿಡಲಾಗಿದೆ. ಈ ಅಪಾಯದ ಅಂಚಿನಿಂದ ರೈತನನ್ನು ಪಾರು ಮಾಡಲು, ಅವನ ಸ್ವಾಭಿಮಾನ, ಘನತೆಯನ್ನು ರಕ್ಷಿಸುವುದು ಯಾವುದೇ ಜನರ ಚಳವಳಿಯ ಮೂಲ ಗುರಿಯಾಗಬೇಕಾಗುತ್ತದೆಂಬುದು ಕಿಷನ್‌ರವರ ಕಳಕಳಿಯಾಗಿತ್ತು. ಕರ್ನಾಟಕ ರಾಜ್ಯ ರೈತ ಸಂಘ ಈ ದಾರಿಯಲ್ಲಿದೆ ಎಂಬುದು ಅವರ ನಂಬಿಕೆ.

ಪಂಚಮರು ಯಾರು ?

ಪಂಚಮ ಪತ್ರಿಕೆ ನಿಮಗೆ ಗೊತ್ತ ಸಾರ್ ? ಎನ್ನುತ್ತ ಮಾತು ಶುರು ಮಾಡಿದೆ. 'ಪಂಚಮ ಪತ್ರಿಕೆ ನೋಡಿದ್ದೇನೆ, ಕೇಳಿದ್ದೇನೆ' ಪಂಚಮರು ಯಾರು ? ಅನುವುದೇ ನನ್ನ ಪ್ರಶ್ನೆ, ಏಕೆಂದರೆ 'ಮನು'ವಿನ ವಿವರಣೆಯ ಪ್ರಕಾರ ಹಿಂದೂ ಸಮಾಜದಲ್ಲಿ ನಾಲ್ಕು ಪಂಗಡಗಳಿವೆ. ಅಸ್ಪೃಶ್ಯರೂ ಸಹ ಶೂದ್ರರ ಗುಂಪಿಗೆ ಸೇರಿದ್ದಾರೆ. ಅಸ್ಪೃಶ್ಯನಿಗೆ ವಿಧಿಸಿದ ಶಿಕ್ಷೆಯನ್ನೇ ಶೂದ್ರನಿಗೂ ವಿದಿಸಲಾಗಿತ್ತು. 'ಪಂಚಮ' ಪ್ರತ್ಯೇಕತೆಗೆ ಐತಿಹಾಸಿಕ ಯಾವ ಪುರಾವೆಗಳಿಲ್ಲವೆಂದು ನಾನು ಭಾವಿಸುತ್ತೇನೆಂದು ತಲೆ ಕೆರೆದುಕೊಳ್ಳುತ್ತಿದ್ದಂತೆ, ಕೃಷ್ಣರಾಜಲು ಮಧ್ಯೆ ಮಾತಾಡಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನಿಗಿಂತಲೂ ಕೆಳಗಿನವರು ಪಂಚಮರೆಂದು ಕರೆದುಕೊಳ್ಳುತ್ತಾರೆ, ಇದು ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಉದಾ : ಮಹಾರಾಷ್ಟ್ರದಲ್ಲಿ ಅಸ್ಪೃಶ್ಯರು ತಿರುಗಾಡುವಾಗ ಅವರ ನೆರಳು ಭೂಮಿಯ ಮೇಲೆ ಬೀಳಬಾರದೆಂದು ಖಡ್ಡಾಯ ಮಾಡಿದ್ದು, ಅವನು ನೆಲದ ಮೇಲೆ ಉಗುಳಬಾರದು. ಕಂಕುಳಲ್ಲಿ ಒಂದು ಮಡಕೆ ಕಟ್ಟಿಕೊಂಡು ಉಗಿಯಬೇಕಾಗಿತ್ತು. ಹಾಗೆಯೇ ಕರ್ನಾಟಕದಲ್ಲೂ ಅಸ್ಪೃಶ್ಯರಿಗೆ ಪ್ರತ್ಯೇಕ ಕಾಲೋನಿಗಳಿವೆ. ಅವರೆಲ್ಲಾ ಸಂಕುಚಿತರಾಗಿ 'ಪಂಚಮ' ದಲಿತ ಎಂದು ಕರೆದುಕೊಳ್ಳುತ್ತಾರೆ ಅಂದು ವಿಷದಪಡಿಸಿದರು. ಹಾಗಾದರೆ ಹರಿಜನರನ್ನು ಇನ್ನೂ ಯಾವ ಯಾವ ಹೆಸರಿನಿಂದ ಕರೆಯುತ್ತಾರೆಂಬ ಕಿಷನ್ ಪ್ರಶ್ನೆಗೆ ಹೊಲೆಮಾದಿಗರೆಂಬು ನಾನು ಉತ್ತರಿಸಬೇಕಾಯ್ತು!

'ರೈತಸಂಘಕ್ಕೆ ಒಂದು ಮೆಥೆಡ್ ಇಲ್ಲಾ'

ಪ್ರಶ್ನೆ : ಕರ್ನಾಟಕ ರಾಜ್ಯ ರೈತ ಸಂಘದೊಡನೆ ನಿಮ್ಮ ಸಂಪರ್ಕವಿದೆ; ನೀವು ಗಮನಿಸಿದ ಮುಖ್ಯ ಅಂಶಗಳೇನು ?

ಉತ್ತರ : ಸ್ವಾತಂತ್ರ್ಯ ಬಂದ ನಂತರವೂ ಇಂಡಿಯಾದ ರೈತನ ದುಡಿಮೆಗೆ ಸಿಗಬೇಕಾದ ಗೌರವವಾಗಲಿ, ಪರಿಹಾರವಾಗಲಿ ದೊರಕಿಲ್ಲ, ರೈತನ ಪರ

ವಾಗಿ ಸರ್ಕಾರ ಮಾಡುವ ಕಾನೂನುಗಳು ಅವನ ರಕ್ತ ಹೀರುವ ಸಾಧನಗಳಾಗಿವೆ, ಇನ್ನು ಮುಂದೆ ರೈತ ಕೈಕಟ್ಟಿ ಕೂರಬಾರದೆಂದು ರೈತರಿಗೆ ತಿಳುವಳಿಕೆ ಹಾಗೂ ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಕೆಲಸವನ್ನೂ ರಾಜ್ಯ ರೈತಸಂಘ ಮಾಡುತ್ತಿದೆ. ಆದರೆ ಆರಂಭದ ಮೂರು ವರ್ಷಗಳಲ್ಲಿ ಇಡೀ ರಾಜ್ಯವನ್ನು ಆವರಿಸಿದಂತೆ ಕಾಣುತ್ತದೆ, ಈವರೆಗೆ ಸಭೆ, ಸಮ್ಮೇಳನ, ರೈತ ಮತಪ್ರದರ್ಶನ ನಡೆಸುವುದರಲ್ಲೇ ತೃಪ್ತಿಗೊಂಡಿದ್ದು, ಖಡ್ಡಾಯವಾಗಿ ಮಾಡಬೇಕಾದ ರೈತತರಬೇತಿ ಶಿಬಿರಗಳೇ ನಡೆದಿಲ್ಲ. ಆದ್ದರಿಂದ ಆವೇಶಪೂರಿತ ವಿದ್ಯಾವಂತರೇ ಅಧಿಕವಾಗಿರುವ ರೈತಸಂಘಟನೆಗೆ ಒಂದು ಮೆಥೆಡ್ ಇಲ್ಲ. ಇನ್ನೂ ಕಾದುನೋಡಬೇಕೆಂದು ಅಭಿಪ್ರಾಯಪಟ್ಟರು.

ಪ್ರಶ್ನೆ : ರೈತಸಂಘದ ನಾಯಕತ್ವ ಕೆಲವು ಲಾಯರ್ಸ್, ಡಾಕ್ಟರ್ಸ್ ಇಂತಹ ಉದ್ಯೋಗಸ್ಥರ ಕೈಯ್ಯಲ್ಲಿದೆ ಎಂದು ನಿಮಗನ್ನಿಸಲ್ವ ?

ಉತ್ತರ : ಇಲ್ಲ, ಅದು ಹಾಗಲ್ಲ, ಇಂಡಿಯಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಯಾವುದೇ ಚಳವಳಿಯಾಗಲಿ, ರೈತ, ದಲಿತ ಚಳವಳಿಗಳೇ ಆಗಲಿ ಆರಂಭದಲ್ಲಿ ಆ ಗುಂಪಿನ ವಿದ್ಯಾವಂತರ ಕೈಲಿರುತ್ತದೆ. ಬೆಳವಣಿಗೆಯಲ್ಲಿ ಬೇಸಾಯ ಕೂಲಿಗಾರರಿಗೆ, ದಲಿತರಿಗೆ ನಾಯಕತ್ವ ಹಸ್ತಾಂತರವಾಗಲೇಬೇಕು. ಇಲ್ಲದಿದ್ದರೆ ಅಂತಹ ಚಳವಳಿಗಳು ನೈತಿಕವಾಗಿ ಪಥನ ಹೊಂದುತ್ತವೆ.

ದಲಿತರಿಗೆ ಪ್ರತ್ಯೇಕ ಸಂಘಟನೆ ಬೇಕು

ನಿಂತು, ನಿಂತು ಸಾಕಾಗಿ ಅಲ್ಲೊಂದು ಕಡೆ ಕೂತುಕೊಂಡೆವು. ಕೃಷ್ಣರಾಜುಲು ನನ್ನೊಂದಿಗೆ ಪಂಚಮದ ಮಾತುಗಳನ್ನು ಮುಗಿಸುತ್ತಿದ್ದಂತೆ, ಕಿಷನ್‌ಗೆ–

ಪ್ರಶ್ನೆ : ಕರ್ನಾಟಕ ದಲಿತ ಸಂಘರ್ಷ ಸಮಿತಿ ಚಟುವಟಿಕೆಗಳನ್ನು ನೀವು ಗಮನಿಸಿದ್ದೀರಾ ?

ಉತ್ತರ : ದಲಿತ ಚಳವಳಿಯನ್ನು ಅಧ್ಯಯನ ದೃಷ್ಟಿಯಿಂದ ನೋಡಿಲ್ಲ. ಅಲ್ಲಿನ ಕೆಲವು ಗೆಳೆಯರನ್ನು ನಾನು ಬಲ್ಲೆ.

ಪ್ರಶ್ನೆ ; ದಲಿತ ಸಂಘರ್ಷ ಸಮಿತಿ ಹಾಗೂ ರೈತಸಂಘ ಒಟ್ಟೊಟ್ಟಿಗೆ ಕೆಲಸ ಮಾಡಲು ಸಾಧ್ಯವಿದೆಯೆ ?

ಉತ್ತರ : ಸೈದ್ಧಾಂತಿಕವಾಗಿ ಎರಡು ಸಂಘಟನೆಗಳು ಒಂದಾಗಬಹುದೆಂದು ನಾನು ಹೇಳಲಾರೆ, ಐತಿಹಾಸಿಕ ಕಾರಣಗಳಿಂದಾಗಿ ಏಕತೆ ಸಾಧ್ಯವಾಗಬಹುದು. ಅಂದರೆ ದಲಿತ ಸಂಘರ್ಷ ಸಮಿತಿ, ರೈತಸಂಘದ ವಿಲೀನತೆಗೆ ನನ್ನ ಸಮ್ಮತಿ ಇಲ್ಲ. ದಲಿತರಿಗೆ ಪ್ರತ್ಯೇಕ ಸಂಘಟನೆ ಇರಲೇಬೇಕು. ಅದು ಅನಿವಾರ್ಯ ಕೂಡ. ರೈತಸಂಘದಲ್ಲಿ ಕೃಷಿ ಕಾರ್ಮಿಕರಿಗೆ, ದಲಿತರಿಗೆ ಪ್ರಾತಿನಿಧ್ಯ ಕೊಡುವ ದೃಷ್ಟಿಯಿಂದ ರೈತಸಂಘದ ಎಲ್ಲಾ ಮಟ್ಟದ ಸಮಿತಿಗಳಲ್ಲೂ ಹದಿನೈದಕ್ಕೆ ಮೂವರು ಬೇಸಾಯ ಕೂಲಿಗಾರ ಸದಸ್ಯರಿರಬೇಕೆಂದು ರೈತಸಂಘದ ಸಂವಿಧಾನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಪ್ರಶ್ನೆ : ಜಾತಿನಾಶಕ್ಕೆ ರಾಜ್ಯ ರೈತಸಂಘಕ್ಕೆ ಯಾವುದೇ ಕಾರ್ಯಕ್ರಮಗಳಿಲ್ಲ, ಆ ದಿಶೆಯಲ್ಲಿ ನಿಮ್ಮ ಸಲಹೆಗಳೇನು ?

ಉತ್ತರ : ನೈತಿಕ ದೃಷ್ಟಿಯಿಂದ, ಸಮಾಜದ ಸಂಪೂರ್ಣ ಪರಿವರ್ತನೆಯ ದೃಷ್ಟಿಯಿಂದ ಈ ಬಗ್ಗೆ ರೈತಸಂಘ ಕಾರ್ಯಕ್ರಮ ರೂಪಿಸಬೇಕಾಗಿತ್ತು. ಅದಕ್ಕೆ ನಾನು ಹೇಳುವುದು. ರೈತಸಂಘದ ಕಾರ್ಯಕರ್ತರು ರಾಗಿ, ಭತ್ತ, ಕಬ್ಬಿನ ಬೆಲೆ ಹೆಚ್ಚಿಸಿ ಎಂದು ಜೈಲಿಗೆ ಹೋದರೆ ಸಾಲದು, ಸಮಾಜದ ಮೂಲಭೂತ ಬದಲಾವಣೆಗಾಗಿ ಹೋರಾಟ ಅನಿವಾರ್ಯವೆಂಬುದನ್ನು ತಿಳಿಯಬೇಕು. ಹೀಗೆ ಮಾತಾಡುವಾಗ ನನ್ನದೊಂದು ಪ್ರಶ್ನೆ ಏನೆಂದರೆ ಇದುವರೆಗೂ ನಡೆದ ಹಿಂದುಳಿದ ವರ್ಗಗಳ, ದಲಿತರ ಚಳವಳಿಗಳ ಹಾಗೂ ಸಮ್ಮೇಳನಗಳಲ್ಲಿ 'ಪ್ರಾಥಮಿಕ ಶಿಕ್ಷಣ ಖಡ್ಡಾಯ ಮಾಡಿ, ಅಲ್ಲಿಯವರೆಗೆ ಉಚ್ಚಶಿಕ್ಷಣವನ್ನು ರದ್ದುಗೊಳಿಸಿ' ಎಂದು ಒತ್ತಾಯಮಾಡಿಲ್ಲ ಏಕೆ ? ಇದೇನು ಮುಖ್ಯ ಅಲ್ಲವ ? ರಾಜ್ಯ ರೈತ ಸಂಘವೇ ಈ ಒತ್ತಾಯ ಸಂವಿಧಾನಾತ್ಮಕವಾಗಿ ಸಿಗಬೇ? ಕೇದೆರಬಾಡಮಾಕಾಗಿರುವ ಅಕ್ಷರ ಜ್ಞಾನ ಸಮಾಜದ ಎಲ್ಲ ಜನತೆಗೆ ಸಿಕ್ಕಿದರೆ ನಂತರದಲ್ಲಿ ಸಮಾನತೆಗಾಗಿ ಹೋರಾಟ. ಆದರೂ ಸದ್ಯಕ್ಕೆ ಈ ಕೆಲವು ಕಾರ್ಯಕ್ರಮಗಳನ್ನು ರಾಜ್ಯ ರೈತಸಂಘ ಖಡ್ಡಾಯವಾಗಿ ಮಾಡಲೇಬೇಕೆಂದು ನನಗನ್ನಿಸುತ್ತದೆ.

(ಅ) ರೈತಸಂಘದ ವತಿಯಿಂದ ಅಂತರ್ಜಾತಿ ವಿವಾಹಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಏರ್ಪಡಿಸಬೇಕು. ಸಾಧ್ಯವಾದರೆ, ಪ್ರತಿ ಕಾರ್ಯಕರ್ತನೂ ಅಂತರ್ಜಾತಿ ವಿವಾಹವಾಗುವುದು ನಿಯಮವನ್ನಾಗಿ ಅಂಗೀಕರಿಸಬೇಕು. ವರ್ಷದ ಕೊನೆಗೆ ಸುಗ್ಗಿಯಲ್ಲಿ ಹಳ್ಳಿಯಲ್ಲಿ ಸಾಮೂಹಿಕ ಭೋಜನ ನಡೆಸಬೇಕು. ಅಸ್ಪೃಶ್ಯರ ಮುಂದಾಳತ್ವದಲ್ಲೇ ಸಾಮೂಹಿಕ ಭೋಜನ ನಡೆಯಬೇಕು.

(ಆ) ಹಳ್ಳಿಯಲ್ಲಿ ಗಂಡಸು ಹೆಣ್ಣು ಮತ್ತು ಮಕ್ಕಳ ಮೇಲೆ ಬಲಪ್ರಯೋಗ ಮಾಡಬಾರದೆಂದು ರೈತಸಂಘ ನೀತಿ ರೂಪಿಸಬೇಕು. ಹಳ್ಳಿಯಲ್ಲಿ ಹೆಣ್ಣನ್ನು ಹೊಡೆಯುವವನಿಗೆ ರೈತಸಂಘವು ಮೂರು ಸಾರಿ ಎಚ್ಚರಿಕೆ ಕೊಡಬೇಕು, ಹಾಗೇ ಮುಂದುವರಿದರೆ, ಅವನು ಹೆಣ್ಣನ್ನು ಹೊಡೆಯುವವನೆಂದು ಬಹಿರಂಗವಾಗಿ ಘೋಷಿಸಬೇಕು.

(ಇ) ರೈತಸಂಘ ಅಸ್ಪೃಶ್ಯರ ಕಾಲೋನಿಗಳಲ್ಲಿ ಸಭೆ ನಡೆಸಬೇಕು. ಸಾಧ್ಯವಾದರೆ, ದಲಿತ ಸಂಘಟನೆಯೊಂದಿಗೆ ಸೇರಿ ಸಭೆ ನಡೆಸಬೇಕು. ಅಸ್ಪೃಶ್ಯರು ಮದ್ಯಪಾನ ನಿಷೇಧಿಸಬೇಕು, ಅದು ಶ್ರೀಮಂತರ ಸಂಸ್ಕೃತಿ. ಶ್ರೀಮಂತರ ನಾಶಕ್ಕೆ ಮದ್ಯಪಾನವನ್ನು ಬಿಟ್ಟುಬಿಡಬೇಕೆಂದು ಮನಒಲಿಸಬೇಕೆಂದು ನನ್ನ ಕಳಕಳಿಯ ವಿನಂತಿ.

ಅಷ್ಟೊತ್ತಿಗಾಗಲೇ ರೈತ ಸಭೆ ಆರಂಭವಾಗಿ, ಕಿಷನ್, ಕೃಷ್ಣರಾಜುಲುಗಾಗಿ ಕಾಯುತ್ತಿತ್ತು.

ತಾಲ್ಲೂಕು ಅಭಿವೃದ್ಧಿ ಮಂಡಳಿ, ಮಳವಳ್ಳಿ

ನೂತನ ಸರ್ಕಾರದ ಯೋಜನೆಗಳು	ಪ್ರಯೋಜನಗಳು
1. ಕನ್ನಡದಲ್ಲೇ ಆಡಳಿತ :	ಜನಸಾಮಾನ್ಯ ಭಾಷೆಯಾದ ಕನ್ನಡದಲ್ಲಿ ವ್ಯವಹಾರಗಳು ನಡೆಸಲಾಗುತ್ತಿದೆ.
2. ಕುಡಿಯುವ ನೀರಿನ ವ್ಯವಸ್ಥೆ :	ಎಲ್ಲಾ ಗ್ರಾಮಗಳಿಗೂ ಕುಡಿಯುವನೀರಿನ ವ್ಯವಸ್ಥೆ ಮಾಡಲಾಗಿದೆ.
3. "ಅಂತ್ಯೋದಯ" ಯೋಜನೆ	ಪ್ರತಿ ಗಾಮದಲ್ಲಿ ಪ್ರತಿವರ್ಷ ಐದು ಬಡಕುಟುಂಬಗಳನ್ನು ಆಯ್ದು ದಾರಿದ್ರ್ಯ ರೇಖೆಯಿಂದ ಮೇಲೆತ್ತುವ ಕಾರ್ಯಕ್ರಮ.
4. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯಗಳು :	ತಾಲ್ಲೂಕಿನಲ್ಲಿ 2ವಿದ್ಯಾರ್ಥಿನಿಯರ ವಸತಿ ನಿಲಯಗಳು 6 ವಿದ್ಯಾರ್ಥಿಗಳ ವಸತಿನಿಲಯಗಳು ಒಟ್ಟು ವಿದ್ಯಾರ್ಥಿಗಳಿಗೆ ಸೌಲಭ್ಯವಿದೆ.
5. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ-ಕಾಮಗಾರಿಗಳು :	ರಸ್ತೆ ನಿರ್ಮಾಣ, ಶಾಲಾ ಕಟ್ಟಡ, ಸಮುದಾಯ ಕಟ್ಟಡ, ಗ್ರಾಮ ನೈರ್ಮಲ್ಯ, ಕೆರೆಗಳು ಹಲವು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
6. ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಸಾಲ ಸೌಲಭ್ಯ ವ್ಯವಸ್ಥೆ :	ಪ್ರತಿವರ್ಷ 21 ಕ್ಲಸ್ಟರಗಳನ್ನು ಆಯ್ದು 600 ಕುಟುಂಬಗಳನ್ನು ಗುರುತಿಸಿ ಸಾಲದಸೌಲಭ್ಯ ಹಾಗೂ ಧನಸಹಾಯದೊರಕಿಸಲಾಗಿದೆ.
7. ಜೀತವಿಮುಕ್ತರ ಬಿಡುಗಡೆ ಪುನರ್‌ವಸತಿ ಕಾರ್ಯಕ್ರಮ ಪ್ರತಿ ಜೀತವಿಮುಕ್ತರಿಗೆ 4000ರೂಗಳ ಬೆಲೆಬಾಳುವ ಎಮ್ಮೆ ಅಥವಾ ಹಸು ಕೊಡಿಸುವುದು:	ತಾಲ್ಲೂಕಿನಲ್ಲಿ 1945 ಜೀತಗಾರರನ್ನು ಗುರುತಿಸಿ ಬಿಡುಗಡೆ ಮಾಡಲಾಗಿದೆ. ಅವರಿಗೆ ಪುನರ್ ವಸತಿ ಕಲ್ಪಿಸಲಾಗುತ್ತಿದೆ.
8. ನಿವೇಶನ, ಮನೆಗಳ ನಿರ್ಮಾಣ ಸೌಲಭ್ಯ ಪ್ರತಿ ಮನೆಗೆ 3500 ರೂ. ನಂತೆ, ಕಡಿಮೆ ವೆಚ್ಚದ ಮನೆಗೆ 2000 ರೂ.ಗಳ ಸಾಮಗ್ರಿಗಳನ್ನು ಕೊಡಲಾಗುವುದು :	ತಾಲ್ಲೂಕಿನಲ್ಲಿ 6698 ಜನರನ್ನು ನಿವೇಶನರಹಿತ ಗುರುತಿಸಲಾಗಿ 6447 ನಿವೇಶನಗಳನ್ನು ಹಂಚಲಾಗಿದೆ. ಇದುವರೆಗೂ 2030 ಮನೆ ನಿರ್ಮಾಣ ಮಾಡಲಾಗಿದೆ. ಈ ವರ್ಷ 442 ಮನೆಗಳ ನಿರ್ಮಾಣ ಕೈಗೊಳ್ಳಲಾಗಿದೆ. 28 ಗುಡಿಸಲು ಪರಿವರ್ತನೆ ಮಾಡಲು ಗುರಿ ಇಟ್ಟುಕೊಳ್ಳಲಾಗಿದೆ.
9. ಆಶಾಕಿರಣ ಯೋಜನೆ ಅಪಘಾತಕ್ಕೆ ತುತ್ತಾದವರಿಗೆ ವಿಶೇಷ ಸೌಲಭ್ಯ :	ಆಕಸ್ಮಿಕವಾಗಿ ಮರಣಕ್ಕೊಳಗಾದ ಅಥವಾ ಆಕಸ್ಮಿಕವಾಗಿ ಕೈ ಕಾಲು ಕಳೆದುಕೊಂಡ ಕುಟುಂಬಗಳಿಗೆ ಪರಿಹಾರ ಕೊಡಿಸಲಾಗುವುದು.
10. ಭಾಗ್ಯಜ್ಯೋತಿ ಯೋಜನೆ :	ಪ್ರತಿ ವರ್ಷದಂತೆ ಈ ವರ್ಷ 20 ಗ್ರಾಮಗಳನ್ನು ಆಯ್ದು ತಲಾ ಹತ್ತು ಮನೆಗಳಿಗೆ ಉಚಿತವಾಗಿ ವಿದ್ಯುತ್ ಸೌಲಭ್ಯ ಕಲ್ಪಿಸಲಾಗುವುದು.

ಸೂಚನೆ :—ತಾಲ್ಲೂಕು ಅಭಿವೃದ್ಧಿ ಮಂಡಳಿ ಕಛೇರಿಗೆ ಭೇಟಿ ಕೊಡಿ.

ವಿ. ಮುನಿವೆಂಕಟಪ್ಪ ಬಿ. ಎಸ್. ಸಿ. (ಕೃಷಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಬಿ. ಡಿ. ಓ. ಮಳವಳ್ಳಿ.

ಡಾ|| ಹೆಚ್. ವಿ. ಪಾರ್ಶ್ವನಾಥ್ ಕೆ. ಎ. ಎಸ್.
ಆಡಳಿತಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ಮಂಡ್ಯ,
ತಾಲ್ಲೂಕು ಅಭಿವೃದ್ಧಿ ಮಂಡಳಿ, ಮಳವಳ್ಳಿ.

ಹರಿಜನರು ಎಂಬ ಮೇಲ್ಜಾತಿ ಆಟಿಕೆಗಳು

ಜಾತೀಯತೆಯಿಂದ ಕುಟ್ಟು ಹಿಡಿದಿರುವ ನಮ್ಮ ಹಳ್ಳಿಗಳಲ್ಲಿ ಹರಿಜನರು ಹೇಗೆ ಮೇಲ್ಜಾತಿಗಳ ಆಟದ ವಸ್ತುಗಳಾಗಿದ್ದಾರೆ ಎನ್ನುವುದನ್ನು ನಿರ್ಮಲ ಮನಸ್ಸಿನ ಮೋಹನ ಎಂಬ ಯುವಕ ತನ್ನ ಊರಿನ ಸ್ವಂತ ಅನುಭವಗಳ ಮೂಲಕ ಇಲ್ಲಿ ಬರೆದಿದ್ದಾರೆ. -ಸಂ

● **ಮೋಹನ**

ಮೈಸೂರು ಜಿಲ್ಲೆಯ ಕೆ. ಆರ್. ನಗರ ತಾಲ್ಲೂಕಿನ ಚುಂಚನಕಟ್ಟೆಯಿಂದ ಸ್ವಲ್ಪ ದೂರದಲ್ಲಿರುವ ಒಂದು ಚಿಕ್ಕಹಳ್ಳಿಯ ಬಗ್ಗೆ ನಿಮಗ್ಯಾರಿಗೂ ಬಹುಷಃ ಗೊತ್ತೇ ಇಲ್ಲವೇನೋ. ಈ ಹಳ್ಳಿಯ ಹೆಸರು ಕುಪ್ಪೆ. ಈ ಊರಿಂದ ಸುಮಾರು 3ಮೈಲಿ ದೂರದಲ್ಲಿ ಕಾವೇರಿ ಹರಿದು ಭೂಮಿಗೆ ನೀರುಣಿಸಿದರೂ, ಈ ಊರಿನ ಎಲ್ಲೋ ಅಲ್ಪ ಸ್ವಲ್ಪ ಮಂದಿ ಮಾತ್ರ ನೀರಾವರಿ ಭೂಮಿ ಹೊಂದಿದ್ದಾರೆ. ಹೆಚ್ಚು ಜನರ ಜೀವ ಮಳೆಯನ್ನೇ ನಂಬಿದ ಒಣಭೂಮಿ ಬೇಸಾಯದ ಮೇಲೆ ಅವಲಂಭಿಸಿದೆ. ಈ ಊರಿನಲ್ಲಿ ಎಲ್ಲಾ ಒಟ್ಟು 90 ಕುಟುಂಬಗಳಿವೆ. ಇವರಲ್ಲಿ ಹರಿಜನರು 40 ಒಕ್ಕಲಾದರೆ, ಗೌಡರು 30 ಒಕ್ಕಲಿದ್ದು ಉಳಿದವರು ಲಿಂಗಾಯಿತರು. ಆರ್ಥಿಕವಾಗಿ ವಿಂಗಡಿಸುವುದಾದರೆ ಮಧ್ಯಮ ವರ್ಗ (ನೀರಾವರಿ ಜಮೀನು ಹೊಂದಿರುವವರು) ಹಾಗು ಬಡರೈತರು+ಕೂಲಿಕಾರರು (ಅಲ್ಪಸ್ವಲ್ಪ ಒಣ ಭೂಮಿ ಇದ್ದೂ ಕೂಲಿಮಾಡುವವರು) ಎಂಬ ಎರಡು ವರ್ಗಗಳಾಗಿ ಗುರ್ತಿಸಬಹುದು.

ಜಾತಿ ಸೌಹಾರ್ದಕ್ಕೆ ಹೆಸರಾಗಿದ್ದ ಈ ಊರಿನ ಬದುಕಿನಲ್ಲಿ ದುರಂತಕ್ಕೆಡೆ ಮಾಡಿಕೊಡುವ ಜಾತಿ ಗುಂಪುಗಳ ರಾಜಕೀಯ ಪ್ರವೇಶಿಸಿತು. ಊರಿನಲ್ಲಿರುವ ಲಿಂಗಾಯಿತರು ಮತ್ತು ಗೌಡರು ಬೇರೆ ಗುಂಪುಗಳಾಗಿ ಒಡೆದು, ಸಾಂಸ್ಕೃತಿಕ ಹಾಗು ರಾಜಕೀಯ ಬದುಕಿನಲ್ಲಿ ತಾವು ವಿಭಿನ್ನರು ಎಂದು ಗುರ್ತಿಸಿ ಕೊಳ್ಳತೊಡಗಿದರು. ಇದರ ಹಿಂದಿನ ಕಾರಣ ಹಲವಿರಬಹುದು. ಮುಖ್ಯವಾಗಿ ಹೇಳುವುದಾದರೆ, ಚುನಾವಣೆ ರಾಜಕೀಯ ಮತ್ತು ಇವೆರಡು ಜಾತಿಗಳ ಮಧ್ಯೆ ಬಂದ ಆರ್ಥಿಕ ಪ್ರತಿಸ್ಪರ್ಧೆಗಳನ್ನು ಗುರ್ತಿಸಬಹುದು. ಆದರೆ, ಇನ್ನೂ ದೊಡ್ಡ ದುರಂತಕ್ಕೆ ತಲುಪಿದ್ದು, ಈ ಊರಿನ ಗೌಡರ ಗುಂಪು ಹರಿಜನ ವಿರೋಧಿ ಗುಂಪಾಗಿ ಬೆಳೆದಾಗ. ಇದರ ಹಿನ್ನೆಲೆ ಸ್ವಲ್ಪ ಹೇಳುವುದು ಅಗತ್ಯ.

ಗೌಡ ಮತ್ತು ಲಿಂಗಾಯಿತರ ಮಧ್ಯೆ ಪ್ರತಿಸ್ಪರ್ಧೆಯಿಂದಾಗಿ ಹರಿಜನರನ್ನು ತಮ್ಮ ತಮ್ಮ ಗುಂಪಿಗೆ ಸೆಳೆದುಕೊಳ್ಳುವ ಪ್ರಯತ್ನ ನಡೆಯಿತು. ಲಿಂಗಾಯಿತರ ಹೊಲ, ಮನೆ ಕೆಲಸಗಳಿಗೆ ಹೋಗಬಾರದೆಂದು ಹರಿಜನರ ಮೇಲೆ ಗೌಡರು ಒತ್ತಾಯ ಹೇರಲಾರಂಭಿಸಿದರು. ಹರಿಜನರು ಇದಕ್ಕೊಪ್ಪದಿದ್ದಾಗ ಅವರನ್ನು ಲಿಂಗಾಯಿತ ಪರವಾಗಿದ್ದಾರೆಂದು ಪರಿಗಣಿಸಿ, ಅವರ ಜೊತೆ ಎಲ್ಲಾ ರೀತಿಯ ಸ್ಥಳೀಯ ಸಾಂಸ್ಕೃತಿಕ ಸಂಭಂದಗಳನ್ನು ಕಡಿದುಕೊಳ್ಳುವ ನಿರ್ಧಾರ ಮಾಡಿದರು. ಇಲ್ಲಿಂದ ಮುಂದೆ ಗೌಡರು, ತಮ್ಮ ಸತ್ತ ದನಗಳನ್ನು ಹೊರಲು ಊರ ಹರಿಜನರನ್ನು ಕರೆಯಲಿಲ್ಲ, ತಮ್ಮ ಮನೆಗಳಲ್ಲಿ ಯಾರಾದರೂ ಸತ್ತಾಗ ತಮ್ಮಟೆ ಹೊಡೆಯಲು ಪಕ್ಕದ ಊರಿನ ಹರಿಜನರನ್ನು ಕರೆಸುತ್ತಿದ್ದರು. ಈ ಬೆಳವಣಿಗೆ ಪ್ರಾರಂಭವಾದಾಗಲೇ ಊರಿನ ಕೆಲವು ಯುವಕರು ಊರಿನಲ್ಲಿ ಸೌಹಾರ್ದ ಸ್ಥಾಪಿಸುವ ದೃಷ್ಟಿಯಿಂದ ಊರೊಟ್ಟನ್ನು ಸೇರಿಸಿ ಯುಗಾದಿ ಹಬ್ಬ ಆಚರಿಸಲು ನಿರ್ಧರಿಸಿದರು. ದೇವರ ಕಾರ್ಯಕ್ಕೆಂದು ಹರಿಜನರನ್ನು ಬಿಟ್ಟು ಎಲ್ಲಾ ಜಾತಿಯ ಮನೆಗಳಿಂದಲೂ ವರಿ (ಹಣ) ಎತ್ತಿದರು. ಹರಿಜನರನ್ನು ಸೇರಿಸಿಕೊಂಡು ಹಬ್ಬ ಮಾಡಲು ಇಷ್ಟ ಪಡದ ಕೆಲವು ಕಿತಾಪತಿ ಗೌಡರು ಹಬ್ಬಕ್ಕೆ ಮುನ್ನ ಊರಲ್ಲೆಲ್ಲಾ ತಮ್ಮಟೆ ಸಾರುವ ಕೆಲಸವನ್ನು, ಪಕ್ಕದ ಊರಿನ ಕುಳವಾಡಿಗೆ ವಹಿಸಿದರು. ಈ ಕುಳುವಾಡಿಗೆ ಹರಿಜನ ಕೇರಿಯೊಂದನ್ನು ಬಿಟ್ಟು ಊರಿಗೆಲ್ಲಾ ಸಾರಬೇಕೆಂದು ಹೇಳಿಕೊಟ್ಟರು. ತಮ್ಮಟೆ ಸಾರುವವನು ಅವರು ಹೇಳಿಕೊಟ್ಟಂತೆಯೇ ಮಾಡಿದ, ಈ ಪದ್ಧತಿ ಹರಿಜನರನ್ನು ಕೆರಳಿಸಿತು. ಅವರು ಊರನ್ನೆಲ್ಲಾ ನ್ಯಾಯ ಕೇಳಲು ಸೇರಿಸಿದರು. "ನಮ್ಮ ಊರಿನ ದೇವರ ಕಾರ್ಯಕ್ಕೆ ಬೇರೆ ಊರಿನ ಕುಳುವಾಡಿ ಕೈಲಿ ಏಕೆ ತಮ್ಮಟೆ ಹೊಡೆಸಬೇಕು, ಊರಿಗೆಲ್ಲಾ ತಮ್ಮಟೆ ಸಾರಿಸಿ, ನಮ್ಮ ಕೇರಿಗೆ ಮಾತ್ರ ಏಕೆ ಸಾರಲಿಲ್ಲ", ಎಂದು ಕೇಳಿದಾಗ, ತಮ್ಮಟೆಸಾರಿದ ಮನುಷ್ಯ "ಹೊಲಗೇರಿಗೆ ಸಾರಬೇಡ ಎಂದು ರಾಮೇಗೌಡರು ಹೇಳಿಕಳಿಸಿದ್ದರು" ಎಂದು ಹೇಳಿಬಿಟ್ಟ. ಅಂತೂ ಹರಿಜನರೇ ಕೊನೆಗೆ ಶಾಂತಿಯಾಗಿ "ಊರೊಟ್ಟಿಗೆ ಸೇರಿ ಆಗುವ ದೇವರ ಕಾರ್ಯಕ್ಕೆ ನಮ್ಮ ವಿರೋಧವಿಲ್ಲ, ನಾವೂ ಕೂಡ ಮನೆಮನೆಯಿಂದ ವರಿ ಎತ್ತಿಕೊಡುತ್ತೇವೆ" ಎಂಬ ಅಭಿಪ್ರಾಯಕ್ಕೆ ಬಂದರು. ತಮ್ಮ ಪ್ರತಿಷ್ಟೆಗೆ ಏಟು ಬಿದ್ದಿದ್ದವು ಕೆಲ ಕಿತಾಪತಿ ಗೌಡರು, 'ನಿಮ್ಮನ್ನು ಸೇರಿಸಿಕೊಂಡು ನಾವು ಹಬ್ಬ ಮಾಡುವುದೇ ಇಲ್ಲ' ಎಂದು ಹೇಳಿ ಊರೊಟ್ಟು ಸೇರಿ ದೇವರೆತ್ತುವುದನ್ನೇ ಕ್ಯಾನ್ಸಲ್ ಮಾಡಿದರು. ಊರಿನ ಎಲ್ಲಾ ಕೋಮಿನವರ ಬದುಕಿನ ಸೌಹಾರ್ದತೆ ತುಂಬಿ ತುಳುಕಬೇಕಾದ ಯುಗಾದಿಯ ದಿನವನ್ನು ಜಾತಿಯ ಹೊಗೆ ಮಂಕು ಮಾಡಿತು. ಆಗ ಬೇಸಿಗೆಯ ದಿನಗಳಾದ್ದರಿಂದ ಕೇರಿಯಲ್ಲಿದ್ದ ಒಂದು ಬಾವಿಯೂ ಬತ್ತಿಹೋಗಿ ಹರಿಜನರು ಸರ್ಕಾರಿ ಬೋರ್‌ವೆಲ್‌ನಿಂದ ಕುಡಿಯುವ ನೀರನ್ನು ಮಾಮೂಲಿನಂತೆ ತೆಗೆದುಕೊಳ್ಳಲು ಹೋದರು. ಕೆಲವು ಗೌಡರು ಸೇರಿ "ನಮಗೇ ನೀರು ಸಾಲುವುದಿಲ್ಲ, ಹೊಲೆಯರಿಗೆ ನೀರು ಕೊಡುವುದಿಲ್ಲ" ವೆಂದು ಹೇಳಿ ನೀರಿಗೆ ಬಂದಿದ್ದ ಹೆಂಗಸರ ಕೊಡಗಳನ್ನು ಕಿತ್ತೆಸದರು. ಕುಡಿಯಲು ನೀರಿಲ್ಲದೆ ಹರಿಜನರು ಪೋಲೀಸರಿಗೆ ಧೂರು ಕೊಟ್ಟರು. ಪೋಲೀಸರು ಬಂದು ಹೊಲೆಯರಿಗೆ ನೀರು ಕೊಡಿಸುವ ನಾಟಕವಾಡಿ ಹೋದರು. ಮಾರನೆಯ ದಿನವೇ ಬೋರ್‌ವೆಲ್ ಕೆಟ್ಟುಬಿದ್ದಿತು. ಇನ್ನು ಮುಂದೆ ಹರಿಜನ ಗುಡಿಸಲುಗಳ ಮೇಲೆ ರಾತ್ರಿ ಹೊತ್ತು ಕಲ್ಲು ಬೀಳಲು ಷುರುವಾಯಿತು. ಹಲವರ ಗುಡಿಸಲು ಸೂರುಗಳಿಗೆ ಜಖಂ ಆಗಿ, ಹೆಂಚು ಒಡೆದು, ಒಳಗಿದ್ದ ಕೆಲವರಿಗೆ ತೀವ್ರ ಗಾಯಗಳೂ ಆದವು. ಹೀಗೆ ಕಲ್ಲು ಬೀಳುವುದು ಸುಮಾರು ದಿನಗಳವರೆಗೆ ಮುಂದುವರಿದಾಗ ಹೆದರಿದ ಹರಿಜನರು ಪೋಲೀಸರಿಗೆ ದೂರು ಕೊಟ್ಟರು. ಪೋಲೀಸರು ಬಂದು ವಿಚಾರಣೆಮಾಡಿ, ಕಲ್ಲು ಹೊಡೆಯುವವರನ್ನು ಕಂಡು ಹಿಡಿಯಲು ರಿಜರ್ವ್ ಪೋಲೀಸರನ್ನು ಒಂದು ವಾರ ಕಾವಲಿಟ್ಟರು. ಕಲ್ಲುಹೊಡೆಯುವುದು ಸುಮಾರು ದಿನಗಳ ನಂತರ ನಿಂತಿತು. ಕಿತಾಪತಿ ಗೌಡರೆಲ್ಲಾ ಸೇರಿ ಹರಿಜನರನ್ನು ತಮ್ಮ ಹೊಲಗದ್ದೆ ಕೆಲಸಗಳಿಗೆ ಕರೆಯಬಾರದೆಂದು ಕಟ್ಟುಮಾಡಿದರು. ಅದರಂತೆ ಕೆಲದಿನಗಳವರೆಗೆ ಹರಿಜನರನ್ನು ಗೌಡರ ಹೊಲಗೆಲಸಗಳಿಗೆ ಕರೆಯಲೂ ಇಲ್ಲ, ಅವರು ಹೋಗಲೂ ಇಲ್ಲ.

ದಲಿತ ಸಂಘರ್ಷ ಸಮಿತಿ ಜೊತೆ ಸಂಬಂಧವಿದ್ದ ನಾನು ಇಷ್ಟೆಲ್ಲಾ ಕುಲಗೆಟ್ಟಿದ್ದ ನಮ್ಮ ಊರಿನ ಯಾವುದೊ ಮದುವೆಗೆಂದು ನಮ್ಮೂರಿಗೆ ಹೋದೆ. ಗೌಡರ ಮನೆಯ ಮದುವೆಗಳಿಗೆ ಲಿಂಗಾಯಿತರು

ಮತ್ತು ಹೊಲೆಯರನ್ನು ಕರೆಯದಂತೆ ಕಟ್ಟು ಮಾಡುವುದು ಹಾಗೂ ಲಿಂಗಾಯಿತರ ಮದುವೆಗಳಲ್ಲಿ ಗೌಡರನ್ನು ಕರೆಯದಂತೆ ಕಟ್ಟು ಮಾಡುವುದು — ಇವೆಲ್ಲಾ ನಡೆಯುತ್ತಿದ್ದವು. ಜಾತಿಯ ಧೈತ್ಯ ನನ್ನನ್ನೂ ಅಣಕಿಸಿತು. ಗೌಡರ ಜಾತಿಗೆ ಸೇರಿದ ನಾನು ಮತ್ತು ಮಹೇಶ ಹರಿಜನರಲ್ಲಿ ಪ್ರತಿದಿನ ಹೋಗಿ ಅವರಿಗೆ ಡಿ. ಎಸ್. ಎಸ್. ನ ಸಂಘಟನೆ ಮತ್ತು ಹೋರಾಟದ ಬಗ್ಗೆ ವಿವರಿಸಿ ಕುಪ್ಪೆಯ ಹರಿಜನರು ಒಗ್ಗಟ್ಟಾಗಬೇಕಾದ ಪರಿಸ್ಥಿತಿಯನ್ನು ಒತ್ತಿ ಹೇಳಿದೆವು. ಮೊದಮೊದಲು ನಮ್ಮನ್ನು ಅನುಮಾನಿಸಿದರು, ಕಾರಣ ಮೊದಲನೆಯದಾಗಿ ನಾವು ಜಾತಿಯಿಂದ ಗೌಡರು, ಎರಡನೆಯದಾಗಿ ಮಹೇಶನ ಮನೆಯವರು ಹರಿಜನ ವಿರೋಧಿಗಳು. ಆಗ ನಾವು ಜಾತಿ ಮತ ಬಿಟ್ಟ ಡಿ. ಎಸ್. ಎಸ್. ಕಾರ್ಯಕರ್ತರೆಂದು ಪರಿಚಯಿಸಿಕೊಂಡೆವು. ನಿಧಾನವಾಗಿ ನಮ್ಮಲ್ಲಿ ವಿಶ್ವಾಸ ತೋರಿ ಆಧರಿಸಿದರು.

ಇಷ್ಟೆಲ್ಲಾ ಅನುಭವಗಳು ನಮ್ಮನ್ನು ಎರಡು ತುರ್ತು ರಾಜಕೀಯ ಮಾರ್ಗಗಳಿಗೆ ಪ್ರಚೋದಿಸಿದವು: 1. ದಲಿತ ಸಂಘರ್ಷ ಸಮಿತಿಯ ಮಂಚೂಣಿಯಿಂದ ಹರಿಜನರಲ್ಲಿ ಒಗ್ಗಟ್ಟು ಮೂಡಿಸುವುದು. 2. ಡಿ. ಎಸ್. ಎಸ್. ವೇದಿಕೆಯಡಿಯಲ್ಲಿ, ಎಲ್ಲಾ ಜಾತಿಯ ಜನರನ್ನು ಸೇರಿಸಿ, ಶಾಂತಿಯುತ ಸಹಬಾಳ್ವೆಯ ಅಗತ್ಯದ ಬಗ್ಗೆ ತಿಳುವಳಿಕೆ ನೀಡಿ, ಅದಕ್ಕಾಗಿ ಅವರನ್ನು ಒತ್ತಾಯಿಸುವುದು.

ಇಷ್ಟೆಲ್ಲಾ ಅನುಭವ ಮತ್ತು ಉದ್ದೇಶಗಳನ್ನು ಹುಣಸೂರಿನ ಡಿ.ಎಸ್.ಎಸ್. ಕಾರ್ಯಕರ್ತರೊಡನೆ ಚರ್ಚಿಸಿದಾಗ ಅವರು ಊರಿಗೆ ಬಂದು ಹರಿಜನರೊಡನೆ ಚರ್ಚಿಸಿದರು. ಈ ಉದ್ದೇಶ ಸಾಧನೆಯ ಹಂತದಲ್ಲಿ ನಾವು ತಾ॥ 26-6-83ರಂದು ಡಿ. ಎಸ್. ಎಸ್. ಆಶ್ರಯದಲ್ಲಿ ಅಂಬೇಡ್ಕರ್ ಸ್ಮರಣದಿನಾಚರಣೆ ಆಚರಿಸಿದೆವು, ಅಂದಿನ ಬಹಿರಂಗ ಸಭೆಯಲ್ಲಿ ಡಿ. ಎಸ್. ಎಸ್. ಪರವಾಗಿ ರಾಜೇಂದ್ರ ಸಿಂಗ್ ಬಸವರಾಜು ಮತ್ತು ಕ್ಷೀರಸಾಗರ ಮಾತನಾಡಿದರು. ಊರಿನ ಎಲ್ಲಾ ಜಾತಿಯ ಮುಖಂಡರನ್ನು ಡಿ. ಎಸ್, ಎಸ್. ವೇದಿಕೆಯಲ್ಲಿ ಕೂರಿಸಿ ಅವರಿಂದಲೂ ಮಾತನಾಡಿಸಿದೆವು. ಎಲ್ಲರ ಭಾಷಣದ ಸಾರಾಂಶ ಜಾತೀಯತೆಯ ಅನಿಷ್ಟಗಳು, ಮೂಢನಂಬಿಕೆಗಳೂ ಮತ್ತು ಸಹಬಾಳ್ವೆಯ ಅಗತ್ಯವನ್ನು ಕುರಿತವಾಗಿದ್ದವು. ಜೊತೆಗೆ ನಮ್ಮ ಜನಕಲಾರಂಗದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಒಟ್ಟಾರೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಕಾರ್ಯಕ್ರಮ ಜನರಲ್ಲಿ ಮೂಡಿಸಿದಪರಿಣಾಮ ಮತ್ತು ಅದರಿಂದ ನಮಗಾದ ಅನುಭವಗಳು ಸ್ವಾರಸ್ಯವಾಗಿವೆ. ಕೆಲವು ಮೇಲ್ಜಾತಿಯ ಯುವಕರನ್ನು ಜಾತಿಯತೆಯ ದುರಂತದ ಬಗ್ಗೆ ಯೋಚಿಸುವಂತೆ ಮಾಡಿತು. ಕೆಲವು ಜಾತಿ ಕಿತಾಪತಿ ಮಾಡುವವರು ಹೆದರಿದರು. ಕೆಲವರು ನಮ್ಮನ್ನೇ ಹೆದರಿಸಲು ನೋಡಿ ಸಾಗದೇ ತೆಪ್ಪಗಾದರು. ಕುಪ್ಪೆಯಲ್ಲಿ ಡಿ. ಎಸ್. ಎಸ್. ಶಾಖೆ ಆರಂಭವಾಗಲು ಕಾರಣರಾದ ನನ್ನನ್ನೂ ಮತ್ತು ಮಹೇಶನನ್ನು ನಮ್ಮ ಮನೆಯವರ ಮೂಲಕ ಕಂಟ್ರೋಲ್ ಮಾಡಿಸಲು ಪ್ರಯತ್ನಿಸಿದರು. ನಾವು ಹರಿಜನರ ಮನೆಯಲ್ಲಿ ಊಟ ಮಾಡಿ ಜಾತಿ ಕೆಡಿಸಿದವೆಂದು ಪ್ರಚಾರ ಮಾಡಿದರು. ಬಹುಶಃ ಗೌಡರ ಹುಡುಗರಾದ ನಾವು ಹರಿಜನರ ಮನೆಯಲ್ಲಿ ಉಂಡು, ಅವರ ಪರ ನಿಂತು ಓಡಾಡಿದ್ದು ಗೌಡರ ಜಾತಿ ಮನಸ್ಸುಗಳಿಗೆ ಏಟು ಕೊಟ್ಟಂತಾಗಿರಬಹುದು.

ಮುಖ್ಯವಾಗಿ ಹೇಳಲೇಬೇಕಾದ ಕೊನೆಯ ವಿಷಯವೆಂದರೆ, ಈ ಒಂದು ಕಾರ್ಯಕ್ರಮ ಹರಿಜನರಲ್ಲಿ ಕೆಲಮಟ್ಟಿನ ರಾಜಕೀಯ ಪ್ರಜ್ಞೆ ಬೆಳೆಸಿತು. ಮೊನ್ನೆ ಮೊನ್ನೆ ಅಂದರೆ 15-7-83 ರಂದು ಕೆ. ಆರ್. ನಗರ ತಾಲ್ಲೂಕು ಎಂ.ಎಲ್.ಎ. ಮತ್ತು ಪಿರಿಯಾಪಟ್ಟಣ ತಾಲ್ಲೂಕು ಎಂ. ಎಲ್. ಎ. ಗಳು ಹರಿಜನ ಕೇರಿಯಲ್ಲಿ ತೋಡಿದ್ದ ಹೊಸ ಬೋರ್‌ವೆಲ್ ಉದ್ಘಾಟಿಸಲು ಬಂದಿದ್ದರು. ಅವರಿಗಾಗಿ ಒಂದು ಪುಟ್ಟ ಸಮಾರಂಭವನ್ನೇ ಹರಿಜನರು ಕಷ್ಟಪಟ್ಟು ಏರ್ಪಡಿಸಿದ್ದರು. ಇದರ ಉದ್ದೇಶ ಹರಿಜನರಿಗಾಗಿ ಜನತಾ ಮನೆಗಳನ್ನು ಕಟ್ಟಿಕೊಡಲು ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದ ಜಮೀನಿನ ಮೇಲೆ ಅದರ ಒಡೆಯರಾದ ಗೌಡರು ಹೈಕೋರ್ಟಿನಿಂದ ತಡೆಯಾಜ್ಞೆ ತಂದಿದ್ದರು. ಈ ತಡೆಯಾಜ್ಞೆಯನ್ನು ಸರ್ಕಾರ ತೆರವು ಮಾಡಿಸಿ ತಮಗೆ ಮನೆ ಕಟ್ಟಿಸಿಕೊಡಬೇಕೆಂದು ಸರ್ಕಾರವನ್ನು ಕೇಳಲು ಈ ಸಮಾರಂಭದ ಮುಖ್ಯ ಉದ್ದೇಶವಾಗಿತ್ತು. ಹರಿಜನರ ಈ ಮನವಿಗೆ ಎಂ. ಎಲ್. ಎ. ಗಳು 'ನಮ್ಮ ಕೈಲಿ ಏನೂ ಇಲ್ಲ, ನೋಡೋಣ' ಎಂದು ಹಾರಿಕೆ ಸಮಾಧಾನ ನೀಡಿದಾಗ ಅವರ ಜಾತಿಪರವಾದ ಬಣ್ಣ ಗೊತ್ತಾಗಿ ಹರಿಜನರೇ ಅವರನ್ನು ಬೈದು ಕಳುಹಿಸಿದರು. ಇಷ್ಟೆಲ್ಲಾ ಕೇವಲ ನಮ್ಮೂರಿನಲ್ಲಿ ನಡೆದವು ಎಂದರೆ ನನಗಂತೂ ಆಶ್ಚರ್ಯ.

—

ಜಾತಿ, ದಾರಿದ್ರ್ಯಗಳ ನಿಕಟ ಸಂಬಂಧದಿಂದಾಗಿ, ಶತಶತಮಾನಗಳಿಂದ ಜಡವಾಗಿ, ಜಿಡ್ಡುಗಟ್ಟಿಕೊಂಡುಳಿದು ಬಂದ ದರಿದ್ರ ಮೌಲ್ಯಗಳ ಪರಿಸರದಲ್ಲಿ, ನನ್ನ ಜಾತಿಯ ಬಗ್ಗೆ ಹೇಸಿಕೆ ಪಡುವಂತಾದದ್ದು ; ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ. ಸಮುದಾಯ ರೈತ ಚಳುವಳಿಯಂಥ ಸಾಮೂಹಿಕ ಸಾಂಸ್ಕೃತಿಕ ಸಂಘಟನೆಗಳಲ್ಲಿ ತೊಡಸಿಕೊಂಡಾಗ.

ನನ್ನ ಹಳ್ಳಿಯ ದ್ಯಾಮ ಮತ್ತು ರೈತ ಸಂಘಟನೆ

ಎಸ್. ಎಸ್. ಹಿರೇಮಠ

ನಾನು ಮೇಲ್ಜಾತಿ, ಮಧ್ಯಮ ವರ್ಗದವ. ಪರಿಸ್ಥಿತಿ, ಅಭ್ಯಾಸ, ಚರ್ಚೆಗಳು ಎಡಸಿದ್ಧಾಂತದ ಕಡೆ ನನ್ನನ್ನು ಎಳೆದು ತಂದಾಗಲಷ್ಟೇ ನಮ್ಮ ಸುತ್ತಲಿನ ಕ್ರೂರ ವಾಸ್ತವಗಳ ನಿಜ ಅರ್ಥ, ಅದರಲ್ಲಿ ನನ್ನಂಥವರ ಪಾತ್ರಗಳ ಅರಿವು ಮೂಡಿದ್ದು. 'ದರಿದ್ರ ಸೂ–ಮಕ್ಳು ಈ ಲಿಂಗಾಯಿತ್ರು, ಬ್ರಾಹ್ಮಣರು ತಮ್ಮ ಸ್ವಾರ್ಥಕ್ಕಾಗಿ ಕ್ರೂರ ಜಾತಿ ಪದ್ಧತಿ....' ಎಂದೇ ಪಾಠ, ಭಾಷಣಗಳನ್ನು ಶುರುಮಾಡುತ್ತಿದ್ದ ನನ್ನ ಭಾವುಕತೆಯ ಅಪಾಯವನ್ನು ಸಾಮೂಹಿಕ ಸಂಘಟನೆಗಳನ್ನು ಮಾಡುವಾಗಲೆ ಕಾಣುವಂತಾಯ್ತು. ನಮ್ಮನ್ನು ತೀರ ಭಾವುಕರನ್ನಾಗಿಸುವ ಘಟನೆಗಳು ದಿನಂಪ್ರತಿ ದೇಶದಲ್ಲಿ ಆತಂಕಕಾರಿಯಾಗಿ ನಡೆಯುತ್ತಿವೆ. ಅವು ನಾಚಿಕೆ ಹೇಸಿಕೆ ತರಿಸುತ್ತವೆ. ಆದರೆ ಮೇಲ್ವರ್ಗ, ಮೇಲ್ಜಾತಿಗಳ ವಿರುದ್ಧದ ಐಕ್ಯ ಹೋರಾಟ, ಸಂಘಟನೆಗಳಷ್ಟೇ ಇದಕ್ಕೆಲ್ಲ ಪರಿಹಾರವಾಗಬಲ್ಲದು.

ಆರ್ಥಿಕ ಆಯಾಮ ಪಡೆದ (ಕೆಳ) ಜಾತಿ ಪ್ರಶ್ನೆ ಇರುವಲ್ಲಿ ಮೇಲ್ವರ್ಗದ ವಿರುದ್ಧ ಹೋರಾಟ ; ಸಾಮಾಜಿಕ, ಸಾಂಸ್ಕೃತಿಕ ಆಯಾಮ ಪಡೆದ (ಕೆಳ) ಜಾತಿ ಪ್ರಶ್ನೆ ಇರುವಲ್ಲಿ ಮೇಲ್ಜಾತಿಗಳ ವಿರುದ್ಧ ಹೋರಾಟ, ಆಯಾ ಸಂದರ್ಭ, ವಸ್ತುಸ್ಥಿತಿ, ಅನುಕೂಲ, ಪ್ರತಿಕೂಲ ಪರಿಸರಗಳ ಹಿನ್ನಲೆಯಲ್ಲಿ ಅನಿವಾರ್ಯವಿದೆ.

ಜಾತಿ, ದಾರಿದ್ರ್ಯಗಳ ನಿಕಟ ಸಂಬಂಧದಿಂದಾಗಿ. ಶತಶತಮಾನಗಳಿಂದ ಜಡವಾಗಿ, ಜಿಡ್ಡುಗಟ್ಟಿಕೊಂಡುಳಿದು ಬಂದ ದರಿದ್ರ ಮೌಲ್ಯಗಳ ಪರಿಸರದಲ್ಲಿ, ನನ್ನ ಜಾತಿಯ ಬಗ್ಗೆ ಹೇಸಿಕೆ ಪಡುವಂತಾದದ್ದು ; ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ, ರೈತ ಚಳುವಳಿಯಂಥ ಸಾಮೂಹಿಕ ಸಾಂಸ್ಕೃತಿಕ ಸಂಘಟನೆಗಳಲ್ಲಿ ತೊಡಗಿಕೊಂಡಾಗ.

ನನ್ನ ಹಳ್ಳಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ರೈತ ಸಂಘಟನೆಯನ್ನು ಬೆಳೆಸುವಾಗ, ಅಲ್ಲಿ ದಲಿತರ ಒಳಗೊಳ್ಳುವಿಕೆ, ಅವರ ಪಾತ್ರ, ಏಳುವ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಹರಿಸಿದಾಗ ಕಂಡು ಬಂದ ನನ್ನ ಅನುಭವಗಳನ್ನು ಇಲ್ಲಿ ಬರೆಯುತ್ತೇನೆ. ಈ ಅನುಭವ ಬಹಳ ದೊಡ್ಡವು, ಅತ್ಯಸಾಧಾರಣ, ವ್ಯಾಪಕ ಎಂಬ ಭ್ರಮೆ ನನಗಿಲ್ಲ. ಏಕೆಂದರೆ ನನ್ನ ಹಳ್ಳಿಯ ಪಕ್ಕದ ಹಳ್ಳಿಯಲ್ಲಿ ಪರಿಸ್ಥಿತಿ ಸಂಪೂರ್ಣ ಭಿನ್ನವಿದೆ.

ನನ್ನ ಹಳ್ಳಿಯ ದಲಿತ ದ್ಯಾಮ ಪ್ರಾಂತ ರೈತ ಸಂಘದ ಕಮಿಟಿಯ ಸದಸ್ಯ. ಕಮಿಟಿಯಲ್ಲಿ ಲಿಂಗಾಯತ, ಕುರುಬ, ಬೇಡ, ಮುಸ್ಲಿಂ, ಹರಿಜನ ಜಾತಿ ಕೋಮುಗಳ ಜನ ಇದ್ದಾರೆ. ಉಳಿದೆಲ್ಲ ಸದಸ್ಯರಿಗಿಂತ ದ್ಯಾಮ ಹೆಚ್ಚು ರ್‍ಯಾಡಿಕಲ್. ಆತ ಉಳಿದವರಂತೆ ಅನಕ್ಷರಸ್ಥ. ದೇವರು, ಮತ, ಧರ್ಮ, ನಂಬಿಕೆ, ಸಂಪ್ರದಾಯಗಳ ಕಡು ವಿರೋಧಿಯಾಗಿ ಬೆಳೆದಿದ್ದಾನೆ. ಆತನ ತೀವ್ರಗಾಮಿತ್ವ ಅವನಿಗೆ ಹಲವು ಸಲ ನಿಗ್ರಹ ಉಂಟುಮಾಡಿದೆ. ಆದರೆ ಅವನು ಹೇಳುವ ಕಹಿಸತ್ಯವನ್ನು ಅವರಾರೂ ಅಲ್ಲಗಳೆಯಲಾಗುವುದಿಲ್ಲ. ಎಲ್ಲ ಜಾತಿಗಳ ಸದಸ್ಯರು ಒಂದೆ ತಟ್ಟೆಯ ತಿಂಡಿಯನ್ನು ಸಾಮೂಹಿಕವಾಗಿ ತಿನ್ನುವಷ್ಟು ಪ್ರಗತಿಸಾಧ್ಯವಾಗಿದೆ. ಆದರೆ ಪಾವುಡದಪ್ಪನ (ಬಸವಣ್ಣ) ಗುಡಿಯಲ್ಲಿ ಮೀಟಿಂಗು ಸೇರಿದಾಗ, ದ್ಯಾಮ, ದಲಿತರು ಕಟ್ಟೆಯ ಕೆಳಗೆ ಕೂರುವುದು ನನಗೆ ತುಂಬ ಹಿಂಸೆಯ, ನೋವಿನದಾಗಿದೆ. ಕಮಿಟಿ ಸದಸ್ಯರೆಲ್ಲ ಸೇರಿದ್ದ ಒಂದು ಸಂದರ್ಭದಲ್ಲಿ ಓ ಎ ಪಿ ಮಾಡಿಸುತ್ತಿದ್ದಾಗ, 'ನೀವು ಒಳಗ ಬಂದ ಸಹಿ ಮಾಡಿದ್ರೆ ಮಾತ್ರ ಅಪ್ಲಿಕೇಷನ್ ತುಂಬತೇನ, ಇಲ್ದಿದ್ರ ಇಲ್ಲ' ಅಂತ ಪಟ್ಟು ಹಿಡಿದ. ಎಲ್ಲರೂ ಗಂಭೀರವಾದರು. ಹಳ್ಳಿಯಲ್ಲಿ ದಲಿತರವು ಬರಿ ನಾಲ್ಕೆ ಮನೆಗಳು. ಹಳ್ಳಿಯ ಇಡಿ ಸಾಮಾಜಿಕ ಚಟುವಟಿಕೆ ನಿಂತಿರೋದೆ ಸಾಧಾರಣ, ಈ ಜಾತಿ ವ್ಯವಸ್ಥೆಯ ಮೇಲೆ. ಈಗಲೂ ಸಂಬಂಧಗಳಲ್ಲಿ ದರಿದ್ರ ರಾಜಕೀಯ, ಆರ್ಥಿಕ ಕಾರಣಕ್ಕಾಗಿ ಬದಲಾವಣೆಗಳು ಬಂದಿಲ್ಲ. ಆಯಾ ಜಾತಿಯವರು, ಜಾತಿಗೆಲಸಗಳ ಮೇಲೆ ''ಆಯ್ಕೆ''ಯ ಸಂಬಂಧದಲ್ಲಿ ಪಾಳೆಯಗಾರಿ ಉಳಿದಿದೆ. ಹುಟ್ಟು, ಸಾವು, ಮದುವೆ, ಹಬ್ಬ, ಜಾತ್ರೆ ಮುಂತಾದೆಲ್ಲ ಸಾಮಾಜಿಕ ವಿಧಿ, ಆಚರಣೆಗಳಲ್ಲಿ ಜಾತಿಯ ಪಾತ್ರ ಅತ್ಯಗಾಧ, ಪ್ರಮುಖ. ಇಂಥಲ್ಲಿ ಹೆಜ್ಜೆ ಹೆಜ್ಜೆಗೂ ಜಾತ್ಯಾತೀತ ಪರಿಸರವನ್ನು ನಿರ್ಮಿಸುವುದು ಹೇಗೆ ಎಂಬುದೇ ನನ್ನ ಪ್ರಯತ್ನ. ನಾನು ನನ್ನ ಕುಟುಂಬವಷ್ಟೇ ಜಾತಿಯ ಎಲ್ಲ ಕರ್ಮ, ವಿಧಿ, ಸಂಪ್ರದಾಯ, ದೇವರುಗಳನ್ನು ಬಿಟ್ಟರಲ್ಲ, ಇಡೀ ಸಮಾಜ ಇವನ್ನೆಲ್ಲ ತ್ಯಜಿಸುತ್ತ 'ಸಮಾನತೆ' ಯನ್ನು ತರಬೇಕಾದುದಕ್ಕೆ ಹೋರಾಟ ನಡೆಯಬೇಕಿದೆ.

ಕ್ರಾಂತಿಯ ಪೂರ್ವಾವಶ್ಯಕತೆ, ದೇಶದ ಎಲ್ಲ ಜಾತಿಗಳ ಬಡವರನ್ನು ಒಗ್ಗೂಡಿಸಿದಾಗ ಮಾತ್ರ. ಆದರೆ ಜಾತಿ ಅಸ್ಪೃಶ್ಯತೆ ಪ್ರಶ್ನೆ ಬಂದಾಗ, ತೀವ್ರ ಸೈದ್ಧಾಂತಿಕ ಹೋರಾಟದ ಜರೂರು, ಹೊಡೆದು ಕಾಣುವುದು. ಹಡಗಲಿ ಎಂಬ ಈ ತಾಲ್ಲೂಕು ಸ್ಥಳದಲ್ಲಿ ಹೋಟಲುಗಳಲ್ಲಿ ಅಸ್ಪೃಶ್ಯತೆ ಇತ್ತು. ನಾವು ದಲಿತಕೇರಿಯಲ್ಲಿ ಕೆಲಸ ಶುರುಮಾಡಿ ದಲಿತರ ಮೌನ ಮೆರವಣಿಗೆ, ಮನವಿಗಳ ಮೂಲಕ ಹೋರಾಟಕ್ಕಿಳಿದ ನಂತರ ಅಸ್ಪೃಶ್ಯತೆ ನಿಂತುಹೋಯ್ತು. ಆದರೆ ಲಿಂಗಾಯತ ಬ್ರಾಹ್ಮಣ ಭೂಮಾಲಿಕರು ಹದಿನೈದು ದಿನಗಳವರೆಗೆ ದಲಿತರನ್ನು ಕೂಲಿಗೆ ಕರೆಯಲಿಲ್ಲ. ಅನಿವಾರ್ಯವಾದಾಗ ಕೂಲಿಗೆ ಕರೆದರು. ಎಲ್ಲ ಜಾತಿಗಳ ಬಡವರನ್ನು ಒಳಗೊಂಡ ರೈತಸಂಘಟನೆ ಸುರುಮಾಡಿದ ಹಳ್ಳಿಗಳಲ್ಲಿ ಭೂಮಾಲಿಕವರ್ಗ (ಹೆಚ್ಚಾಗಿ ಮೇಲ್ಜಾತಿ) ತೀವ್ರ ವಿರೋಧಿಸುತ್ತ ಸಂಘಟಕರನ್ನು ಹಿಂಸಿಸಿದೆ. ಒಡಕು ತರಲು ಸತತ ಯತ್ನಿಸುತ್ತಿದೆ.

ನನ್ನ ಹಳ್ಳಿಯಲ್ಲಿ ಲಿಂಗಾಯಿತರ ಹೋಟಲುಗಳಲ್ಲಿ ಅಸ್ಪೃಶ್ಯತೆ ಇಲ್ಲ. ನೀರು ಪಡೆಯುವಲ್ಲೂ ಇಲ್ಲ. ಆದರೆ ಮೇಲ್ಜಾತಿಗುಡಿ, ಮನೆಗಳಲ್ಲದೆ, ರೋಡಿನಿಂದ ದೂರವಿರುವ ಪಕ್ಕದ ಹಳ್ಳಿಯಲ್ಲಿ ಅಸ್ಪೃಶ್ಯತೆ ಭೂಮಾಲಿಕ ಶೋಷಣೆ, ರೈತಸಂಘವನ್ನು ಬೆಳೆಸಲು ಬಿಡುತ್ತಿಲ್ಲ. ಆದರೆ ಆ ಊರ ದಲಿತರು ಸಂಘಟನೆಗೆ ಮುಂದೆ ಬಂದಿದ್ದಾರೆ.

ಹೋರಾಟದ ಅಂಗವಾಗಿ ಎಲ್ಲರಲ್ಲೂ ಜಾತ್ಯಾತೀತ ಭಾವನೆ, ವೈಜ್ಞಾನಿಕ ವಿಚಾರಗಳನ್ನು ಬೆಳೆಸುತ್ತ ಹೋದಾಗ ಮಾತ್ರ ಹೊಸ ಮೌಲ್ಯಗಳನ್ನು ಬೆಳೆಸಲು ಸಾಧ್ಯ. ಈ ಹಂತಕ್ಕೆ ಇನ್ನೂ ಏರಿಬರದ ನನ್ನೂರ ಕಮಿಟಿ ಸದಸ್ಯರು, ದಲಿತರು ಗುಡಿ ಒಳಗೆ

ಬರಬೇಕೆಂಬ ನನ್ನ ಒತ್ತಾಯದ ಅರ್ಥ ಮಾಡಿಕೊಳ್ಳಲಿಲ್ಲ. ಅರ್ಥ ಮಾಡಿಕೊಂಡರೂ ಎಲ್ಲೋ ಯಾಕೋ ಹಿಂಜರಿತ. ವಿರೋಧಿಸಲೂ ಆರರು, ಸ್ವಾಗತಿಸಲೂ ಆರರು. 'ಎರ್ಡ ಸಾವ್ರ ದಂಡ ಆಕ್ಕಲೆ, ಜೇಲಾಕ್ಕಲೆ ನೀವ ಒಳಗ ಬರದಿದ್ರ ನಮಗ' ಎಂದಾಗಲೂ ಚಲನೆ ಇಲ್ಲ. ಇನ್ನೂ ಸ್ಥಿತಿ ಪಕ್ವವಾಗಿಲ್ಲ, ಆದರೆ ಇಂದಿಲ್ಲ ನಾಳೆ ಆಗೇ ತೀರುವ ಭರವಸೆಯನ್ನಷ್ಟೇ ಇಟ್ಟುಕೊಂಡು ಆಗ ವಾತಾವರಣ ಸಡಿಲಗೊಳಿಸಬೇಕಾಯ್ತು.

ಮನೆಗೆ ಸ್ನೇಹಿತರ್ಯಾರಾದರೂ ಬಂದಾಗ ಕರ್ಮಠ ಜಾತಿವಾದಿ ಅಪ್ಪ ಬಂದವರ ಜಾತಿ ಕೇಳದೆ ಬಿಡುತ್ತಿರಲಿಲ್ಲ, ಮತ್ತು ಆಯಾ ಜಾತಿಗಳ ಅಂತಸ್ಥಿಗೆ ತಕ್ಕಂತೆ ಆದರಾತಿಥ್ಯ ನಡೆಯುತ್ತಿತ್ತು. ಆದರೆ ಚಳುವಳಿ ಹೆಚ್ಚಿದಂತೆಲ್ಲ ಅಪ್ಪನ ಜತೆ ಸೈದ್ಧಾಂತಿಕ ಚರ್ಚೆಗೆ ಇಳಿದಂತೆ ಅಪ್ಪ ಹಿತೈಷಿಯಾದ. ಯಾರೆ ಬಂದರೂ ಜಾತಿಯನ್ನು ಕೇಳುವುದನ್ನು ಬಿಟ್ಟಿದ್ದಾರೆ. ದಲಿತ ಸ್ನೇಹಿತರ ಜೊತೆ ಅಡಿಗೆಮನೆಯಲ್ಲೇ ಕೂತುಂಡರೂ ಪ್ರಶ್ನಿಸುವುದಿಲ್ಲ. ಯಾರಿಗೂ ಒಂದೆ ಸಮನೆ ಮರ್ಯಾದೆ ಸಲ್ಲಿಸುತ್ತಾರೆ. ಆದರೆ ನನ್ನ ಹಳ್ಳಿಯ ದಲಿತ 'ಪರಿಚಿತ' ದ್ಯಾಮ ನನ್ನ ಜತೆ ಅಡಿಗೆ ಮನೆಗೆ ಬರುವುದನ್ನು ಅವರು ಸಹಿಸುವುದಿಲ್ಲ ಅನಿಸುತ್ತೆ. ನಾನು ಸ್ವತಂತ್ರನಿರುವಲ್ಲಿ ಅವರು ಯಾವ ತಕರಾರು ಮಾಡುವಂತಿಲ್ಲ.

ದನದ ಹೇಲು (ಸಗಣಿ) ಮನೆ ತುಂಬ, ದೇವರ ಜಗಲಿ, ತುಂಬ ಸಾರಿಸುವ, ಅದನ್ನು ಸುಟ್ಟು ಬೂದಿ ಮೈತುಂಬ ಬಳಿದುಕೊಳ್ಳುವ, ತಿನ್ನುವ, ಅದನ್ನು (ಸಗಣಿ) ದೇವರಂತೆ (ಪಾಂಡವರ ಹಬ್ಬ) ಪೂಜಿಸುವ, ಮನುಷ್ಯನಿಗಿಂತ ಯಾವ ರೀತಿಯಿಂದಲೂ ಮೇಲಲ್ಲದ (!) ಮಂಗ, ಆಕಳು, ಹೋರಿ, ಇಲಿ ಮುಂತಾದ ಪ್ರಾಣಿಗಳನ್ನು ಪೂಜಿಸುವ, (ಇವರ ಹೇಲನ್ನೇ ತಿಂದ ಆಕಳನ್ನು ಅವರ ಹೇಲನ್ನು ಇವರು ಪೂಜಿಸುವರು (!) ಆಕಳುಚ್ಚೆಯನ್ನು ಪವಿತ್ರಗೊಳಿಸಲು ದೀಕ್ಷೆಯ ಸಮಯದಲ್ಲಿ ಕುಡಿಸುವ ಹೀನ, ಹೇಸಿ ಅನಾಗರಿಕ ಜನಾಂಗ ನಮ್ಮದು. ಇದೆಲ್ಲ ವಿಚಾರ ರೈತ ಸಂಘದವರೆದುರು ಮಾತಾಡುತ್ತಿದ್ದರೆ ಹಾಸ್ಯದಲ್ಲಿ ಒಳಗೊಳ್ಳುತ್ತಾರೆ. ಕೆಳಜಾತಿಯ ಕೆಲ ರಸಿಕರು, ಲಿಂಗಾಯತರನ್ನು, 'ಗೋರ್ಯಾಗ (ಗುಂಡಗಡಿಗೆ= ಕರಡಿಗೆ= ಚೌಕ) ನಿಂಗಪ್ಪನ ಉಸರ ಕಟ್ಟಿ ಹುಗದ ದಿನ ಒಮ್ಮೊಮ್ಮೆ ಎಲಿ (ಪತ್ರಿ)ಏರಿಸಿದ್ರ ಏನ ಬಂತ' ಎಂದೆಲ್ಲ ನಕಲಿ ಮಾಡುತ್ತಾರೆ.

ಕುರುಬರಿಗೂ, ಲಿಂಗಾಯತರಿಗೂ ಊರಲ್ಲಿ ಮೊದಲೆಲ್ಲಾ ದೊಡ್ಡ ಪಾರ್ಟಿ. ಈಗ ರೈತಸಂಘದಲ್ಲಿ ಇಬ್ಬರೂ ಜತೆಗೂಡಿ ಹೋರಾಡುತ್ತಾರೆ. ಇಬ್ಬರದೂ ಮೆಜಾರಿಟಿ ಇದೆ. ದುರಗಮ್ಮನ ಜಾತ್ರೆಯಲ್ಲಿ ಲಿಂಗಾಯತರೂ 'ಪ್ರಸಾದ' ತಕೊಳ್ಳಬೇಕೆಂದು ಕುರುಬರ ಒತ್ತಾಯ ಬಂತು. ಒಡಕ್ಕೆ ತರುವ ಹಬ್ಬ, ದೇವರು, ಜಾತಿ, ಜಾತ್ರೆ, ಪದ್ಧತಿಗಳೆ ಬೇಡವೆಂದರೆ ದಿಗಿಲಾಗುತ್ತಾರೆ. ಆದರೆ ಈ ಹಂತದ ಬೆಳವಣಿಗೆ ಅಂದರೆ ರೈತಸಂಘದ ಹಲವು ಲಿಂಗಾಯತ ಸದಸ್ಯರು ಕುರುಬರ ಜತೆ ಸಾಮೂಹಿಕ ಭೋಜನದಲ್ಲಿ ಪಾಲ್ಗೊಂಡದ್ದು.

ಉದ್ದೇಶಪೂರ್ವಕವಾಗಿ ಸತತವಾಗಿ ಜಾತ್ಯಾತೀತತೆಯನ್ನು ಬೆಳೆಸುವತ್ತ ಸಾಮೂಹಿಕವಾಗಿ ಚಳುವಳಿಗಾರರು ಯತ್ನಿಸಿದಾಗ ಮಾತ್ರ ಅಲ್ಪ ಸ್ವಲ್ಪ ಫಲ ದೊರೆಯುತ್ತ ಬರುವುದು.

ಜಾತಿ ಸಮಸ್ಯೆಯ ಜತೆಗೆ ಆರ್ಥಿಕ ಸಮಸ್ಯೆ ಬೆಸೆದಿದೆ. ಜಾತಿ, ಭಾರತದಲ್ಲಿ ಅತ್ಯದ್ಭುತ ರೀತಿಯಲ್ಲಿ ಹೀನ ಕೆಲಸ ಮಾಡುತ್ತ ಬಂದಿದೆ. ನಮ್ಮ ಸಮಾಜ ವ್ಯವಸ್ಥೆ ದೊಡ್ಡ ಬದಲಾವಣೆಗಳನ್ನು ಕಾಣದೇ ಇರಲು ಈ ಜಾತಿಯ ಪಾತ್ರವೆ ದೊಡ್ಡದು. ಆಳುವ ಶೋಷಕ ವರ್ಗ ಜಾತಿಗಳಿಗೆ ಕ್ರೂರ ಶೋಷಣೆಗೆ ಜಾತಿಪದ್ಧತಿ ತುಂಬ ಅನುಕೂಲವಾಯ್ತು. ಈಗಲೂ ಹಳ್ಳಿಗರು ಜೀವಕ್ಕಿಂತ ಹೆಚ್ಚಾಗಿ ಜಾತಿ ಸಾಂಪ್ರದಾಯ, ಪದ್ಧತಿ ಪರಂಪರೆಗಳಿಗೆ ಅಂಟಿದ್ದಾರೆ. ಹೊಸ ಚಳುವಳಿಗಳು, ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆ ಬರದೇ, ಅವರಲ್ಲಿ ಮೂಲಭೂತ ಪ್ರಗತಿ ಕಾಣೆವು. "ಜಾತಿ", ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಆಯಾಮಗಳನ್ನು ಒಳಗೊಳ್ಳುವ ಒಂದೇ ಪದವಾಗಿ ಪಾಳೆಗಾರಿ ಸಮಾಜದ ಭಾರತದಲ್ಲಿ ಕೆಲಸ ಮಾಡಿತು. ಆದರೆ ವರ್ಗದ ರೂಪ ತಳೆಯುತ್ತಿರುವ, ಜಾತಿಯ ಹಿಡಿತ, ಕ್ರೂರ ಅವಶೇಷಗಳಿರುವ ಈಗಿನ ಸ್ಥಿತಿಯಲ್ಲಿ ವರ್ಗ-ಜಾತಿ ಹೋರಾಟಗಳು, ವಿಶಿಷ್ಟ ರೀತಿಯಲ್ಲಿ ನಡೆಯಬೇಕಿದೆ. ಜಾತ್ಯಾತೀತ ಮದುವೆಗಳು, ಸಾಮೂಹಿಕ ಭೋಜನಗಳು, ದೇವಾಲಯ ಪ್ರವೇಶ ಚಳುವಳಿ (ಪ್ರಗತಿಪರವಲ್ಲದಿದ್ದರೂ ಒಂದು ಹೆಜ್ಜೆ ಮುಂದಿಡುವತ್ತ) ಮುಂತಾದವು ಸಾಮೂಹಿಕ ಚಳುವಳಿಯ ರೂಪ ಪಡೆದು ಬರಬೇಕು. ಎಲ್ಲ ಜಾತಿಗಳ ಕಮಿಟೆಡ್ ಜನ ಈ ಹೋರಾಟಗಳ ಜತೆಗೆ ಭೂಮಿಗಾಗಿ, ಕೂಲಿರೇಟಿಗಾಗಿ, ಸಾಲ, ಕರಗಳ ವಿರುದ್ಧ, ಸರಿಯಾದ ವರ್ಗದ ಕಲ್ಪನೆಯ ಹಿನ್ನೆಲೆಯಲ್ಲಿ ಹೋರಾಡಿದಾಗಲೆ, ದಲಿತರಲ್ಲಿಯ ಮುಜಗರ, ಹೀನ ಭಾವನೆ, ಅಳುಕು, ಮೇಲ್ಜಾತಿಗಳ ಹೀನ ಒಣಪ್ರತಿಷ್ಠೆ, ಧಿಮಾಕು ಆಡಂಬರಗಳನ್ನು ನಾಶ ಮಾಡುವದಾದೀತು.

• ಒಂದೊಂದು ಜಾತಿಗೆ ಬೇರೆ ಬೇರೆ ವಾದ್ಯಗಳನ್ನು ಮಾಡಿಡಲಾಗಿದೆಯಷ್ಟೆ. ದಲಿತರು ಹಲಗೆ ಬಾರಿಸುವಂಥವನ್ನು ತ್ಯಜಿಸಬೇಕಾಗಿರುವುದು ಒಂದೆಡೆಯಾದರೆ ಮತ್ತೊಂದೆಡೆ ಮೇಲ್ಜಾತಿಯರೇ ಎಲ್ಲರ ವಾದ್ಯಗಳನ್ನು, ಕೆಳಜಾತಿಯವರು ಎಲ್ಲರ ವಾದ್ಯಗಳನ್ನು ಬಳಸುವುದು ಸರಿ. ರೈತಸಂಘದಿಂದ ಜಾಥಾ ಒಯ್ಯುವಾಗ ದಲಿತರ ಹಲಗೆಯನ್ನು ಬಾರಿಸುತ್ತ ಬಂದೆ. ಮೇಲ್ಜಾತಿ ಜನ ಅವನ್ನು ಆಶ್ಚರ್ಯ ಪಡುತ್ತ ಒಪ್ಪುತ್ತ ಬರುತ್ತಿದ್ದಾರೆಂಬುದು ಒಂಚೂರು ಗುಣಾತ್ಮಕ ಬೆಳವಣಿಗೆಯನ್ನು ಗಮನಿಸುವ ಸಣ್ಣ ಅಂಶವಾಗುತ್ತದೆ.

ದಲಿತರ ಮೇಲೆ ಹಲ್ಲೆ : ರೈತಸಂಘಕ್ಕೆ ಎಚ್ಚರಿಕೆ

ಕರ್ನಾಟಕದಲ್ಲಿನ ರೈತ ಸಂಘಟನೆ ಅಸ್ತಿತ್ವಕ್ಕೆ ಬಂದು ಸುಮಾರು ಮೂರು ವರುಷಗಳು ಸಂದಿವೆ. ಈ ಸಂಘಟನೆ ರಾಜಕೀಯ ಹಿನ್ನಲೆ ಹೊಂದಿದೆಯೇನೋ ಎನ್ನುವ ಅನುಮಾನದಲ್ಲಿಯೂ ಕೂಡ ಇಲ್ಲಿ ಯೋಚನಾ ಶೀಲ, ವಿಚಾರವಂತ ವ್ಯಕ್ತಿಗಳಿದ್ದಾರೆಂಬುದನ್ನು ಒಪ್ಪಿಕೊಂಡರೂ ಕೂಡ ಇಲ್ಲಿನ ಕೆಲ ಜಾತಿವಾದಿ ರೈತ ಮುಖಂಡರ ಧೋರಣೆಯಿಂದಾಗಿ ಈ ಸಂಘ ತನ್ನ ಅಸ್ತಿತ್ವ ಕಳೆದುಕೊಳ್ಳುವ ಸಾಧ್ಯತೆ ಇದೆ.

ಪ್ರಾಮಾಣಿಕವಾಗಿ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲರಾದ ರೈತ ಮುಖಂಡರುಗಳು ರೈತರ ಒಗ್ಗಟನ್ನು ಜಾತೀಯ ವಿಷಬೀಜ ಬಿತ್ತುವ ಮೂಲಕ ತಮ್ಮ ಸ್ವಂತಃ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಲ್ಲಿ ತೊಡಗಿರುವುದು ಕಂಡುಬರುತ್ತಲಿದೆ.

ಇಂದು ಹಳ್ಳಿಗಳಲ್ಲಿ ವಿಚಾರವಂತ ರೈತ ನಾಯಕರನ್ನೂ ಮೀರಿಯೂ ಹಳ್ಳಿಗಳ ಜಮೀನುದಾರರು ತಮಗೆ ರೈತಸಂಘದ ಸಹಕಾರವಿರುವುದರಿಂದ ಪೋಲೀಸ್, ಸರಕಾರ, ಕಾನೂನು ಏನೂ ಮಾಡದು ಎಂಬ ಧಿಮಾಕಿನಿಂದ ಮತ್ತೆ ದಲಿತರ ಮೇಲೆ ಹಲ್ಲೆ, ಸುಲಿಗೆ ನಡೆಸುತ್ತಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಬಸಲಾಪುರದ ಘಟನೆ ಹಾಗೂ ಪತ್ರಕರ್ತ ಪುಟ್ಟರಾಮು ಮೇಲೆ ನಡೆದ ಹಲ್ಲೆಯೇ ಸಾಕ್ಷಿ.

ಈ ರೀತಿಯಾಗಿ ದಲಿತ ವಿರೋಧಿ ಧೋರಣೆಯನ್ನು ರೈತಸಂಘ ತಳೆಯುವುದಾದರೆ ಅದು ತನ್ನ ಅಸ್ತಿತ್ವ ಕಳೆದುಕೊಳ್ಳುವುದರಲ್ಲಿ ಅನುಮಾನ ಬೇಕಿಲ್ಲ.

– ರಂಗನಹಳ್ಳಿ ಭಾಸ್ಕರ
ತುಮಕೂರು

ಇಂಡಿಯದ ರಾಜಕೀಯಪಕ್ಷಗಳು ಮತ್ತು ದಲಿತ ರೈತರು

"ಈ ಹರಿಜನರೆಂಬುವರಿಗೆ ಪಾಠ ಕಲಿಸದೇಹೋದರೆ ನಾವು ನಮ್ಮ ಅಪ್ಪಂದಿರಿಗೆ ಹುಟ್ಟಿದ ಮಕ್ಕಳೇ ಅಲ್ಲ" ಇದು ಭರತಖಂಡವನ್ನು ಸ್ವರ್ಗವನ್ನಾಗಿಸುವ ಬೃಹತ್‌ಯೋಜನೆಗಳು ಸಿದ್ಧಗೊಳ್ಳುವ ರಾಜಧಾನಿ ದೆಹಲಿಗೆ ಕೂಗಳತೆಯಲ್ಲಿರುವ ಕಂಜಾವಾಲಾ ಎಂಬ ಕುಗ್ರಾಮದ ೧೦ ವರ್ಷದ ರೈತ ಹುಡುಗ ಆಡಿದ ಮಾತು. ಈ ಕುಗ್ರಾಮದ ಹರಿಜನರು ಎಸಗಿರುವ ಅಪರಾಧವೆಂದರೆ ಭೂರಹಿತ ಕೂಲಿಕಾರರಾಗಿದ್ದ ಅವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಅಲ್ಲಿ ಪಾಳುಬಿದ್ದಿದ್ದ ಗೋಮಾಳದ ಜಮೀನನ್ನು ಪಡೆದದ್ದು.

ಇದರ ವಿರುದ್ಧ ಆ ಕುಗ್ರಾಮದ (ಕಂಜಾವಾಲಾ) ರೈತರು (ಮಧ್ಯಮ ಜಾತಿಗಳವರು ಜಾಟ್‌ರು, ಯಾದವರು ಮುಂತಾದವರು) ಸುದೀರ್ಘ ಚಳುವಳಿಯೊಂದನ್ನೇ ನಡೆಸಿದ್ದಾರೆ. ಈ ಚಳುವಳಿ ಇದುವರೆಗೆ ಏನನ್ನು ಸಾಧಿಸದಿದ್ದರೂ (ಚರಣಸಿಂಗ್ ಪ್ರಧಾನ ಮಂತ್ರಿ ಆಗಿದ್ದಾಗಲೂ ಕೂಡಾ) ಹೆಂಗಸರು ಮಕ್ಕಳೆನ್ನದೇ ಇಡೀ ಗ್ರಾಮದ ಮನಸ್ಸನ್ನು ಹರಿಜನ ದ್ವೇಷದಿಂದ ಕಲುಷಿತಗೊಳಿಸಿದೆ. ಈ ಭರತಖಂಡದ ಬಹುಪಾಲು ಗ್ರಾಮಗಳ ಪರಿಸ್ಥಿತಿ ಹೆಚ್ಚು ಕಡಿಮೆ ಇದೇ ಆಗಿದೆ. ವೈವಿಧ್ಯತೆಯಲ್ಲಿನ ಏಕತೆ ತಾನೇ ಈ ಭರತಖಂಡದ ವೈಶಿಷ್ಟ್ಯ ? ಬಿಹಾರದ ಬೆಲ್ಚಿಯಾದರೇನು, ಉತ್ತರ ಪ್ರದೇಶದ ಪಂತನಗರವಾದರೇನು ? ಅಥವಾ ದಕ್ಷಿಣದಲ್ಲಿ ತಮಿಳ್ನಾಡಿನ ವಿಲ್ಲುಪುರಂ ಆದರೇನು ? ಕರ್ನಾಟಕದ ಹುಣಸೀಕೋಟೆ ಆದರೇನು ? ಎಲ್ಲ ಕಡೆ ಭರತಖಂಡ ಬಯಸುವುದು ದಲಿತರ ರಕ್ತವನ್ನೇ ! ದಲಿತ ಎಂದರೆ ಹರಿಜನನೇ ಆಗಿರಬಹುದು, ಇಲ್ಲವೇ ಭೂಮಿಕಾಣಿ ಇಲ್ಲದ ನಿರ್ಗತಿಕವಾದ ಅತ್ಯಂತ ಕೆಳಜಾತಿಗಳಿಗೆ ಸೇರಿದವನಾಗಿರಬಹುದು. ಆದರೆ ದಲಿತ ಎಂದರೆ ಹರಿಜನ ಎಂದೇ ಹೇಳುವಷ್ಟರಮಟ್ಟಿಗೆ, ಈ ಭರತಖಂಡ ನಿಶ್ಚಿಂತೆಯಿಂದ ಕಂಡಿರುವ ರಕ್ತದಲ್ಲಿ ಹರಿಜನರ ದೊಡ್ಡ ಪಾಲಿದೆ.

ಇಲ್ಲಿ ಮುಖ್ಯ ಪ್ರಶ್ನೆ ಎಂದರೆ ಈ ಇಡೀ ಸಮಸ್ಯೆಯನ್ನು ಜಾತಿಕೋನವೊಂದರಿಂದಲೇ ಪರಿಶೀಲಿಸಲು ಸಾಧ್ಯವೇ ? ಪ್ರಕರಣಗಳನ್ನು ಬಿಡಿಬಿಡಿಯಾಗಿ ನೋಡುತ್ತಾ ಹೋದಾಗ ಬಹಳಷ್ಟು ಕಡೆ ದಲಿತರ ಮೇಲಿನ ದೌರ್ಜನ್ಯ ಮತ್ತು ಭೂವಿವಾದಗಳು ಬೇರೆ ಬೇರೆ ಅಲ್ಲವೇ ಅಲ್ಲ ಎನ್ನುವಷ್ಟು ಒಂದರಲ್ಲೊಂದು ಹಾಸುಹೊಕ್ಕಾಗಿವೆ. ತಾಜಾ ಅಂಕಿ ಅಂಶ ಲಭ್ಯವಿರುವ 1978ರ ಸಾಲಿನಲ್ಲಿ, ದಾಖಲಾದ 15 ಲಕ್ಷ ಸರ್ವರೀತಿಯ ಅಪರಾಧಗಳ ಪೈಕಿ 3 ಲಕ್ಷ ಅಪರಾಧಗಳು ಭೂವಿವಾದಗಳಿಗೆ ಸಂಬಂಧಿಸಿದಂತೆ ನಡೆದವು ಎಂಬುದು ಗಮನಾರ್ಹ. ದೇಶದ ಶೇಕಡಾ 87 ರಷ್ಟು ಹರಿಜನರು ಜೀವನೋಪಾಯಕ್ಕಾಗಿ ಭೂಮಿಯನ್ನೇ (ಹೊಲಗದ್ದೆಗಳಲ್ಲಿ ಕೂಲಿನಾಲಿ) ಅವಲಂಬಿಸಿದ್ದಾರೆ ಎಂಬ ಮತ್ತೊಂದು ಅಂಶ ಸಮಸ್ಯೆಯ ಮೇಲೆ ಇನ್ನೊಂದಿಷ್ಟು ಬೆಳಕು ಚೆಲ್ಲುತ್ತದೆ. ಈ ಅಪರಾಧಗಳಲ್ಲಿ ರಕ್ತ ಚೆಲ್ಲಿದವರು ಯಾರು ಎಂಬುದನ್ನು ನಿಚ್ಚಳಗೊಳಿಸುತ್ತದೆ.

ಇಂಡಿಯಾದ ಜಾತಿಪದ್ಧತಿ ಕೆಲವು ಬಾರಿ ಸಾಮಾಜಿಕ ವ್ಯವಸ್ಥೆಯಾಗಿಯೂ, ಇನ್ನು ಕೆಲವು ಬಾರಿ ಆರ್ಥಿಕ ವ್ಯವಸ್ಥೆಯಾಗಿಯೂ ಕಾಣಿಸಿಕೊಳ್ಳುತ್ತದೆ. ಯಾವುದಾಗಿ ಅದು ಕಾಣಿಸಿಕೊಳ್ಳುತ್ತದೆ ಎಂಬುದು, ಕಾಣುತ್ತಿರುವವರು ಯಾರು (ಅವರ ಸ್ಥಾನಮಾನ ಸಾಮಾಜಿಕವಾದದ್ದೋ, ಆರ್ಥಿಕವಾದದ್ದೋ) ಎಂಬುದನ್ನು ಬಹುವಾಗಿ ಅವಲಂಬಿಸಿರುತ್ತದೆ. ಆದರೆ ನಿಜ ಸಂಗತಿ ಎಂದರೆ ಈ ಜಾತಿಪದ್ಧತಿಯು ಈ ಮೂರು ಸಾವಿರ ವರ್ಷ

ಮಾನವ

ಗಳಲ್ಲಿ ಸಾಮಾಜಿಕದೊಳಕ್ಕೆ ಆರ್ಥಿಕವನ್ನೂ ಆರ್ಥಿಕದೊಳಕ್ಕೆ ಸಾಮಾಜಿಕವನ್ನೂ ಸುತ್ತಿಕೊಂಡು ಯಾವುದೇ ಒಂದು ಕೋನದ ನೋಟಕ್ಕೆ ಪೂರ್ಣವಾಗಿ ಸಿಗದಂತಹ ಒಂದು ಅತಿ ಸಂಕೀರ್ಣ ಸಂಘಟನೆಯಾಗಿಬಿಟ್ಟಿದೆ. ಬಹುಶಃ ಈ ಒಂದು ಕೋನದ ನೋಟದ ಕಾರಣದಿಂದಲೇ ಜಾತಿವ್ಯೂಹವನ್ನು ಬೇಧಿಸುವ ಈವರೆಗಿನ ಎಲ್ಲ ಪ್ರಯತ್ನಗಳೂ ಹುಸಿಪ್ರಯತ್ನಗಳೋ ಅಪೂರ್ಣಪ್ರಯತ್ನಗಳೋ ಆಗಿ ಉಳಿದು ಹೋಗಿವೆ. ದಲಿತರು, ಜಾತಿಯ ಈ ಸನಾತನ ಗುದಮುರಿಗೆಯಲ್ಲಿ ಹಿಂಡಿಹೋಗಿ ಸಾಮಾಜಿಕ ಹಾಗೂ ಆರ್ಥಿಕ ಎರಡೂ ಮಟ್ಟಗಳಲ್ಲಿ ನಿಕೃಷ್ಟವಾಗಿರುವವರು. ಈ ಹಿನ್ನೆಲೆಯಲ್ಲೇ ಡಾ. ಅಂಬೇಡ್ಕರ್ ಅವರು ದಲಿತರನ್ನು, ಹಿಂದೂ ಸಮಾಜದ ಉತ್ಕರ್ಷಕಾಲದಲ್ಲಿನ 'ಡೆಡ್‌ವೈಟ್‌ಗಳು' ಹಾಗೂ ಉತ್ಕಟ ಕಾಲದಲ್ಲಿನ 'ಷಾಕ್ ಅಬ್ಸಾರ್ಬರ್'ಗಳು' ಎಂದು ವರ್ಣಿಸಿರುವುದು.

ಹಾಗೆ ನೋಡಿದರೆ ನಮ್ಮ ಕಾಲವೇನೂ ಹಿಂದೂ ಸಮಾಜದ ಉತ್ಕರ್ಷ ಕಾಲವೇನೂ ಅಲ್ಲ. ಬದಲಾಗಿ ಇದೊಂದು ಅತ್ಯಂತ ಉತ್ಕಟ ಕಾಲ. ಆದರೆ ದಲಿತರು ಹಿಂದಿನ ಮೂರು ಸಾವಿರ ವರ್ಷಗಳಲ್ಲಿನ ಷಾಕ್ ಅಬ್ಸಾರ್ಬರ್‌ಗಳಾಗಿ ಮಾತ್ರ ಈಗ ಉಳಿದಿಲ್ಲ. ಜಾಗತಿಕ ಮಟ್ಟದ ಕಮ್ಯೂನಿಸ್ಟ್ ಕ್ರಾಂತಿ ಈ ಸಮುದಾಯದ ಮುಂಚೂಣಿಯಲ್ಲಾದರೂ ಆರ್ಥಿಕ ಪ್ರಜ್ಞೆಯ ಅಲೆಗಳನ್ನೆಬ್ಬಿಸಿದ್ದರೆ ; ಇಂಡಿಯಾದೊಳಗಿನವರೇ ಆದ ವಿವೇಕಾನಂದ, ಗಾಂಧೀಜಿ ಹಾಗೂ ಅಂಬೇಡ್ಕರರ ಆಂದೋಲನಗಳು ವಿಭಿನ್ನ ದಿಕ್ಕುಗಳಿಂದ ಸಾಮಾಜಿಕ ಪ್ರಜ್ಞೆಯ ಅಲೆಗಳನ್ನೆಬ್ಬಿಸಿವೆ. ನುಗ್ಗಿ ಬರುವ ಈ ಅಲೆಗಳು ಪರಸ್ಪರ ಎದುರಾಗಿ ಬರೀ ಕಾಲ್ಪನಿಕ ಕೋಲಾಹಲವಷ್ಟೇ ಆಗಿ ಮುಗಿಯದಂತೆ ; ಈ ಎರಡೂ ಪ್ರಜ್ಞೆಗಳನ್ನು ಚಾರಿತ್ರಿಕವಾಗಿ ಬೆಸೆದು ಒಂದು ಪ್ರಜಾಪ್ರಭುತ್ವವಾದೀ ಸಮತಾ ರಾಜಕೀಯ ಚೈತನ್ಯವನ್ನಾಗಿ ಮಾರ್ಪಡಿಸುವ, ಲೋಹಿಯಾ ಅವರ ಜಾತಿವಿನಾಶದ ಸಮಗ್ರ ಆಂದೋಲನದ ಪ್ರಭಾವವೂ ಹಿಂದಿ ಒಳನಾಡಿನ ಬಹು ಭಾಗದಲ್ಲಿ ಹಾಗೂ ದಕ್ಷಿಣದ ಕೆಲವೆಡೆಗಳಲ್ಲಿ ಕೆಲಸ ಮಾಡತೊಡಗಿದೆ. ಇದೆಲ್ಲದರ ಪರಿಣಾಮವೆಂದರೆ 'ಷಾಕ್ ಅಬ್ಸಾರ್ಬರ್' ಗಳು ಕ್ರಮೇಣ 'ಷಾಕ್ ಜನರೇಟರ್' ಗಳಾಗಿ ಮಾರ್ಪಾಡಾಗತೊಡಗಿವೆ. ಸಾವಿರಾರು ವರ್ಷಗಳಿಂದ ಮಡುಗಟ್ಟಿದ ಅವಮಾನ, ಹತಾಶೆ ಹಾಗೂ ಸಿಟ್ಟು ಹೊರದಾರಿಗಳ ಸಾಧ್ಯತೆಗಳಿದ್ದೆಡೆಯಲ್ಲೆಲ್ಲಾ ಆಸ್ಫೋಟಿಸತೊಡಗಿದೆ. ಈ ಪ್ರತಿ ಆಸ್ಫೋಟನೆಯೂ ಹಿಂದೂ ಸಮಾಜದ ಸಾವಿರಾರು ವರ್ಷಗಳಷ್ಟು ಕೊಬ್ಬಿದ ಅಹಂನ ಮೇಲೆ ಎಳೆಯಲಾಗುತ್ತಿರುವ ಒಂದೊಂದು ಬರೆಯಾಗುತ್ತಿದೆ.

ಬೇಸಾಯದ ಸುತ್ತಲೇ ಒಟ್ಟಾರೆ ಬದುಕು ಚಿಗುರೊಡೆಯುವ ಗ್ರಾಮ ಪ್ರಧಾನವಾದ ಇಂಡಿಯಾದಲ್ಲಿ ಇಂತಹ ಬಹಳಷ್ಟು ಆಸ್ಫೋಟನೆಗಳು ಭೂ ಒಡೆತನಕ್ಕೆ ಸಂಬಂಧಿಸಿದಂತೆಯೇ ಸಂಭವಿಸುವುದು ಸಹಜವೇ ಆಗಿದೆ. ಹೈದರಾಬಾದ್‌ನಲ್ಲಿರುವ ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಸಂಸ್ಥೆಯಲ್ಲಿನ ಸಮಾಜ ವಿಜ್ಞಾನಿ ಅಲೆಕ್ಸಾಂಡರ್ ಅವರ ಪ್ರಕಾರ "ಭೂ ಒಡೆತನಕ್ಕೆ ಸಂಬಂಧಪಟ್ಟ ಬಹುತೇಕ ಘರ್ಷಣೆಗಳು ಸಂಭವಿಸುವುದು, ಬಡ ಹರಿಜನರು ಜನಸಂಖ್ಯೆಯ ಶೇಕಡಾ 40ಕ್ಕೂ ಮೀರಿ ಇರುವ ಪ್ರದೇಶಗಳಲ್ಲಿ". ಬಡ ಹರಿಜನರೆಂದರೆ ಬಹುತೇಕ ಭೂರಹಿತ ಕೃಷಿ ಕೂಲಿಕಾರರೇ ಆಗಿರು

ರೆಂಬ ಸಂಗತಿ ಹಿನ್ನೆಲೆಯಲ್ಲಿ ಇದು ಕುತೂಹಲ ಟ್ಟಿಸುವ ಅಂಶವೇನೂ ಅಲ್ಲ. ಆದರೆ ನಿಜವಾ ಯೂ (ವಿಷಾದದ) ಕುತೂಹಲ ಹುಟ್ಟಿಸುವ ಂಶ ಎಂದರೆ ಸ್ವಾತಂತ್ರ್ಯಾನಂತರದ ಮುವ್ವತ್ತ ್ಕ ಹೆಚ್ಚು ವರ್ಷಗಳ ಕಾಲದಲ್ಲಿ ಶಾಸನಬದ್ಧವಾ ನಿರ್ದೇಶಿತವಾಗಿರುವ ಅಪಾರ ಪ್ರಮಾಣದ ಭೂ ಂಚಿಕೆಯ ಫಲ ತಲುಪಬೇಕಾದವರಿಗೆ ತಲುಪೇ ಲ್ಲವೇಕೆ ಎಂಬುದು.

ಭೂ ಒಡೆತನ ಎಂಬುದು ಬ್ರಿಟಿಷ್ ಪರಿಕಲ್ಪನೆ. ್ರಾಚೀನ ಭಾರತದಲ್ಲಿ ಭೂ ಒಡೆತನವೆಂಬುದೇ ಇರಲಿಲ್ಲವೆಂದು ಹೇಳಲಾಗುತ್ತದೆ. ಭೂಮಿಯ ಮೇಲಿನ 'ಹಕ್ಕು', ಉಳುವ ಹಕ್ಕಿನ ರೂಪದಲ್ಲಿ ಮಾತ್ರ ವಂಶ ಪಾರಂಪರ್ಯವಾಗಿ ವರ್ಗಾಯಿಸಲ್ಪ ಡುತ್ತಿತ್ತು. ಆದರೆ ವಸಾಹತು ಸರ್ಕಾರ ಭೂಮಿ ಎನ್ನುವುದು ಒಂದು ಸ್ಥಿರಾಸ್ತಿ ಎನ್ನುವ ತನ್ನ ನಾಯ್ನಾಡು ಕಲ್ಪನೆಯನ್ನು ಇಂಡಿಯಾದಲ್ಲಿ ಜಾರಿ ತಂದಿತು. ಲಾರ್ಡ್ ಕಾರ್ನ್‌ವಾಲೀಸನ ಕಾಲ ದಲ್ಲಿ ಅದು 'ಶಾಶ್ವತ ಒಪ್ಪಂದ'ದ (Permanent ettlement) ಹೆಸರಲ್ಲಿ ತನಗೆ ನಿಷ್ಠವಾಗಿದ್ದ ಭಾರ ತೀಯರಿಗೆ ಭೂಮಿಯನ್ನು, ನಿಷ್ಠೆಯ ತೀವ್ರತೆ ಯನ್ನು ಅವಲಂಬಿಸಿದಂತೆ ನೂರಾರು–ಸಾವಿರಾರು ಎಕರೆಗಳ ಪ್ರಮಾಣದಲ್ಲಿ ವರ್ಗಾಯಿಸಲು ಶುರು ಮಾಡಿತು. ಹೀಗೆ ಜಮೀನ್ದಾರರುಗಳಾದವರಲ್ಲಿ ಮೇಲ್ಜಾತಿಯವರೇ (ಬ್ರಾಹ್ಮಣ, ರಾಜಪೂತ, ಭೂಮಿಹಾರ, ರೆಡ್ಡಿ, ಆರಾಧ್ಯ, ಮೊದಲಿಯಾರ್, ನಾಯರ್ ಇತ್ಯಾದಿ) ಜಾಸ್ತಿಯಾಗಿದ್ದರು. ಆದರೆ ಇವರ್ಯಾರೂ ಖುದ್ದಾಗಿ ಬೇಸಾಯ ಮಾಡದೇ ಹತ್ತಾರು ಅಧೀನ ರೈತ ಕುಟುಂಬಗಳ ಮೂಲಕ ಗೇಣಿಯ ಮೇಲೆ ಭೂಮಿಯ ಫಲ ಅನುಭವಿಸು ತ್ತಿದ್ದರು. ಈ ಅಧೀನ ರೈತ ಕುಟುಂಬಗಳು ಸಾಮಾನ್ಯವಾಗಿ ಕೆಳಜಾತಿ (ಇತ್ತೀಚೆಗೆ ಇವನ್ನು ಮಧ್ಯಮ ಜಾತಿಗಳು ಎಂದೂ ಕರೆಯಲಾಗುತ್ತಿದೆ) ಗಳಿಗೆ ಸೇರಿದವವಾಗಿರುತ್ತಿದ್ದವು. (ಉದಾ) ಜಾಟ್, ಯಾದವ, ಕುರ್ಮಿ, ಕೋರಿ, ಪಟ್ಟೇದಾ ರ್, ಮರಾಠಾ, ಒಕ್ಕಲಿಗ, ಲಿಂಗಾಯ್ತ, ನಾಡಾರ್, ಈಳವ). ಜಾತಿಪದ್ಧತಿ ನಿರ್ಮಿಸಿದ್ದ 'ದೂರತೆ' ಯಿಂದಾಗ ಜಮೀನ್ದಾರರ (ಮೇಲ್ಜಾತಿಗಳವರ) ನೇರ ಕೃಪೆಯಿಂದ ವಂಚಿತರಾಗಿದ್ದ ಹರಿಜನರು ಹಾಗೂ ಇತರೇ ಅತಿ ಕೆಳಜಾತಿಯ ದಲಿತರು ಈ ಗೇಣಿದಾರ ಕುಟುಂಬಗಳ ಜೊತೆ ಸಹಾಯವಾಗಿ ಮಾತ್ರ ದುಡಿಯುವುದು ಅನಿವಾರ್ಯವಾಗಿತ್ತು.

ಆದರೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸರ್ಕಾರ, ಸ್ವಾತಂತ್ರ್ಯಪೂರ್ವದ ತನ್ನ ಆಶ್ವಾಸನೆಯಂತೆ ಜಮೀ ನ್ದಾರಿ ಪದ್ಧತಿಯನ್ನು ರದ್ದು ಮಾಡಿತು. ಸೋಷ ಲಿಸ್ಟರ ತೀವ್ರ ವಿರೋಧ ಹಾಗೂ ಆಂದೋಲನ ಗಳ ನಡುವೆಯೂ ನೆಹ್ರೂ ಸರ್ಕಾರ ಜಮೀನ್ದಾರ ರಿಗೆ ಭಾರಿ ಮೊತ್ತಗಳ ಪರಿಹಾರ ಧನ ನೀಡಲು ನಿರ್ಧರಿಸಿದ್ದರಿಂದ ಹಾಗೂ ಮೇಲ್ಜಾತಿಗಳು ಬಹು ಕಾಲ ಬೇಸಾಯದ ಭೂಮಿಯ ಸಂಪರ್ಕದಿಂದಲೇ ದೂರವಾಗಿದ್ದು ಪಟ್ಟಣ ನಾಗರೀಕತೆಗೆ ಒಡ್ಡಿ ಕೊಂಡು, ನೆಹ್ರೂ ವ್ಯವಸ್ಥೆ ತಮಗಾಗಿಯೇ ರೂಪಿ ಸಿದಂತಿದ್ದ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಹಾಗೂ ಅಧಿಕಾರಶಾಹಿಯಲ್ಲಿ ವಿಪುಲ ಅವಕಾಶಗ ಳನ್ನು ಕಂಡುಕೊಳ್ಳತೊಡಗಿದ್ದುದರಿಂದ ಈ ರದ್ದತಿ ಸುಗಮವಾಗಿ ಜಾರಿಗೆ ಬರಲು ನೆರವಾಯಿತು.

ಗೇಣಿಯ ಹಕ್ಕುಗಳು ಒಡೆತನದ ಹಕ್ಕುಗಳಾಗಿ ಮಾರ್ಪಾಡಾದವು. ಸಹಜವಾಗಿ ಇದರ ಪ್ರಯೋ ಜನ ದೊರಕಿದ್ದು ಜಮೀನ್ದಾರರಿಗೆ, ಅಧೀನ ಕುಟುಂಬಗಳಾಗಿದ್ದ ಕೆಲವು ಕೆಳಜಾತಿಯವರಿಗೇ. ಕಾಂಗ್ರೆಸ್ ಸರ್ಕಾರ ಇದನ್ನೇ ಭೂಸುಧಾರಣೆ ಎಂದು ಕರೆಯಿತು. ಇದರ ವಿರುದ್ಧ ಲೋಹಿಯಾ ನೇತೃತ್ವದಲ್ಲಿ ಸೋಷಲಿಸ್ಟರು ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ಭೂಚಳುವಳಿ ಆರಂಭಿಸಿದರು. ಕಮ್ಯೂನಿಸ್ಟರು ಸಶಸ್ತ್ರ ಕಾರ್ಯಾಚರಣೆ (ತೆಲಂಗಾಣ) ಯನ್ನು ಪ್ರಚೋದಿಸಿದರು. ಆದರೆ ಇದರ ಪರಿಣಾಮಗಳು ಅತ್ಯಲ್ಪ ಮಾತ್ರ. ಈಗ ವಿರೋಧ ಪಕ್ಷಗಳಿಗೇನಾದರೂ ಮಣಿದರೆ ತನ್ನ 'ಮತ ಬ್ಯಾಂಕ್' ಗಳು ಛಿದ್ರ ಛಿದ್ರವಾದಂತೆಯೇ ಎಂಬು ದು ಕಾಂಗ್ರೆಸ್ ಸರ್ಕಾರಕ್ಕೆ ಗೊತ್ತಿತ್ತು. ಇಡೀ ದೇಶದ ಮೇಲೆ ಸಂಪೂರ್ಣ 'ಮೋಡಿ' ಸಾಧಿಸಿದ್ದ ನೆಹ್ರೂ, ಅಧಿಕಾರಶಾಹಿ, ಪೋಲೀಸ್, ಪತ್ರಿಕೆಗಳು ಹಾಗೂ ರೇಡಿಯೋ ಮೂಲಕ ಈ ಆಂದೋಲನ ಗಳನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾದರು. ಜೊತೆಗೇ ಪಂಚವಾರ್ಷಿಕ ಯೋಜನೆಗಳ ಆಶ್ರಯ ದಲ್ಲಿ 'ಹಸಿರು ಕ್ರಾಂತಿ' ಯ ಕಾರ್ಯಕ್ರಮಗಳನ್ನು ಚಾಲೂ ಮಾಡಿದರು. ಇದರೊಂದಿಗೆ, ದೆಹಲಿಯ ಆರ್ಥಿಕ ಬೆಳವಣಿಗೆ ಸಂಸ್ಥೆಯ ಪ್ರೊಫೆಸರ್ ಜೋಶಿ ಹೇಳುವಂತೆ "ಬೆಳವಣಿಗೆಯೊಂದಿಗೆ ಬಡತನವೂ ಹೆಚ್ಚುತ್ತಾ ಹೋಗುವ, ಬೇರೆ ಯಾವ ದೇಶದಲ್ಲೂ ಕಾಣದಂತಹ ವಿಚಿತ್ರ ಆರ್ಥಿಕ ಪರಿಘಟನೆ" ಇಂಡಿ ಯಾದಲ್ಲಿ ಆರಂಭವಾಯಿತು. ಹಸಿರು ಕ್ರಾಂತಿಯ ಕಾರ್ಯಕ್ರಮಗಳಾದ ನೀರಾವರಿ ವ್ಯವಸ್ಥೆ, ಭೂ ಸಾರ ಸಂರಕ್ಷಣೆ, ಸಾಲ ಸೌಲಭ್ಯ, ವಿಮೆ ಮುಂತಾ ದುವೆಲ್ಲಾ ಕೆಲವರಲ್ಲೇ ಪಾಲಾಗಿ, ಕೆಳಜಾತಿಗಳಿಗೆ ಸೇರಿದ ಸಣ್ಣ ಹಿಡುವಳಿದಾರರ ಹಾಗೂ ಭೂರಹಿ ತ ದಲಿತ ಜಾತಿಗಳ ಪಾಲು ಈ ಹಸಿರು ಕ್ರಾಂತಿಗೆ ತಮ್ಮ ತುಂಡು ಭೂಮಿ, ಬೆವರು, ರಕ್ತ, ಮಾಂಸ ಗಳನ್ನು ಅರ್ಪಿಸಿದ್ದಷ್ಟೇ ಆಯಿತು. ಹೀಗೆ ಗ್ರಾಮೀಣ ಭಾರತದಲ್ಲಿ ಹೊಸದಾದ ಒಂದು ಸಂ ಪತ್ತಿದಾರ ವರ್ಗವೊಂದು ಸೃಷ್ಟಿಯಾಗತೊಡಗಿ ದ್ದರೆ ಜೊತೆಗೇ ಅದರ ವಿರುದ್ಧ, ಎಲ್ಲ ಬೆಳವಣಿ ಗೆಯ ಫಲದಿಂದಲೂ ವಂಚಿತವಾದ ಕೆಳ ಹಾಗೂ ಅತಿ ಕೆಳಜಾತಿಗಳ ಹಾಗೂ ಹರಿಜನರ ತಳಮಳದ ವರ್ಗವೊಂದು ಸಹ ಮೈ ಪಡೆದುಕೊಳ್ಳತೊಡ ಗಿತು.

ಈ ಮಧ್ಯೆ ನೆಹ್ರೂ ಸಾವು ಕಾಂಗ್ರೆಸ್ ವ್ಯವಸ್ಥೆಗೆ ಒಂದು ಭಾರಿ ಆಘಾತವಾಯಿತು 'ಮೋಡಿ' ರಾಜ ಕಾರಣ ಕೊನೆಗೊಳ್ಳತೊಡಗಿತು. ಲೋಹಿಯಾ ನೇತೃತ್ವದಲ್ಲಿ ವಿರೋಧ ಪಕ್ಷಗಳು ಕಾಂಗ್ರೆಸ್ಸಿನ ಭದ್ರಕೋಟೆಗಳ ಮೇಲೆ ಲಗ್ಗೆ ಹೂಡತೊಡಗಿದವು. ಲೋಹಿಯಾ ಹಿಂದಿ ಒಳನಾಡಿನಿಂದ ಲಕ್ಷಮಂದಿ ಭೂರಹಿತ ಕಾರ್ಮಿಕರ ಮೆರವಣಿಗೆಯೊಂದನ್ನು ದೆಹಲಿಗೆ ಒಯ್ದರು. ರಚನಾತ್ಮಕ ರಾಜಕಾರಣವೇ ಗೊತ್ತಿಲ್ಲದಿದ್ದ ಕಾಂಗ್ರೆಸ್ ಕಕ್ಕಾಬಿಕ್ಕಿಯಾಯಿತು. ಕಾಂಗ್ರೆಸ್ ಎಂಬುದು ಅಧಿಕಾರ ಶಾಹಿಗಳ ಮತ್ತು ಭೂಒಡೆಯರ (ಮೇಲ್ಜಾತಿಗಳ ಹಾಗೂ ಊಳಿಗ ಮಾನ್ಯಜಾತಿಗಳ) ಒಕ್ಕೂಟಕ್ಕೆ ಇನ್ನೊಂದು ಹೆಸರ ಷ್ಟೇ ಎಂಬ ಲೋಹಿಯಾ ಅವರ ವಿಶ್ಲೇಷಣೆ ಜನ ರಿಗೆ ಮುಟ್ಟತೊಡಗಿತು. ಅವರ ಸುಪ್ರಸಿದ್ಧ 'ಕಾಂ ಗ್ರೆಸ್ ತೊಲಗಿಸಿ' (ನಾನ್‌ಕಾಂಗ್ರೆಸಿಸಮ್) ಸಿದ್ಧಾಂತ 1967ರ ಚುನಾವಣೆಗಳಲ್ಲಿ ಭಾರಿ ಯಶಸ್ಸನ್ನು ಕಂಡಿತು. ಕಾಂಗ್ರೆಸ್ ಅರ್ಧದಷ್ಟು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿದ್ದಲ್ಲದೇ ಪಾರ್ಲಿಮೆಂಟ್ ಬಹುಮತ ಪಡೆಯಲು ಏದುಸಿರು ಬಿಡ ಬೇಕಾಯಿತು.

ಆದರೆ 1967ರ ಚುನಾವಣೆ ಎಷ್ಟು ಬೇಗ ವಿರೋಧ ಪಕ್ಷಗಳಿಗೆ ವರವಾಗಿ ಪರಿಣಮಿಸಿತ್ತೋ ಅಷ್ಟೇ ಬೇಗ ಶಾಪವಾಗಿಯೂ ಮಾರ್ಪಾಡಾಗ ತೊಡಗಿತು. ವಿರೋಧ ಪಕ್ಷಗಳು ಕಾಂಗ್ರೆಸ್ ಪ್ರತಿ ನಿಧಿಸುತ್ತಿದ್ದ ಹಿತಾಸಕ್ತಿಗಳನ್ನು ಕೆರಳಿಸಿ ಅಧಿಕಾರ ಕ್ಕೆ ಬಂದಿದ್ದುವಾದರೂ, (ಆ ಅತ್ಯಲ್ಪ ಕಾಲದಲ್ಲಿ) ಅವುಗಳ ಜಾತಿ ಹಾಗೂ ವರ್ಗ ಸ್ವರೂಪಗಳೂ

ಇಂಡಿಯಾದ ಜಾತಿ ಪದ್ಧತಿ ಕೆಲವು ಬಾರಿ ಸಾಮಾಜಿಕ ವ್ಯವಸ್ಥೆಯಾಗಿಯೂ, ಇನ್ನೂ ಕೆಲವು ಬಾರಿ ಆರ್ಥಿಕ ವ್ಯವಸ್ಥೆಯಾಗಿಯೂ ಕಾಣಿಸಿಕೊಳ್ಳುತ್ತದೆ, ಎಂಬುದು ಕಾಣುತ್ತಿರುವವರು ಯಾರು ಎಂಬುದನ್ನು ಬಹುವಾಗಿ ಅವಲಂಬಿಸುತ್ತದೆ. ಆದರೆ ನಿಜಸಂಗತಿ ಎಂದರೆ ಈ ಜಾತಿಪದ್ಧತಿಯು....

ಸಾವಿರಾರು ವರ್ಷಗಳಿಂದ ಮಡುಗಟ್ಟಿದ ಅವಮಾನ, ಹತಾಶೆ ಹಾಗೂ ಸಿಟ್ಟು ಹೊರದಾರಿಗಳ ಸಾಧ್ಯತೆಗಳಿದ್ದೆಡೆಯಲ್ಲೆಲ್ಲಾ ಆಸ್ಫೋಟಿಸತೊಡಗಿದೆ. ಈ ಪ್ರತಿ ಆಸ್ಫೋಟನೆಯೂ ಹಿಂದೂ ಸಮಾಜದ ಸಾವಿರಾರು ವರ್ಷಗಳಷ್ಟು ಕೊಬ್ಬಿದ ಅಹಂನ ಮೇಲೆ ಎಳೆಯಲಾಗುತ್ತಿರುವ ಒಂದೊಂದು ಬರೆಯಾಗುತ್ತಿದೆ. ಬೇಸಾಯದ ಸುತ್ತಲೇ ಒಟ್ಟಾರೆ ಚಿಗುರೊಡೆಯುವ ಗ್ರಾಮ ಪ್ರಧಾನವಾದ ಇಂಡಿಯಾದಲ್ಲಿ ಇಂಥ ಬಹಳಷ್ಟು ಆಸ್ಫೋಟಗಳು ಭೂ ಒಡೆತನಕ್ಕೆ ಸಂಬಂಧಿಸಿದಂತೆಯೇ ಸಂಭವಿಸುವುದು ಸಹಜವೇ ಆಗಿದೆ.

ಬದಲಾಗೇ ಇರಲಿಲ್ಲ. ಸೋಶಿಲಿಸ್ಟ್ ಪಕ್ಷ, ದ್ರಾವಿಡ ಮುನ್ನೇತ್ರ ಕಳಗಂ ಮುಂತಾದ ಪಕ್ಷಗಳೊಳಕ್ಕೆ ಕೆಳಜಾತಿಗಳ ಹಿತಾಸಕ್ತಿಗಳ ಪ್ರವೇಶವಾದರೂ ಹರಿಜನ ಹಾಗೂ ಇತರ ದಲಿತ ಜಾತಿಗಳು ಪಕ್ಷಗಳಲ್ಲಿ ಪ್ರಭಾವ ಸ್ಥಾಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಜನಸಂಘ, ಕಮ್ಯೂನಿಸ್ಟ್ ಹಾಗೂ ಸ್ವತಂತ್ರ ಪಕ್ಷಗಳಂತೂ ಪುರೋಹಿತಶಾಹಿ, ನವಬೂರ್ಜ್ವಾ ಹಾಗೂ ಊಳಿಗಮಾನ್ಯ ಜಾತಿಗಳ ಭದ್ರಕೋಟೆಗಳಾಗಿದ್ದವು. ಈ ಪಕ್ಷಗಳು ಜಾತಿಯ ಅಸ್ತಿತ್ವವನ್ನೇ ಒಪ್ಪಿಕೊಳ್ಳಲು ನಿರಾಕರಿಸಿದರೆ ಸೋಶಿಲಿಸ್ಟ್ ಹಾಗೂ ದ್ರಾ. ಮು. ಕ. ಪಕ್ಷಗಳು ಇಂಡಿಯಾದಲ್ಲಿ ಜಾತಿ ವರ್ಗ ಬೇರೆಬೇರೆ ಅಲ್ಲವೆ ಅಲ್ಲ ಎಂಬ ಅರೆಸತ್ಯ–ಅರೆಸುಳ್ಳು ಸಿದ್ಧಾಂತಕ್ಕೆ ಅಂಟಿಕೊಂಡವು. ಇದು ಲೋಹಿಯಾ ಅವರನ್ನು ಚಿಂತೆಗೀಡು ಮಾಡಿತು. ಈ ವಿವಾದವೇ ಮುಂದುವರಿದರೆ–ವಿರೋಧ ಪಕ್ಷಗಳು ಅಧಿಕಾರಕ್ಕೆ ಬರಲು ಒಪ್ಪಂದ ಮಾಡಿಕೊಂಡಿದ್ದ–ಕನಿಷ್ಟ ಕಾರ್ಯಕ್ರಮದ ಜಾರಿ ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಾಗತೊಡಗಿತು. ಲೋಹಿಯಾ ಸೋಶಿಲಿಸ್ಟರಿಗೆ ಛೀಮಾರಿ ಹಾಕುವುದರೊಡನೆ ಇದನ್ನು ಸರಿಪಡಿಸಲು ಕಾರ್ಯಪ್ರವೃತ್ತರಾದರು. ಆದರೆ ಅವರ ಛೀಮಾರಿಗಳು ಕೆಲಸಮಾಡಲಾರಂಭಿಸುವ ಮುನ್ನ ಸ್ವತಃ ಅವರೇ ಆಕಸ್ಮಿಕವಾಗಿ ಅಸು ನೀಗಿದರು.

ಲೋಹಿಯಾ ಸಾವಿನ ನಂತರ ವಿರೋಧ ಪಕ್ಷಗಳ ವಿಘಟನೆ ಶುರುವಾಯಿತು, ಸಮಾಜವಾದೀ ಪಕ್ಷ ಅಧಿಕಾರದಲ್ಲಿದ್ದೆಡೆಗಳಲ್ಲಿ ಬರೀ ಬಡಕೆಳಜಾತಿಗಳಿಗೆ ಪ್ರಾಶಸ್ತ್ಯ ಸಿಕ್ಕಿತು ; ಉದ್ಯೋಗ ಮೀಸಲಾತಿ ಜಾರಿಯಾಯಿತು ; ಭೂಸುಧಾರಣೆ ಬಂತು. ಕಮ್ಯುನಿಸ್ಟ್ ಪಕ್ಷ ಕೆಳಮಧ್ಯಮ ವರ್ಗದ ಹಿತಾಸಕ್ತಿಗಳ ಕೈವಾರಿಯಾಯಿತು. ಜನಸಂಘ ಕೆಳಅಧಿಕಾರಶಾಹಿಯ ಹಾಗೂ ವ್ಯಾಪಾರಿಗಳ ಮತ್ತು ಸ್ವತಂತ್ರ ಪಕ್ಷ ಪದಚ್ಯುತರಾಗಿದ್ದ ಸಣ್ಣಪುಟ್ಟ ರಾಜರುಗಳ ಪ್ರತಿನಿಧಿಗಳಾದವು. ಈ ಜಾತಿ ಮತ್ತು ವರ್ಗ ವಿರೋಧಾಭಾಸಗಳನ್ನು ತಡೆದುಕೊಳ್ಳದೇ ವಿರೋಧ ಪಕ್ಷಗಳ ಸರ್ಕಾರಗಳು ಪಟಪಟನೆ ಉರುಳಿದವು. ಆದರೆ ಇಷ್ಟೆಲ್ಲಾ ವಿದ್ಯಮಾನಗಳಿಂದ ದೂರ ಇಡಲ್ಪಟ್ಟಿದ್ದವರೆಂದರೆ ದಲಿತ ಜಾತಿಗಳವರು. ತಮ್ಮಲ್ಲಿ ಭೂಮಿಯ ಹಸಿವನ್ನು ಹುಟ್ಟಿಸಿ ವಂಚಿಸಿದ ವಿರೋಧ ಪಕ್ಷಗಳು, ಅವರ ನಂಬರ್ ಒನ್ ಶತ್ರುವಾದವು. ಗ್ರಾಮೀಣ ಇಂಡಿಯಾ ಈಗ ಜಾತಿ ಸಂಘಟನೆಯ (ರಾಜಕಾರಣದ) ರಣರಂಗವಾಯಿತು.

ಮಿಕ್ಕದ್ದು ಇತ್ತೀಚಿನ ಕಥೆ ; ಕಾಂಗ್ರೆಸ್ ಇಬ್ಭಾಗದ ಸಮಯದಲ್ಲಿ ಇಂದಿರಾಗಾಂಧಿ ಈ ರಣರಂಗವನ್ನು ಸದುಪಯೋಗಪಡಿಸಿಕೊಂಡರು. ದಲಿತ ಜಾತಿಗಳ ಸಿಟ್ಟು ಹತಾಶೆಗಳೊಳಗಿನ ಚೈತನ್ಯವನ್ನು ಅವರು ವಿರೋಧಿಗಳನ್ನು ನಿರ್ನಾಮ ಮಾಡಲು ಬಳಸಿಕೊಂಡರು. ಆದರೆ ಇಂದಿರಾ ಸರ್ಕಾರ ಮೂಲತಃ ನೆಹ್ರೂವಾದಿಯಾದ ಮತ್ತು ಅದಕ್ಕಿಂತ ಭ್ರಷ್ಟವೂ ಬಂಡವಾಳವಾದಿಯೂ ಆದ ವ್ಯವಸ್ಥೆಯಾದುದರಿಂದ ಮತ್ತೆ 1973ರ ವೇಳೆಗೆ ಅಶಾಂತಿ ಶುರುವಾಯಿತು. ಈ ಅಶಾಂತಿಯನ್ನು ಜೆ. ಪಿ. ತಮ್ಮ 'ಸಂಪೂರ್ಣ ಕ್ರಾಂತಿ'ಯ ಚೌಕಟ್ಟಿಗೆ ಅಳವಡಿಸಿದರು. ಪಾರ್ಲಿಮೆಂಟ್‌ನಲ್ಲಷ್ಟೇ ಸದ್ದು ಮಾಡುವಷ್ಟರ ಮಟ್ಟಿಗೆ ಅಡಗಿ ಹೋಗಿದ್ದ ವಿರೋಧ ಪಕ್ಷಗಳಿಗೆ ಬಲಬಂದಂತಾಗಿ ಬೀದಿಗೂ ಇಳಿದವು. ಕಾಂಗ್ರೆಸ್ ಕ್ರಮೇಣ ಈಡಾಗುತ್ತಿದ್ದ ಅವನತಿಯ ತಾರ್ಕಿಕ ಪರಿಣಾಮವಾಗಿ ಸರ್ವಾಧಿಕಾರ ಬಂತು. ಆದರೆ 1977, ಈ ದೇಶದ ಸಮಸ್ಯೆಗಳಿಗೆ ಸರ್ವಾಧಿಕಾರ ಉತ್ತರವಲ್ಲ ಎಂಬುದನ್ನು ಸಾರಿ ಹೇಳಿತು.

ಆದರೆ ಮತ್ತೆ 1980ರ ಹೊತ್ತಿಗೆ 1967ರ ನಂತರದ ಪರಿಸ್ಥಿತಿ ಮರುಕಳಿಸಿತ್ತು. ಹತ್ತು ವರ್ಷಗಳಲ್ಲೂ ವಿರೋಧ ಪಕ್ಷಗಳು ಒಂದು ಪಾಠವನ್ನೂ ಕಲಿತಿರಲಿಲ್ಲ. 1977ರ ವಿಜಯವನ್ನು ತಮ್ಮ ವಿಜಯವೆಂದೇ ಭಾವಿಸಿದ ಗ್ರಾಮೀಣ ಭಾರತದ ನವ ಆಸ್ತಿವಂತ ಜಾತಿಗಳು, ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಆಗ್ರಹಪಡಿಸತೊಡಗಿದ ದಲಿತ ಜಾತಿಗಳ ಮೇಲೆ ಸ್ಥಾನೀಯ ರಾಜಕೀಯ ಅಧಿಕಾರದ ನೆರವಿನೊಂದಿಗೆ ದಾಳಿ ಮಾಡತೊಡಗಿದವು. ತಾವು ಕೆರ ಬಿಡುವ ಕಡೆ ಕೂರಬೇಕಾದ ಜನ ಹಕ್ಕುಗಳ ಮಾತಾಡುವುದೆಂದರೆ ? ಆದರೆ ದಲಿತ ಜಾತಿಗಳು ಕೂಡಾ 1977ರ ವಿಜಯ ತಮ್ಮದೇ ವಿಜಯ ಎಂದು ಭಾವಿಸಿದ್ದವು.... ಇತ್ತೀಚಿನ ಪಿಪ್ರಾನರ ಹತ್ಯೆಯಲ್ಲಿ ಆಕಸ್ಮಾತ್ ಪಾರಾದ 70 ವರ್ಷದ ಭಂಡ ಕೇಳುತ್ತಾನೆ: "ನಾವು ಎರಡು ಕಿಲೋ ಕಾಳು ಕೂಲಿ ಕೇಳಿದ್ದಕ್ಕೆ ನಮಗೆ ಅವರು ಕೊಟ್ಟಿದ್ದು ಇದು. ಒಂದು ಕಿಲೋ ಕಾಳು ಒಂದು ಕುಟುಂಬದ ಹಸಿವನ್ನೂ ನೀಗಿಸುತ್ತದಾ ?"

ಈ ಸರಳ ಪ್ರಶ್ನೆಯ ಹಿಂದೆ, ಕನಿಷ್ಟ ಕಳೆದ ಮುವ್ವತ್ತು ಮೂರು ವರ್ಷಗಳ ರಾಜಕಾರಣ ಅಪರಾಧಿಯಾಗಿ ನಿಂತಿದೆ. ಈ ಅಪರಾಧಿಯ ಮೈತುಂಬಾ ರಕ್ತದ ದಟ್ಟ ಕಲೆಗಳಿವೆ. ಅವನು ಕವರಿ ಉಗುಳಿರುವ ಎಲುಬುಗಳು ಗ್ರಾಮೀಣ ಭಾರತದ ನೆಲದ ತುಂಬಾ ಹುದುಗಿವೆ. ಆದರೆ ಈ ಅಪರಾಧಿಯನ್ನು ಹಿಡಿದು ಗಲ್ಲಿಗೇರಿಸಲು, ಹುದುಗಿರುವ ಈ ಎಲುಬುಗಳು ಜೀವ ಪಡೆದು ಎದ್ದು ಬರಬೇಕೇನೊ. ಈ ಎಲುಬುಗಳೇ ಜೀವ ಪಡೆಯುವ ಕಲ್ಪನೆ ಬರೀ ಅಲಂಕಾರಿಕ ಭಾಷೆಯ ಫಲ ಎಂದು ಯಾರಾದರೂ ಹೇಳಿದಲ್ಲಿ ಅದಕ್ಕಿಂತ ಮೂರ್ಖತನ ಇನ್ನೊಂದಿಲ್ಲ.

ರೈತ ಚಳುವಳಿ : ವರ್ಗ ಸಂಘರ್ಷದ ಮುಂಬೆಳಕು

ರೈತ ಚಳವಳಿ ಒಂದು ಐತಿಹಾಸಿಕ ಆವಶ್ಯಕ ವರ್ಗಸಂಘರ್ಷದ ಮುಂಬೆಳಕು. ಜಾತಿಗಳು ಇರುವುದರಿಂದ ಶ್ರೀಮಂತರನ್ನು ಪ್ರತ್ಯೇಕಗೊಳಿಸುವ ಪ್ರಕ್ರಿಯೆಗಳು ಮೊನಚಾಗುವುದಿಲ್ಲ. ಇದು ಈ ದೇಶಕ್ಕೆ ತಟ್ಟಿದ ಶಾಪ. ಭೂಮಾಲೀಕರ ಹಿತಾಸಕ್ತಿಗಳನು ಕಾಪಾಡಲು ಬಡವರೆಮುಂದಾಗುತ್ತಿದ್ದಾರೆ

ಪ್ರಬಲ ಜಾತಿಗಳ ಮುಖಂಡರೆ ರೈತ ಚಳವಳಿಯ ಮುಂಚೂಣಿಯಲ್ಲಿದ್ದಾರೆ. ಆದರು ಕ್ರಮೇಣ ಈ ಚಳವಳಿ ಆರ್ಥಿಕ ಸಮಸ್ಯೆಗಳಿಗೇ ಒತ್ತು ಕೊಟ್ಟು ಕೃಷಿಕಾರ್ಮಿಕರ ಸಂಘಟನೆಗೆ ಎಡೆ ಮಾಡಿಕೊಡುತ್ತಡೆ. ಬಡತನ, ಅಜ್ಞಾನ, ಜಾತಿ ಈ ಂಘಟನೆಯನ್ನು ನಿಧಾನಗೊಳಿಸಬಹುದು ಅಷ್ಟೇ. ನ್ನು ಶಾಶ್ವತವಾಗಿ ಅಳಿಸಿಹಾಕಲು ಸಾಧ್ಯವಿಲ್ಲ. ಭೂ ಮಾಲೀಕರ ಮತ್ತು ಕೃಷಿಕಾರ್ಮಿಕರ ನಡುವಿನ ಸಂಘರ್ಷ ಯಾವ ರೂಪತಾಳುವುದೊ ಮುಂದಾಗಿ ಹೇಳುವುದು ಕಷ್ಟ. ಅಹಿಂಸಾತ್ಮಕವಾದುದಾದರೆ ಸಂಘರ್ಷದ ಕಹಿ ಉಳಿಯುವುದಿಲ್ಲ. ಎಲ್ಲರೂ ಒಂದಾಗಿ ಶಾಂತಿ ಸೌಹಾರ್ದತೆಯಿಂದ ಬಾಳಬಹುದು. ಇಲ್ಲದೆ ಅದು ಹಿಂಸಾತ್ಮಕವಾದುದಾದರೆ ಭೂಮಾಲೀಕರು ಸಾಮಾಜಿಕ–ಆರ್ಥಿಕ ಪಳೆಯುಳಿಕೆಗಳಾಗಿ • ಕಾಲದ ಪದರುಗಳಲ್ಲಿ ಸೇರಿಕೊಳ್ಳುತ್ತಾರೆ.

ಡಾ. ಎಚ್. ಸಂಜೀವಯ್ಯ

ಸಾಮಾಜಿಕ ಬಹಿಷ್ಕಾರ : ದಿಕ್ಕುಗಾಣದ ರೈತಸಂಘ

ರೈತನ ಕಷ್ಟಕೋಟಲೆಗಳ ಹೆಸರಲ್ಲಿ ಹುಟ್ಟಿಕೊಂಡ ಕರ್ನಾಟಕ ರಾಜ್ಯ ರೈತಸಂಘ ಇಂದುಮೇಲ್ಜಾತಿ ಜಮೀನುದಾರರ ಕೂಟವಾಗುತ್ತಿದೆ,

ನೋಡುವವರ ಕಣ್ಣಿಗೆ ಸಮತಾವಾದದ ಆದರ್ಶವನ್ನು ಭಿತ್ತರಿಸುವ ರೈತಸಂಘದ ಚಟುವಟಿಕೆಗಳು ಅವರ ಹೊಲಗದ್ದೆಗಳಲ್ಲಿಯೇ ದುಡಿಯುತ್ತಿರುವ ದಲಿತ ಕೂಲಿ ಕಾರ್ಮಿಕರನ್ನು ಅತಂಕಗೊಳಿಸಿದೆ.

ರೈತರ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಆಶಿಸಿ ಸರ್ಕಾರ ಮತ್ತು ಅಧಿಕಾರಶಾಹಿಗಳ ವಿರುದ್ಧ ಹೋರಾಟ ಮಾಡುತ್ತಿರುವ ರೈತ ಸಮುದಾಯದಿಂದ ; ಎಲ್ಲಾ ಮೇಲ್ಜಾತಿ ಜನರಿಂದ ತುಳಿಸಿಕೊಂಡು ಸಾವು ನೋವುಗಳ ನೆರಳಲ್ಲಿ ಬದುಕುತ್ತಿರುವ ಅಸ್ಪೃಶ್ಯರು ಅವರಿಂದ ಸಮಾನತೆಯನ್ನು ನಿರೀಕ್ಷಿಸುವುದು ನಂಬಿಕೆಗೆ ದೂರವಾದ ಮಾತು. ಯಾಕೆಂದರೆ ಬಹುತೇಕ ಹಳ್ಳಿಗಳಲ್ಲಿ ಜೀವಿಸುವ ಹರಿಜನರಿಗೆ ಒಂದಲ್ಲ ಒಂದು ಕಾರಣಕ್ಕಾಗಿ ಹೊಡೆದು, ಬಡಿದು, ತೊಂದರೆ ಕೊಡುತ್ತಿರುವವರು ಆ ಊರಿನ ಮೇಲ್ಜಾತಿಯ ಜಮೀನುದಾರರೇ ಆಗಿದ್ದಾರೆ. ಹಳ್ಳಿಗಳಲ್ಲಿ ದಲಿತರು ಸಂಪಾದಿಸಿದ ಚೂರುಪಾರು ಭೂಮಿಯನ್ನು

ಆರ್. ಎಸ್. ದೊಡ್ಡಣ್ಣ

ಅವರೇ ದೋಚಿಕೊಂಡು, ಹರಿಜನರು ಕೂಲಿಗಳಾಗಲು ಜಮೀನುದಾರರೇ ಕಾರಣರಾಗಿದ್ದಾರೆಂಬುದಕ್ಕೆ ಹಳ್ಳಿಗಳಲ್ಲಿ ಇಂದಿಗೂ ಅನೇಕ ನಿದರ್ಶನಗಳನ್ನು ಕಾಣಬಹುದು. ಅಷ್ಟಾದರೂ ದಲಿತಥ ಶ್ರಮಕ್ಕೆ ತಕ್ಕ ಕೂಲಿಯನ್ನು ಕೊಡದೆ ಕಿರುಕುಳ ಅಸ್ಪೃಶ್ಯತೆ ಎಲ್ಲದಕ್ಕೂ ಮೂಲವಾಗಿರುವ ಮೇಲ್ಜಾತಿ ಬಲಿಷ್ಟ ಜನರೇ ಇಂದು ರೈತ ಮುಖವಾಡ ಧರಿಸಿ ಸಂಘಟನೆಯಾಗುತ್ತಿರುವ ಹಿನ್ನೆಲೆಯಲ್ಲಿ ಮುಗ್ಧ ದಲಿತರ ಮೇಲೆ ಉಂಟಾಗಬಹುದಾದ ಸಾಧಕಬಾದಕಗಳು, ಇತ್ತೀಚೆಗೆ ರೈತಸಂಘಟನೆ ದಲಿತರ ಬಗ್ಗೆ ಅಸ್ಪಷ್ಟ ನಿಲುವು ತಾಳುತ್ತಿರುವುದೆಲ್ಲವನ್ನು ಮನಸ್ಸಲ್ಲಿಟ್ಟು ಮೈಸೂರು ಜಿಲ್ಲೆಯಲ್ಲಿ ರೈತಸಂಘಟನೆಯ ಮುಂಚೂಣಿಯಲ್ಲಿರುವ, ರೈತರಾಯಭಾರಿ, ಪತ್ರಿಕೆಯ ಸಂಪಾದಕರು ಮತ್ತು ಜಿಲ್ಲಾ ರೈತಸಂಘದ ಕಾರ್ಯದರ್ಶಿಗಳಾದ ಜೋಗನಹಳ್ಳಿ ಗುರುಮೂರ್ತಿ ಅವರನ್ನು ಸಂದರ್ಶಿಸಿದೆ.

ಪಿರಿಯಾಪಟ್ಟಣ ತಾಲ್ಲೂಕು ಬಸಲಾಪುರದ ರೈತಸಂಘದವರು ಆ ಊರಿನ ಹರಿಜನರಿಗೆ ಸಾಮಾಜಿಕ ಬಹಿಷ್ಕಾರ ಹಾಕಿ ಕೆಟ್ಟದಾಗಿ ನಡೆದುಕೊಂಡಿದ್ದನ್ನು ಗುರುಮೂರ್ತಿಗಳ ಗಮನಕ್ಕೆ ತರುವ ಮುಖಾಂತರ ಮಾತುಕತೆಗೆ ಪೀಠಿಕೆ ಹಾಕಿದೆ.

ಆಗತಾನೆ ಬಸಲಾಪುರದ ಹರಿಜನರ ಮೇಲಿನ ಬಹಿಷ್ಕಾರದ ಬಗ್ಗೆ ಮೀಟಿಂಗ್ ನಡೆಸಿ ಬಂದಿದ್ದ ಅವರು ಸಂಘದ ಅಧ್ಯಕ್ಷ ಸಣ್ಣೇಗೌಡ ಮತ್ತು ಕಾರ್ಯದರ್ಶಿ ನಾಗರಾಜು ಅವರು ಬಸಲಾಪುರದ ಹರಿಜನರ ಮೇಲೆ ಬಹಿಷ್ಕಾರ ಹಾಕಿ ನಡೆದುಕೊಂಡಿರುವ ರೀತಿ ನಮಗೆ ಬೇಸರ ತಂದಿದೆ ಎಂದು ಒಪ್ಪಿಕೊಂಡು ಆ ಊರಿನ ರೈತಸಂಘವನ್ನು 'ಸಸ್ಪೆಂಡ್' ಮಾಡಿದ್ದೇವೆ ! ಅಂದರು. ಸುಮಾರು 400 ಕುಟುಂಬಗಳಷ್ಟು ವಕ್ಕಲಿಗರೇ ಇರುವ ಬಸಲಾಪುರದಲ್ಲಿ ರೈತಸಂಘವನ್ನು ರದ್ದು ಮಾಡಿದ್ದರೂ ಹರಿಜನರನ್ನು ಅಂಗಡಿ, ಮಿಲ್ಲು, ಹೋಟಲ್‌ಗಳಿಗೆ ಸೇರಿಸುತ್ತಿರಲಿಲ್ಲ. ಮತ್ತು ಸವರ್ಣೀಯರ ಬೀದಿಗಳಲ್ಲಿ ದಲಿತರನ್ನು ತಿರುಗಾಡಲು ಸಹ ಬಿಡುತ್ತಿರಲಿಲ್ಲ. ಇದರ ಬಗ್ಗೆ ಏನಾದರೂ ಪ್ರೋಗ್ರಾಂ ಹಾಕಿರುವಿರಾ ? ಎಂದೆ. ಸ್ವಲ್ಪ ಏರದ ದ್ವನಿಯಲ್ಲೇ ಮಾತಾಡಿದ ಗುರುಮೂರ್ತಿಗಳು 'ನೋಡ್ರಿ ಊರಲ್ಲಿರುವ ಆ ಜನರು ಅನ್ಯೋನ್ಯವಾಗಿ ಹೋಗಬೇಕು. ನಾವು ಏನ್ಮಾಡದು ? ರೈತಸಂಘದವರು ಹರಿಜನರ ಜೊತೆ ಒಳ್ಳೆ ರೀತಿಲಿ ನಡೆದುಕೊಳ್ಳಬೇಕು ಅಂತ ತಿಳುವಳಿಕೆ ಕೊಡ್ತೀವಿ ಆದರೂ ಈ ಹಳ್ಳಿ ಜನ ಹಿಂಗೆಲ್ಲಾ ಮಾಡದ್ರೆ ? ನಾವು ಅವರ್ನ ಹಿಡಕೊಂಡು ಹೊಡೆಯಕ್ಕಾದದ, ಬಡಿಯಕಾದದ, ಇಲ್ಲ ಅವರ್ನ ತಗೊಂಡೋಗಿ ಗಲ್ಲಿಗೇರ್ಸಕ್ಕಾದದ ! ನೀವೇ ಹೇಳಿ ಎಂದು ತಿರುವಿ ನನಗೇ ಪ್ರಶ್ನೆ ಹಾಕಿದಾಗ ಉತ್ತರಿಸಲು ನಾಲಿಗೆಯೇ ಹೊರಳದ ನನಗೆ ರೈತ ನಾಯಕರುಗಳ ತತ್ವಗಳು, ದಲಿತರ ಬಗ್ಗೆ ಇವರ ಪ್ರಾಮಾಣಿಕ ನಿಲುವು ಎಲ್ಲವೂ ಅಸ್ಪಷ್ಟವಾಗಿ ಕಂಡವು. ಮಾತನ್ನು ಮುಂದುವರಿಸುತ್ತಾ, ರೈತಸಂಘ ಮೇಲ್ಜಾತಿ ಜಮೀನುದಾರರ ಒಕ್ಕೂಟ, ಮೇಲ್ಜಾತಿಯವರೇ ರೈತರ ಹೆಸರಲ್ಲಿ ಸಂಘಟನೆಯಾಗುತ್ತಿರುವುದು, ಮುಂದೆ ದಲಿತರ ಮೇಲೆ ಉಂಟಾಗಬಹುದಾದ ದುರಂತಗಳ ಕುರುವು, ಇದರಿಂದ ದಲಿತರಿಗೆ ಎಂದಾದರೂ ಹೊಡೆತ ಗ್ಯಾರಂಟಿ ಇದಕ್ಕೆ ನಿಮ್ಮ ಅಭಿಪ್ರಾಯ ಏನು ಎಂದೆ. ಉತ್ತರಿಸಲು ಸ್ವಲ್ಪ ತಡವರಿಸಿದ ಗುರುಮೂರ್ತಿಗಳು ಈ ಪ್ರಶ್ನೆಗೆ ಆಳವಾಗಿ ಆಲೋಚಿಸಿ, ಆಮೇಲೆ ಹೇಳ್ತೀನಿ ಎಂದು ಮಾತು ನಿಲ್ಲಿಸಿ ಹೊರಟರು. ಪಿರಿಯಾಪಟ್ಟಣದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ರೈತಸಂಘಗಳನ್ನು ಹುಟ್ಟುಹಾಕುತ್ತಿರುವ ಕೆಲ್ಲೂರು ಸುರೇಶರು ಇದೇ ಸಂದರ್ಭಕ್ಕೆ ಸಿಕ್ಕರು. ಹಳ್ಳಿಗಳಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ರೈತಸಂಘದ ನಿಲುವನ್ನು ಕೊನೆಯದಾಗಿ ಕೇಳಿದೆ. ಸುರೇಶರು ತಮ್ಮ ನಿರುತ್ಸಾಹದ ಧ್ವನಿಯಲ್ಲಿ ಒಂದೂ ಗೊತ್ತಾಗತಾ ಇಲ್ಲ, ನಾನು ರೈತಸಂಘವನ್ನೇ ಬಿಟ್ಟುಬಿಡಬೇಕೆಂದಿದ್ದೇನೆ ಎಂದು ಹೇಳುತ್ತಾ, ದಿಕ್ಕು ತೋಚದವರಂತೆ ಮಾತ ನಿಲ್ಲಿಸಿದರು.

ಎಲ್ಲಾ ಕಡೆಗಳಲ್ಲೂ ಕಂಡು ಬಂದಿರುವಂತೆ ಆರಂಭದಲ್ಲಿದ್ದ ರೈತನಾಯಕರುಗಳ ಉತ್ಸಾಹ ದಲಿತರ ಕೂಲಿಕಾರ್ಮಿಕರ ಮೇಲೆ ಅವರ ಪ್ರಾಮಾಣಿಕ ನಿಲುವು ಎಲ್ಲವೂ ಮಾಯವಾಗುತ್ತಿವೆ. ರೈತ ಮನಸ್ಸನ್ನು ಬಿಗಿಹಿಡಿದಿರುವ ಇಂಡಿಯಾದ ಜಾತಿ ಭೂತಗಳ ನಡುವೆ ಗೊಂದಲಕ್ಕೆ ಸಿಕ್ಕಿರುವ ರೈತ ನಾಯಕರುಗಳಿಗೆ ದಿಕ್ಕೇತೋಚದೆ ಪೇಚಾಡುವಂತಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಗ್ರಾಮೀಣ ಅಭಿವೃದ್ಧಿಯಲ್ಲಿ ಕೆನರಾ ಬ್ಯಾಂಕಿನ ಪಾತ್ರ

ಭಾರತದ ಭವಿಷ್ಯ, ದೇಶದ ಸುಮಾರು 6 ಲಕ್ಷ ಹಳ್ಳಿಗಳ ಪುನರ್ಜೀವನ ಹಾಗೂ ಏಳಿಗೆಯಲ್ಲಿ ಅಡಗಿದೆ. ಒಟ್ಟು ಜನಸಂಖ್ಯೆಯ ಶೇ. 80 ರಷ್ಟು ಕೃಷಿಯನ್ನೇ ಉದ್ಯೋಗವನ್ನಾಗಿ ಅವಲಂಬಿಸಿ ಈ ಹಳ್ಳಿಗಳಲ್ಲಿ ನೆಲೆಯೂರಿದ್ದಾರೆ. ಆದರೆ, ಇಂದಿನ ಪ್ರಸಕ್ತ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಬಡತನ. ಹಾಗೂ ನಿರುದ್ಯೋಗ ಈ ಎರಡು ಸಮಸ್ಯೆಗಳ ನಡುವೆ ಸಿಕ್ಕುಹಾಕಿಕೊಂಡು ಭಾರತ ದೇಶವು ಇನ್ನೂ ಅಭಿವೃದ್ಧಿಯಾಗುವುದರಲ್ಲೇ ಸೆಣಸುತ್ತಿದೆ. ಬಹು ಸಂಖ್ಯೆಯ ಗ್ರಾಮಗಳು ಇಂದಿಗೂ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು· ಸಾರಿಗೆ—ಸಂಪರ್ಕ, ರಸ್ತೆ, ಆಸ್ಪತ್ರೆ, ಶಾಲೆ, ವಿದ್ಯುತ್, ಇತ್ಯಾದಿಗಳಿಂದ ವಂಚಿತವಾಗಿ ಕುಗ್ರಾಮಗಳಾಗಿಯೇ ಉಳಿದಿವೆ.

ರಾಷ್ಟ್ರದಲ್ಲಿ ಅತಿ ಹೆಚ್ಚಿನ ಕೃಷಿಕ ಗ್ರಾಹಕರನ್ನು ಹೊಂದಿರುವ ಕೆನರಾ ಬ್ಯಾಂಕ್ ಈ ದಿಶೆಯಲ್ಲಿ ಹಂತ ಹಂತವಾಗಿ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಗ್ರಾಮೀಣ ಅಭಿವೃದ್ಧಿಯ ಮಹತ್ತರ ಧ್ಯೇಯದೊಂದಿಗೆ ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ. ಇತ್ತೀಚಿನ ವರುಷಗಳಲ್ಲಿ, ಅಂದರೆ ರಾಷ್ಟ್ರೀಕರಣದ ನಂತರ, ಬ್ಯಾಂಕುಗಳನ್ನು ಗ್ರಾಮೀಣ ಜೀವನವನ್ನು ಸುಧಾರಿಸುವಲ್ಲಿ ಸರಕಾರದೊಡನೆ ಸಹಕಾರ ನೀಡುತ್ತಾ ಸಕ್ರಿಯವಾಗಿ ಭಾಗವಹಿಸುತ್ತಿವೆ. ಅಂತಹ ಪ್ರಯತ್ನ ನಮ್ಮ ಬ್ಯಾಂಕಿನಲ್ಲಿ ಹಲವಾರು. ಜಯಂತಿಗ್ರಾಮ, ಗ್ರಾಮ ದತ್ತು ಸ್ವೀಕಾರ Village Adoption Scheme) ಕೆನರಾ ಬ್ಯಾಂಕ್ ಗ್ರಾಮಾಭಿವೃದ್ಧಿ ಯೋಜನೆ (Project Can Bank Village) ಗ್ರಾಮೀಣ ಅಭಿವೃದ್ಧಿ ಒಂದು ಹೊಸ ಹೆಜ್ಜೆ (Rural Development-A New Approach) ಇತ್ಯಾದಿ.

ಈ ಪ್ರಯತ್ನಗಳು ಉದ್ದೇಶಿತ ಹಾಗೂ ಯೋಜನಾಬದ್ಧವಾಗಿ ಪ್ರಾದೇಶಿಕ, ಗ್ರಾಮ, ಗ್ರಾಮ ಗುಚ್ಛ, ಸಂಯುಕ್ತ ಹೆಜ್ಜೆಗಳಾಗಿವೆ. ರಾಷ್ಟ ವ್ಯಾಪಿ ಚಟುವಟಿಕೆಗಳಿಂದೊಳಗೂಡಿದ ಬ್ಯಾಂಕಾಗಿ ಯಾವುದೇ ಒಂದು ರೀತಿಯ ಪ್ರಯತ್ನಕ್ಕೆ ಸೀಮಿತಗೊಳ್ಳದೆ, ಆಯಾ ಪ್ರಾದೇಶಿಕತೆ, ಅವಶ್ಯಕತೆ ಯೋಜನೆ ಹಾಗೂ ಗುರಿಗಳನ್ನು ಅವಲಂಬಿಸಿ, ಒಂದಕ್ಕಿಂತ ಹೆಚ್ಚಿನ ಸಂಯುಕ್ತ ಪ್ರಯತ್ನಗಳನ್ನು ಅಳವಡಿಸಿಕೊಂಡಿದೆ.

ಗ್ರಾಮ ದತ್ತು ಸ್ವೀಕಾರ :
(Village Adoption Scheme)

ಈ ಯೋಜನೆಯಲ್ಲಿ ಬ್ಯಾಂಕಿನ ಗ್ರಾಮೀಣ ಶಾಖೆಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಊರ್ಜಿತವಿರುವ ಎಲ್ಲಾ ಬ್ಯಾಂಕಿಂಗ್ ಕಾರ್ಯಕ್ರಮಗಳಿಗೂ ತೀವ್ರತರವಾಗಿ ಸಾಲದ ಬೇಡಿಕೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಜನರ– ಪ್ರದೇಶಗಳ ಒಟ್ಟಾರೆ ಸಾಲದ ಬೇಡಿಕೆಗಳನ್ನು ಪೂರೈಸುವುದೇಮುಖ್ಯ ದೃಷ್ಟಿಕೋನವಾಗಿರುತ್ತದೆ. ಈ ಯೋಜನೆ ಅನ್ವಯ ದೇಶದಲ್ಲಿ 1156 ಗ್ರಾಮಗಳನ್ನು ದತ್ತು ತೆಗೆದುಕೊಳ್ಳಲಾಗಿದೆ. ಅದರಲ್ಲಿ ಕರ್ನಾಟಕದಲ್ಲಿಯೇ 261 ದತ್ತು ಗ್ರಾಮಗಳಿವೆ. ಕೃಷಿ ಅಭಿವೃದ್ಧಿ, ಗ್ರಾಮ ಕೈಗಾರಿಕಾಭಿವೃದ್ಧಿ' ಸ್ವ–ಉದ್ಯೋಗ, ಮುಂತಾದ ಯೋಜನೆಗಳಿಗೆಸಾಲ ನೀಡಿದೆ. ಗ್ರಾಮ ದತ್ತು ಸ್ವೀಕಾರ ಯೋಜನೆಗಳನ್ನು ಇಡೀ ದೇಶದ ಉದ್ದಗಲಕ್ಕೂ ವಿಸ್ತರಿಸುವ ಉದ್ದೇಶವಿದ್ದು, ಅದರ ಅನುವರ್ತನಾ ಕಾರ್ಯವನ್ನು ಕ್ರಮವಾಗಿ ಮಾಡುತ್ತಾ ಬಂದಿದೆ.

ಕೆನರ ಬ್ಯಾಂಕ್ ಗ್ರಾಮ ಯೋಜನೆ
Project Canara Bank Village

ಈ ಯೋಜನೆ ಸಾಮಾನ್ಯ ಬ್ಯಾಂಕಿಂಗ್ ಚಟುವಟಿಕೆಗಳಿಗಿಂತ ವಿಭಿನ್ನವಾಗಿದೆ. ಇದರಲ್ಲಿ ಗ್ರಾಮಾಭಿವೃದ್ಧಿ ಸಮಿತಿಯನ್ನು ಸ್ಥಾನಿಕ ಜನರು, ತಾಲ್ಲೂಕು ಮಟ್ಟದ ಅಭಿವೃದ್ಧಿ ಅಧಿಕಾರಿಗಳು, ಸಮಾಜ ಕಾರ್ಯಕರ್ತರು ಸೇರಿದಂತೆ ರಚಿಸಿ, ಅದರ ಮೂಲಕ ಗ್ರಾಮಸ್ಥರ ಬೇಡಿಕೆಗಳನ್ನು ಸರಕಾರ, ಸ್ಥಾನಿಕ ಜನರ ಹಾಗೂ ಇತರರ ಸಹಕಾರದಿಂದ ಪೂರೈಸಲಾಗುತ್ತಿದೆ. ಈ ಯೋಜನೆ ಅಡಿಯಲ್ಲಿ, ದೇಶದಾದ್ಯಂತ 242, ಕರ್ನಾಟಕದಲ್ಲಿ 114, ಗ್ರಾಮಗಳನ್ನು ಅಭಿವೃದ್ಧಿಗಾಗಿ ಸೇರ್ಪಡಿಸಿಕೊಂಡು ಈಗಾಗಲೆ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ಪೂರೈಕೆ, ರಸ್ತೆ ನಿರ್ಮಾಣ, ಸಮುದಾಯ ಕಟ್ಟಡ, ಶಾಲೆಗಳ ಕಟ್ಟಡ ನಿರ್ಮಾಣ, ಆಸ್ಪತ್ರೆ ಸೌಲಭ್ಯ, ವಿದ್ಯುತ್ ಇತ್ಯಾದಿಗಳನ್ನು ಸಮನ್ವಯ ಸಹಕಾರದಿಂದ ಪೂರೈಸಿದೆ.

ಗ್ರಾಮೀಣ ಅಭಿವೃದ್ಧಿ-ಒಂದು ಹೊಸ ಹೆಜ್ಜೆ :
(Rural Development A New Approach)

ಮೇಲ್ಕಂಡ ಪ್ರಯತ್ನಗಳೊಂದಿಗೆ, ಬಡ ಜನರ ಸರ್ವಾಂಗೀಣ ಏಳಿಗೆಗಾಗಿ, ಗ್ರಾಮೀಣ ಪ್ರದೇಶಗಳ ಸಮಸ್ಯೆಗಳ ಬಗ್ಗೆ ತೀವ್ರವಾದ ಕಾಳಜಿ ಹಾಗೂ ಅನುಕಂಪಗಳೊಂದಿಗೆ ಬ್ಯಾಂಕಿನ ಅಮೃತ ಮಹೋತ್ಸವ, (ಪ್ಲಾಟಿನಂ ಜ್ಯೂಬಿಲಿ) ದ ಶುಭ ಸಂದರ್ಭದಲ್ಲಿ ಕೆನರಾ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ ರೂರಲ್ ಡೆವೆಲಪ್‌ಮೆಂಟ್ ಟ್ರಸ್ಟನ್ನು ನೊಂದಾಯಿಸಿದೆ. ಈ ಯೋಜನೆಯನ್ನು ಹಂತಹಂತವಾಗಿ ಸಾಧ್ಯವಾದಷ್ಟು ಹಳ್ಳಿಗಳಿಗೆ ವಿಸ್ತರಿಸುವ ಉದ್ದೇಶವಿದೆ. ಈ ಒಂದು ಯತ್ನದಲ್ಲಿ ಇನ್ನೂ ಉತ್ತಮ ಫಲಿತಾಂಶಗಳನ್ನು ಪಡೆಯಲು ಸರಕಾರ ಮತ್ತು ಇತರ ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳೊಡನೆ ಜಂಟಿ ಪ್ರಯತ್ನದೊಂದಿಗೆ ಕಾರ್ಯೋನ್ಮುಖವಾಗಿದೆ. ಶಾಖಾಧಿಕಾರಿಗಳ ಹಾಗೂ ಸ್ಥಾನಿಕ ಜನರ ಸಹಕಾರದಿಂದ ಕೂಡಿದ ಕ್ರಿಯಾತ್ಮಕ, ರಚನಾತ್ಮಕ, ಹಾಗೂ ಸೃಜನಾತ್ಮಕ ಚಟುವಟಿಕೆಗಳು ಗ್ರಾಮವು ಪುನರ್ ರೂಪಗೊಳ್ಳುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಈ ಪ್ರಯೋಗವು ಎರಡು ವರುಷಗಳ ಅವಧಿಗೆ ಒಳಪಟ್ಟಿದ್ದು ಗ್ರಾಮದ ಸಂಪೂರ್ಣ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಕಂಕಣಬದ್ಧವಾಗಿದೆ.

ಈ ಹಿನ್ನೆಲೆಯೊಡನೆ ಪ್ರಪ್ರಥಮವಾಗಿ 22 ಜನ ಶಾಖಾಧಿಕಾರಿಗಳನ್ನು ಆಯ್ಕೆಮಾಡಿ, ಅವಶ್ಯಕತೆ ತರಬೇತಿಯೊಂದಿಗೆ, ಈ ಹೊಸ ಪ್ರಯೋಗದಲ್ಲಿ ಅವರನ್ನು ಕಾರ್ಯ ಪ್ರವೃತ್ತರಾಗುವಂತೆ ಮಾಡಿದೆ. ಕರ್ನಾಟಕದಲ್ಲಿ ವರ್ತೂರು (ಬೆಂಗಳೂರು ಜಿಲ್ಲೆ), ಶಿಗ್ಗಿ (ಧಾರವಾಡ ಜಿಲ್ಲೆ), ಹಿರಿಯೂರು (ಚಿತ್ರದುರ್ಗ ಜಿಲ್ಲೆ), ಮಾಸ್ಕಿ (ರಾಯಚೂರು ಜಿಲ್ಲೆ), ಮುಳಬಾಗಿಲು (ಕೋಲಾರ ಜಿಲ್ಲೆ), ಅಮ್ಮೆಂಬಾಳ್ (ದ. ಕನ್ನಡ ಜಿಲ್ಲೆ), ಶಾಖೆಗಳು–ಕ್ರಮವಾಗಿ ಗುಂಜೂರು ಪಾಳ್ಯ, ಹೆಸರೂರು, ಬಾಳೇನ ಹಳ್ಳಿ, ಮರಲದಿನ್ನಿ ತಂಡ, ಕುಣಿಬಂಡೆ· ಕುರ್ನಾಡು ಗ್ರಾಮಗಳನ್ನು ಸರ್ವತೋಮುಖ ಅಭಿವೃದ್ಧಿಗಾಗಿ ಆಯ್ಕೆ ಮಾಡಿಕೊಂಡು ಈಗಾಗಲೇ ಕುಡಿಯುವ ನೀರಿನ ಸೌಲಭ್ಯ, ರಸ್ತೆ ನಿರ್ಮಾಣ, ಆರೋಗ್ಯ ಶಿಬಿರ, ಕೃಷಿ ವಿಸ್ತರಣಾ ಚಟುವಟಿಕೆ, ಗ್ರಾಮೀಣ ಕರಕುಶಲ ವೃತ್ತಿಯವರಿಗೆ ತರಬೇತಿ ಶಿಬಿರ, ಹೈನುಗಾರಿಕೆ ಅಭಿವೃದ್ಧಿ, ಅರಣ್ಯಾಭಿವೃದ್ಧಿ, ಸಾಲ ವಿತರಣಾ ಶಿಬಿರ, ಮುಂತಾದ ಅಭಿವೃದ್ಧಿ ಚಟುವಟಿಕೆಗಳನ್ನು ಗ್ರಾಮೀಣ ಅಭಿವೃದ್ಧಿ ಸಮಿತಿಯ ನೆರವಿನೊಡನೆ ಸರಕಾರ, ಸ್ವಯಂಪ್ರೇರಿತ ಸಂಘಗಳು ಹಾಗೂ ಬ್ಯಾಂಕಿನ ಗ್ರಾಮೀಣ ಸೇವಾ ಕಾರ್ಯಕರ್ತರ ಸಹಕಾರ ಸಮನ್ವಯದೊಂದಿಗೆ ಯಶಸ್ವಿಯಾಗಿ ಕಾರ್ಯಗತಗೊಳಿಸಿ, ಇತರ ಬ್ಯಾಂಕುಗಳಿಗೆ ಮಾರ್ಗದರ್ಶಿಯಾಗಿದೆ.

ಯಾವುದೇ ಗ್ರಾಮದ ಸರ್ವತೋಮುಖದ ಅಭಿವೃದ್ಧಿಗೆ ಬ್ಯಾಂಕು, ಸರಕಾರ, ಸ್ವಯಂಪ್ರೇರಿತ ಸಂಘ-ಸಂಸ್ಥೆಗಳು, ಸ್ಥಾನಿಕ ಜನರು, ಇವುಗಳ ಸಹಕಾರ, ಸಮನ್ವಯ ಪ್ರಯತ್ನ, ಶ್ರ ಮಿ ಸು ವ ಮನೋಭಾವ, ಇತ್ಯಾದಿ, ಎಲ್ಲಾ ಅಂತಗಳು ಮೇಳವಿಸಬೇಕಾದ್ದು ಅನಿವಾರ್ಯ. ಇಂತಹ ಒಂದು ಸಂಪೂರ್ಣ ಪ್ರಯತ್ನದಲ್ಲಿ ಕೆನರಾ ಬ್ಯಾಂಕು ಪಾಲ್ಗೊಂಡಿದ್ದು ಗ್ರಾಮೀಣ ಪ್ರದೇಶದ ಪ್ರಗತಿಯಲ್ಲಿ ಸಮರ್ಪಣಾ ಮನೋಭಾವದೊಂದಿಗೆ ಸದ್ದಿಲ್ಲದೆ ಕಾರ್ಯ ಮಾಡುತ್ತಿದೆ.

ಲೇಖನ : ಗ್ರಾಮೀಣ ಅಭಿವೃದ್ಧಿ ವಿಭಾಗ
ಕೆನರಾ ಬ್ಯಾಂಕ್, ಪ್ರಧಾನ ಕಛೇರಿ : ಬೆಂಗಳೂರು.

ಕರ್ನಾಟಕದ ಉಳಿದ ಪ್ರದೇಶಗಳಿಗೆ ಹೋಲಿಸಿದರೆ, ಶಿವಮೊಗ್ಗ ಜಿಲ್ಲೆಯ ರೈತರೂ ಹೆಚ್ಚು ಸಂಘಟಿತರಾಗಿರುವುದು ಮತ್ತು ಹೋರಾಟಗಳನ್ನು ನಡೆಸಿರುವುದು ಕಂಡು ಬರುತ್ತದೆ. ಈ ಹೋಲಿಕೆಯನ್ನು ಒತ್ತಿ ಹೇಳಬೇಕಾಗಿದೆ. ಏಕೆಂದರೆ, ಈ ಸಂಘಟನೆ, ಹೋರಾಟಗಳು ಜಿಲ್ಲೆಯ ಎಲ್ಲ ತಾಲ್ಲೂಕು ಹೋಬಳಿಗಳನ್ನಾಗಲೀ, ಅಥವಾ ಬಡರೈತರ ಎಲ್ಲ ಸಮಸ್ಯೆಗಳನ್ನಾಗಲೀ ಎಂದೂ ಒಳಗೊಂಡಿರಲಿಲ್ಲ.

ರೈತ ಚಳುವಳಿಗೆ ಒಂದು ಹೆಸರು ತೂಕ ನಂಬಿಕೆ ತಂದುಕೊಟ್ಟ ಶಿವಮೊಗ್ಗ ಜಿಲ್ಲೆಯಲ್ಲಿ ಚಳುವಳಿ ನಿಜವಾಗಿ ಏನು, ಎಂತಹುದು, ಗಟ್ಟಿಯಾಗಿ ಬೆಳೆಯ್ತುಲ್ಲ ಚೈತನ್ಯ ಅದರ ಮೈಯೊಳಗೆ ಎಲ್ಲಾದರೂ ಇದೆಯಾ-ಈ ಕುರಿತು ಜಿ.ರಾಜಶೇಖರ್ ಜಿಲ್ಲೆಯಲ್ಲಿ ಅಲೆದು "ರುಜುವಾತು"ವಿನಲ್ಲಿ ಒಂದು ಸಮೀಕ್ಷೆ ಬರೆದರು. ಅದರಿಂದ ಆಯ್ದ ಭಾಗವನ್ನು ಇಲ್ಲಿ ಕೊಟ್ಟಿದ್ದೇವೆ.

ಶಿವಮೊಗ್ಗ ರೈತ ಚಳುವಳಿಯ ತಾತ್ವಿಕ ನೆಲೆಗಳು

ಜಿ. ರಾಜಶೇಖರ್

ಇವು ಮುಖ್ಯವಾಗಿ ಗೇಣಿರೈತರು, ಕಾಲಾನುಕ್ರಮದಲ್ಲಿ ನ್ಯಾಯಗೇಣಿ, ಗೇಣಿ ಕರಾರು ಮತ್ತು ಗೇಣಿ ಜಮೀನಿನ ಮೇಲೆ ತಮ್ಮ ಹಕ್ಕುಗಳಿಗೋಸ್ಕರ ನಡೆಸಿದ ಹೋರಾಟಗಳಾಗಿದ್ದವು ; ಮತ್ತು ಜಿಲ್ಲೆಯ ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮಾತ್ರ ನಡೆದಿದ್ದವು. ಬಡರೈತರನ್ನು ಅನಾದಿಯಿಂದ ಕಾಡುತ್ತಿರುವ-ಕೂಲಿಗೆ ಕಡಿಮೆ ಸಂಬಳ, ನಿರುದ್ಯೋಗ, ತೀರ ಚಿಕ್ಕ ಹಿಡುವಳಿಗಳು, ಬೇರೆ ಸಂಪನ್ಮೂಲ ಅಥವಾ ಉದ್ಯೋಗಕೌಶಲಗಳ ಕೊರತೆ, ಕೊಯಿಲು ಆದ ತಕ್ಷಣ ಅತಿ ಕಡಿಮೆ ಬೆಲೆಗಳಿಗೆ ತಮ್ಮ ಫಸಲನ್ನು ಮಧ್ಯವರ್ತಿಗಳಿಗೆ ಮಾರಿಕೊಳ್ಳಬೇಕಾದ ಹತಾಶಸ್ಥಿತಿ-ಈ ಸಮಸ್ಯೆಗಳ ಬಗ್ಗೆ ಶಿವಮೊಗ್ಗದಲ್ಲೂ ಯಾವುದೇ ಹೋರಾಟ ನಡೆದಿರಲಿಲ್ಲ. ಗ್ರಾಮೀಣ ಕುಟುಂಬಗಳಲ್ಲಿ ಸುಮಾರು ಶೇಕಡಾ 30ರಿಂದ 35ರಷ್ಟಿರುವ ಭೂಹೀನ ಕೃಷಿ ಕಾರ್ಮಿಕರ ಸಂಘಟನೆ, ಹೋರಾಟಗಳೂ ಕೂಡಾ ಜಿಲ್ಲೆಯಲ್ಲಿ ಕಾಣಿಸುವುದಿಲ್ಲ. ಹೀಗೆ ಈ ಹೋರಾಟಗಳು ಯಾವ ನೆಲೆಯಲ್ಲಿಯೂ ಸಮಗ್ರ ಹೋರಾಟಗಳಾಗಿರದೆ, ಆಂಶಿಕ ಬೇಡಿಕೆಗಳಿಗೋಸ್ಕರ ಕೆಲವೇ ಹಳ್ಳಿಗಳ ರೈತರ ಒಂದು ವಿಭಾಗವಷ್ಟೇ ನಡೆಸಿದ ಹೋರಾಟಗಳಾಗಿದ್ದವು. ಇವುಗಳ ನಾಯಕತ್ವವನ್ನು ಜಿಲ್ಲೆಯಲ್ಲಿ ಮುಖ್ಯವಾಗಿ ಸೋಷಿಯಲಿಸ್ಟ್ ಪಕ್ಷ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಕೆಲವೇ ಹಳ್ಳಿಗಳಲ್ಲಿ ಸ್ವಲ್ಪ ಕಾಲ ಸಿ. ಪಿ. ಎಂ. ವಹಿಸಿದ್ದವು. ಈ ಎರಡು ರಾಜಕೀಯ ಪಕ್ಷಗಳಿಗೂ ರೈತಾಪಿಯ ವಿವಿಧ ವರ್ಗಗಳು, ಆಸ್ತಿಒಡೆತನ ಮತ್ತು ಮನುಷ್ಯ ಸಂಬಂಧಗಳಲ್ಲಿ ಸಮಗ್ರ ಬದಲಾವಣೆಯನ್ನು ಅಪೇಕ್ಷಿಸುವಂಥ ಖಚಿತವಾದ ರಾಜಕೀಯ ಸೈದ್ಧಾಂತಿಕ ನಿಲುವುಗಳಿದ್ದವು. ಆದರೂ ಈ ಪಕ್ಷಗಳ ರೈತ ಸಂಘಟನೆಗಳು ಅವು ಒಳಗೊಂಡ ರೈತರ ವರ್ಗ, ಬೇಡಿಕೆಗಳು, ಭೌಗೋಳಿಕ ವ್ಯಾಪ್ತಿ-ಈ ಎಲ್ಲ ದೃಷ್ಟಿಗಳಿಂದಲೂ ಸೀಮಿತವಾಗಿದ್ದವು ಮಾತ್ರವಲ್ಲ 'ರಾಜಕೀಯೇತರ' ವೂ ಆಗಿದ್ದವು. ಈ ಸಂಘಟನೆ ಹೋರಾಟಗಳಲ್ಲಿ ಇವುಗಳಲ್ಲಿ ಭಾಗವಹಿಸಿದ ರೈತರ ತಾತ್ವಿಕ ತಿಳುವಳಿಕೆಗಿಂತ, ನಾಯಕರ ವೈಯಕ್ತಿಕ ವರ್ಚಸ್ಸು ಹೆಚ್ಚಿನ ಪಾತ್ರ ವಹಿಸಿತ್ತು. ಉದಾಹರಣೆಗೆ : ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳ ಗೇಣೀದಾರ ರೈತರ ಸಂಘಟನೆ ಆ ಕಾಲದ ಅನಿವಾರ್ಯ ಅಗತ್ಯವಾಗಿದ್ದಂತೆಯೇ, ದಿ|| ಗೋಪಾಲಗೌಡರ ವೈಯಕ್ತಿಕ ವರ್ಚಸ್ಸಿನ ಫಲವೂ ಆಗಿತ್ತು. ಈ ಸಂಘಟನೆ ಮುಂದಿಟ್ಟ ಬೇಡಿಕೆಗಳನ್ನು ಈಡೇರಿಸುವಂಥ ಭೂಸುಧಾರಣಾ ಶಾಸನ ಜಾರಿಗೆ ಬರುತ್ತಿದ್ದಂತೆಯೇ, ಈ ರೈತರ ಮೇಲೆ ಸೋಷಿಯಲಿಸ್ಟ್ ಪಕ್ಷಕ್ಕಿದ್ದ ಪ್ರಭಾವವೂ ನಶಿಸುತ್ತ ಹೋಯಿತು. ಈ ಮಾತು ತೀರ್ಥಹಳ್ಳಿಯ ಸಿ. ಪಿ. ಎಂ. ರೈತ ಸಂಘಟನೆಯ ಮಟ್ಟಿಗೂ ನಿಜ. ಹಳೆಯ ಸೋಷಿಯಲಿಸ್ಟ್ ಪಕ್ಷದ ನಾಯಕರಲ್ಲಿ ಹೆಚ್ಚಿನವರು ಕ್ರಮೇಣ ಆಳುವ ಪಕ್ಷವನ್ನು ಸೇರಿಕೊಂಡದ್ದು ಕೂಡಾ, ಈ ಸಂಘಟನೆಯ ಸೀಮಿತ ಸೈದ್ಧಾಂತಿಕ ಚೌಕಟ್ಟಿನ ಅನಿವಾರ್ಯ ಬೆಳವಣಿಗೆಯಾಗಿದೆ. (ಈ ಪಕ್ಷಾಂತರ ವೈಯಕ್ತಿಕ ಭ್ರಷ್ಟಾಚಾರ ಎನ್ನುವ ತೀರ್ಮಾನ ತೀರ ಸರಳ ಮತ್ತು ಏಕಪಕ್ಷೀಯವಾದದ್ದು.) ತೀರ್ಥಹಳ್ಳಿಯ ಸಿ. ಪಿ. ಎಂ. ರೈತ ಸಂಘಟನೆಯ ಇಬ್ಬರು ಮುಖ್ಯ ನಾಯಕರಲ್ಲಿ ಒಬ್ಬರು ಈಗ ತೀರಿಕೊಂಡಿದ್ದಾರೆ ; ಇನ್ನೊಬ್ಬರು ನಿಷ್ಕ್ರಿಯರಾಗಿದ್ದಾರೆ ; ಸಂಘಟನೆ ಈಗ ಇಲ್ಲ. ಭೂಸುಧಾರಣಾ ಶಾಸನ ಜಾರಿಗೆ ಬಂದ ಮೇಲೂ, ರೈತರು ಹತಾಶ ಮಾರಾಟ, ಕಡಿಮೆ ಫಸಲು, ನಿರುದ್ಯೋಗ, ಸಾಲ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಲೇ ಇದ್ದು, ಇದಕ್ಕೆ ಪ್ರತಿಭಟನೆಯ ರೂಪ ಕೊಡಬಲ್ಲ ಯಾವುದೇ ರೈತ ಸಂಘಟನೆ ಜಿಲ್ಲೆಯಲ್ಲಿ ಬೆಳೆಯದ ಮತ್ತು ಇದ್ದ ಸಂಘಟನೆಗಳು ನಾಮಮಾತ್ರ ಶೇಷವಾದ ಹಿನ್ನೆಲೆಯಲ್ಲಿ ನಾವು ಶಿವಮೊಗ್ಗ ಜಿಲ್ಲೆಯ 1980-82ರ ರೈತ ಹೋರಾಟವನ್ನು ನೋಡಬೇಕಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರವಲ್ಲ, ಕರ್ನಾಟಕದಲ್ಲಿ ಎಲ್ಲಿಯೂ ವಾಮಪಂಥೀಯರಿಗೆ ಪ್ರಬಲವಾದ ಗ್ರಾಮೀಣ ಸಂಘಟನೆಗಳಿಲ್ಲ. ಸೋಷಿಯಲಿಸ್ಟರು ಪಕ್ಷವಾಗಿ ಮಾತ್ರವಲ್ಲ, ಒಂದು ಲಾಬ್ಬಿಯಾಗಿ ಕೂಡಾ ನಾಶವಾಗಿರುವ ಮತ್ತು ಕಮ್ಯೂನಿಸ್ಟರು ತೀರ ದುರ್ಬಲವಾಗಿರುವ ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ, ಅಂದರೆ 80-82ರ ಅವಧಿಯಲ್ಲಿ ರಾಜ್ಯದಲ್ಲಿ ಘಟಪ್ರಭ-ಮಲಪ್ರಭ ಪ್ರದೇಶದ ರೈತರ ಬಂಡಾಯ, ನಿಪ್ಪಾಣಿ ಹೊಗೆಸೊಪ್ಪು ಬೆಳೆಗಾರರ ಚಳುವಳಿ ಮತ್ತು ಶಿವಮೊಗ್ಗ ರೈತರ ಚಳುವಳಿಗಳು ನಡೆದಿವೆ. ಕರ್ನಾಟಕದಲ್ಲಿ ಹಿಂದೆ ನಡೆದ ಯಾವುದೇ ರೈತ ಹೋರಾಟಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ನಡೆದ ಈ ರೈತ ಚಳುವಳಿಗಳ "ಶುದ್ಧ ರಾಜಕೀಯೇತರ" ಗುಣವನ್ನು, ಇವುಗಳ ಸಂಘಟನೆಗಳು ಒತ್ತಿ ಹೇಳುತ್ತವೆ. 20 ಜನ ರೈತರು ಪೋಲೀಸರ ಗುಂಡೇಟಿಗೆ ಬಲಿಯಾದ ಘಟಪ್ರಭ-ಮಲಪ್ರಭ ರೈತ ಚಳುವಳಿಯ ಸಮಿತಿಯಲ್ಲಿ ಮಾರ್ಕ್ಸ್‌ವಾದಿಗಳಿದ್ದರೂ, ಚಳುವಳಿ ರಾಜ್ಯದ ಇತರ ಕಡೆಗಳಿಗೆ ವ್ಯಾಪಿಸುತ್ತಿದ್ದಂತೆಯೇ ಈ ಪಕ್ಷವನ್ನು ಸಮಿತಿಯಿಂದ ಹೊರಹಾಕಲಾಯಿತು. ಮಾರ್ಕ್ಸ್‌ವಾದಿಗಳನ್ನು ಚಳುವಳಿಯಿಂದ ಹೊರಗಿಡುವುದು ಸಮಿತಿಯ ನಾಯಕರಿಗೆ ಸುಲಭವಾಗಿತ್ತು. ಯಾಕೆಂದರೆ ಈ ಪ್ರದೇಶದಲ್ಲಿ ಚಳುವಳಿಯನ್ನು ತನ್ನಷ್ಟಕ್ಕೆ ತಾನು ಮುಂದುವರಿಸಿಕೊಂಡು ಹೋಗುವ ಚೈತನ್ಯ ಸಿ. ಪಿ. ಎಂ. ಗೆ ಇರಲಿಲ್ಲ. ಚಳುವಳಿಗೆ ತಮ್ಮ ಬೆಂಬಲವನ್ನು ಸೂಚಿಸಿದ ಯಾವ ರಾಜಕೀಯ ವಿರೋಧ ಪಕ್ಷಕ್ಕೂ ಇಲ್ಲಿ ಜನಬೆಂಬಲವಿರಲಿಲ್ಲ. (ಚಳುವಳಿ ನಡೆದ ಕೆಲವೇ ತಿಂಗಳು ನಂತರ, ಈ ಪ್ರದೇಶದಲ್ಲಿ ನಡೆದ ಉಪಚುನಾವಣೆಯಲ್ಲಿ ಆಳುವ ಪಕ್ಷ ಭಾರೀ ಬಹುಮತದಲ್ಲಿ ಗೆದ್ದಿತು).

ಘಟಪ್ರಭ-ಮಲಪ್ರಭ ರೈತ ಚಳುವಳಿಯೊಡನೆ ಅಸ್ತಿತ್ವಕ್ಕೆ ಬಂದ ಮತ್ತು ಶಿವಮೊಗ್ಗ ರೈತ ಚಳುವಳಿಯನ್ನು ಸಂಘಟಿಸಿದ "ಕರ್ನಾಟಕ ರಾಜ್ಯ ರೈತ

ಸಂಘ'' ತನ್ನನ್ನು ರಾಜಕೀಯೇತರ ರೈತ ಸಂಘಟನೆಯೆಂದು ಕರೆದುಕೊಂಡಿತು. ಯಾವ ರಾಜಕೀಯ ಪಕ್ಷದ ಸದಸ್ಯರೂ ತನ್ನ ಸಂಘಟನೆಯ ಪದಾಧಿಕಾರಿಗಳಾಗಿರತಕ್ಕದ್ದಲ್ಲ ಎಂದೂ ಸ್ಪಷ್ಟಪಡಿಸಿತು. ಜೊತೆಗೆ ರೈತಸಂಘ, ತಮಿಳುನಾಡಿನ 'ರಾಜಕೀಯೇತರ' ರೈತ ನಾಯಕ ನಾರಾಯಣಸ್ವಾಮಿ ನಾಯಿಡು ಅವರು ಅಧ್ಯಕ್ಷರಾಗಿರುವ ಅಖಿಲ ಭಾರತ ರೈತ ಸಂಘದ ಅಂಗ ಸಂಸ್ಥೆಯಾಗಿ ಕೆಲಸ ಮಾಡಲು ನಿರ್ಧರಿಸಿತು. (ರಾಜ್ಯ ರೈತ ಸಂಘದ ಮಟ್ಟಿಗೆ ಶ್ರೀ ನಾಯಿಡು ಅವರು ಈಗಲೂ 'ರಾಜಕೀಯೇತರ' ನಾಯಕರಾಗಿಯೇ ಉಳಿದಿದ್ದಾರೋ ಹೇಗೆ ಎಂಬುದು ತಿಳಿಯದು. ಯಾಕೆಂದರೆ ಈಗ ನಾಯಿಡು ಅವರೇ ಸ್ವತಃ ಒಂದು ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿದ್ದಾರೆ.) 12 ಜನರು ಗುಂಡೇಟಿಗೆ ಬಲಿಯಾದ ನಿಪ್ಪಾಣಿ ರೈತ ಚಳುವಳಿಗೆ, ಇನ್ನೊಬ್ಬ 'ರಾಜಕೀಯೇತರ' ನಾಯಕ ಶರದ್ ಜೋಷಿ ಮುಖಂಡರಾಗಿದ್ದರು. ಈ ನಾಯಕರ 'ರಾಜಕೀಯೇತರ' ಗುಣವನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ. ಯಾಕೆಂದರೆ, ನಾರಾಯಣಸ್ವಾಮಿ ನಾಯಿಡು ಅವರ ಬಲಪಂಥೀಯ ರಾಜಕೀಯ ವಿಚಾರಗಳು, ಚುನಾವಣೆಗಳ ಸಮಯದಲ್ಲಿ ಬಲಪಂಥೀಯ ಪಕ್ಷಗಳ ಜೊತೆ ಅವರು ನಡೆಸುವ ಚೌಕಾಸಿ, ಶರದ್ ಜೋಷಿಯವರಿಗೆ ಮಹಾರಾಷ್ಟ್ರದ ಆಳುವ ಪಕ್ಷದ ಭಿನ್ನಮತೀಯರ ಜೊತೆ ಇರುವ ಸಂಬಂಧ–ಇವು ಈಗ ರಹಸ್ಯವಾಗೇನೂ ಉಳಿದಿಲ್ಲ.

ಪ್ರಸ್ತುತ ರೈತ ಚಳುವಳಿಯ ಬಗ್ಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ನಿಲುವುಗಳು ಉಳ್ಳ ಬುದ್ಧಿಜೀವಿಗಳಲ್ಲೇ ತೀವ್ರ ಭಿನ್ನಾಭಿಪ್ರಾಯಗಳಿವೆ. ರೈತ ಚಳುವಳಿಯನ್ನು ಉತ್ಸಾಹದಿಂದ ಬೆಂಬಲಿಸುವವರು, ಈ ಚಳುವಳಿಯನ್ನು ವ್ಯವಸ್ಥೆಯ ವಿರುದ್ಧ ಮೂಲಭೂತ ಬದಲಾವಣೆಗಳಿಗೋಸ್ಕರ ರೈತರು ನಡೆಸುತ್ತಿರುವ ಹೋರಾಟ, ನಗರ ಪ್ರಧಾನವಾದ ಸಾಮಾಜಿಕ, ರಾಜಕೀಯ ಪ್ರಭುತ್ವದ ಶಕ್ತಿಗಳಿಗೆ ಗ್ರಾಮೀಣ ಜನತೆ ತೋರಿಸಿದ ಪ್ರತಿಭಟನೆ, ವಿಕೇಂದ್ರೀಕರಣ, ಗ್ರಾಮ ಸ್ವರಾಜ್ಯಗಳ ಆದರ್ಶಗಳಿಗೋಸ್ಕರ ನಡೆದ ಜನ ಜಾಗೃತಿಯ ಚಳುವಳಿ ಎಂದು ಮುಂತಾಗಿ ಚಿತ್ರಿಸಿದ್ದಾರೆ. ವಾಮಪಂಥೀಯ ರಾಜಕೀಯ ಪಕ್ಷಗಳು ಈ ಚಳುವಳಿಯನ್ನು ಬೆಂಬಲಿಸಿದ್ದರೂ (ಹೇಳಿಕೆಗಳ ಮುಖಾಂತರ) ವಾಮಪಂಥೀಯ ಅರ್ಥಶಾಸ್ತ್ರಜ್ಞರು ಇದನ್ನು ಮೂಲಭೂತವಾಗಿ ಶ್ರೀಮಂತ ರೈತರ ಚಳುವಳಿಯೆಂದೇ ಭಾವಿಸಿದ್ದಾರೆ. ಆದರೆ ರೈತ ಸಂಘ ಈ ವರ್ಗೀಕರಣವನ್ನೇ ತಿರಸ್ಕರಿಸುತ್ತದೆ. ತನ್ನ 'ರಾಜಕೀಯೇತರ' ಸ್ವರೂಪವನ್ನು ಸದಾ ಒತ್ತಿ ಹೇಳುವ ರೈತ ಸಂಘ, ರಾಜಕೀಯ ಪಕ್ಷಗಳನ್ನು ಮಾತ್ರವಲ್ಲ, ಕೆಲವು ರಾಜಕೀಯ ಸೈದ್ಧಾಂತಿಕ ವಿಚಾರಗಳನ್ನು ಕೂಡಾ, ತನ್ನ ತಾತ್ವಿಕ ಪರಿಕಲ್ಪನೆಯಿಂದ ಕಟ್ಟುನಿಟ್ಟಾಗಿ ಹೊರಗಿಟ್ಟಿದೆ. ಉದಾಹರಣೆಗೆ ರೈತರಲ್ಲೇ ವಿವಿಧ ಶ್ರೇಣಿಗಳ ರೈತರಿದ್ದು, ಈ ಎಲ್ಲರ ಹಿತಾಸಕ್ತಿಗಳೂ ಸಮಾನವಾಗಿರುವುದಿಲ್ಲ ; ಹೆಚ್ಚಿನ ಸಂದರ್ಭಗಳಲ್ಲಿ ಅವು ಪರಸ್ಪರ ವಿರುದ್ಧವಾಗಿರುತ್ತವೆ ಕೂಡಾ ಎಂಬ ವಿಚಾರವನ್ನು ರೈತಸಂಘ ನಿರಾಕರಿಸುತ್ತದೆ ; ಇದು ರೈತರ ಒಗ್ಗಟ್ಟನ್ನು ಒಡೆಯುವ ಕುತಂತ್ರ ಎಂದೂ ಭಾವಿಸುತ್ತದೆ. ಶಿವಮೊಗ್ಗ ರೈತ ಚಳುವಳಿಯ ಮುಖಂಡರಲ್ಲಿ ಒಬ್ಬರಾದ ಶ್ರೀ ಎಮ್. ಡಿ. ನಂಜುಂಡಸ್ವಾಮಿಯವರನ್ನು "ಈ ಚಳುವಳಿ ಶ್ರೀಮಂತ ರೈತರದ್ದು ಮಾತ್ರ ಎಂಬ ಆಪಾದನೆಯ ಬಗ್ಗೆ ನೀವು ಏನು ಹೇಳುತ್ತೀರಿ ?" ಎಂದು ನಾನು ಪ್ರಶ್ನಿಸಿದಾಗ ಅವರು, "ಅದು ರಾಜಕೀಯ ಪೂರ್ವಗ್ರಹದ ಮಾಲುಗಣ್ಣಿನಿಂದ ಚಳುವಳಿಯನ್ನು ನೋಡಿ ಹೇಳುವ ಅಭಿಪ್ರಾಯ" ಎಂದು ನನ್ನ ಪ್ರಶ್ನೆಯನ್ನು ತಿರಸ್ಕರಿಸಿದರು. "ಶ್ರೀಮಂತ ರೈತರು" ಎಂಬ ಒಂದು ವರ್ಗ ಅಸ್ತಿತ್ವದಲ್ಲಿದೆ ಎಂಬುದನ್ನು ಕೂಡಾ ಅವರು ನಿರಾಕರಿಸಿದರು. ಕೃಷಿ ಮತ್ತು ಕೈಗಾರಿಕೆಗಳ ನಡುವೆ ಸಮತೋಲವಿಲ್ಲದ ಮತ್ತು ಕೃಷಿಗೆ ಅನ್ಯಾಯವಾಗುವ ನಮ್ಮ ವಿಷಮ ಮಾರುಕಟ್ಟೆಯಲ್ಲಿ, ಬಂಡವಾಳ ಹೂಡಿಕೆ, ಶಿಕ್ಷಣ, ಸಾರಿಗೆ ಮುಂತಾದ ಸೇವಾ ಸೌಲಭ್ಯಗಳು ಇವುಗಳಲ್ಲಿ ಸರಕಾರ ತೋರಿಸುವ ಕೈಗಾರಿಕೆಗಳ ಪರವಾದ, ನಗರ ಪರವಾದ ಪಕ್ಷಪಾತದಲ್ಲಿ, ಯಾವ ರೈತನೂ ಹೋಲಿಕೆಯಲ್ಲಿ ಶ್ರೀಮಂತ ಎನ್ನಿಸಿಕೊಳ್ಳಲಾರ ಎಂಬುದು ಅವರ ವಾದವಾಗಿತ್ತು. ಕೃಷಿ ಉತ್ಪನ್ನಗಳ ಕಚ್ಚಾ ಪದಾರ್ಥಗಳಿಗೆ ಕೈಗಾರಿಕಾ ಬಂಡವಾಳಶಾಹಿಗಳು ಕೊಡುವ ತೀರ ಕಡಿಮೆ ಬೆಲೆಗಳಿಗೂ, ಅವುಗಳ ಸಿದ್ಧವಸ್ತುಗಳಿಗೆ (ಉದಾ : ಸಿಗರೇಟು, ಜವಳಿ, ಸಕ್ಕರೆ) ನಿಗದಿಗೊಳಿಸುವ ವಿಪರೀತ ಬೆಲೆಗಳಿಗೂ ಯಾವುದೇ ಸಂಬಂಧವಿಲ್ಲದಿರುವುದನ್ನು, ಅವರು ತಮ್ಮ ವಾದಕ್ಕೆ ಉದಾಹರಣೆಯಾಗಿ ಹೇಳಿದರು.

ರೈತ ಚಳುವಳಿಯನ್ನು ಸಂಪೂರ್ಣ ಬೆಂಬಲಿಸುವವರು, ಹಳ್ಳಿಗಳ ಶ್ರೀಮಂತ ರೈತರನ್ನು ನಗರಗಳ ಬಂಡವಾಳಶಾಹಿ, ವಾಣಿಜ್ಯೋದ್ಯಮಿ ಮತ್ತು ಉನ್ನತ ವೇತನಗಳ ನೌಕರಶಾಹಿಯ ಜೊತೆ ಹೋಲಿಸಿದರೆ, ಅವರು ಹೇಗೆ 'ಶ್ರೀಮಂತ'ರೆನ್ನಿಸಿಕೊಳ್ಳುತ್ತಾರೆ ಎಂದೂ ಸವಾಲು ಹಾಕುತ್ತಾರೆ. ಈ ಪ್ರಶ್ನೆಯ ತಾರ್ಕಿಕತೆ ಸ್ವಲ್ಪ ವಕ್ರವಾಗಿದ್ದು ಸಮಾನತೆಯ ಆದರ್ಶಕ್ಕೆ ಇದು ಹೊಂದಿಕೊಳ್ಳುವುದಿಲ್ಲ. ಹಳ್ಳಿಗಳ ಶ್ರೀಮಂತ ರೈತರನ್ನು ನಗರಗಳ ಶ್ರೀಮಂತ ವರ್ಗದ ಜೊತೆಗೇ ಯಾಕೆ ಹೋಲಿಸಬೇಕು ? ಹಳ್ಳಿಗಳ ಬಡ ರೈತರು, ಭೂಹೀನರ ಜೊತೆ ಯಾಕೆ ಹೋಲಿಸಬಾರದು ? ನಗರಗಳಲ್ಲೂ ಬಹು ಸಂಖ್ಯಾತರು ಕಡುಬಡವರೇ ಅಲ್ಲವೆ? ಎಂದು ಮುಂತಾಗಿ, ಆ ಸವಾಲಿಗೆ ಮರು ಸವಾಲುಗಳನ್ನು ಹಾಕಬಹುದು. ರೈತಸಂಘದ 'ನಗರ ವಿರೋಧಿ' ಧೋರಣೆಯ ಕೆಲವು ಹೇಳಿಕೆಗಳೂ ಅಷ್ಟೇ ಪ್ರಶ್ನಾರ್ಹವಾಗಿವೆ. ನಾರಾಯಣಸ್ವಾಮಿನಾಯಿಡು ಅವರ ತಮಿಳುನಾಡು ರೈತ ಸಂಘದ "ನಾವು ಹಾಲು ಕರೆಯುವವರು, ನೀವು (ಅಂದರೆ ಪೇಟೆಯವರು) ಕುಡಿಯುವವರು", "ನಮ್ಮ ಮೊಟ್ಟೆ, ನಿಮ್ಮ ಆಮ್ಲೆಟ್" ಇತ್ಯಾದಿ ಘೋಷಣೆಗಳು, ಕರ್ನಾಟಕ ರಾಜ್ಯ ರೈತ ಸಂಘದ, "ದೇಶಕ್ಕೆ ಅನ್ನ ಕೊಡುವ ರೈತ", ದೇಶದ ಜನಕ್ಕೆ ಫುಲ್ ಊಟ ಹಾಕಿದ್ದೇವೆ ನಾವು ಹಾಕಿದ ಫ್ರಿ ಊಟಕ್ಕೂ, ನೀವು ಕೊಟ್ಟ ಸಾಲಕ್ಕೂ ಚುಕ್ತಾ ಚುಕ್ತ" ಮುಂತಾದ ಹೇಳಿಕೆಗಳು ನಗರಗಳ ಬಡ ಕೂಲಿಕಾರರಲ್ಲಿ, ಕೆಳಮಧ್ಯಮ ವರ್ಗದವರಲ್ಲಿ, ಗ್ರಾಮೀಣ ಭೂಹೀನರಲ್ಲಿ ಎಂಥ ಪ್ರತಿಕ್ರಿಯೆಗಳನ್ನು ಹುಟ್ಟಿಸಬಹುದು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಆಹಾರ ವಸ್ತುಗಳ ಬೆಲೆಗಳು ತಮ್ಮ ಕೈಗೆ ಎಟಕುವಂಥವು ಎಂದು ಈ ದೇಶದ ಬಡವರಿಗೆ ಯಾವತ್ತೂ ಅನ್ನಿಸಿಲ್ಲ. (ಇದು ಸಕ್ಕರೆ, ಕಾಫಿ, ಚಹಾ, ಹತ್ತಿಬಟ್ಟೆ ಮುಂತಾದ ಕೃಷಿ ಆಧಾರಿತ ಸಿದ್ಧ ವಸ್ತುಗಳಿಗೆ ಅನ್ವಯವಾಗುತ್ತದೆ) ಇತ್ತೀಚಿನ ಒಂದು ಅಂದಾಜಿನ ಪ್ರಕಾರ ದೇಶದಲ್ಲಿ 35 ಕೋಟಿಯಷ್ಟು ಜನ ಹಸಿವಿನ ಅಂಚಿನಲ್ಲಿದ್ದಾರೆ. ಅಂದರೆ ಇಷ್ಟು ಜನ, ಈಗ ಇರುವ ಬೆಲೆಗಳಲ್ಲಿಯೂ ಆಹಾರ ಪದಾರ್ಥಗಳನ್ನು ಕೊಳ್ಳಲಾರದವರು. ಯಾರ ಮೊಟ್ಟೆ ? ಯಾರ ಆಮ್ಲೆಟ್? ದೇಶದ ಜನಕ್ಕೆ ಫ್ರೀ ಊಟ ಹಾಕಿದ ಮಹಾತ್ಮರು ಯಾರು ?

ಆದರೆ ಸಮಾನತೆಯ ನೆಲೆಯಲ್ಲಿ ಹೊಸ ಸಮಾಜವೊಂದರ ಸೃಷ್ಟಿ ಒಂದು ಆತ್ಯಂತಿಕ ಆದರ್ಶವಾಗಿದ್ದು, ತೀವ್ರ ಅಸಮಾನತೆಯ ಹಾಲೀ ವ್ಯವಸ್ಥೆಯಲ್ಲಿ ಒಂದು ವರ್ಗ, ಇನ್ನೊಂದು ವರ್ಗಕ್ಕಿರುವ ಸುಖಸವಲತ್ತುಗಳನ್ನು ಬೆಟ್ಟುಮಾಡಿ ತೋರಿಸಿ ಅವು ತಮಗೂ ಬೇಕು ಎಂದು ಬಯಸುವುದು ಸಹಜವಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಕೋಟಿಗಟ್ಟಲೆ ಸಾಲದ ಮರುಪಾವತಿಯ ಬಗ್ಗೆ ಔದಾರ್ಯ ತೋರಿಸುವ ಸರಕಾರ (ಕೇಂದ್ರದ ಉಪ ಅರ್ಥ ಮಂತ್ರಿಗಳೇ ಇತ್ತೀಚೆಗೆ ತಿಳಿಯಪಡಿಸಿದ ಹಾಗೆ, ಈ ಕ್ಷೇತ್ರದಲ್ಲಿ ಮರುಪಾವತಿಯಾಗದ ಸಾಲ 1500 ಕೋಟಿ ರೂಪಾಯಿ) ರೈತರ ಸಾಲಗಳ ಮರುಪಾವತಿಯ ಬಗ್ಗೆ ಯಾಕೆ ಕಟ್ಟುನಿಟ್ಟಾಗಿರಬೇಕು ? ಹೊಸ ಕೈಗಾರಿಕೆಗಳಿಗೆ, ಸಣ್ಣ ಕೈಗಾ

ಗಳಿಗೆ ಪ್ರೋತ್ಸಾಹ, ರಫ್ತಿಗೆ ಉತ್ತೇಜನ ಯಂತಾದ ನೆಪಗಳಲ್ಲಿ ಕೈಗಾರಿಕೆಗಳಿಗೆ ನಾನಾ ಯಾಯುತಿಗಳನ್ನು ಕೊಡುವ ಸರಕಾರ ರೈತರಿಗೆ ಾಕೆ 4% ಬಡ್ಡಿ ದರದಲ್ಲಿ ಸಾಲ ಕೊಡ ಕೂಡ ? ಕೈಗಾರಿಕಾ ವಸ್ತುಗಳ ಬೆಲೆ ನಿಗದಿಯಲ್ಲಿ ೂಕ ಪ್ರೇಕ್ಷಕನಂತಿರುವ ಸರಕಾರ, ಕೃಷಿ ಉತ ಗಳ ಬೆಂಬಲ ಬೆಲೆಯ ನಿಗದಿಯಲ್ಲಿ ಯಾಕೆ ಪುಣನಂತೆ ವರ್ತಿಸಬೇಕು ? ಯಾಕೆ ಮಾರುಕಟ್ಟೆ ು ದರಗಳಿಗಿಂತ ಕಡಿಮೆಗೆ ಲೆವಿ ವಸೂಲು ಮಾಡ ೇಕು?— ಈ ಪ್ರಶ್ನೆಗಳನ್ನು ರೈತ ಸಂಘ ಸಾರ್ವ ನಿಕರ ಮುಂದಿಟ್ಟಿದೆ. ಜೊತೆಗೆ "ಶ್ರೀಮಂತ ರೈತ ಚಳುವಳಿ" ಎಂಬ ನಾಮಕರಣದಲ್ಲಿಯೇ ಅಂತ ರ್ಗತವಾಗಿರುವ, "ಚಳುವಳಿ, ಸಮಾನತೆಯ ಆದರ್ಶಗಳಿಗೆ ಅನುಗುಣವಾಗಿ ; ಬಡವರ ಹಿತಗಳಿಗೆ ರೋಧಿಯಾದದ್ದು ; ಬಹುಸಂಖ್ಯಾಕರಿಗೆ ಸಂಬಂ ಧಿಸಿದ್ದಲ್ಲ ; ಈ ರೈತರಿಗೆ ನಿಜಕ್ಕೂ ಚಳುವಳಿ ಮಾಡಬೇಕಾದ ತುರ್ತಿನ ಸಮಸ್ಯೆಗಳಿಲ್ಲ" ಇತ್ಯಾದಿ ತೀರ್ಪುಗಳನ್ನು ರೈತಚಳುವಳಿಯ ನಾಯಕರು ಆಕ್ಷೇಪಿಸುತ್ತಾರೆ. ಖಾಸಗೀ ಆಸ್ತಿಯನ್ನಾಗಲೀ ಖಾಸಗೀ ವಾಣಿಜ್ಯ ಬಂಡವಾಳಶಾಹಿಯನ್ನಾಗಲೀ ತೊಡೆದು ಹಾಕಿರುವ ವ್ಯವಸ್ಥೆ ನಮ್ಮದಲ್ಲ ; ಅದನ್ನು ಸಾಧಿಸುವ ಹಾದಿಯಲ್ಲೂ ನಾವಿಲ್ಲ. ಆಸ್ತಿ ವರಮಾನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ತೀವ್ರ ಅಸಮಾನತೆ ಇರುವ ನಮ್ಮ ವ್ಯವಸ್ಥೆಯಲ್ಲಿ ಬೇರೆ ಯಾವ ಕ್ಷೇತ್ರಕ್ಕೂ ಅನ್ವಯವಾಗದ ಸಮಾನತೆಯ ನೈತಿಕತೆಯನ್ನು ಕೃಷಿ ಕ್ಷೇತ್ರಕ್ಕೆ ಮಾತ್ರ ಅನ್ವಯಿಸಬಹುದೋ ? ಈ ಪ್ರಶ್ನೆ ಆದರ್ಶಗಳ ದೃಷ್ಟಿಯಿಂದ ತಾರ್ಕಿಕವೆನ್ನಿಸದಿದ್ದರೂ ತತ್ಕಾಲೀನ ವ್ಯವಹಾರದ ನೆಲೆಯಲ್ಲಿ ನ್ಯಾಯವಾದ ಪ್ರಶ್ನೆಯೇ ಆಗಿದೆ.

ಈ ರೈತ ಚಳುವಳಿ "ಶ್ರೀಮಂತ ರೈತರ ಚಳುವಳಿ" ಎಂದು ಕರೆಸಿಕೊಂಡಿರುವುದಕ್ಕೆ, ಮೇಲುನೋಟಕ್ಕೆ ಸ್ಪಷ್ಟವಾಗಿ ಕಾಣಿಸುವ ಕೆಲವು ಕಾರಣಗಳಿವೆ. ಘಟಪ್ರಭ–ಮಲಪ್ರಭ ಪ್ರದೇಶ, ನಿಪ್ಪಾಣಿ ಮತ್ತು ಶಿವಮೊಗ್ಗದ ರೈತರಿಗೆ ಸಮಾನವಾದ ಕೆಲವು ಸಮಸ್ಯೆಗಳಿವೆ. ರಾಜ್ಯದ ಉಳಿದ ಹೆಚ್ಚಿನ ಪ್ರದೇಶಗಳ ರೈತರಿಗಿಂತ ಭಿನ್ನವಾದ ಆರ್ಥಿಕ ಸನ್ನಿವೇಶದಲ್ಲಿ ಈ ರೈತರು ಚಳುವಳಿ ನಡೆಸಿದ್ದಾರೆ. ಘಟಪ್ರಭ–ಮಲಪ್ರಭ ಪ್ರದೇಶದಂತೆಯೇ, ಶಿವಮೊಗ್ಗ ಜಿಲ್ಲೆಯಲ್ಲಿಯೂ ತೀವ್ರವಾಗಿ ಚಳುವಳಿ ನಡೆದ ತಾಲ್ಲೂಕುಗಳು (ಶಿವಮೊಗ್ಗ, ಭದ್ರಾವತಿ), ನೀರಾವರಿ ಪ್ರದೇಶಗಳಾಗಿದ್ದು ಇಲ್ಲಿನ ಕಬ್ಬು ಬೆಳೆಗಾರರು ಮಾತ್ರವಲ್ಲ, ಬತ್ತದ ಎರಡು ಬೆಳೆ ತೆಗೆಯುವ ರೈತರು ಕೂಡಾ, ಒಂದೇ ಬೆಳೆಯ ಮಳೆತರಿಯ ರಾಜ್ಯದ ಇತರ ರೈತರಿಗಿಂತ, ತಾವು ಬೆಳೆದದ್ದರಲ್ಲಿ ಹೆಚ್ಚು ಪ್ರಮಾಣವನ್ನು ಮಾರುವ ರೈತರಾಗಿದ್ದಾರೆ. ಘಟಪ್ರಭ–ಮಲಪ್ರಭ ಪ್ರದೇಶದ ಹತ್ತಿಬೆಳೆಗಾರರು, ನಿಪ್ಪಾಣಿಯ ಹೊಗೆಸೊಪ್ಪು ಬೆಳೆಗಾರರು, ಶಿವಮೊಗ್ಗದ ಕಬ್ಬು ಬೆಳೆಗಾರರು, ತಾವು ಬೆಳೆದದ್ದನ್ನೆಲ್ಲ ಮಾರುವವರು ಮತ್ತು ತಮ್ಮ ಫಸಲಿನ ಬೆಲೆಗಳ ಬಗ್ಗೆ ವಾಣಿಜ್ಯ ಬಂಡವಾಳಶಾಹಿಯ ಜೊತೆ ಸದಾ ಚೌಕಾಸಿ ಮಾಡಬೇಕಾದ ಪರಿಸ್ಥಿತಿಯಲ್ಲಿರುವವರು. ಜೊತೆಗೆ ನೀರಾವರಿಯ ಕಾರಣದಿಂದ ಈ ರೈತರು ಸರಕಾರಕ್ಕೆ ಬೆಟರ್‌ಮೆಂಟ್ ಲೆವಿ, ನೀರಿನ ಕಂದಾಯ, ವಿದ್ಯುಚ್ಛಕ್ತಿಯ ದರಗಳು, ಧಾನ್ಯ ಲೆವಿ, ಮಾರಾಟ ತೆರಿಗೆಗಳನ್ನು ಇತರ ರೈತರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಲ್ಲಿಸಬೇಕಾಗಿರುವ ರೈತರೂ ಆಗಿದ್ದಾರೆ. ಮಳೆತರಿಯ ಒಂದೇ ಬೆಳೆಯ ಬತ್ತದ ಜಮೀನಿಗಿಂತ ಅಷ್ಟೇ ವಿಸ್ತೀರ್ಣದ ನೀರಾವರಿಯ ಜಮೀನಿಗೆ ಇದಕ್ಕಿಂತಲೂ ಜಾಸ್ತಿಪ್ರಮಾಣದಲ್ಲಿ ಕಬ್ಬಿನ ಜಮೀನಿಗೆ ಬ್ಯಾಂಕು ಸೊಸೈಟಿಗಳಿಂದ ಜಾಸ್ತಿ ಸಾಲ ಸಿಗುವುದರಿಂದ, ಈ ರೈತರು ಮಾಡಿಕೊಂಡಿರುವ ಸಾಲಗಳ ಹೊರೆಯೂ ಜಾಸ್ತಿ. ರೈತ ಸಂಘದ ಚಳುವಳಿಯ 19 ಬೇಡಿಕೆಗಳಲ್ಲಿ ಮುಖ್ಯವಾದವು ಸಾಲ, ಬೆಲೆ, ಲೆವಿ ಮತ್ತು ತೆರಿಗೆಗಳಿಗೆ ಸಂಬಂಧಿಸಿದವೇ ಆಗಿವೆ. ಉದಾಹರಣೆಗೆ 2ನೆಯ ಬೇಡಿಕೆ— "ರೈತನ ಹತೋಟಿಗೆ ಮೀರಿದ ಸರಕಾರದ ವಿರೂಪಗೊಂಡ ಸಾಲ ನೀತಿ, ಬೆಲೆನೀತಿ ಮತ್ತು ಲೆವಿನೀತಿಗಳಿಂದ ರೈತರ ಮೇಲೆ ಹೇರಲ್ಪಟ್ಟಿರುವ ಎಲ್ಲ ಕೃತಕಸಾಲಗಳನ್ನೂ ಎಂದರೆ ಕೃಷಿಗೆ ಕೊಟ್ಟ ಸಹಕಾರೀ ಮತ್ತು ವಾಣಿಜ್ಯ ಬ್ಯಾಂಕ್ ಸಾಲಗಳನ್ನು ಪೂರ್ಣವಾಗಿ ಮನ್ನಾ ಮಾಡಬೇಕು" ; 4 ನೆಯ ಬೇಡಿಕೆ— "ರೈತರಿಗೆ ಕೊಡುವ ಸಾಲದ ಪ್ರಮಾಣವನ್ನು ವ್ಯವಸಾಯದ ವೆಚ್ಚದ ಪ್ರಮಾಣಕ್ಕೆ ತಕ್ಕಂತೆ ಹೆಚ್ಚಿಸಬೇಕು." ಈ ಎರಡೂ ಬೇಡಿಕೆಗಳಲ್ಲಿ ವಿರೋಧಾಭಾಸವಿರುವಂತೆ ಕಂಡರೂ, ರೈತಸಂಘ ಇವುಗಳ ಜೊತೆಜೊತೆಗೇ ಮಾರುಕಟ್ಟೆಯ ಕೊಡುವ ಕೊಳ್ಳುವ ವ್ಯವಹಾರಗಳಲ್ಲಿಯೂ ಮೂಲಭೂತವಾದ ಬದಲಾವಣೆಗಳಾಗಬೇಕು ಮತ್ತು ಸಾಲಗಳು ರೈತರಿಗೆ ಸುಲಭ ಬಡ್ಡಿದರದಲ್ಲಿ ಸುಲಭ ಶರ್ತಗಳಲ್ಲಿ ದೊರೆಯಬೇಕು ಎಂದೂ ಪ್ರತಿಪಾದಿಸುತ್ತದೆ. ಬೆಲೆಗಳಿಗೆ ಸಂಬಂಧಿಸಿದ ರೈತಸಂಘದ ಬೇಡಿಕೆಗಳು ಹೀಗಿವೆ— "ರೈತನ ಪ್ರತಿಯೊಂದು ಬೆಳೆಗೂ ಕೃಷಿ ಉತ್ಪಾದನಾ ವೆಚ್ಚವನ್ನು ಅನುಸರಿಸಿ, ವೈಜ್ಞಾನಿಕವಾಗಿ, ಕೈಗಾರಿಕೋದ್ಯಮಗಳಲ್ಲಿ ನಿಗದಿಮಾಡುವಂತೆ ಮಾನವ ತಾಸುಗಳ ಆಧಾರದ ಮೇಲೆ ನಿಗದಿಯಾಗಬೇಕು; ನಿಗದಿಪಡಿಸಿದ ಬೆಲೆಗೆ ಸರಕಾರವೇ ರೈತರಿಂದ ಕಡ್ಡಾಯವಾಗಿ ಖರೀದಿಸಬೇಕು" ; "ಕೈಗಾರಿಕ ವಸ್ತುಗಳ ಬೆಲೆ ನಿಗದಿಯಲ್ಲಿ ವೈಜ್ಞಾನಿಕ ಸೂತ್ರಗಳನ್ನು ಅನುಸರಿಸಿ ಬೆಲೆ ನಿಗದಿಯಾಗಬೇಕು, ಅದು ಎಂದೂ ಉತ್ಪಾದನಾ ವೆಚ್ಚಕ್ಕಿಂತ ಒಂದೂವರೆ ಪಟ್ಟು ಮೀರಿರಕೂಡದು.' 19ಬೇಡಿಕೆಗಳಲ್ಲಿ ಇತರ ಮುಖ್ಯ ಬೇಡಿಕೆಗಳು ತೆರಿಗೆಗಳಿಗೆ ಸಂಬಂಧಪಟ್ಟವು. ಉದಾ: ಭೂಕಂದಾಯ ರದ್ದುಪಡಿಸಬೇಕು ; ನೀರಾವರಿ ಪ್ರದೇಶದ ರೈತರಿಂದ ವಸೂಲು ಮಾಡುವ ಬೆಟರ್‌ಮೆಂಟ್ ಲೆವಿಯನ್ನು ತೆಗೆದು ಹಾಕಬೇಕು ; ಕಬ್ಬಿನ ಪರ್ಚೇಸ್ ತೆರಿಗೆಯನ್ನು, ಟ್ರ್ಯಾಕ್ಟರ್, ಟ್ರೇಲರುಗಳ ಮೇಲೆ ಹಾಕಿದ ತೆರಿಗೆಗಳನ್ನು ರದ್ದುಪಡಿಸಬೇಕು ; ವಿದ್ಯುತ್ ದರಗಳನ್ನು ನೀರಿನ ಕಂದಾಯವನ್ನು ಇಳಿಸಬೇಕು. ಈ ಬೇಡಿಕೆಗಳಲ್ಲಿ ಭೂಕಂದಾಯ ರದ್ದತಿಯ ಬೇಡಿಕೆ ಮಾತ್ರ ಎಲ್ಲ ಪ್ರದೇಶಗಳ ರೈತರಿಗೆ ಅನ್ವಯವಾಗುವಂಥದ್ದು. ಆದರೆ ನೀರಾವರಿಯ ಎರಡೂವರೆ ಎಕ್ರೆಗಳ ಒಳಗಿನ ಮತ್ತು ಮಳೆ ತರಿಯ ಐದು ಎಕ್ರೆಗಳ ಒಳಗಿನ ರೈತರಿಗೆ ಕಂದಾಯ ಮನ್ನಾ ಮಾಡಲಾಗಿದೆ ಅಲ್ಲದೆ ಭೂಕಂದಾಯದ ದರಗಳು ಕಡಿಮೆ ಇದ್ದು, (ಬಾಗಾಯ್ತು ಬಿಟ್ಟು ಉಳಿದ ಜಮೀನಿಗೆ, ಅತಿ ಹೆಚ್ಚು ಎಂದರೆ ಎಕ್ರೆಗೆ 8 ರೂಪಾಯಿ) ಎಷ್ಟೋ ವೇಳೆ ಈ ಕಂದಾಯ ವಸೂಲಿಯ ವೆಚ್ಚವೇ ಕಂದಾಯದ ಮೊತ್ತಕ್ಕಿಂತ ಜಾಸ್ತಿ ಇರುತ್ತದೆ.

> ಕೃಷಿ ಕಾರ್ಮಿಕರಿಗೆ ನ್ಯಾಯವಾದ ವೇತನ ಮತ್ತು ಇತರ ಸೌಲಭ್ಯಗಳು ದೊರೆಯಬೇಕು ಎಂಬುದು ರೈತಚಳುವಳಿಯ ಒಂದು ಯೋಗ್ಯ ಬೇಡಿಕೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆ ವೇತನವನ್ನು ಕೊಡುವಂತೆ ಭೂಮಾಲಿಕರನ್ನು ರೈತಸಂಘ ಒತ್ತಾಯಿಸಿದ ನಿದರ್ಶನಗಳು ಚಳವಳಿಯ ಉದ್ದಕ್ಕೂ, ಎಲ್ಲಿಯೂ ಕಾಣಿಸುವುದಿಲ್ಲ.

ರೈತ ಸಂಘದ 19 ಬೇಡಿಕೆಗಳಲ್ಲಿ ಉಳಿದವು ಕೃಷಿ ಕಾರ್ಮಿಕರ, ಸಣ್ಣರೈತರ, ಆಗತ್ಯಗಳು, ಹಳ್ಳಿಗಳಲ್ಲಿ ಬಂಡವಾಳ ಹೂಡಿಕೆ ಮುಂತಾದುವಕ್ಕೆ ಸಂಬಂಧಿಸಿದವು. ಅವು ಹೀಗಿವೆ : ರೈತಕಾರ್ಮಿಕರಿಗೆ ಕೈಗಾರಿಕಾ ಕಾರ್ಮಿಕರಂತೆಯೇ ಕೂಲಿ ಹಾಗೂ ಇತರ ಸೌಲಭ್ಯಗಳು ದೊರೆಯಬೇಕು ; ಪ್ರತಿಯೊಬ್ಬ ರೈತನಿಗೂ ಕೃಷಿಕಾರ್ಮಿಕನಿಗೂ 55ರ ನಂತರ ನಿವೃತ್ತಿ ವೇತನ ದೊರೆಯಬೇಕು ; ಕೃಷಿಕಾರ್ಮಿಕರಿಗೆ ಸರಕಾರಿ ಕೃಷಿ ಜಮೀನುಗಳನ್ನು ಹಂಚಬೇಕು ; ಅವರಿಗೆ ಉಚಿತ ಮನೆ, ಶಿಕ್ಷಣ, ವೈದ್ಯಕೀಯ ಸೌಲಭ್ಯಗಳು ದೊರೆಯಬೇಕು ; ಹಳ್ಳಿಗಳಲ್ಲಿ ಸಣ್ಣ ಕೈಗಾರಿಕೆಗಳು

ಸ್ಥಾಪನೆಯಾಗಬೇಕು; ಯೋಜನಾ ವೆಚ್ಚದಲ್ಲಿ ಶೇಕಡಾ 80 ರಷ್ಟನ್ನು ಗ್ರಾಮಗಳಿಗೇ ವಿನಿಯೋಗಿಸಬೇಕು. ಆದರೆ ಸದ್ಯಕ್ಕಂತೂ ಈ ಬೇಡಿಕೆಗಳಿಗೆ ಯಾವ ಮಹತ್ವವೂ ಇಲ್ಲ. ಯಾಕೆಂದರೆ, ರೈತ ಸಂಘ ಚಳುವಳಿಯಲ್ಲಿ ಈ ಎಲ್ಲಾ 19 ಬೇಡಿಕೆಗಳಿಗೂ ಸಮಾನವಾದ ಪ್ರಾಮುಖ್ಯವನ್ನೇನೂ ಕೊಟ್ಟಿಲ್ಲ. ಚಳುವಳಿಯ ವಿಧಾನಗಳು, ಅದರ ಮುಖ್ಯ ಘೋಷಣೆಗಳು, ಅದು ಎದುರು ಹಾಕಿಕೊಂಡ ಅಧಿಕಾರೀವರ್ಗ, ಇವುಗಳನ್ನು ಗಮನಿಸಿದಾಗ ಮೇಲೆ ಹೇಳಿದ ಬೇಡಿಕೆಗಳು, ಚಳುವಳಿಯ 'ಮುಖ್ಯ ಬೇಡಿಕೆ' ಗಳು ಎಂದು ಮೊದಲು ಹೆಸರಿಸಿದ ಬೇಡಿಕೆಗಳಿಗೆ ಕೇವಲ ಬಾಲಂಗೋಚಿಯಂತಿವೆ ಎಂಬುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಕೃಷಿಕಾರ್ಮಿಕರಿಗೆ ನ್ಯಾಯವಾದ ವೇತನ ಮತ್ತು ಇತರ ಸೌಲಭ್ಯಗಳು ದೊರೆಯಬೇಕು ಎಂಬುದು ಒಂದು ಯೋಗ್ಯ ಬೇಡಿಕೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆ ವೇತನವನ್ನು ಕೊಡುವಂತೆ ಭೂಮಾಲಿಕರನ್ನು ರೈತ ಸಂಘ ಒತ್ತಾಯಿಸಿದ ನಿದರ್ಶನಗಳು ಚಳುವಳಿಯ ಉದ್ದಕ್ಕೂ, ಎಲ್ಲಿಯೂ ಕಾಣಿಸುವುದಿಲ್ಲ. ಸರ್ಕಾರವೇ ನಿಗದಿಗೊಳಿಸಿದ ಕನಿಷ್ಟ ದಿನಕೂಲಿ, ಅಪ್ರಾಯಸ್ಥ ಮಕ್ಕಳ ದುಡಿಮೆ ನಿಷೇಧ ಮುಂತಾದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಚಳುವಳಿಕಾರರು ಒತ್ತಾಯಿಸಿದ ನಿದರ್ಶನಗಳೂ ಕಾಣಸಿಗುವುದಿಲ್ಲ. ಚಳುವಳಿಯಲ್ಲಿ ಭಾಗವಹಿಸಿದ ನಾನು ಮಾತನಾಡಿಸಿದ ಅನೇಕ ರೈತರು ಈಗ ಇರುವ ದರಗಳನ್ನೇ ಕೊಡಲು ತಮಗೆ ಪೂರೈಸುವುದಿಲ್ಲ ಎಂದು ಹೇಳಿದ್ದರು. ರೈತ ಸಂಘದ ಅಧ್ಯಕ್ಷ ಶ್ರೀ ಎಚ್. ಎಸ್. ರುದ್ರಪ್ಪನವರಿಗೆ "ನಿಮ್ಮ ಸಂಘಟನೆ, ಚಳುವಳಿಗಳಲ್ಲಿ ಕೃಷಿ ಕಾರ್ಮಿಕರನ್ನು ಏಕೆ ಅಲಕ್ಷಿಸಿದ್ದೀರಿ?" ಎಂದು ನಾನು ಪ್ರಶ್ನಿಸಿದಾಗ ಅವರು ಚಳುವಳಿ ಮುಂದಿಟ್ಟ 19 ಬೇಡಿಕೆಗಳಲ್ಲಿ ಕೃಷಿ ಕಾರ್ಮಿಕರ ಬೇಡಿಕೆಗಳೂ ಇದೆ ಎಂದೂ, ರೈತ ಸಂಘದ ತಾಲ್ಲೂಕು ಸಮಿತಿಗಳಲ್ಲಿ ಕೃಷಿ ಕಾರ್ಮಿಕರಿಗೂ ಪ್ರಾತಿನಿಧ್ಯವಿದೆಯೆಂದೂ ತಿಳಿಸಿದರು. ಜೊತೆಗೆ ಆ ಥರದ ಅಭಿಪ್ರಾಯಗಳೆಲ್ಲ ಆಳುವ ಪಕ್ಷದವರು ನಡೆಸುತ್ತಿರುವ ಅಪಪ್ರಚಾರವೆಂದೂ, ಆಳುವ ಪಕ್ಷದ ಕೆಲವು "ಸಣ್ಣ ಜನ" ತಮ್ಮ ಸಂಘದ ವಿರುದ್ಧ ಕೆಲವೆಡೆ ಕೃಷಿ ಕೂಲಿಗಳನ್ನು ಎತ್ತಿಕಟ್ಟುವ "ಅಲ್ಪತನದ ರಾಜಕೀಯ" ಮಾಡುತ್ತಿದ್ದಾರೆ ಎಂದೂ ಅವರು ಆಪಾದಿಸಿದರು. ಇದು ನಿಜ. ಆದರೆ ಚಳುವಳಿಯ ಮುಖ್ಯ ಬೇಡಿಕೆಗಳಲ್ಲಿ ಕೃಷಿ ಕಾರ್ಮಿಕರ ಬೇಡಿಕೆಗಳೂ ಇವೆ ಎನ್ನುವುದು ಸರಿಯಲ್ಲ. ಚಳುವಳಿಯ ಒತ್ತಡವೆಲ್ಲ ಸರಕಾರದ ರೆವಿನ್ಯೂ ಅಧಿಕಾರಿಗಳು ಮತ್ತು ಸಹಕಾರೀ ಬ್ಯಾಂಕುಗಳ ಸಿಬ್ಬಂದಿಯ ಮೇಲೆ ಮಾತ್ರ ಬಿದ್ದುದರಿಂದ ಚಳುವಳಿಯ ಮುಖ್ಯ ಬೇಡಿಕೆಗಳು ಸರಕಾರದ ತೆರಿಗೆ, ಸಾಲ ಮತ್ತು ಲೆವಿ ನೀತಿಗಳಿಗೆ ಮಾತ್ರ ಸಂಬಂಧಿಸಿದವು ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ರೈತನಿಗೆ, ಅವನು ಬೆಳೆದದ್ದಕ್ಕೆ ಯೋಗ್ಯ ಬೆಲೆಗಳು ದೊರಕುತ್ತಿಲ್ಲ, ಆದರೆ ಅವನು ಕೊಳ್ಳಬೇಕಾಗಿರುವ ಎಲ್ಲ ವಸ್ತುಗಳ ಬೆಲೆಗಳೂ ಜಾಸ್ತಿಯಾಗಿವೆ ಎಂಬ ವಾದವನ್ನು ರೈತ ಸಂಘದ ನಾಯಕರು ರೈತರ ನಡುವೆ ಜನಪ್ರಿಯಗೊಳಿಸಿದರೂ, ಈ ವಿಷಮ ಪರಿಸ್ಥಿತಿಯನ್ನು ನಿರ್ಮಿಸುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಖಾಸಗೀ ವಾಣಿಜ್ಯ, ಬಂಡವಾಳಶಾಹಿಗಳನ್ನು ಕೂಡಾ ಚಳುವಳಿ ನೇರವಾಗಿ ಎದುರಿಸಿಲ್ಲ. 1980 ರಲ್ಲಿ ಶಿವಮೊಗ್ಗ, ಭದ್ರಾವತಿ ತಾಲ್ಲೂಕುಗಳ ಕಬ್ಬು ಬೆಳೆಗಾರರು, ಶಿವಮೊಗ್ಗದ ತುಂಗಭದ್ರ ಸಕ್ಕರೆ ಕಾರ್ಖಾನೆಯವರ ವಿರುದ್ಧ ಮುಷ್ಕರ ನಡೆಸಿ, ಕಬ್ಬಿನ ಬೆಲೆಯನ್ನು ಹೆಚ್ಚಿಸಿಕೊಂಡದ್ದು ಈ ಮಾತಿಗೆ ಅಪವಾದವಾಗಿದೆ. ಆದರೆ ಕಬ್ಬು ಬೆಳೆಗಾರರಲ್ಲಿ ಹೆಚ್ಚಿನವರು ಶ್ರೀಮಂತ ರೈತರೇ ಆಗಿರುವುದು, ಒಟ್ಟು ಕೃಷಿ ಜಮೀನಿನಲ್ಲಿ ಕಬ್ಬಿನ ಜಮೀನಿನ ವಿಸ್ತೀರ್ಣ ಈ ಎರಡು ತಾಲ್ಲೂಕುಗಳಲ್ಲಿಯೂ ಕೂಡಾ ತೀರ ಕಡಿಮೆ ಇರುವುದು ಮತ್ತು ಕಬ್ಬಿನ ಮಾರಾಟ ಕಾರ್ಖಾನೆ ಮತ್ತು ರೈತರ ನಡುವೆ ಮಧ್ಯವರ್ತಿಗಳು ಇಲ್ಲದ ನೇರ ವ್ಯಾಪಾರವಾಗಿರುವುದು–ಈ ಕಾರಣಗಳಿಂದ, ಈ ಉದಾಹರಣೆಯೂ ಚಳುವಳಿಯ ಸೀಮಿತತೆಯನ್ನು ದೃಢಪಡಿಸುವಂಥದ್ದೇ ಆಗಿದೆ. ಸಾಲ, ತೆರಿಗೆ, ಲೆವಿಗಳ ಬಗ್ಗೆ ರೈತ ಚಳುವಳಿಯ ಬೇಡಿಕೆಗಳು ನಿಖರವಾದವು; ಎದುರಾಳಿ ಯಾರು ಎಂದು ಸ್ಪಷ್ಟ ಗುರುತಿಸಿಕೊಂಡು ಸೆಣಸಾಡುವುದಕ್ಕೆ ಸಾಧ್ಯವಾಗಿರುವಂಥವು. ಉಳಿದ ಬೇಡಿಕೆಗಳು ಕೇವಲ ಆಶಯ ರೂಪದಲ್ಲಿದ್ದು, ರೈತಸಂಘ, ಬಡ ರೈತರನ್ನೂ ಕೃಷಿ ಕಾರ್ಮಿಕರನ್ನೂ ಕಡೆಗಣಿಸಿಲ್ಲ ಎಂದು ತೋರಿಸಲೆಂದೇ ರೂಪಿಸಲಾಗಿರುವ ಬೇಡಿಕೆಗಳು ಎಂಬ ಸಂಶಯಕ್ಕೆ ಎಡೆ ಮಾಡಿಕೊಡುವಂಥವು.

ಸೌಜನ್ಯ : ರುಜುವಾತು

ಂಡವಾಳಗಾರರ ಮುಷ್ಠಿಯಲ್ಲಿ ಕರ್ನಾಟಕ ರೈತಸಂಘ

ಪರ್ಯಾಸವೆಂದರೆ ಒಂದು ಕಡೆ ಹರಿಜನ ಸಂಘಟನೆಗಳು ಭೂರಹಿತರಿಗೆ ಭೂಮಿ ಕೊಡಿಸಲು ಹೋರಾಡುತ್ತಿದ್ದಾರೆ. ನ್ನೊಂದು ಕಡೆ ರೈತ ಸಂಘಟನೆಯ ಧುರೀಣರು ಸರ್ಕಾರಿ ಯಂತ್ರದ ಜೊತೆ ಕಬ್ಬು ಬೆಳೆಗಾರರಿಗೆ ಹೆಚ್ಚು ಬೆಲೆ ಕೊಡಿಲು ಧರಣಿ ಹೂಡುತ್ತಿದ್ದಾರೆ. ಪ್ರಜ್ಞಾವಂತ ಜನತೆ ಇವರಲ್ಲಿ ಯಾರನ್ನು ಬೆಂಬಲಿಸಬೇಕು ? ಬಂಡವಾಳಶಾಹಿಗಳನ್ನೇ ಅಥವಾ ಕೂಲಿಯವರನ್ನೇ?

ಕರ್ನಾಟಕದಲ್ಲಿ ಇಂದು ರೈತ ಚಳುವಳಿ ವ್ಯಾಪಕ ಗಿಎಲ್ಲರ ಗಮನ ಸೆಳೆದಿದೆ. ಕನಿಷ್ಠಪಕ್ಷ ಒಂದೊಂ ರೈತ ಕುಟುಂಬದಲ್ಲಿ ಒಬ್ಬಿಬ್ಬರಾದರೂ ರೈತ ಘಟನೆಯ ಬಗ್ಗೆ ಮಾತನಾಡತೊಡಗಿದ್ದಾರೆ. ತ ಸಂಘ ವ್ಯವಸ್ಥಿತವಾಗಿ ತಮ್ಮ ಬೇಡಿಕೆಗಳನ್ನು ತ್ತಡದ ರೂಪದಲ್ಲಿ ಸರ್ಕಾರದ ಮೇಲೆ ಹೇರಲು ಯತ್ನಿಸುತ್ತಿದೆ. ಈ ರೈತ ಚಳುವಳಿ ಅನೇಕ ಸಕ್ತರ ಗಮನ ಸೆಳೆದಿದ್ದು ಅದರ ಪರವಾದ ಾಗೂ ವಿರುದ್ಧವಾದ ವಿಶ್ಲೇಷಣೆಗಳು ಅಲ್ಲಲ್ಲಿ ಡೆಯುತ್ತಿವೆ.

ರೈತರಿಗೆ ಭೂಮಿಯೇ ತಮ್ಮ ಬಂಡವಾಳ. ೈತರಲ್ಲಿ ಪ್ರಮುಖವಾಗಿ ಇಂದು ಗುರುತಿಸಬಹು ಾದ ಮೂರು ವರ್ಗಗಳಿವೆ. ಭೂಹೀನ ರೈತ ಒಂದರ್ಥದಲ್ಲಿ ಕೃಷಿ ಕಾರ್ಮಿಕ) ಸಣ್ಣ ಹಿಡುವಳಿ ಾರ, ದೊಡ್ಡ ಹಿಡುವಳಿದಾರ ಎಂದು ಅವರನ್ನು ುರುತಿಸಬಹುದು. ಭೂಹೀನ ರೈತ ಅಥವಾ ಕೃಷಿ ಾರ್ಮಿಕ ತನ್ನದೇ ಆದ ಭೂಮಿಯನ್ನು ಹೊಂದಿಲ್ಲ ವನು ಇತರರ ಭೂಮಿಯಲ್ಲಿ ಕೂಲಿಗಾಗಿ ಕೆಲಸ ಮಾಡುತ್ತಾ ಅಥವಾ ಇತರರ ಭೂಮಿಯಲ್ಲಿ ಗೇಣಿ ಾಗಿ ದುಡಿಯುತ್ತಾ ಜೀವನ ನಡೆಸುವವನು. ಇತ್ತೀಚೆಗೆ ಸರ್ಕಾರದವರು ಇಂಥವರನ್ನು ಪತ್ತೆ ಹಚ್ಚಿ ಅವರಿಗೆ ದರಖಾಸ್ತು ಭೂಮಿಯನ್ನೋ ಅಥವಾ ಗೇಣಿ ಭೂಮಿಯನ್ನೋ ಸ್ವಂತಕ್ಕೆ ಹಿಡುವಳಿಮಾಡಿಕೊಳ್ಳಲು ಬಿಟ್ಟುಕೊಡುವ ನಿರ್ಧಾರ ಕೈಗೊಂಡಿದ್ದಾರೆ. ಆದರೆ ಈ ಯೋಜನೆಗಳು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಯುತ್ತಿಲ್ಲ. ಕನಿಷ್ಠಪಕ್ಷ ಭೂಹೀನ ರೈತ ತನ್ನ ಕೂಲಿ, ಗೇಣಿ, ಇನ್ನಿತರ ಮೂಲಗಳಿಂದ ಅಲ್ಪ ಬಂಡವಾಳ ಮಾಡಿಕೊಂಡು ಅದನ್ನು ಭೂಮಿಕೊಳ್ಳಲು ಬಳಸಿದರೆ, ಕೃಷಿಗೆ ಆತ ಸಾಲ ಮಾಡಬೇಕಾಗುತ್ತದೆ. ಆಗ ಆತ ಸಾಲಿಗ– ಸರ್ಕಾರ ಆಗಬಹುದು ಅಥವಾ ವ್ಯಕ್ತಿಯಾಗ ಬಹುದು–ಹಾಗೂ ವ್ಯವಸ್ಥೆಯ ಮಧ್ಯೆ ಜಜ್ಜಿ ಹೋಗುತ್ತಾನೆ. ಅಲ್ಲದೆ ಆತ ದೊಡ್ಡ ಹಿಡುವಳಿದಾರರ ಮಧ್ಯೆ ಸ್ಪರ್ಧಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಇನ್ನೊಂದು ಪ್ರಮುಖ ವಿಷಯವೆಂದರೆ ನಮ್ಮಲ್ಲಿ ಬಹುತೇಕ ಭೂಹೀನ ಕೃಷಿಕಾರ್ಮಿಕರು ಹರಿಜನರಾಗಿದ್ದಾರೆ. ಹಿಂದಿನಿಂದ ಹರಿಜನರಿಗೆ ಭೂಒಡೆತನ ಒದಗುವುದನ್ನು ಸವರ್ಣೀಯರು ಅಥವಾ ಇತರ ಭೂಮಾಲೀಕರು ಸಹಿಸುತ್ತಿರಲಿಲ್ಲ. ಈಗೀಗ ಹರಿಜನರಿಗೆ ಭೂಸವಲತ್ತುಗಳುದೊರಕುತ್ತಿದ್ದರೂ ಮೇಲೆ ತಿಳಿಸಿದಂತಹ ಪರಿಸ್ಥಿತಿಯಿಂದ ಅವರ ಸ್ಥಿತಿಗತಿಗಳೇನೂ ಸುಧಾರಿಸಿಲ್ಲ. ನೆಪಮಾತ್ರಕ್ಕೆ ಒಂದೆರಡು ಎಕರೆಗಳ ಒಡೆತನ ಅವರಿಗೆ ಲಭ್ಯವಿದ್ದರೂ ತಮ್ಮ ಕೂಲಿಯನ್ನು ಬಿಟ್ಟು ಅವರು ಜೀವಿಸುವಂತಿಲ್ಲ. ಹಾಗಾಗಿ ದೊಡ್ಡ ಹಿಡುವಳಿದಾರರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿಯೇ ಅವರು ತಮ್ಮ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳಬೇಕಾಗಿದೆ.

ಎರಡನೆಯದಾಗಿ ಸಣ್ಣ ಹಿಡುವಳಿದಾರ. ಒಂದು ರೀತಿಯಲ್ಲಿ ನಮ್ಮ ಮಧ್ಯಮ ವರ್ಗದ ಜನರ ರೀತಿಯಲ್ಲೇ ಸಣ್ಣ ಹಿಡುವಳಿದಾರನ ಸ್ಥಿತಿ–ಗತಿಯೂ ಸಹ. ಆತ ಒಂದು ರೀತಿಯಲ್ಲಿ ಯಜಮಾನ;

ಲಿಂಗದೇವರು ಹಳೇಮನೆ

ಬಂಡವಾಳಶಾಹಿ ಹಾಗೂ ಕೆಲಸಗಾರ. ಆದರೆ ಯಾವುದರಲ್ಲೂ ಪರಿಪೂರ್ಣನಲ್ಲ. ತನ್ನ ಕುಟುಂಬಕ್ಕಾಗುವಷ್ಟು ಉತ್ಪಾದಿಸುವ ಅವಕಾಶವಿದೆ ಎಂದು ನಂಬುವ ಈತನಿಗೆ ತನ್ನದೆ ಆದ ಆವರಣ ಸೃಷ್ಟಿಯಲ್ಲಿ ತಾನೊಬ್ಬ ಬಂಡವಾಳಶಾಹಿ ಎಂಬ ಹುಸಿ ಕಲ್ಪನೆಯೂ ಮೂಡಿರುತ್ತದೆ. ಆದರೆ ತನ್ನ ಭೂಮಿಯ ಮೇಲೆ ತಾನು ತೆಗೆಯುವ ಸಾಲ ಹಾಗೂ ಅದಕ್ಕೆ ಕಟ್ಟಿಕೊಡಬೇಕಾದ ಲಾಭ ಇವೆರಡನ್ನೂ ತಾಳೆಹಾಕಿ ನೋಡಿದಾಗ ತನ್ನ ಭೂಮಿಯಲ್ಲಿ ತಾನೇ 'ಕೂಲಿ' ಯಾಗಿ ದುಡಿಯುತ್ತಿರುವುದರ ನಿರ್ವಿಣ್ಣ ಸತ್ಯ ಗೋಚರವಾಗುತ್ತದೆ. ಇಂಥವರು ಬಹುತೇಕ ತಾವು ತೆಗದುಕೊಂಡಸಾಲಕ್ಕೆ ತಮ್ಮ ಉತ್ಪಾದನೆಯನ್ನು ಯಾವ ಲಾಭವೂ ಇಲ್ಲದೆ ಕಟ್ಟಿಕೊಡಬೇಕಾಗುತ್ತದೆ.

ಮೂರನೆಯದಾಗಿ ದೊಡ್ಡ ಹಿಡುವಳಿದಾರ ಅಥವಾ ಭೂಮಾಲೀಕ. ನೂರಾರು ಎಕರೆ ಜಮೀನನ್ನು ಪಡೆದಿದ್ದು, ಅದರಲ್ಲಿ ತರಿ, ಬಾಗಾಯ್ತು ಖುಷ್ಕಿ ಗುಣಮಟ್ಟಗಳನ್ನು ಕಾಯ್ದುಕೊಂಡು ಮೊದಲನೆ ಹಾಗೂ ಎರಡನೇ ವರ್ಗವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವವನು. ಸಣ್ಣ ಹಿಡುವಳಿದಾರ ಮುಖ್ಯವಾಗಿ ಸ್ವಂತಕ್ಕೆ ಕೃಷಿ ನಡೆಸುವುದಾದರೆ, ಈತ ಮುಖ್ಯವಾಗಿ ಮಾರುಕಟ್ಟೆಗಾಗಿ ಉತ್ಪಾದಿಸುತ್ತಾನೆ. ಇಂಥವರನ್ನು ಬಂಡವಾಳಶಾಹಿ ಕೃಷಿಕನೆಂದೂ ಕರೆಯಬಹುದು. ದೊಡ್ಡ ಹಾಗೂ ಸಣ್ಣ ಹಿಡುವಳಿದಾರರ ಮಧ್ಯೆ ಇರುವ ವ್ಯತ್ಯಾಸ ಬರೀ ಗಾತ್ರದ್ದು ಮಾತ್ರವಷ್ಟೇ ಅಲ್ಲ ಗುಣಮಟ್ಟದ್ದೂ ಕೂಡ. ಅದು 'ಬಂಡವಾಳ' ಹಾಗೂ 'ಕೂಲಿ'ಯ ರೀತಿಯದು. ದೊಡ್ಡ ಹಿಡುವಳಿದಾರ ಭೂಮಿಯಲ್ಲಿ 'ಬಂಡವಾಳ'ದ ಮೌಲ್ಯವನ್ನು ಗುರುತಿಸುತ್ತಾ ಅದನ್ನು 'ಉತ್ಪಾದನಾ ಬಂಡವಾಳವಾಗಿ ಲಾಭದಾಯಕ ಮಾಧ್ಯಮವೆಂದು ಗುರುತಿಸುತ್ತಾನೆ. ಸಣ್ಣ ಹಿಡುವಳಿದಾರ ಅದನ್ನು 'ಕೂಲಿ'ಯ ಮಾಧ್ಯಮವಾಗಿ ಜೀವನ ನಿರ್ವಹಣೆಯ ಸಾಧನವನ್ನಾಗಿ ಕಂಡುಕೊಳ್ಳುತ್ತಾನೆ. ಕೈಗಾರಿಕಾ ಕ್ಷೇತ್ರದಲ್ಲಿ ಹೇಗೆ ಬೃಹತ್ ಉತ್ಪಾದನಾ ಹಂಬಲವನ್ನು ಕಾಣುತ್ತೇವೆಯೋ ಹಾಗೆಯೇ ಭಾರಿ ಹಿಡುವಳಿದಾರರ ಉತ್ಪಾದನ ಹಂಬಲವೂ ಬೃಹತ್ ಉತ್ಪಾದನೆಯ ಕಡೆಗೆ ಹಾತೊರೆಯುತ್ತದೆ. ಹಾಗಾಗಿ ಭೂಮಾಲೀಕರು ತಮ್ಮ ಕೃಷಿಯ ಎಲ್ಲಾ ಅಂಗಗಳಲ್ಲೂ ಉತ್ಕೃಷ್ಟತೆಯತ್ತ ಗಮನಹರಿಸುತ್ತಾ ಹೋಗುತ್ತಾರೆ. ತಾಂತ್ರಿಕ ಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುತ್ತಾರೆ. ಹಾಗಾಗಿ ರೈತರ ಆರ್ಥಿಕ ವಲಯಗಳು ಬಂಡವಾಳಶಾಹಿ ಕೈಗಾರಿಕೋದ್ಯಮಿಗಳ ಹಿಡಿತಕ್ಕೆ ಸಿಕ್ಕಿಕೊಳ್ಳುತ್ತವೆ. ಆ ಹಿಡಿತಕ್ಕೆ ಸಿಕ್ಕಿಕೊಂಡು ಸುಧಾರಿಸಿಕೊಳ್ಳಲಾರದೆ ಕೊನೆಗೊಮ್ಮೆ ಶಿಥಿಲಗೊಳ್ಳುತ್ತವೆ. ಭಾರಿ ಹಿಡುವಳಿದಾರರ ಈ ಕ್ರಮದಿಂದಾಗಿ ಉಂಟಾಗುವ ಪರಿಣಾಮಗಳು ಹಲವಾರು. ರೈತರ ಪಶುಸಂಗೋಪನೆ ಹಾಗೂ ಗೃಹಕೈಗಾರಿಕೆಗಳು ನಿಷ್ಪ್ರಯೋಜಕವೆಂದು ನಿರ್ಧಾರಕ್ಕೆ ತಂದು ಅವುಗಳ ಮಧ್ಯೆ ಬಿರುಕನ್ನುಂಟು ಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ರೈತ ಚಳುವಳಿಯ ಬೆಳವಣಿಗೆಯನ್ನು ವಿಶ್ಲೇಷಿಸಬಹುದು. ಪ್ರಸ್ತುತ

ರೈತ ಚಳುವಳಿ ಬಂಡವಾಳಶಾಹಿ ರೈತರ ಚಳುವಳಿ ಎಂಬ ಒಂದು ಆರೋಪ ಇದೆ. ಅದನ್ನು ಪೂರ್ಣ ನಂಬಲಿಕ್ಕಾಗದಿದ್ದರೂ ರೈತ ಚಳುವಳಿಯ ಮುಖಂಡತ್ವ ಬಂಡವಾಳಶಾಹಿಗಳ ಕೈಯಲ್ಲಿದೆ ಎಂಬುದನ್ನು ಮರೆಯಲಿಕ್ಕಾಗದು. ಈ ರೈತ ಸಂಘಟನೆ ಭಾರಿ ಹಿಡುವಳಿದಾರರ ಹಾಗೂ ಮಧ್ಯಮಾವಧಿ ಹಿಡುದಾರರ ಒಂದು ಸಂಘಟನೆ. ಭೂರಹಿತ ಕೃಷಿ ಕಾರ್ಮಿಕರ ಬಗ್ಗೆ ಈ ರೈತ ಸಂಘಟನೆ ಅಷ್ಟಾಗಿ ಗಮನಹರಿಸಿದಂತೆ ಕಾಣಲಿಲ್ಲ. ಅಲ್ಲಲ್ಲಿ ಇದರ ಬಗ್ಗೆ ಆಕ್ಷೇಪ ಬಂದಾಗ ಮೊದಲು ನಮ್ಮ ಸ್ಥಿತಿ ಗಟ್ಟಿಯಾಗಲಿ, ನಂತರ ಕೂಲಿಕಾರರ ಬಗ್ಗೆ ಯೋಚಿಸಬಹುದು ಎಂಬ ಉತ್ತರಗಳನ್ನು ಓದಿದ ನೆನಪು. ಇಂಥ ಉತ್ತರಗಳು ಎಷ್ಟು ಬೇಜವಾಬ್ದಾರಿಯವು ಹಾಗೂ ವರ್ಗ ಪಕ್ಷಪಾತವನ್ನು ಎತ್ತಿ ಹಿಡಿಯುವಂಥವು ಎಂಬುದ್ನು ಗಮನಿಸಬೇಕು. ಹಿಂದೆ ತಿಳಿಸಿದಂತೆ ನಮ್ಮಲ್ಲಿ ಬಹುತೇಕ ಕೃಷಿಕಾರ್ಮಿಕರು ಹರಿಜನರು. ಹಾಗೂ ಭೂಮಿ ಜತೆ ಅವರ ಸಂಬಂಧಗಳನ್ನು ಗುರುತಿಸಿ; ವಿಶ್ಲೇಷಿಸಿ ಯಾವುದೇ ರೈತ ಸಂಘಟನೆ ಆರಂಭವಾಗಬೇಕು. ಅಕಸ್ಮಾತ್ ಅವರಿಗೆ ಭೂಮಿ ಕೊಡಿಸುವ ಪ್ರಯತ್ನವಾಗಿ ಚಳುವಳಿ ಮುಂದುವರಿಯಬೇಕಿತ್ತು. ವಿಪರ್ಯಾಸವೆಂದರೆ ಒಂದುಕಡೆ ಹರಿಜನ ಸಂಘಟನೆಗಳು ಭೂರಹಿತರಿಗೆ ಭೂಮಿ ಕೊಡಿಸಲು ಹೋರಾಡುತ್ತಿದ್ದರೆ ಇನ್ನೊಂದು ಕಡೆ ರೈತಸಂಘಟನೆಯ ಧುರೀಣರು ಸರ್ಕಾರಿ ಯಂತ್ರದ ಜೊತೆ ಕಬ್ಬು ಬೆಳೆಗಾರರಿಗೆ ಹೆಚ್ಚು ಬೆಲೆ ಕೊಡಿಸಲು ಧರಣಿ ಹೂಡುತ್ತಿದ್ದಾರೆ. ಪ್ರಜ್ಞಾವಂತ ಜನತೆ ಇವರಲ್ಲಿ ಯಾರನ್ನು ಬೆಂಬಲಿಸಬೇಕು ? ಬಂಡವಾಳಶಾಹಿಗಳನ್ನೆ ಅಥವಾ ಕೂಲಿಯವರನ್ನೆ ? ಇಂಥ ಪ್ರಶ್ನೆಗಳು ರೈತಮುಖಂಡರಿಗೆ ಚೋದ್ಯದ ಪ್ರಶ್ನೆ ಎನ್ನಿಸಬಹುದು. ಆದರೆ ಕರ್ನಾಟಕದಂಥ ರಾಜ್ಯದಲ್ಲಿ ರೈತ ಸಂಘಟನೆ ಭೂಮಾಲೀಕರಾದ ಲಿಂಗಾಯತರು, ಒಕ್ಕಲಿಗರ ಒಳಿತಿಗಾಗಿ ಹೋರಾಡುತ್ತಿವೆಯೇ ವಿನಹ ಭೂರಹಿತ ಹರಿಜನರು, ಲಿಂಗಾಯತರು, ಒಕ್ಕಲಿಗಳ ಪರವಾಗಿ ಅಲ್ಲ. ಭೂಮಿಯ ಉತ್ಪಾದನೆಯಂತಹ ಮೂಲ ಸಮಸ್ಯೆಗೆ ಬಂದಾಗಲೂ ಸಂಘಟನೆಗಳು ಜಾತೀಯ ಮುಖವಾಡವನ್ನು ಕಳಚಿಕೊಳ್ಳುವುದು ಸಾಧ್ಯವಾಗಲಿಲ್ಲ ಎಂಬುದು ತುಂಬಾ ವಿಷಾದದ ಸಂಗತಿ.

ರೈತ ಸಂಘಟನೆಯ ಎರಡು ಪ್ರಮುಖ ಬೇಡಿಕೆಗಳೆಂದರೆ, ರೈತರಿಂದ ಕೊಳ್ಳುವ ಉತ್ಪಾದನೆಗಳಿಗೆ ಒಳ್ಳೆಯ ಬೆಲೆ ದೊರಕಬೇಕು, ಮತ್ತು ಇಲ್ಲಿಯವರೆಗೆ ರೈತ ತೆಗೆದುಕೊಂಡಿರುವ ತಕಾವಿ ಸಾಲಗಳನ್ನು ಮನ್ನಾ ಮಾಡಿ ರೈತನನ್ನು ಋಣಮುಕ್ತನನ್ನಾಗಿಸಬೇಕು ಎಂಬುದು. ಈ ಎರಡೂ ಅಂಶಗಳ ಯುಕ್ತಾ ಯುಕ್ತತೆಯನ್ನು ಇಲ್ಲಿ ಚರ್ಚಿಸುವುದು ಅಗತ್ಯ. ರೈತರಿಂದ ಕೊಳ್ಳುವ ಉತ್ಪಾದನೆಗಳಿಗೆ ದರ ನಿರ್ಧರಿಸುವ ಹಂತದಲ್ಲಿ ಅನೇಕ ಅಂಶಗಳನ್ನು ಗಮನದಲ್ಲಿಡಬೇಕಾಗುತ್ತದೆ. ರೈತ ತನ್ನ ಉತ್ಪಾದನೆಗೆ ಹೂಡುವ ಬಂಡವಾಳ,–ಗೊಬ್ಬರ, ನೀರು, ಕೂಲಿ, ಇತ್ಯಾದಿ–ಮಣ್ಣಿನ ಗುಣ, ಕ್ರಿಮಿ ಕೀಟಗಳ ಹಾವಳಿ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಕಡೆಯಲ್ಲಿ ದೊರಕುವ ಫಸಲಿಗೆ ಆತ ದರ ನಿರ್ಧರಿಸಬೇಕಾಗುತ್ತದೆ. ಆದರೆ ದರ ನಿರ್ಧರಿಸುವ ನಿರ್ಣಾಯಕ ಘಟ್ಟ ರೈತನ ವಿಷಯದಲ್ಲಿ ರೈತನೇ ಆಗಿರುವುದಿಲ್ಲ. ಕೈಗಾರಿಕೋತ್ಪಾದಿತ ಸಾಮಗ್ರಿಗಳ ಮೇಲೆ ತಯಾರಕರ ನಿಯಂತ್ರಣ ಸ್ಪಷ್ಟವಾಗಿದ್ದು ಅವರು ತಮ್ಮ ಮಾಲುಗಳ ಬೆಲೆ ನಿಗದಿಸುತ್ತಾರೆ. ಆದರೆ ರೈತ ಇಲ್ಲಿ ಅಸಹಾಯಕ. ದಳ್ಳಾಳಿಗಳ ಮರ್ಜಿ ಹಾಗೂ ಹಣಕಾಸಿನ ಉಬ್ಬರವಿಳಿತಗಳ ಏರಾಟದ ಮೇಲೆ ಆತನ ಧಾರಣೆಯೂ ಏರಿಳಿತಗಳಿಗೆ ಒಳಗಾಗುತ್ತಿರುತ್ತದೆ. ಕೃಷಿಕ ನಿಯಂತ್ರಿತ ಮಾರುಕಟ್ಟೆಗಳು ಜಾರಿಗೆ ಬಂದಿದ್ದರೂ ದಲ್ಲಾಳಿಗಳಮಧ್ಯವರ್ತಿ ಮಾತ್ರನಿಂತಿಲ್ಲ. ಮೇಲಾಗಿ ಭಾರೀ ಹಿಡುವಳಿದಾರರೇ ಸಣ್ಣ ಹಿಡುವಳಿದಾರರಿಗೆ ದಲ್ಲಾಳಿಯಾಗಿ ನಿಂತಿರುತ್ತಾರೆ. ಎಷ್ಟೋ ಸಾರಿ ಸಣ್ಣ ಹಿಡುವಳಿದಾರನ ವ್ಯಾಪಾರ ತನ್ನ ಮನೆ ಬಾಗಿಲಿನಲ್ಲೇ ಪೂರ್ಣವಾಗಿರುತ್ತದೆ. ಹಾಗಾಗಿ ಸಣ್ಣ ರೈತ ಪ್ರಥಮವಾಗಿ ಶೋಷಿತವಾಗುವುದು ತನ್ನ ನೆರೆಯವರಾದ ಭಾರೀ ರೈತರಿಂದಲೇ. ಈ ರೀತಿಯ ಶೋಷಣೆಯ ವಿರುದ್ಧ ಹೋರಾಡುವುದೇ ಸಂಘಟನೆಯ ಪ್ರಥಮ ಕರ್ತವ್ಯವಾಗಬೇಕು.

ಸಾಲ ಮನ್ನಾ ಮಾಡುವ ಬಗ್ಗೆ ಮಾತನಾಡುವಾಗ ವ್ಯಾಧಿಗ್ರಸ್ತ ಕೈಗಾರಿಕಾ ಘಟಕಗಳ ಉದಾಹರಣೆಗಳನ್ನು ಇಂದಿನ ರೈತ ಸಂಘಟನೆಯ ನಾಯಕರು ನೀಡುತ್ತಿದ್ದಾರೆ. ವಾಸ್ತವ ಸಂಗತಿ ಎಂದರೆ ಇಂದು ತಕಾವಿ ಸಾಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಂಡಿರುವವರು ಭಾರೀ ಹಿಡುವಳಿಗಾರರು. ಇವರು ಸಾಲ ಹಿಂದಿರುಗಿ ನೀಡದಿದ್ದಲ್ಲಿ ಇದರ ಸೌಲಭ್ಯವನ್ನು ಸಣ್ಣ ಹಿಡುವಳಿದಾರ ಪಡೆಯಲು ಸಾಧ್ಯವೇ ಆಗುವುದಿಲ್ಲ. ಸಣ್ಣ ಹಿಡುವಳಿದಾರರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿರುವುದಷ್ಟೇ ಅಲ್ಲ, ಅವರಿಗೆ ಒದಗಬಹುದಾದ ಸೌಲಭ್ಯಗಳಿಂದಲೂ ವಂಚಿತರನ್ನಾಗಿಸುತ್ತಾರೆ–ಭಾರೀ ಹಿಡುವಳಿದಾರರಿಗೆ ಶೋಷಿಸುವುದಕ್ಕೆ ಸಿಗುವ ತತ್ಕ್ಷಣದ ವ್ಯಕ್ತಿಯೆಂದರೆ ಬಡ ರೈತರೆ. ಅಲ್ಲದೆ ಇಂದಿನ ನಮ್ಮ ಸಮಾಜದಲ್ಲಿ ಜಮೀನು, ಹಣ, ಅಂತಸ್ತು ಇರುವಂಥವರು ರಾಜಕೀಯಕ್ಕೆ ಸುಲಭವಾಗಿ ಜಿಗಿಯಬಹುದಾದ್ದರಿಂದ ಇಂಥ ಯಾವುದೇ ಅವಕಾಶಗಳನ್ನು ಅಂಥವರು ಬಿಟ್ಟುಕೊಡಲಾರರು. ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ತಾವು ನಿಯಂತ್ರಿಸುವುದರ ಜೊತೆಗೆ ಗ್ರಾಮೀಣ ಜನರಿಗೆ ಒದಗಿಸಬೇಕಾದ ಸೌಲಭ್ಯಗಳನ್ನೂ ತಮ್ಮ ಮಟ್ಟದಲ್ಲಿಯೇ ನಿಯಂತ್ರಿಸಿಕೊಳ್ಳುತ್ತಾರೆ. ಇಂಥ ಸಂಘಟ್ಟಗಳಲ್ಲಿ ಸಣ್ಣ ಹಿಡುವಳಿದಾರ ಹಾಗೂ ಭೂಹೀನ ಕಾರ್ಮಿಕ ಸರ್ಕಾರಿ ಅಧಿಕಾರಿಗಳು ಹಾಗೂ ಭಾರೀ ಹಿಡುವಳಿದಾರರ ಮಧ್ಯದ ಪಶುವಾಗ್ಯತ್ತಾನೆ.

ಕರ್ನಾಟಕದಲ್ಲಿ ಇಂದು ನಡೆಯುತ್ತಿರುವ ರೈತ ಚಳುವಳಿ ಯಾಕೆ ಭಾರಿ ಹಿಡುವಳಿದಾರರ ಪರವಾಗಿದೆ ? ಇದಕ್ಕೆ ಸಮಂಜಸ ಅರ್ಥ ಕಂಡುಕೊಳ್ಳುವುದು ಕಷ್ಟ. ಇತಿಹಾಸದಲ್ಲಿ ಇಲ್ಲಿಯವರೆಗೆ ಆಗಿಹೋದ ರೈತ ಚಳುವಳಿಗಳನ್ನು ಗಮನಿಸಿದಾಗ, ಒಂದಂತೂ ಸ್ಪಷ್ಟವಾಗಿ ತಿಳಿದು ಬರುತ್ತದೆ. ಭೂಹೀನ ಕಾರ್ಮಿಕ ಹಾಗೂ ಸಣ್ಣ ಹಿಡುವಳಿದಾರರ ಪರವಾಗಿ ನಡೆದ ಸಂಘಟನೆಗಳು ಪ್ರಭುಗಳನ್ನು ಬೆಚ್ಚಿಬೀಳಿಸುವಲ್ಲಿ ಯಶಸ್ವಿಯಾಗಿಲ್ಲ ಎಂಬುದು. ಇದಕ್ಕೆ ಕಾರಣ-ಪ್ರಭುಗಳು ಜಮೀನ್ದಾರೀ ವ್ಯವಸ್ಥೆ ಹಾಗೂ ಸರ್ಕಾರಿ ಯಂತ್ರದ ಭಾಗಗಳಾಗಿದ್ದರೆಂಬುದು. ಹಾಗಾಗಿ ಸಣ್ಣ ರೈತ ತನ್ನ ಸಂಘಟನೆಯ ಮುಖಾಂತರ ಸಮಗ್ರ ಬದಲಾವಣೆ ತರಲು ಎಂದೂ ಯಶಸ್ವಿಯಾಗಿಲ್ಲ. ಬಹುಶಃ ಯೂರೋಪಿನಲ್ಲಿ ನಡೆದ ಇಂಥ ಸಣ್ಣ ಪುಟ್ಟ ಸಂಘಟನೆಗಳನ್ನು ಕಂಡೇ ಲೀಟಕ್ನೆಟ್ "ರೈತರಿಂದ ಕ್ರಾಂತಿ ಮಾಡಲು ಸಾಧ್ಯವಿಲ್ಲ, ಆದರೆ ಅವರು ಕ್ರಾಂತಿಗೆ ವಿರುದ್ಧವಾಗಿ ನಿಂತರೆ ಕ್ರಾಂತಿಯನ್ನು ತಡೆಹಿಡಿಯಬಲ್ಲರು" ಎಂದಿರುವುದು. ಇದೊಂದು ರೀತಿಯ ವಿಚಿತ್ರವಾದ ಎನ್ನಿಸಿದರೂ ಇಲ್ಲಿಯವರೆಗಿನ ಇತಿಹಾಸವನ್ನು ಗಮನಿಸಿದರೆ ಇದು ನಿಜ ಎನ್ನಿಸುತ್ತದೆ. ಬಹುಶಃ ಇದಕ್ಕೆ ಒಂದು ಕಾರಣ ರೈತ ಸಮಾಜ ಗತಿತಾರ್ಕಿಕ ಮುನ್ನಡೆಯನ್ನು ಬಹು ನಿಧಾನಮಟ್ಟದಲ್ಲಿ ಪಡೆದಿರುವುದೇ ಇರಬಹುದು. ಆದರೆ ಲೀಟ್‌ಕ್ನೆಟ್‌ನ ಈ ವಾದವನ್ನು ತಪ್ಪು ಎಂದು ತೋರಿಸಲು ಸಾಧ್ಯವಾಗುವುದು ಬಹುಶಃ ಭಾರೀ ರೈತರಿಂದ ಅನ್ನಿಸುತ್ತದೆ.

ಪ್ರೌಧಾನ್, ಮಾರ್ಕ್ಸ್ ಮುಂತಾದವರ ಭೂಮಿ ಹಾಗೂ ರೈತರ ಬಗ್ಗೆ ಯೋಚಿಸುವಾಗ ಹಿಂದಿನ ಆದರ್ಶವಾದ ಸಿದ್ಧಾಂತಗಳಿಂದ ಭಿನ್ನವಾಗಿ ಯೋಚಿಸಲಾರಂಭಿಸಿದರು. ಅದಕ್ಕಿಂತ ಹಿಂದೆ, ಕೆಲವೊಮ್ಮೆ ಈಗಲೂ ರೈತ ಒಂದು ದೇಶದ ಬೆನ್ನೆಲುಬು, ಸಮಾಜದ ಸಂಘಟಕ ಎಂದು ದೊಡ್ಡ ದೊಡ್ಡ ಮಾತುಗಳಲ್ಲಿ ಬಣ್ಣಿಸಿರುವುದುಂಟು. ಆದರೆ ಪ್ರಥಮ ಬಾರಿಗೆ ಮಾರ್ಕ್ಸ್‌ನಂಥವರು ರೈತರ ಸಮಸ್ಯೆಗಳನ್ನು ಉತ್ಪಾದನಾ ದೃಷ್ಟಿಯಿಂದ ಕಾಣುವುದಕ್ಕೆ ಪ್ರಾರಂಭಿಸಿದರು. ಮಾರ್ಕ್ಸ್

ಕರ್ನಾಟಕ ರೈತ ಚಳುವಳಿ : ಒಂದು ಟಿಪ್ಪಣಿ

ಎಂ. ಎಸ್. ರಜನಿಕಾಂತ್

1980ರ ಜುಲೈ ತಿಂಗಳಲ್ಲಿ ನರಗುಂದದಿಂದ ಮೊದಲಾದ ಕರ್ನಾಟಕ ರೈತ ಚಳವಳಿ ನಾಲಾ–ನೀರಾವರಿ ಕ್ಷೇತ್ರಗಳಲ್ಲಿ ತೀವ್ರವಾಗಿಯೂ ಇತರೆಡೆಗಳಲ್ಲಿ ಸಾಧಾರಣವಾಗಿಯೂ ಸಾಗುತ್ತಾ ಇಡೀ ರೈತಾಪಿಯ ಆಶಯಗಳನ್ನು ಪ್ರತಿಬಿಂಬಿಸುವಂತೆ ತನ್ನನ್ನು ವಿಜೃಂಭಿಸಿಕೊಂಡು ಮುಂದುವರೆದಿದೆ.

ಆದರೆ, ಇದು ಎಂತಹ ಚಳುವಳಿ ? ಈ ಚಳುವಳಿಯ ಮೂಲ ಆಶಯಗಳೇನು ? ಮುಂಚೂಣಿಯಲ್ಲಿನ ಮುಖ್ಯರ ವರ್ಗ ಹಿತಾಸಕ್ತಿಗಳೇನು ? ರೈತರೆಂದರೆ ಒಂದೇ ಎಂಬ ಈ ಮುಖ್ಯರ ಮಾತುಗಳು ಸತ್ಯಕ್ಕೆ ಎಷ್ಟು ಹತ್ತಿರ ? ಚಳುವಳಿಯ ಉದ್ದೇಶ, ಗುರಿಗಳೇನು ? ಇತ್ಯಾದಿ ಅನೇಕ ಪ್ರಶ್ನೆಗಳು ಇನ್ನೂ ಉತ್ತರ ರಹಿತವಾಗಿಯೇ ಉಳಿದಿವೆ

ಯಾವುದೇ ಚಳುವಳಿ ಅರ್ಥಪೂರ್ಣವಾಗುವುದು. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿನ ಶೋಷಕ ನೀತಿಯನ್ನು ಎಷ್ಟರಮಟ್ಟಿಗೆ ಬದಲಾಯಿಸುವ ಉದ್ದೇಶವನ್ನು ಹೊಂದಿವೆ ಎಂಬುದರಿಂದ. ಬಂಡವಾಳಶಾಹಿ ಪದ್ಧತಿ ಹೇರುತ್ತಿರುವ ಮೌಲ್ಯಗಳು, ವಿಜ್ಞಾನದ ಹೆಸರಿನಲ್ಲಿ ನಡೆಯುತ್ತಿರುವ ಅಮಾನವೀಕರಣಗಳ ಬಗೆಗೆ, ದಿನದಿನಕ್ಕೂ ದುರ್ಭರವಾಗುತ್ತಿರುವ ಬಡರೈತರ–ಕೃಷಿಕಾರ್ಮಿಕರ ಬದುಕಿನ ಬಗೆಗೆ, ಜಾತಿಪದ್ಧತಿ ಅನಿಷ್ಟಗಳ ಬಗೆಗೆ, ಉಸಿರೆತ್ತದೆ ರೈತಚಳುವಳಿ ತನ್ನ ಬೇಡಿಕೆ ಪಟ್ಟಿಯಲ್ಲಿ ಇತರ ಬೇಡಿಕೆಗಳನ್ನೂ ಸೇರಿಸಿದ್ದರೂ ಸಹಾ ವಿವಿಧ ರೀತಿಯ ಸಾಲಗಳ ಮನ್ನಾ, ಟ್ರಾಕ್ಟರ್, ಟಿಲ್ಲರ್, ರಾಸಾಯನಿಕ ಗೊಬ್ಬರ, ಪಂಪ್‌ಸೆಟ್ಸ್ ಬೆಲೆಗಳ ಇಳಿತ, ಕಬ್ಬಿಗೆ ಉತ್ತಮ ಬೆಲೆ, ಇವುಗಳ ಸುತ್ತ ತನ್ನ ಚಳುವಳಿಯನ್ನು ಕೇಂದ್ರೀಕರಿಸುತ್ತಿದೆ. ಕೃಷಿಕ್ಷೇತ್ರದಲ್ಲಿ ಬೆಳೆಯುತ್ತಿರುವ ಬಂಡವಾಳಶಾಹಿ ರೈತರ ಆಶಯಗಳನ್ನು ಪ್ರತಿನಿಧಿಸುವ ಈ ಚಳುವಳಿಯ ನೇತೃತ್ವ ಕೂಡ ಅವರ ಕೈಯಗಳಲ್ಲಿಯೇ ಇದೆ.

ಇಡೀ ಚಳುವಳಿಯ ಚರಿತ್ರೆಯನ್ನು ಸಮಗ್ರವಾಗಿ ಪರಿಶೀಲಿಸಿದಾಗ ಸ್ಪಷ್ಟವಾಗುವ ಅಂಶಗಳು ಎರಡು. ಮೊದಲನೆಯದಾಗಿ ಕೃಷಿಕ್ಷೇತ್ರದಲ್ಲಿ ಬೆಳವಣಿಗೆ ಹೊಂದುತ್ತಿರುವ ಬಂಡವಾಳಶಾಹಿ ಹಿತಾಶಕ್ತಿಯನ್ನು ಇದು ಪ್ರತಿನಿಧಿಸುತ್ತಿದೆ. ಕೃಷಿಕ್ಷೇತ್ರದಲ್ಲಿ ಬಂಡವಾಳಿಗ ರೈತರಿಲ್ಲ ಎಂಬ ಮಾತು ಒಂದು ಹಸೀ ಸುಳ್ಳು. ಯಾಕೆಂದರೆ, ಭೂಸುಧಾರಣಾ ಶಾಸನ ಜಾರಿಯಾದ ನಂತರ ಭೂಮಾಲೀಕ ಶಕ್ತಿಗಳು ಕಡಿಮೆ ಆಗಿದ್ದರೂ ಸಹಾ, ವಿವಿಧ ಮಾರ್ಗೋಪಾಯಗಳಲ್ಲಿ ಭೂಮಿ ಉಳಿಸಿಕೊಂಡು, ಹಳ್ಳಿಗಳಲ್ಲಿ ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸಿ, ಹಳ್ಳಿಯ ವ್ಯಾಪಾರವನ್ನು ಕೈಯಲ್ಲಿಟ್ಟುಕೊಂಡು, ನಗರ ಪ್ರದೇಶಗಳಲ್ಲಿ ಬಂಡವಾಳ ಹೂಡುತ್ತಾ, ಹಳ್ಳಿಗಳಲ್ಲಿಯೇ ವಾಸವಾಗಿರುವ ರೈತರ ಸಂಖ್ಯೆ ಕಡಿಮೆ ಏನಿಲ್ಲ. ಪ್ರಸ್ತುತದ ರೈತ ಚಳುವಳಿಯಲ್ಲಿ ಈ ಬಗೆಯ ರೈತರೇ ಹೆಚ್ಚಿದ್ದಾರೆ. ಅಲ್ಲದೆ ನಾಲಾ–ನೀರಾವರಿ ಪ್ರದೇಶಗಳಲ್ಲಿ ಭೂಮಿ ಹೊಂದಿ, ಲಾಭ ನಷ್ಟದ ಲೆಕ್ಕಾಚಾರದ ಮೇಲೆ, ಮುಖ್ಯವಾಗಿ ವ್ಯಾಪಾರೀ ಬೆಳೆಗಳನ್ನು ಬೆಳೆಯುತ್ತಿರುವ ರೈತರು ಈ ಚಳುವಳಿಯಲ್ಲಿ ಸೇರಿದ್ದಾರೆ. ವಿವಿಧ ಬೆಳೆಗಳು ಮತ್ತು ಇಂತಹ ಹಿತಾಸಕ್ತಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಆಳುವ ಜನರ ವಿರುದ್ಧ ಇವರು ಬಂಡೆದ್ದಿದ್ದಾರೆ. ಹೆಚ್ಚುವರಿ ಮೌಲ್ಯ ಉತ್ಪಾದಿಸಿ ಕೃಷಿಕ್ಷೇತ್ರದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ನಿರ್ಮಾಣಕ್ಕೆ ಈ ಶಕ್ತಿಗಳು ಪ್ರಯತ್ನಿಸುತ್ತಿವೆ. ಈ ದಿಸೆಯಲ್ಲಿ ಅಡ್ಡ ಬರುತ್ತಿರುವ ಕೈಗಾರಿಕಾ ಬಂಡವಾಳಶಾಹಿಯ ವ್ಯವಸ್ಥೆಯ ವಿರುದ್ಧ ಪೈಪೋಟಿ ನಡೆಸಲು ಮುಂದಾಗಿವೆ. ಎರಡನೆಯದಾಗಿ ಚಳುವಳಿಯ ಆಶಯ ಸಮಗ್ರ ಸಾಮಾಜಿಕ ಬದಲಾವಣೆ ಆಗಿಲ್ಲ. ದಲಿತರು, ಕೃಷಿಕೂಲಿಗಳು, ಬಡ ಹಾಗೂ ಸಣ್ಣ ರೈತರು ಸಂಘಟನೆಯಲ್ಲಿ ಪ್ರಜ್ಞಾಪೂರ್ವಕವಾಗಿ ಸೇರಿಲ್ಲ. ತಮಗೂ ಒಂದಿಷ್ಟಾದರೂ ಲಾಭ ಸಿಕ್ಕೀತು ಎಂಬ ಆಸೆಯಿಂದ ಅವರು ಸೇರಿದ್ದಾರೆ ಮಾತ್ರ. ಅಲ್ಲದೆ ಈ ಕೆಳವರ್ಗ ಹಾಗೂ ಜಾತಿಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಿ, ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ಬದಲಾವಣೆಗೆ ದಾರಿ ಮಾಡಿಕೊಡುವ ಸಂಘಟನೆಯೊಂದರ ಕೊರತೆ ಕೂಡ ಇದೆ. 'ನಮ್ಮ ಬೆಳೆಗೆ ಹೆಚ್ಚು ಬೆಲೆ ಸಿಕ್ಕ ತಕ್ಷಣ ನಿಮಗೆ ಸರಿಯಾದ ಕೂಲಿ ಕೊಡುತ್ತೇವೆ' ಎಂಬ ರೈತಸಂಘದ ಧುರೀಣರ ಮಾತುಗಳು, ತೀವ್ರಗಾಮಿ ಕ್ರಾಂತಿಕಾರಕ ಶಕ್ತಿ ಹೊಂದಿದ ಈ ಕೆಳವರ್ಗ ಸಂಘಟನೆಯಿಂದ ದೂರ ಉಳಿಯದಂತೆ ನೋಡಿಕೊಳ್ಳುವ ಕುತಂತ್ರ ಮಾತ್ರ ಆಗಿದೆ. ರೈತಸಂಘಟನೆಯ ಸದಸ್ಯರು ದಲಿತರ ಮೇಲೆ ದೌರ್ಜನ್ಯ ನಡೆಸಿದ ಅನೇಕ ಘಟನೆಗಳು ವರದಿಯಾಗುತ್ತಲೇ ಇವೆ.

ಇಲ್ಲಿನ ಪರಿಮಿತಿಯಲ್ಲಿ ವಿವರಣೆಗಳನ್ನು ಕೊಡಲಾಗದ ಪ್ರಯುಕ್ತ, ಹೆಬರ್ಲೆ ಎಂಬ ಸಮಾಜ ವಿಜ್ಞಾನಿಯ ಮಾತುಗಳನ್ನು ಹೇಳಿ ನನ್ನ ಟಿಪ್ಪಣಿಯನ್ನು ಮುಗಿಸುತ್ತೇನೆ. ಯಾವುದೇ ಸಾಮಾಜಿಕ ಚಳುವಳಿಯ ಮುಖ್ಯ ಆಶಯ ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ತರುವುದಾಗಿರುತ್ತದೆ. ಮುಖ್ಯವಾಗಿ ಖಾಸಗಿ ಆಸ್ತಿಯ ಕಲ್ಪನೆ, ಶ್ರಮಿಕ ಹಾಗೂ ಒಡೆತನದ ನಡುವಿನ ಸಂಬಂಧಗಳನ್ನು ಸಮಷ್ಟಿ ಪ್ರಜ್ಞೆಯ ಮುಖಾಂತರ ಬದಲಿಸಿ ಶೋಷಣಾ ರಹಿತ ಸಾಮಾಜಿಕ ವ್ಯವಸ್ಥೆಯೊಂದನ್ನು ಸ್ಥಾಪಿಸುವುದಾಗಿರುತ್ತದೆ. ಈ ಬಗೆಯ ಚಳುವಳಿಗಳನ್ನು ಮಾತ್ರ ನಿಜವಾದ ಕ್ರಾಂತಿಕಾರೀ ಚಳುವಳಿಗಳೆಂದು ಕರೆಯಬಹುದು.

ನಮ್ಮ ದೇಶದ ಗ್ರಾಮುಗಳು ಮತ್ತು ನಗರಗಳು ವಿವಿಧ ರೀತಿಯ ಕಚ್ಚಾ ಪದಾರ್ಥಗಳಿಂದ ಸಮೃದ್ಧಿಯಾಗಿವೆ. ಅವನ್ನು ವ್ಯರ್ಥಮಾಡಲಾಗುತ್ತಿದೆ. ಅವುಗಳ ಉತ್ಪನ್ನ ಮತ್ತು ತಯಾರಿಕೆಯು ಸಣ್ಣ ಯಂತ್ರಗಳು ರೂಪಿತಗೊಂಡಾಗ ಮಾತ್ರ ಸಾಧ್ಯವಾಗುತ್ತವೆ. ಗ್ರಾಮುಗಳಲ್ಲಿ ಮತ್ತು ನಗರಗಳಲ್ಲಿ ಮತ್ತು ನಮ್ಮ ದೇಶದಲ್ಲೆಲ್ಲಾ, ಸಂಪತ್ತನ್ನು ಉತ್ಪಾದಿಸುವ ಹಾಗೂ ಭೂಮಿಯ ಮೇಲಿನ ಒತ್ತಡವನ್ನು ಕಡಿಮೆಮಾಡಬಲ್ಲ, ವಿದ್ಯುಚ್ಛಕ್ತಿಯಿಂದ ಚಲಿಸುವ ಲಕ್ಷಾಂತರ ಯಂತ್ರಗಳು ವ್ಯಾಪಿಸಿರುವಂತಹ ಕಾಲವೊಂದನ್ನು ನಾನು ಮುನ್ನೋಡುತ್ತಿದ್ದೇನೆ.

—ಲೋಹಿಯಾ

* * *

ಕನ್ನಡದ ಜನಮನಕ್ಕೆ ಕನ್ನ ಹಾಕಿದ

ಲಂಕೇಶ್ ಪತ್ರಿಕೆ

* * *

ಓದಿ ಎಂದು ಹೇಳುವುದು ಅನಗತ್ಯ

ಜಾಹೀರಾತಿಗೆ ಪ್ರಕಟಿಸುತ್ತಿರುವುದಷ್ಟೆ ಅಗತ್ಯ

ವೇದಿಕೆಯಾಗುವ ಆಸೆ ಇಟ್ಟುಕೊಂಡಿದೆ''

''ಬರೀ ಆಸೇನೋ ಅಥವಾ ಆ ದಿಕ್ಕಿನೊಳಗೆ ಏನಾದ್ರೂ ಕೆಲಸ ಆಗ್ತಿದೆಯೋ ?''

ಕೃಷ್ಣಪ್ಪ ಉತ್ಸಾಹದಿಂದ, ಎಲ್ಲ ಬಡವರೂ ಒಟ್ಟಿಗೆ ನೆಮ್ಮದಿಯಿಂದ ಬದುಕುತ್ತಿರುವ ಬಿದರೆ ಕಾವಲಿನ ಉದಾಹರಣೆ ಕೊಟ್ಟರು. ಭೂವಿತರಣೆಯ ಈ ಯಶಸ್ವಿ ಪ್ರಯೋಗದಲ್ಲಿ ಹಾಸನ ಜಿಲ್ಲೆ ರೈತಸಂಘದ ಪೂರಕ ಪಾತ್ರದ ಬಗ್ಗೆ ಸೂಚಿಸಿದಾಗ ಇದರಲ್ಲಿ ಹೆಚ್ಚಿನ ಯಶಸ್ಸು ದಲಿತ ಸಂಘರ್ಷ ಸಮಿತಿಯದೇ ಎಂದರು. ನಂತರ ಕ್ಯಾಸಿನಕೆರೆ ಕಾಳನಕಟ್ಟೆ, ದೇವಲಾಪುರ – ಈ ಊರುಗಳಲ್ಲಿ ಸಾಗುವಳಿ ಚೀಟಿಗಳಿಗಾಗಿ ಸಮಿತಿ ನಡೆಸುತ್ತಿರುವ ಹೋರಾಟಗಳನ್ನು ಸೂಕ್ಷ್ಮವಾಗಿ ವಿವರಿಸಿದರು. ಇವುಗಳಲ್ಲಿ ಎಲ್ಲ ಜಾತಿಗಳ ಬಡವರೂ ಪಾಲ್ಗೊಂಡಿದ್ದಾರೆ ಎಂದು ಸೂಚಿಸಿದರು.

''ಮತ್ತೆ ರೈತಚಳುವಳಿ ಬಗ್ಗೆ ನಿಮ್ಮ ಆಕ್ಷೇಪಣೆ ಏನು ? ಅದರಲ್ಲಿ ಬಡಬಗ್ಗರು ಇಲ್ಲವೆಂದೇ ? ರೈತ ಚಳುವಳಿ ಬರೇ ಉಳ್ಳವರ ಚಳುವಳಿ ಅನ್ನುವುದು ನಿಮ್ಮ ಅಭಿಪ್ರಾಯವೇ ?'' ನಾನು ಮತ್ತೊಂದು ಬೀಜ ಹಾಕಿದೆ.

ಕೃಷ್ಣಪ್ಪ ಮತ್ತೆ ಯೋಚಿಸತೊಡಗಿದರು. ಜೊತೆಯಲ್ಲೇ ತಮ್ಮ ಡೈರಿಯ ಹಾಳೆಗಳನ್ನು ಹುಡುಕಾಡುತ್ತಾ ಮಾತು ಮುಂದುವರಿಸಿದರು : ''ರೈತ ಚಳುವಳಿಗೇನೂ ನಮ್ಮ ವಿರೋಧವಿಲ್ಲ ಅವರದ್ದೂ ಹೋರಾಟವೇ. ಇರೋ ವ್ಯವಸ್ಥೆಯನ್ನ ಪ್ರಶ್ನಿಸೋ ಯಾವುದೇ ಹೋರಾಟಕ್ಕೂ ನಮ್ಮ ಬೆಂಬಲ ಇದೆ. ಮದಿಸಿದ ಆನೆಗಳಂತೆ ಓಡಾಡುತ್ತಿದ್ದ ಅಧಿಕಾರ ಶಾಹಿಯನ್ನ ಈ ಚಳುವಳಿ ಮಟ್ಟ ಹಾಕಿದೆ. ಇದೇನೂ ಸಣ್ಣ ಸಾಧನೆಯಲ್ಲ''

ತಮ್ಮ ಡೈರಿಯಿಂದ ಶಿವಮೊಗ್ಗ ಜಿಲ್ಲೆಯ ಭೂ ಒಡೆತನದ ಹಾಗೂ ಸಾಲಗಳ ಸ್ವರೂಪವನ್ನು ನೀಡುವ ಅಂಕಿ ಅಂಶಗಳನ್ನು ನನ್ನ ಮುಂದಿಟ್ಟು ರೈತ ಚಳುವಳಿಯ ಬೇಡಿಕೆಗಳಿಂದ ಪ್ರಯೋಜನವಾಗುವುದು ಭಾರಿ ಭೂ ಒಡೆಯರಿಗೆ ಮಾತ್ರ ಎಂದು ವಾದಿಸಿದರು. ''ವೈಜ್ಞಾನಿಕ ಬೆಲೆ, ವೈಜ್ಞಾನಿಕ ಬೆಲೆ ಅಂತಾರೆ. ಇದರ ಲಾಭ ಪಡೆಯೋರು, ಮನೆಯಲ್ಲಿ ತಿಂದು ಮಿಕ್ಕಿದ್ದನ್ನು ಮಾರಬಲ್ಲ ದೊಡ್ಡ ರೈತರು ಮಾತ್ರ. ಬಡ ರೈತರಿಗೇನು ಸಿಗುತ್ತೆ ? ಕೂಲಿಕಾರರಿಗೆ ಏನು ಸಿಗುತ್ತೆ ?'' ಎಂದು ಖಾರವಾಗುತ್ತಾ ಹೋದರು. ಕೃಷ್ಣಪ್ಪ ಮತ್ತೆ ಭಾವುಕರಾಗಿದ್ದರು.

ನಾನು ಮತ್ತೊಂದು ಕಾಳು ಎಸೆಯಲೇಬೇಕಾಗಿತ್ತು : ''ಹಾಗಾದ್ರೆ ರೈತ ಚಳುವಳಿಗೆ ಇಷ್ಟೆಲ್ಲ ಬೆಂಬಲ ಯಾಕಿದೆ ? ಜೈಲಿಗೆ ಹೋದೋರು, ಗುಂಡಿಗೆ ಬಲಿಯಾದೋರು ಎಲ್ಲಾ ಬಡರೈತರೇ ಅಲ್ವಾ ?''

ಕೃಷ್ಣಪ್ಪ ಮುಖ ಉಜ್ಜಿಕೊಂಡರು. ನಾನೇನೂ ಹೊಸದೇನನ್ನೂ ಹೇಳಿರಲಿಲ್ಲ. ಸತ್ಯವನ್ನು ಮುಟ್ಟಿ ನೋಡಿದವರಂತೆ ಕೃಷ್ಣಪ್ಪ ಹೇಳತೊಡಗಿದರು, ನಾನು ಕೇಳತೊಡಗಿದೆ : ರೈತ ಚಳುವಳಿಯಲ್ಲಿ ಬಡವರೇ ಹೆಚ್ಚು ಇರೋದು. ಇದು ಸಹಜ ಕೂಡಾ. ಯಾಕೆಂದ್ರೆ ಜಾಸ್ತಿ ಒತ್ತಡ ಇರೋದು ಅವರ ಮೇಲೇ. ಬಹಳ ಬಡವರು ಭಾಗವಹಿಸಿರೋ ಈ ಚಳುವಳಿಯನ್ನು ಬಡವರ ಚಳುವಳಿ ಮಾಡೋದಾದ್ರೆ ಅದಕ್ಕಿಂತ ದೊಡ್ಡ ಸಾಧನೆ ಇನ್ನೊಂದಿರಲಾರದು. ಆದ್ರೆ ನಾಯಕತ್ವ ನೋಡಿ ನಾಗಭೂಷಣ್, ಎಲ್ಲಾ ಮೇಲ್ಜಾತಿಯವರದ್ದು... ಅವರ ಈವರೆಗಿನ ಹೋರಾಟವೆಲ್ಲಾ ದೊಡ್ಡ ರೈತರ ಅನುಕೂಲಗಳಿಗೆ ಮಾತ್ರ ಸೀಮಿತವಾಗಿದೆ. ಮಿಕ್ಕ ಮಾತುಗಳೆಲ್ಲಾ ಕಣ್ಣೊರೆಸೋದಕ್ಕೆ ಮಾತ್ರ....''

ರೈತ ಚಳುವಳಿಯ ಈವರೆಗಿನ ಆಟವನ್ನು ಕಂಡವರ್ಯಾರೂ ಕೃಷ್ಣಪ್ಪನವರ ಈ ಮಾತುಗಳನ್ನು ಅಲ್ಲಗಳೆಯುವಂತಿಲ್ಲ. ಆದರೆ ಇನ್ನೂ ಆಸೆ ಇಟ್ಟುಕೊಂಡಿರುವ ಜನ ಇದ್ದಾರೆ. ಅದನ್ನೇ ನಾನು ಹೇಳಿದೆ : ''ಎಲ್ಲಾ ಚಳುವಳಿಗಳ ಗೋಳೂ ಇದೇ ಅಲ್ವಾ ? ಆದ್ರೆ ಹಾಗಂತ ಅದನ್ನ ದೂರದಿಂದ ನೋಡ್ತನೇ ವಿಶ್ಲೇಶಿಸೋ ಬದಲು ಹತ್ತಿರ ಹತ್ತಿರ ಯಾಕೆ ಹೋಗಬಾರದು ? ಎಲ್ಲ ಬಡವರ ವೇದಿಕೆಯಾಗೋ ಆಸೆ ಹೊತ್ತಿರೋ ಸಮಿತಿಯ ಸಂಚಾಲಕರಾಗಿರೋ ನೀವು ಇದರ ಬಗ್ಗೆ ಆಳವಾಗಿ ಯೋಚಿಸಬೇಕು. ಇದು ನಿಮ್ಮ ಜವಾಬ್ದಾರಿ ಕೂಡಾ... ಗ್ರಾಮೀಣ ಸಂಘಟನೆ ಮಾತಾಡೋ ನೀವು ಎಣ್ಣೆ ಬಂದಾಗ ಕಣ್ಮುಚ್ಚಿಕೊಂಡ್ರು ಅನ್ನೋ ಆಗಾಗಬಾರದು....''

ಸಂಚಾಲಕರು ಕೊಂಚ ವಿಚಲಿತರಾದಂತೆ ಕಂಡರು. ಆದರೆ ಒಮ್ಮೆ ಸತ್ಯವನ್ನು ಮುಟ್ಟಿನೋಡಿದದರ ಪ್ರಭಾವದಿಂದಲೇನೋ ಅವರು ಒಮ್ಮೆಗೇ ನುಡಿದರು : ''ಸಮಾನ ಆಸಕ್ತಿಗಳಿದ್ರೆ ಹತ್ತಿರ ಹತ್ತಿರ ಬರಬಹುದು''

''ಅಂದ್ರೆ ?''

''ನಮ್ಮ ಹೋರಾಟ ಅವರ ಹೋರಾಟ ಸರಿಸುಮಾರಾಗಾದ್ರೂ ಒಂದೇ ದಿಕ್ಕಿನಲ್ಲಿ ಆಗೋಹಾಗಿದ್ರೆ ದೂರ ಯಾಕೆ ಹೋಗಬೇಕು ? ದೂರ ಹೋಗೋದ್ರಿಂದ ಏನೂ ಪ್ರಯೋಜನವಿಲ್ಲ''

''ಅಂದ್ರೆ ?''

''ಅವರು ಜಾತಿ ನಿರ್ಮೂಲನದ ಕಾರ್ಯಕ್ರಮ, ಅಸ್ಪೃಶ್ಯತೆ, ಜೀತಪದ್ಧತಿಗಳ ಕಾರ್ಯಕ್ರಮ ಹಾಕ್ಕೊಳ್ಳಲಿ. ಭೂ ಸಂಬಂಧಗಳ ವಿಮರ್ಶೆಗೆ ತೊಡಗಲಿ. ಅದಕ್ಕಾಗಿ ಹೋರಾಟ ಹೂಡಲಿ''

''ಅಲ್ಲಾ ಕೃಷ್ಣಪ್ಪನೋರೇ ದೂರ ಇದ್ಕೊಂಡು ಷರತ್ತುಗಳನ್ನು ಹಾಕಿ ಏನು ಪ್ರಯೋಜನ ? ಇಲ್ಲಿ ಷರತ್ತುಗಳ ಪ್ರಶ್ನೆನೇ ಏಳಬಾರದು. ಸಾಧ್ಯತೆಗಳನ್ನು ನೋಡಬೇಕು ಅಂತ ನನಗನ್ನಿಸ್ತದೆ. ಈ ಬಗ್ಗೆ ಮಾತುಕತೆ ಯಾಕಾಗ್ಬಾರ್ದು ?'' ನಾನೂ ನನಗನ್ನಿಸಿದ್ದನ್ನು ಅವರ ಮುಂದಿಟ್ಟೆ. ಜೊತೆಗೆ ಅವರೂ ತಿಳಿದಿದ್ದ ಹಾಸನ ಜಿಲ್ಲಾ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿ ನಡುವಣ ಸಮನ್ವಯ ಸಂಬಂಧಗಳನ್ನು ಪ್ರಸ್ತಾಪ ಮಾಡಿದೆ.

ಕೃಷ್ಣಪ್ಪ ಯೋಚಿಸತೊಡಗಿದರು. ಸಂದರ್ಶನದ ಆರಂಭದಲ್ಲಿ ''ನಿಮಗೆಲ್ಲೋ ಹುಚ್ಚು !'' ಎನ್ನುವಂತೆ ನನ್ನನ್ನು ದಿಟ್ಟಿಸಿ ನೋಡಿದ ಕೃಷ್ಣಪ್ಪ ಇವರಲ್ಲ ಎಂದು ಖಚಿತ ಪಡಿಸಿಕೊಂಡು ಯೋಚನೆ ಮಾಡಲು ಅವರೊಬ್ಬರನ್ನೇ ಬಿಟ್ಟು ಬಂದೆ.

—ನಾಗ್

ಏಷ್ಯಾದ ಕೃಷಿಕ ಜನಸಂಖ್ಯೆಯ ಶೇಕಡ ೩೦ ಭಾಗ ಸಂಪೂರ್ಣವಾಗಿ ಭೂಹೀನರು. ಇವರಿಗೆ ಗ್ರಾಮ ಪುನರ್ ನಿರ್ಮಾಣಕ್ಕಾಗಿ ಸ್ವಯಂಸೇವೆ ಮಾಡಲು ಇರುವ ಉತ್ತೇಜನವಾದರೂ ಏನು ? ತಾನು ಗುದ್ದಲಿ ಹಿಡಿದು ಅಗೆದ ಗುಂಡಿಗಳ ನೀರು ಭೂಮಾಲಿಕರ ಜಮೀನಿಗೆ ಹೋಗುತ್ತದೆ, ತನಗೆ ಅದರಿಂದ ಯಾವ ಲಾಭವೂ ಇಲ್ಲ ಎಂದು ಸಂಪೂರ್ಣವಾಗಿ ಗೊತ್ತಿರುವ ಮನುಷ್ಯನನ್ನು ಸ್ವಯಂಸೇವೆ ಮಾಡೆಂದು ಕೇಳಲು ಸಾಧ್ಯವಿಲ್ಲ. ಆದ್ದರಿಂದ ಭೂಮಿ ಪುನರ್ ಹಂಚಿಕೆಯಾಗಬೇಕು. ಮತ್ತು ಭೂಮಾಲಿಕತ್ವಕ್ಕೆ ಒಂದು ಗರಿಷ್ಠ ಮಿತಿಯನ್ನು ಹಾಕಬೇಕು.

—ಲೋಹಿಯಾ

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ಬಿ. ಕೃಷ್ಣಪ್ಪನವರು ಮಗುವಿನಂಥ ಮನುಷ್ಯರು. ಈ ಗುಣವೇ ಇವರನ್ನು ವೈಯಕ್ತಿಕ ಮಟ್ಟದಲ್ಲಿ ಪ್ರೀತಿಯ ಮತ್ತು ಸಂಘಟನೆಯ ಮಟ್ಟದಲ್ಲಿ ಅಸ್ಪಷ್ಟತೆಯ ವ್ಯಕ್ತಿಯನ್ನಾಗಿ ಮಾಡಿದೆ. ಕರ್ನಾಟಕದ ಈಗಿನ ಪ್ರಮುಖ ರಾಜಕೀಯ ಮತ್ತು ಸಂಘಟನಾತ್ಮಕ ವಿಷಯವಾದ ರೈತ ಚಳುವಳಿಯ ಬಗ್ಗೆ ಈ ವರೆಗೆ ದಲಿತ ಸಂಘರ್ಷ ಸಮಿತಿ ತನ್ನ ಖಚಿತ ನಿಲುವನ್ನು ಪ್ರಕಟಿಸಲಾಗದಿರುವುದಕ್ಕೆ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಬಿ. ಕೃಷ್ಣಪ್ಪನವರನ್ನೇ ದೂರುತ್ತಿದ್ದಾರೆ. ಪಂಚಮ ವಿಶೇಷ ಸಂಚಿಕೆಗಾಗಿ ನಮ್ಮ ನಾಗ್ ಅವರೊಂದಿಗೆ ಮಾತನಾಡಿರುವ ಬಿ. ಕೃಷ್ಣಪ್ಪನವರು ಈ ಬಗ್ಗೆ ಇನ್ನೂ ಯೋಚಿಸುತ್ತಿರುವಂತೆ ಮಾತನಾಡಿದ್ದಾರೆ.



ಕೃಷ್ಣಪ್ಪ ಯೋಚಿಸತೊಡಗಿದರು. . .

ಬಿ. ಕೃಷ್ಣಪ್ಪನವರನ್ನು ಯಾವ ಅಭಿಪ್ರಾಯಕ್ಕೆ ಬೇಕಾದರೂ ಬಗ್ಗಿಸಬಹುದು ಅನ್ನುವ ಪ್ರತೀತಿ ಇದೆ. ಸಂಸದೀಯ ಪ್ರಜಾಪ್ರಭುತ್ವ, ಗಾಂಧೀ ಮಾರ್ಗ, ಹಿಂಸೆ ಇತ್ಯಾದಿ ವಿಷಯಗಳು ಬಂದಾಗ ನಾನೂ ಪರೀಕ್ಷಿಸಿ ನೋಡಿದ್ದೇನೆ. ನೋಡಲು ಘನ ಗಂಭೀರವಾದ ಕಬ್ಬಿಣದ ಸ್ತಂಭದಂತೆ ಕಾಣುವ ಇವರು ಚರ್ಚೆ ವಾಲಿದಂತೆ ಅತ್ತಿತ್ತ ವಾಲಾಡುವ ಪರಿಯನ್ನು ಕಂಡು ಬೆರಗಾಗಿದ್ದೇನೆ. ಬುಡ ಭದ್ರವಿಲ್ಲದಾಗ ಎಂತೆಂತಹವೋ ಸೌಧಗಳು ಕುಸಿದು ಬೀಳುವಾಗ ಈ ಘನಗಂಭೀರ ಕಬ್ಬಿಣದ ಸ್ತಂಭ ವಾಲಾಡುವುದರಲ್ಲಿ ಬೆರಗೇನಿದೆ ಎಂದು ಸಮಾಧಾನವನ್ನೂ ಹುಟ್ಟುಕೊಂಡಿದ್ದೇನೆ.

ದಲಿತ ಸಂಘರ್ಷ ಸಮಿತಿಯ ಆಧಾರ ಸ್ತಂಭಗಳಲ್ಲಿ ಒಂದಾದ ಕೃಷ್ಣಪ್ಪನವರ ವಾಲಾಟ ಬುಡ ಭದ್ರಮಾಡಿಕೊಳ್ಳುವ ಹೋರಾಟದ ಒಂದು ಭಾಗವೇ ಆಗಿದೆ ಎಂಬುದು ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲಾ ಗೊತ್ತು. ನಮ್ಮ ಸುತ್ತಲಿನ ಅಧ್ವಾನಗಳ ಮಧ್ಯೆ ಯಾರು ಗೊಂದಲಕ್ಕೊಳಗಾಗಿಲ್ಲ ? ಕೃಷ್ಣಪ್ಪ ಸಮೂಹದ ಮನುಷ್ಯ. ಮಾತು ಯಾವ ಮೂಲೆಯಿಂದ ಬಂದರೂ ಕೇಳುತ್ತಾರೆ; ಅದರಲ್ಲಿ ಕೊಂಚ ಸತ್ಯ ಕಂಡರೂ ತಲೆದೂಗುತ್ತಾರೆ, ಮಧ್ಯೆ ಇದ್ದಕ್ಕಿದ್ದಂತೆ ಮೊನ್ನೆ ಯಾರದ್ದೋ ಭೂ ವಿವಾದವನ್ನೋ, ಹಳ್ಳಿಯ ಗಲಾಟೆಯನ್ನೋ ಪರಿಹರಿಸಲು ಹೋಗಿ ತಮಗುಂಟಾದ ಅನುಭವವನ್ನು ನೆನೆಸಿಕೊಂಡು ತಲೆ ಅಲ್ಲಾಡಿಸುತ್ತಾರೆ; ಮುಖ ಉಜ್ಜಿಕೊಂಡು ಭಾವುಕರಾಗುತ್ತಾರೆ, ಉಯ್ಯಾಲೆಯಾಗುತ್ತಾರೆ.

ಈ ದೃಷ್ಟಿಯಿಂದ ಕೃಷ್ಣಪ್ಪ ಅಚುಂಬಿತ ಶೂದ್ರ; ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಿದ್ದರೂ ಸಧ್ಯ, ಬ್ರಾಹ್ಮಣ್ಯದ ಚುಂಬನ ಇನ್ನೂ ಆಗಿಲ್ಲ. ಕೃಷ್ಣಪ್ಪನವರ ಈ ಕ್ರಿಯಾಶೀಲತೆ, ಭಾವುಕತೆ, ತೆರೆದಿಟ್ಟ ಮನಸ್ಸು ತಾತ್ಕಣಿಕ ಕಂಪನಗಳನ್ನು ಮೀರಿ ಅವರಲ್ಲಿ ಎಂತಹ ತಾತ್ವಿಕ ನೆಲೆಗಟ್ಟಿನ ನಿರ್ಮಾಣದಲ್ಲಿ ತೊಡಗುವವೋ ನೋಡಬೇಕು. ಈ ಕುತೂಹಲವನ್ನು ಎದೆಯೊಳಗಿಟ್ಟುಕೊಂಡು ನಾನು ಅವರನ್ನು ರೈತ ಚಳುವಳಿಯ ಬಗ್ಗೆ ಮಾತನಾಡಿಸಿದೆ.

ರೈತಸಂಘ ಒಂದು ಶಕ್ತಿಯನ್ನಿಸಿಕೊಂಡಿದೆ ಎಂಬುದನ್ನು ಒಪ್ಪಿಕೊಂಡ ಕೃಷ್ಣಪ್ಪನವರು, ಇಂತಹುದೇ ಇನ್ನೊಂದು ಶಕ್ತಿಯಾಗಿ ಬೆಳೆಯುತ್ತಿರುವ ದಲಿತ ಸಂಘರ್ಷ ಸಮಿತಿ ರೈತಸಂಘದೊಡನೆ ಹೆಗಲಿಗೆ ಹೆಗಲುಕೊಟ್ಟು ಕೆಲಸ ಮಾಡಬಹುದಾದ ಸಾಧ್ಯತೆಯ ಕಡೆ ಬೊಟ್ಟು ಮಾಡುತ್ತಿದ್ದಂತೆಯೇ "ನಿಮಗೆಲ್ಲೋ ಹುಚ್ಚು !" ಎನ್ನುವಂತೆ ನನ್ನನ್ನೇ ನೋಡಿದರು.

ಎಲ್ಲದಕ್ಕೂ ಕೃಷ್ಣಪ್ಪ ಮೊದಲು ಪ್ರತಿಕ್ರಿಯಿಸುವುದು ಹೀಗೆ ಎಂದು ಬಲ್ಲ ನಾನು "ಯಾಕೆ, ದಲಿತ ಸಂಘರ್ಷ ಸಮಿತಿ ಏಕಾಂಗಿಯಾಗಿ ಬದಲಾವಣೆ ತರಬಲ್ಲದು ಎಂಬ ನಂಬಿಕೆ ಅಥವಾ ವಿಶ್ವಾಸವೇ ನಿಮ್ಮದು ?" ಎಂಬ ಪ್ರಶ್ನೆ ಎಸೆದೆ.

ಕೃಷ್ಣಪ್ಪ ಯೋಚಿಸತೊಡಗಿದರು. ಜೊತೆಗೆ ಎಂದಿನಂತೆ ಮಾತುಗಳನ್ನು ಆಡತೊಡಗಿದರು : 'ಹಾಗೇನಲ್ಲ; ವಿಶಾಲ ತಳಹದಿಯ ಹೋರಾಟವೇ ನಮ್ಮ ಗುರಿ ಹಾಗಿಲ್ಲದಿದ್ದರೆ ಏನೂ ಮಾಡಲಾಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ದ.ಸಂ.ಸ. ಈಗಿರುವ ದಲಿತರ ತಳಹದಿಯನ್ನು ವಿಸ್ತರಿಸಿಕೊಂಡು ಎಲ್ಲ ಪ್ರಗತಿಪರರ, ಬಡವರ ಹೋರಾಟದ

ರೈತರನ್ನು ಸರ್ಕಾರ ಸಾಲಗಾರ ಅನ್ನುವುದರಲ್ಲಿ ಹುರುಳಿಲ್ಲ. ಕರ್ನಾಟಕದ ರೈತರು ಸರ್ಕಾರಕ್ಕೆ ಮತ್ತು ಖಾಸಗಿ ಬ್ಯಾಂಕುಗಳಿಗೆ ವಾಪಸ್ಸು ಕೊಡಬೇಕಾಗಿರುವ ಸಾಲ ಕೇವಲ 100 ಕೋಟಿ ರೂಪಾಯಿಗಳಿಗಿಂತ ಹೆಚ್ಚೇನಿಲ್ಲ. ಆದರೆ ಲೆವಿ ಮತ್ತು ವ್ಯಾಪಾರದಿಂದ ಮೊದಲೆ 4000 ಕೋಟಿ ರೂಪಾಯಿ ದರೋಡೆ ಮಾಡಿರುವ ಸರ್ಕಾರವೇ ರೈತನಿಗೆ ಸಾಲಗಾರನಾಗಿದೆ. ಆದ್ದರಿಂದ ರೈತನ ಸಾಲವೆಲ್ಲವೂ ರದ್ದಾಗಬೇಕು". (ಆಧಾರ – ರೈತ ಹೋರಾಟ ಏಕೆ ?)

ಹೀಗಾಗಿ ಸಾಲ ಮನ್ನಾ ಮಾಡಬೇಕಾದ್ದು ಸರ್ಕಾರದ ಕರ್ತವ್ಯ ಎಂದು ವಾದಿಸುತ್ತಾರೆ. ಆದರೆ ಸರ್ಕಾರ ರೈತರಿಗೆ ಸಾಲ ಮರುಪಾವತಿ ಮಾಡಲು ಕನಿಷ್ಠ ಪಕ್ಷ ಬಡ್ಡಿ ರಹಿತ ಸಾಲ ಮನ್ನಾವನ್ನಾದರೂ ವಸೂಲು ಮಾಡಲೇಬೇಕು ಅನ್ನುವ ಕಾರಣ ಇಟ್ಟುಕೊಂಡು ಎಲ್ಲ ಬಡ್ಡಿಯನ್ನು ಮನ್ನ ಮಾಡಿ ಅಸಲು ಮಾತ್ರ ಕಟ್ಟಿದರೆ ಸಾಕು ಎಂದು ಸಾಲ ವಸೂಲಾತಿಗೆ ಹೊರಟಿತು. ಈ ಹಂತದಲ್ಲಿ ರೈತಸಂಘದವರ ವಾದ ಏನೇ ಇದ್ದರೂ ಸರ್ಕಾರ ತೋರಿಸಿದ ಬಡ್ಡಿ ರಹಿತ ಸಾಲ ವಸೂಲಾತಿ ನೀತಿಗೆ ರೈತರು ತಲೆಬಾಗಿ ರೈತರು ಹೆಚ್ಚುಕಡಿಮೆ ಶೇಕಡಾ 80 ಭಾಗ ಸಾಲವನ್ನು ಪಾವತಿ ಮಾಡೇ ಬಿಟ್ಟಿದ್ದಾರೆ. ರೈತ ಸಂಘ ಪ್ರಬಲವಾಗಿರುವ ಹಾಸನ ಜಿಲ್ಲೆಯಲ್ಲು ಕೂಡ ಹೆಚ್ಚು ಕಡಿಮೆ ಶೇಕಡಾ 50 ಭಾಗದ ಸಾಲ ವಸೂಲಾತಿಯಾದದ್ದು ರೈತಸಂಘದ ಸಡಿಲವಾದ ಸಂಘಟನೆಗೆ ಸಂಕೇತವಾಗುತ್ತದೆ. ಉದಾಹರಣೆಗೆ, 1982–83ರ ಸಾಲಿನ ಹಾಸನ ಜಿಲ್ಲೆಯ ಸಾಲ ವಸೂಲಾತಿ ಹೀಗಿದೆ.

ಸಣ್ಣ ಮತ್ತು ಮಧ್ಯಮ ರೈತರು ತೆಗೆದು ಕೊಂಡ ಸಾಲ.

ಕುಟುಂಬಗಳು 11059-ಸಾಲದಮೊತ್ತ 101.47 ಲಕ್ಷ ರೂಗಳು.

ವಸೂಲಾದದ್ದು 5843 ಕುಟುಂಬಗಳಿಂದ 53.79 ಲಕ್ಷರೂಗಳು.

ದೊಡ್ಡ ಹಿಡುವಳಿದಾರರ 5219 ಕುಟುಂಬಗಳು ಪಡೆದ ಸಾಲ 53.05 ಲಕ್ಷ ರೂಪಾಯಿಗಳು. ಹಿಂದುರುಗಿದ ಸಾಲ 27.80 ಲಕ್ಷ ರೂ. ಹೀಗೆ. ರೈತಸಂಘ ಪ್ರಬಲವಾಗಿರುವ ಹಾಸನ ಜಿಲ್ಲೆಯಲ್ಲೆ ಶೇಕಡಾ 50 ಭಾಗಕ್ಕಿಂತ ಹೆಚ್ಚಿನ ಸಾಲ ವಸೂಲಾತಿಯಾದರೆ, ಇನ್ನು ರೈತಸಂಘ ಪ್ರಬಲವಾಗಿರದ ಇತರ ಜಿಲ್ಲೆಗಳಲ್ಲಿ ಶೇಕಡಾ 80ರಿಂದ 90 ಭಾಗ ಸಾಲ ವಸೂಲಾತಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ರೈತಸಂಘದ ಬೇಡಿಕೆಯಂತೆ ಎಲ್ಲ ರೈತರು ಸಾಲ ಮರುಪಾವತಿ ಮಾಡದಿದ್ದರೆ ಮತ್ತೆ ಅವರು ಸಾಲ ತೆಗೆದುಕೊಳ್ಳಲು ಯಾರ ಮೊರೆ ಹೋಗಬೇಕಾಗುತ್ತಿತ್ತು ಎನ್ನುವ ಪ್ರಶ್ನೆ. ಯಾಕೆಂದರೆ ಅಪೆಕ್ಸ್ ಬ್ಯಾಂಕಿನ ಪ್ರಕಾರ ಶೇಕಡಾ 60ರಷ್ಟು ಸಾಲ ವಸೂಲಾತಿಯಾಗದಿದ್ದರೆ ಆ ಸಹಕಾರಿ ಬ್ಯಾಂಕುಗಳನ್ನು ಅಮಾನತ್ತುಗೊಳಿಸಲಾಗುತ್ತದೆ. ಇಂತಹ ಸಂಧರ್ಭಗಳಲ್ಲಿ ರೈತ ಸಂಘ ಬೇರೆ ಏನಾದರೂ ಸಾಲದ ನೀತಿಯನ್ನು ರೂಪಿಸಿದೆಯೇ ? ಅನ್ನುವ ಪ್ರಶ್ನೆ ಬಂದಾಗ ಇಲ್ಲ ಎಂದೇ ಹೇಳಬೇಕಾಗುತ್ತದೆ. ಹೀಗೆ ಬೇರೆ ಒಂದು ಸಾಲದ ವ್ಯವಸ್ಥೆಯನ್ನು ರೂಪಿಸದೆ ಒಂದೇ ಬಾರಿ ಸಾಲಮನ್ನಾದ ಚಳುವಳಿಗೆ ಕರೆಕೊಟ್ಟರೆ ಭವಿಷ್ಯದಲ್ಲಿ ಇದೇ ಬೇಡಿಕೆ ರೈತ ವಿರೋಧಿ ಬೇಡಿಕೆಯಾಗಿ ಪರಿಣಮಿಸುವ ಸಾಧ್ಯತೆಯಿದೆ.

ಹೀಗೆ ಗ್ರಾಮೀಣ ವ್ಯವಸ್ಥೆಯ ಸಾಲನೀತಿಯ ಬಗ್ಗೆ ಕೂಲಂಕುಷವಾಗಿ ವಿವಿಧ ದೃಷ್ಟಿಕೋನಗಳಿಂದ ಸಮಸ್ಯೆಯನ್ನು ಪರಿಶೀಲಿಸದೇ ಚಳುವಳಿಗೆ ಕರೆಕೊಟ್ಟರೆ ಹಲವಾರು ರೀತಿಯ ಸಮಸ್ಯೆಗಳಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ ಅನ್ನುವುದು ಸ್ಪಷ್ಟವಾಗುತ್ತದೆ. ಆದರೆ ಇದೇ ಹಿನ್ನಲೆಯಲ್ಲಿ ಸರ್ಕಾರಿ ನೀತಿಯನ್ನು ಪ್ರತಿಪಾದಿಸುವುದು ಮೂರ್ಖತನವಾತ್ತದೆ. ಏಕೆಂದರೆ ತುಳಿತಕ್ಕೊಳ ಪಟ್ಟಿರುವ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಗೊಳಿಸಲು ವಿಶಾಲ ದೃಷ್ಟಿಕೋನದ ಸಾಲದ ನೀತಿ ಅವಶ್ಯಕವಾಗುತ್ತದೆ. ಈ ಕಾರಣಕ್ಕಾಗಿ ತಮಿಳುನಾಡು ಮುಂತಾದ ಕಡೆ ಸರ್ಕಾರ ಅನುಸರಿಸಿದ ಸಾಲ ನೀತಿ ಹೆಚ್ಚು ಆದರ್ಶಮಯವಾದದ್ದು ಎನಿಸುತ್ತದೆ. ಉದಾ:- 'ತಮಿಳುನಾಡು ಸರ್ಕಾರ ಮೂರು ಎಕರೆಗಿಂತ ಕಡಿಮೆಯಿರುವ ಎಲ್ಲ ರೈತರ ಸಾಲಗಳನ್ನು ಮನ್ನಾಮಾಡಿತು.' (ಆಧಾರ : ಡೆಕ್ಕನ್ ಹೆರಾಲ್ಡ್–ಎಡಿಟೋರಿಯಲ್ ಜುಲೈ 8, 1980)

ಇಂತಹ ಸಣ್ಣ ರೈತರ ಸಾಲಗಳನ್ನು ಮನ್ನಾ ಮಾಡದೇ ಎಲ್ಲ ರೈತರನ್ನು ಒಂದೇ ಮಾಪನದಲ್ಲಿ ಅಳೆದು ಬರಿಯ ಬಡ್ಡಿಯನ್ನು ಮಾತ್ರ ಮನ್ನಾ ಮಾಡುವ ಕರ್ನಾಟಕ ಸರ್ಕಾರದ ನೀತಿ ಬಡ ರೈತರಿಗೆ ಕೊಡಲಿ ಪೆಟ್ಟಾಗಿ ಅವರು ಹೆಚ್ಚು ಸಂಕಷ್ಟಗಳಿಗೆ ಒಳಗಾಗುವ ಸಂದರ್ಭವನ್ನು ಒದಗಿಸಿಕೊಟ್ಟದ್ದು ಒಂದು ದುರಂತ. ಇದರೊಟ್ಟಿಗೆ ಕರ್ನಾಟಕ ರೈತಸಂಘವು ಕೂಡ ಸಣ್ಣ ಮತ್ತು ದೊಡ್ಡ ರೈತರ ಸಾಲ ಮನ್ನಾ ಮಾಡಬೇಕು ಎಂದು ಬೇಡಿಕೆಯಿಟ್ಟದ್ದು ಕೂಡ ಒಂದು ವಿಪರ್ಯಾಸ ಎನಿಸುತ್ತದೆ.

ಸವಲತ್ತುಗಳ ಅವಕಾಶ ಒದಗಿಸಿತು. ಆದರೆ ಈ ಸಾಲ ಸವಲತ್ತುಗಳನ್ನು ಒದಗಿಸುವುದರ ಜೊತೆಗೇ ಇದು ಅವರ ಕೈಗೆಟುಕದ ತಂತ್ರಗಳನ್ನೂ ರೂಪಿಸಿತು. ಈ ತಂತ್ರಗಳಲ್ಲಿ ಕೆಲವನ್ನು ಹೇಳುವುದಾದರೆ: ಶೇರುದಾರರಾಗುವುದಕ್ಕೇ ಅವಕಾಶವಿಲ್ಲದಂತೆ ಮಾಡುವುದು. ಹೀಗೆಮಾಡುವುದಕ್ಕೆ ಅವರು ಕೊಡುವ ಕಾರಣ ಬೈಲಾದಲ್ಲಿ ನಮೂದಿಸಿದ್ದಷ್ಟು ಮಂದಿ ಷೇರುದಾರರು ಈಗಾಗಲೇ ಆಗಿರುವುದರಿಂದ ನಿಮಗೆ ಅವಕಾಶವಿಲ್ಲ ಎಂದು ಹೇಳಿ ಸಾಲ ಕೊಡುವ ಹಂತದಲ್ಲಿ ಅವರನ್ನು ವಂಚಿಸುತ್ತಾರೆ. ಷೇರುದಾರರಿಗೆ ಮಾತ್ರ ಸಾಲ ಅಂತ ಸೂಚನೆ ಇರುವುದರಿಂದ ಅವರನ್ನು ಷೇರುದಾರರನ್ನಾಗಿ ಮಾಡುವ ಪ್ರಾಥಮಿಕ ಹಂತದಲ್ಲೇ ಇವರನ್ನು ಅಸ್ಪೃಶ್ಯರನ್ನಾಗಿ ಹೊರಗಿಡಲಾಗುತ್ತದೆ.

ಉದಾಹರಣೆಗೆ ಮೈಸೂರಿನಲ್ಲಿರುವ ಕನ್ನಿಕಾ ಪರಮೇಶ್ವರಿ ಸೊಸೈಟಿಯಲ್ಲಿ ನೋಡಿ. ಅಧಿಕಾರಿಯೊಬ್ಬರ ಹೇಳಿಕೆ ಪ್ರಕಾರ 2500 ಷೇರುದಾರರಿರುವ ಈ ಸೊಸೈಟಿಯಲ್ಲಿ ಹರಿಜನ ಷೇರುದಾರರಿಲ್ಲ. ಕಾರಣ ಕೇಳಿದರೆ ನಮ್ಮ ಬೈಲಾ ಪ್ರಕಾರ 2500 ಮಂದಿ ಷೇರುದಾರಿರಲು ಮಾತ್ರ ಸಾಧ್ಯ. ಈಗಾಗಲೇ ಇತರೇ 2500 ಮಂದಿ ಷೇರುದಾರರಾಗಿರುವುದರಿಂದ ನಾವೇನು ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಹೀಗೆ ಷೇರುದಾರರಾಗುವ ಹಂತದಲ್ಲಿಯೇ ಇವರನ್ನು ಕೈಬಿಡಲಾಗುತ್ತದೆ.

ಇನ್ನು ಅಕಸ್ಮಾತ್ ಕೆಲವರು ಷೇರುದಾರರಾಗಿದ್ದರೆ ಅವರ ಬಳಿ ಆಸ್ತಿ ಮುಂತಾದ ಆಧಾರಗಳಿಲ್ಲದಿರುವುದರಿಂದ ಅವರಿಗೆ ಸಾಲ ಕೊಡುವುದಕ್ಕೆ ಆಧಾರಗಳಿಲ್ಲ ಅಂತ ತೀರ್ಮಾನಿಸಿ ಕೈ ಚೆಲ್ಲಿ ಕುಳಿತುಬಿಡುತ್ತಾರೆ. ಅಕಸ್ಮಾತ್ ಕೆಲವೊಮ್ಮೆ ಸಾಲ ಸಿಕ್ಕರೂ ಕಡಿಮೆ ಮೊತ್ತದ ದನ-ಕುರಿಯ ಸಾಲಗಳು ಮಾತ್ರ ಸಿಗುತ್ತವೆ. ಹೀಗಾಗಿ ಇವರಿಗೋಸ್ಕರ ಮಂಜೂರಾಗುವ ಬಹುಪಾಲು ಸಾಲ ಬಳಕೆಯಾಗದೆ ವಾಪಸ್ಸು ಹಿಂತಿರುಗುತ್ತದೆ. ಉದಾಹರಣೆಗೆ ನೋಡಿ 1982-83 ರ ಸಾಲಿನ ಮೈಸೂರು ಜಿಲ್ಲೆಯ ಹರಿಜನರಿಗಾಗಿ ಮೀಸಲಿಟ್ಟ ಸಾಲದ ವಿವರಗಳು ಹೀಗಿವೆ:

ಒದಗಿದ ಸಾಲ—31 ಲಕ್ಷ ರೂ.ಗಳು

ಬಳಕೆಯಾದ ಸಾಲ—14 ಲಕ್ಷ ರೂ.ಗಳು

ಸರ್ಕಾರಕ್ಕೆ ವಾಪಸ್ಸಾದ ಸಾಲ—17 ಲಕ್ಷ ರೂ.ಗಳು

ಹೀಗೆ ಹರಿಜನರಿಗಾಗಿಯೇ ಮೀಸಲಾದ 31 ಲಕ್ಷ ರೂ.ಗಳಲ್ಲಿ 17 ಲಕ್ಷ ರೂ.ಗಳು ಬಳಕೆಯಾಗದೆ ಮತ್ತೆ ಸರ್ಕಾರದ ಬೊಕ್ಕಸಕ್ಕೆ ಹಿಂತಿರುಗಿದೆ. ಒಂದೆಡೆ ತಮ್ಮ ಅತ್ಯಂತ ಜೀವನೋಪಾಯದ ಅಗತ್ಯಕ್ಕೆ ಸಾಲ ಸಿಗದೆ ಹೆಚ್ಚಿನ ಭೂಮಾಲೀಕರ ಬಡ್ಡಿಯ ಯಮಪಾಶಕ್ಕೆ ಕತ್ತೊಡ್ಡಿ ಜೀತ ಮುಂತಾದ ಬಂಧನಗಳಿಗೆ ಸಿಕ್ಕಿದರೆ ಇನ್ನೊಂದು ಕಡೆ ಸಾಲ ಬಳಕೆಯಾಗದೆ ವಾಪಸ್ಸು ಸರ್ಕಾರಕ್ಕೆ ಹಿಂತಿರುಗುವ ವಿಪರ್ಯಾಸಗಳನ್ನು ನೋಡುತ್ತೇವೆ. ಇದಕ್ಕೆಲ್ಲ ಕಾರಣಗಳನ್ನು ಹುಡುಕುತ್ತಾ ಹೋದರೆ ಹಲವಾರು ರೀತಿಯ ಕಾರಣಗಳನ್ನು ಗುರುತಿಸಬಹುದು. ಇದರಲ್ಲಿ ಬಹು ಮುಖ್ಯವಾದದ್ದೆಂದರೇ ಕಡಿಮೆ ಕೂಲಿಯ ತಂತ್ರ. ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಕೂಲಿಗೆ ವ್ಯವಸಾಯ ಕೂಲಿಗಳನ್ನು ಬಳಸಿಕೊಳ್ಳಲು ಎಲ್ಲ ರೀತಿಯ ಕುತಂತ್ರಗಳನ್ನು ಯೋಜಿಸಲಾಗುತ್ತದೆ. ಕಡಿಮೆ ಕೂಲಿಗೆ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ತಂತ್ರವೆಂದರೆ ಮುಂಗಡ ಸಾಲ ಕೊಡುವುದು. ಈ ಮುಂಗಡ ಸಾಲಕ್ಕೆ ಪ್ರತಿಯಾಗಿ ಅದರ ಬಡ್ಡಿಯನ್ನು ತೀರಿಸಲು ಇವರು ಬಂದು ಸಾಲಗಾರರ ಹತ್ತಿರ ಅತಿ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ. ಇಂತಹ ಪರಿಸ್ಥಿತಿಯನ್ನು ರಕ್ಷಿಸಲು ಸರ್ಕಾರಿ ಸಾಲವನ್ನು ತಪ್ಪಿಸಲು ಅವರು ಎಲ್ಲ ರೀತಿಯ ಜಾಣ್ಮೆಯನ್ನು ಉಪಯೋಗಿಸುತ್ತಾರೆ. ಈ ಕಾರಣಕ್ಕಾಗಿಯೇ ಪ್ರಬಲ ಭೂಮಾಲೀಕರು ಹಿಡಿತದಲ್ಲಿರುವ ಸಹಕಾರಿ ಬ್ಯಾಂಕುಗಳಲ್ಲಿ ಇವರಿಗೆ ಸಾಲ ದೊರಕದಂತೆ ನೋಡಿಕೊಳ್ಳಲಾಗುತ್ತದೆ. ಹೀಗಾಗಿಯೇ ಇವರಿಗಾಗಿ ಮುಡುಪಾಗಿಟ್ಟ ಸಾಲದ ಶೇಕಡಾ 60 ಭಾಗ ಬಳಕೆಯಾಗದೆ ಮತ್ತೆ ಸರ್ಕಾರಕ್ಕೆ ವಾಪಸ್ಸಾಗುತ್ತದೆ.

> ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಕೂಲಿಗೆ ವ್ಯವಸಾಯ ಕೂಲಿಗಳನ್ನು ಬಳಸಿಕೊಳ್ಳಲು ಎಲ್ಲ ರೀತಿಯ ಕುತಂತ್ರಗಳನ್ನೂ ಯೋಜಿಸಲಾಗುತ್ತದೆ. ಆ ತಂತ್ರವೆಂದರೆ ಮುಂಗಡ ಸಾಲ ಕೊಡುವುದು. ಈ ಮುಂಗಡ ಸಾಲಕ್ಕೆ ಬಡ್ಡಿ ತೀರಿಸಲು ಸಾಲಗಾರರ ಹತ್ತಿರ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ. ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಅವರು ಎಲ್ಲ ರೀತಿಯ ಜಾಣ್ಮೆಯನ್ನು ಉಪಯೋಗಿಸುತ್ತಾರೆ. ಈ ಕಾರಣಕ್ಕಾಗಿಯೇ ಪ್ರಬಲ ಭೂಮಾಲೀಕರ ಹಿಡಿತದಲ್ಲಿರುವ ಸಹಕಾರಿ ಬ್ಯಾಂಕುಗಳಲ್ಲಿ ಇವರಿಗೆ ಸಾಲ ದೊರಕದಂತೆ ನೋಡಿಕೊಳ್ಳಲಾಗುತ್ತದೆ. ಹೀಗಾಗಿಯೇ ಹರಿಜನ-ಗಿರಿಜನರಿಗೆಂದೇ ಮೀಸಲಿಟ್ಟ ಸಾಲದ ಶೇಕಡಾ ೬೦ ಭಾಗ ಬಳಕೆಯಾಗದೆ ಮತ್ತೆ ಸರ್ಕಾರಕ್ಕೆ ವಾಪಸ್ಸಾಗುತ್ತಿದೆ.

ಸರ್ಕಾರ ಮತ್ತು ರೈತಸಂಘದ ಸಾಲಮನ್ನಾ ಬೇಡಿಕೆಗಳು

ಯಾವುದೇ ಸಹಕಾರಿ ಬ್ಯಾಂಕು ತಾನು ಕೊಟ್ಟ ಸಾಲದ ಶೇಕಡಾ 60 ಭಾಗ ವಸೂಲು ಮಾಡದೇ ಕಾರ್ಯ ನಿರ್ವಹಣೆ ಮಾಡಲು ಕಷ್ಟವಾಗುತ್ತದೆ. ಈ ಕಾರಣಕ್ಕಾಗಿ ಸರ್ಕಾರದ ಬಲ ಪಡೆದ ಸಹಕಾರಿ ಬ್ಯಾಂಕುಗಳು ಸಾಲದ ಬಹು ಭಾಗವನ್ನು ವಾಪಸ್ಸು ಪಡೆಯಲು ಇಚ್ಛಿಸಿದರೆ ರೈತಸಂಘ ಇದನ್ನು ವಿರೋಧಿಸುತ್ತಿದೆ. ಅದಕ್ಕಾಗಿ ಇದು ಕೊಡುವ ಕಾರಣಗಳೆಂದರೆ:

"ರೈತಾಪಿ ಜನರ ಬಡತನಕ್ಕೆ ಮತ್ತು ಋಣಬಾಧೆಗೆ ಕಾರಣಗಳು ರೈತಾಪಿ ಜನರಲ್ಲ. ಬೇಸಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಲೆವಿನೀತಿ, ಬೆಲೆನೀತಿ, ಸಾಲನೀತಿ ಮತ್ತು ಕಂದಾಯ ನೀತಿಗಳು ಅವರ ಬಡತನಕ್ಕೆ ನೇರ ಕಾರಣಗಳು.

ಸರ್ಕಾರದ ಲೆವಿನೀತಿಯ ಬಗ್ಗೆ ಮಾತಾನಾಡುತ್ತಾ, 1967 ರಿಂದ 1980 ರವರೆಗೆ ಒಟ್ಟು 14,55260 ಟನ್ ಭತ್ತ ಲೆವಿ ಸಂಗ್ರಹಣೆಯಾಗಿದೆ. ಕೇವಲ ಭತ್ತ ಒಂದರಲ್ಲೇ ಸುಮಾರು ಒಂದೂವರೆ ಕೋಟಿ ಕ್ವಿಂಟಾಲ್ ಭತ್ತವನ್ನು ಪೇಟೆ ಧಾರಣೆಗಿಂತ ಸುಮಾರು 30 ರೂಪಾಯಿ ವ್ಯತ್ಯಾಸದಲ್ಲಿ ವಸೂಲು ಮಾಡಿಕೊಂಡು ರೈತರಿಂದ 450 ಕೋಟಿ ರೂಪಾಯಿಗಳನ್ನು ಸರ್ಕಾರ ಲೂಟಿ ಮಾಡಿದೆ.

ಜೊತೆಗೆ ಪೇಟೆ ಧಾರಣೆಗಳನ್ನು ವ್ಯತ್ಯಾಸ ಮಾಡುವುದರ ಮೂಲಕ ಕೂಡ ರೈತನ ತೀವ್ರ ಶೋಷಣೆ ನಡೆದಿದೆ. 1966 ರಿಂದ 1980 ರವರೆಗೆ ಕರ್ನಾಟಕದಲ್ಲಿ ರೈತರು ಬೆಳೆದ ಆಹಾರ ಧಾನ್ಯ 230 ಕೋಟಿ ಕ್ವಿಂಟಾಲ್‌ಗಳು. ಇದರಲ್ಲಿ ಮಾರುಕಟ್ಟೆಗೆ ಹೋದ ಸುಮಾರು 100 ಕ್ವಿಂಟಾಲ್ ಆಹಾರ ಮಾರಾಟದಲ್ಲಿ ಸುಗ್ಗಿ ಬೆಲೆಗೂ ನಂತರದ ಬೆಲೆಗೂ ಕ್ವಿಂಟಾಲ್‌ಗೆ ಸುಮಾರು 30 ರಿಂದ 40 ರೂಪಾಯಿಯನ್ನು ವ್ಯತ್ಯಾಸ ಮಾಡಿ ರೈತರ ಸುಮಾರು 3000 ದಿಂದ 4000 ಕೋಟಿ ರೂಪಾಯಿಯನ್ನು ಸರ್ಕಾರ ಮತ್ತು ಸಂತೆಪೇಟೆಯವರು ಶಾಮೀಲಾಗಿ ಲೂಟಿ ಮಾಡಿದ್ದಾರೆ. ಆದ್ದರಿಂದ

ಸಂಘದ ನಾಯಕರಾಗಿ 'ಸಾಲ ತೀರಿಸಬೇಡಿ' ಎಂದೂ ಹೇಳುವ ದ್ವಂದ್ವ ಪಾತ್ರವಹಿಸುತ್ತಾರೆ. ರೈತಸಂಘ ಮುಂದಿಟ್ಟಿರುವ ಸಾಲ ಮನ್ನಾ ಬೇಡಿಕೆ ಇಂತಹ ದೊಡ್ಡ ರೈತರಿಗೆ ಅನುಕೂಲಕರವಾಗಿದೆ. ದೊಡ್ಡ defaulters (ಸಾಲ ತೀರಿಸಬೇಕಾಗಿರುವ) ರೈತರ ಮನೆ ಜಪ್ತಿ ಮಾಡಲು ಹೋದಾಗ ದೊಡ್ಡ ಅಧಿಕಾರಿಗಳಿಂದ ಫೋನ್‌ಗಳ ಮೂಲಕ ಅವರನ್ನು ಮುಟ್ಟದಿರುವಂತೆ ಅವರ ಚರ-ಸ್ಥಿರಾಸ್ತಿಗಳನ್ನು ಜಪ್ತಿ ಮಾಡದಿರುವಂತೆ ಆದೇಶಗಳು ಬರುತ್ತವೆ. ಇಂತಹ ಆದೇಶಗಳು ಸಂಬಂಧಪಟ್ಟ ಖಾತೆಯ ಮಂತ್ರಿಗಳಿಂದಲೂ ಬಂದಿವೆ ಎಂದು ಸಂಬಂಧಪಟ್ಟ ಅಧಿಕಾರಿಯೊಬ್ಬರು ತಮ್ಮ ನಿಸ್ಸಾಹಯಕತೆಯನ್ನು ತೋಡಿಕೊಂಡರು. ಇಂತಹ ಪರಿಸ್ಥಿತಿ ಸೃಷ್ಟಿಯಾಗುವುದರಿಂದ ಬಡರೈತರು ಜಪ್ತಿ ಒಳಗಾಗುವ ವಿಷಮ ಪರಿಸ್ಥಿತಿವುಂಟಾಗುತ್ತದೆ,

ಸಣ್ಣ ರೈತರ ಸಂಕಷ್ಟಗಳು

ಸಣ್ಣಹಿಡುವಳಿದಾರರು ತಾವು ತೆಗೆದುಕೊಂಡ ಸಾಲಕ್ಕಾಗಿ ತಮಗೆ ಆಧಾರವಾಗಿರುವ ಜಮೀನಿನ ಒಡೆತನದ ಹಕ್ಕನ್ನು ತೋರಿಸಬೇಕಾಗುತ್ತದೆ. ಇದಕ್ಕಾಗಿ ಇವರು ಸಂಬಂಧಪಟ್ಟ ಭೂ ಕಂದಾಯ ಇಲಾಖೆಯಿಂದ ಪಾಣಿಪಟ್ಟಿ ಮುಂತಾದುವುಗಳನ್ನು ದೊರಕಿಸಿಕೊಡಬೇಕು. ಉದಾ :- ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೆ ಪಾಣಿಪಟ್ಟಿ ಮುಂತಾದುವನ್ನು ಪಡೆಯಲು ಅವರು ಕೊಡುವ ಲಂಚ ತಿರುಗಾಡುವ ಚಾರ್ಜನ್ನು ಲೆಕ್ಕ ಹಾಕಿದರೆ ಇದರ ಮೊತ್ತ ಸುಮಾರು ನೂರರಿಂದ ಮೂನ್ನೂರು ರೂ.ವರೆಗಾಗುತ್ತದೆ. ನಂತರ ದೊರಕಿದ ಸಾಲವನ್ನು ನೇರವಾಗಿ ಹಣದ ರೂಪದಲ್ಲಿ ಕೊಡದೆ ಅದರಲ್ಲಿ ಅರ್ಧಭಾಗವನ್ನು ರಸಾಯನಿಕ ಗೊಬ್ಬರಗಳ ಮುಖಾಂತರ ಕೊಡುತ್ತಾರೆ. ಆಗ ಹಿಡುವಳಿದಾರನಿಗೆ ಗೊಬ್ಬರ ಬೇಕಾಗಲಿ, ಬೇಡದಿರಲಿ ಆದರ ಗುಣ ಉತ್ತಮಮಟ್ಟದಲ್ಲಿರಲಿ, ಇಲ್ಲದಿರಲಿ; ತೂಕ ಅಳತೆಗಳಲ್ಲಿ ಏನೇ ವ್ಯತ್ಯಾಸವಿರಲೀ, ಗೊಬ್ಬರದ ರೂಪದಲ್ಲೇ ಪಡೆದುಕೊಳ್ಳಬೇಕು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಸಾಲ ವ್ಯವಸಾಯದ ಸಮಯದಲ್ಲಿ ಸಿಕ್ಕದೆ ಈ ಕಾಲಕಳೆದ ನಂತರ ಸಿಗುವುದರಿಂದ ಸಣ್ಣ ರೈತ ಈ ಸಾಲವನ್ನು ಯಾವುದಕ್ಕಾಗಿ ಉಪಯೋಗಿಸಿಕೊಳ್ಳುತ್ತಾನೆ ? ಹಣವನ್ನು ವ್ಯವಸಾಯೇತರ ಅಂದರೆ ತನ್ನ ಮತ್ತು ಮನೆಯವರ ಹಿಟ್ಟು-ಅನ್ನಕ್ಕಾಗಿ ಬಳಸಿದರೆ ಗೊಬ್ಬರವನ್ನು ತಾನು ಸಂಗ್ರಹಿಸಿಡುವ ಅನುಕೂಲ ವಿಲ್ಲದ್ದರಿಂದ ಅದನ್ನು ಶ್ರೀಮಂತ ಅಥವಾ ದೊಡ್ಡರೈತರಿಗೆ ಮಾರುತ್ತಾನೆ. ಉದಾ :- ಚಿಕ್ಕಬಸವಯ್ಯ ತಾನು ಪಡೆದ ಗೊಬ್ಬರವನ್ನು ಆ ಊರಿನ ಶ್ರೀಮಂತ ರೈತನಿಗೆ ರೂಪಾಯಿಯಂತೆ ಮಾರಿದ್ದಾನೆ

ಆದರೆ ಅದಕ್ಕೆ ತಗಲಿರುವ ವಾಸ್ತವಿಕ ಬೆಲೆ 114ರೂಗಳು. ಸಂಗ್ರಹಿಸಿದ ಈ ಗೊಬ್ಬರವನ್ನು ಶ್ರೀಮಂತ ರೈತನಿಂದ ವ್ಯವಸಾಯದ ಸಮಯದಲ್ಲಿ ಸಣ್ಣರೈತರು ಒಂದಕ್ಕೆರಡು ಬೆಲೆಕೊಟ್ಟು ಪಡೆದುಕೊಳ್ಳುತ್ತಾರೆ. ಇದರ ವಾಸ್ತವಿಕ ಲಾಭ ಯಾರಿಗೆ ? ಇನ್ನೊಂದು ಗಮನಿಸಬೇಕಾದ ಅಂಶವೆಂದರೆ, ಸಾಲ ವಸೂಲಿ ಮಾಡುವ ಸಮಯವು ಕೂಡ ಯಥೋಚಿತವಾದುದಲ್ಲ. ಸಾಲದನ್ನು ಸುಗ್ಗಿಯಲ್ಲಿ ವಸೂಲಿಮಾಡದೇ ಆಹಾರ ಪದಾರ್ಥಗಳನ್ನು ಹೆಚ್ಚು ಬೆಲೆಕೊಟ್ಟು ಕೊಂಡುಕೊಳ್ಳುವ ಸಮಯದಲ್ಲಿ ಸಾಲ ವಸೂಲಿ ಮಾಡುತ್ತಾರೆ. ಇದರಿಂದಾಗಿ ಒಬ್ಬ ಬಡರೈತ ಜೀವನ ಮಾರ್ಗಕ್ಕೆ ಇದ್ದಂತಹ ಆಸ್ತಿಯನ್ನೆ ಮಾರುವ ಸಂದರ್ಭವಿದೆ.

ಜಪ್ತಿ ಅನ್ನುವ ಕಾರ್ಯಕ್ರಮ

ಬೆಳೆಗೆ ಸರಿಯಾದ ಬೆಲೆಯಿಲ್ಲದ ಸಮಯದಲ್ಲಿ ಸಾಲ ವಸೂಲಾತಿ ಮಾಡುವುದು ರೈತರಿಗೆ ದೊಡ್ಡ ಪೆಟ್ಟು. ಮೊದಲೇ ನಷ್ಟದಲ್ಲಿ ಬೆಳೆಯುವ ರೈತ ಅತಿ ಕಡಿಮೆ ಬೆಲೆಗೆ ಬೆಳೆದದ್ದನ್ನು ಮಾರಿ ಸಾಲ ತೀರಿಸಬೇಕಾಗುತ್ತದೆ. ಹೀಗೆ ರೈತರನ್ನು ಹೆಚ್ಚು ಹೆಚ್ಚಾಗಿ

ಸಮೀಕ್ಷಕರು: ರಾ ಕ್ಷಿ

ಕೆಳಕ್ಕೆ ತಳ್ಳುವ ವಿಧಾನ ಇದಾಗಿರುತ್ತದೆ. ಅಲ್ಲದೆ ಯಾವುದೇ ನೋಟೀಸಾಗಲೀ, ಮುನ್ನೆಚ್ಚರಿಕೆಯಾಗಲೀ ಕೊಡದೆ ನೇರವಾಗಿ ಜಪ್ತಿ ಮಾಡುವ ಕ್ರಿಯೆ ರೈತನ ಮಾನನಷ್ಟಕ್ಕೆ ಕಾರಣವಾಗುತ್ತದೆ. ಹಳ್ಳಿಯ ಜೀವನದ ಪರಿಸರದಲ್ಲಿ ರೈತರು ಬದುಕುವ ಸಾಮಾಜಿಕ ವ್ಯವಸ್ಥೆಯಲ್ಲಿ ಜಪ್ತಿಯಂತಹ ಕ್ರಿಯೆ ಅವನ ಮೌಲ್ಯಗಳಿಗೆ ಹಾಗೂ ಬದುಕಿನ ಮಾರ್ಗಕ್ಕೆ ದೊಡ್ಡ ಪೆಟ್ಟು ಕೊಟ್ಟಂತಾಗುತ್ತದೆ. ಇದೊಂದು ರೀತಿಯ ಮಾನಸಿಕ ಹಿಂಸೆಯಾಗಿ ಪರಿಣಮಿಸಿ ಬದುಕಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗ ಕೂಡ ಇದೆ. 'ಉದಾಹರಣೆಗೆ ಡಿ. 10. (1981) ರಂದು ಶಿವಮೊಗ್ಗದ ಶಿಕಾರಿಪುರ ತಾಲ್ಲೂಕು ಹೊಸೂರು ಗ್ರಾಮದ ಶಿವಪ್ಪ ಬಿನ್ ಹಳಿಯಪ್ಪನಿಗೆ ಡಿ. ಸಿ. ಸಿ. ಬ್ಯಾಂಕಿನವರು ಸಾಲ ತೀರಿಸದಿದ್ದರೆ ನಿನ್ನ ಮನೆಯನ್ನು ಜಪ್ತಿ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು. ಇದು ಮಾನದ ಪ್ರಶ್ನೆ ಅನ್ನುವ ಕಾರಣದಿಂದ ಬೇರೆ ದಾರಿ ಕಾಣದೆ ಆ ದಿನ ಮಧ್ಯಾಹ್ನ 3 ಗಂಟೆಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಎಂದು ರೈತ ಸಂಘದ ನಾಯಕ ಸುಂದರೇಶ್‌ರವರು ಪತ್ರಿಕಾ ಹೇಳಿಕೆ ನೀಡಿರುವುದನ್ನು ನಾವು ನೆನೆಸಿಕೊಳ್ಳಬಹುದು'. (ಆಧಾರ : ಪಿ. ಯು. ಸಿ. ಎಲ್. ನಿಖಾ ವರದಿ 1982).

ಹಲವಾರು ಸಂದರ್ಭಗಳಲ್ಲಿ ಸಣ್ಣ ರೈತರು ಪಡೆದುಕೊಂಡ ಸಾಲಕ್ಕೆ ಸಮನಾದ ಅಥವಾ ಅದಕ್ಕಿಂತ ಹೆಚ್ಚಿನ ಬಡ್ಡಿಯನ್ನು ಕೊಟ್ಟಿರುವ ಪ್ರಕರಣಗಳಿವೆ. ಹಾಸನದ ಕಟ್ಟಾಯ ಹೋಬಳಿ ನಾಯಕನ ಹಳ್ಳಿ ಚನ್ನೇಗೌಡ ಬಿನ್ ಚನ್ನೇಗೌಡನ ಉದಾಹರಣೆಯನ್ನೇ ನೋಡೋಣ. ಇವನು 1976 ರಲ್ಲಿ 3000 ರೂಪಾಯಿ ಅಲ್ಪಾವಧಿ ಸಾಲ ತೆಗೆದುಕೊಂಡ. ಈ ಸಾಲಕ್ಕೆ ಪ್ರತಿಯಾಗಿ ಇವನು ಬಡ್ಡಿ ಕಟ್ಟಿರುವ ಹಣ 4600 ರೂಪಾಯಿಗಳು. ಈತ ಒಬ್ಬ ಸಣ್ಣ ರೈತ. ಇಂತಹ ಉದಾಹರಣೆಗಳು ಲೆಕ್ಕವಿಲ್ಲದಷ್ಟು. ಹೀಗೆ ಬಡರೈತರು ಸಾಲದ ಹೆಚ್ಚಿನ ಭಾಗವನ್ನು ಬಡ್ಡಿಯ ರೂಪದಲ್ಲಿ ತುಂಬಿಸಿಕೊಟ್ಟಿದ್ದಾರೆ. ಹೀಗೆ ಸರ್ಕಾರ ರೂಪಿಸಿದ ಈ ಸಾಲದ ಯೋಜನೆಯನ್ನೇ ಪ್ರಾಮಾಣಿಕವಾಗಿ ನಡೆದುಕೊಂಡ ಸಣ್ಣ ಹಿಡುವಳಿದಾರರು ಸಾಲ ತೀರಿಸಿದ್ದರೂ ಕೂಡ ದೊಡ್ಡ ರೈತರು ಸಾಲ ತೀರಿಸದಿರುವುದರಿಂದ ಇವರಿಗೆ ಮರು ವ್ಯವಸಾಯಕ್ಕೆ ಸಾಲ ದೊರಕದೆ ಸಂಕಷ್ಟಗಳನ್ನು ಅನುಭವಿಸುವ ಸಮಯ ಒದಗಿಬಂದಿದೆ. ಏಕೆಂದರೆ ಶೇಕಡ 60 ಭಾಗದ ಸಾಲವನ್ನು ಆ ಸಹಕಾರಿ ಸಂಘ ವಸೂಲಿ ಮಾಡದಿದ್ದರೆ ಅದನ್ನು ಅಮಾನತ್ತಿನಲ್ಲಿಡಲಾಗುತ್ತದೆ. ಈ ಎಲ್ಲ ತೊಂದರೆಗಳ ಸಲುವಾಗಿ ಸಣ್ಣ ರೈತರು ಬ್ಯಾಂಕೇತರ ಮೂಲಗಳಿಂದಲೇ ಸಾಲ ಪಡೆದುಕೊಳ್ಳುತ್ತಾರೆ. 'ಬ್ಯಾಂಕೇತರ ಮೂಲಗಳೆಂದರೆ, ಬಡ್ಡಿಸಾಲ, ಮಾರ್ವಾಡಿ ಸಾಲ, ದೊಡ್ಡ ರೈತರಿಂದ ಸಾಲ ಮುಂತಾದ ವಿಧಾನಗಳಿಂದ. ಶೇಕಡ 90 ಸಣ್ಣ ರೈತರು ಹಾಗೂ ಭೂಹೀನರು ಇಂತಹ ಸಾಲ ಪಡೆಯುತ್ತಾರೆ' ಎಂದು GAILOMDVT ರವರು ಹೇಳುವ ಮಾತು ನಿಜ ಎನಿಸುತ್ತದೆ.

ಹೀಗೆ ಸರ್ಕಾರ ಬಡ ರೈತರ ದರ್ದನ್ನು ತೀರಿಸುವ ಉದ್ದೇಶದಿಂದ ಪ್ರಾರಂಭಿಸಿದ ಸಹಕಾರಿ ಬ್ಯಾಂಕುಗಳು ಇವರಿಗೆ ಕಾಲುತೊಡಕಾಗಿ ಇವರನ್ನು ಹೆಚ್ಚು ಹೆಚ್ಚಾಗಿ ನೆಲಕ್ಕೆ ತುಳಿದ ಸಂಗತಿಗಳು ಸ್ಪಷ್ಟವಾಗುತ್ತದೆ.

ಹರಿಜನರ ಕೈಗೆ ಎಟುಕದ ಸಹಕಾರಿ ಬ್ಯಾಂಕುಗಳು

ಹತ್ತಾರು ಶತಮಾನಗಳಿಂದ ತುಳಿತಕ್ಕೊಳಗಾಗಿ ಕ್ಷುದ್ರವಾದ ಬಾಳನ್ನು ಸಾಗಿಸುವ ಹರಿಜನ/ಗಿರಿಜನರ ಬಾಳನ್ನು ಹಸನು ಮಾಡಬೇಕು ಅನ್ನುವ ಮೇಲ್ನೋಟದ ಉದ್ದೇಶದಿಂದ ಇವರಿಗೆ ಶೇಕಡ 40 ಭಾಗದ ಸಬ್ಸಿಡಿ ಇರುವ ಸಾಲವನ್ನು ಒದಗಿಸುವ ಯೋಜನೆ ಹಾಕಲಾಯಿತು. ಇವರಿಗಾಗಿ ಮುಂತಾದ ಕಡಿಮೆ ಬಡ್ಡಿಯ ಸಾಲ

ಸರ್ಕಾರ ರೈತನ ಸಾಲಗಾರ ; ರೈತ ದಲಿತನ ಸಾಲಗಾರ

ಲೆವಿ ಮತ್ತು ವ್ಯಾಪಾರಗಳ ಮೂಲಕ ರೈತರಿಂದ ಮೊದಲೆ 4,000 ಕೋಟಿ ರೂಪಾಯಿ ದರೋಡೆ ಮಾಡಿರುವ ಸರ್ಕಾರವೇ ರೈತನಿಗೆ ಸಾಲಗಾರನಾಗಿದೆ. ಆದ್ದರಿಂದ ರೈತರು ಸರ್ಕಾರಕ್ಕೆ ಕೊಡಬೇಕಾಗಿರುವ ೧೦೦ ಕೋಟಿ ರೂ. ಸಾಲವನ್ನು ಮನ್ನಾ ಮಾಡಬೇಕೆಂದು ವಾದಿಸುವ ಕರ್ನಾಟಕ ರೈತಸಂಘ ಈ ಬಗ್ಗೆ ಚಳುವಳಿ ರೂಪಿಸಿ ರೈತರು ಸಾಲ ಮರುಪಾವತಿ ಮಾಡಬಾರದೆಂದು ಕರೆ ನೀಡಿತು. ಆದರೆ ಈ ಕರೆಗೆ ರೈತರ ಪ್ರತಿಕ್ರಿಯೆ ಏನು? ಸಮೀಕ್ಷೆ ಇಲ್ಲಿದೆ.

ಕರ್ನಾಟಕದ ಬಹುಭಾಗಗಳಲ್ಲಿ ಬೆಳೆಯುತ್ತಿರುವ ರೈತಸಂಘ ಹಲವಾರು ಬೇಡಿಕೆಗಳನ್ನು ಮುಂದಿಟ್ಟು ಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಬೇಡಿಕೆಗಳು ಗೌಣವಾಗಿ ಒಂದೇ ಬೇಡಿಕೆಯ ಸುತ್ತ ಇವರ ಒತ್ತಡ ಬಿದ್ದಂತೆ ಕಾಣುತ್ತಿದೆ. ಆ ಬೇಡಿಕೆಯೆಂದರೇ, ಸಹಕಾರಿ ಬ್ಯಾಂಕು ಮುಂತಾದುವುಗಳಿಂದ ಪಡೆದ ಸಾಲವನ್ನು ಮನ್ನಾಮಾಡಿ ಎನ್ನುವುದು. ಈ ಬೇಡಿಕೆ ಎಲ್ಲಾ ರೈತರ ಗಮನವನ್ನು ಸೆಳೆದಿರುವುದರಿಂದ, ಹೆಚ್ಚು ರೈತರನ್ನು ಆಕರ್ಷಿಸಿರುವುದರಿಂದ ಇದು ಸೂಕ್ತ ಬೇಡಿಕೆ ಎನ್ನುವುದು ಅವರ ಅನಿಸಿಕೆಯಾಗಿದೆ. ಆದರೆ ಈ ಸಹಕಾರಿಬ್ಯಾಂಕುಗಳ ಸಾಲದ ಸುತ್ತಯಿರುವ ಸಂಕೀರ್ಣ ಗೊಂದಲಗಳನ್ನು ವಿವರವಾಗಿ ಅರ್ಥ ಮಾಡಿಕೊಳ್ಳದ ಹೊರತು ಇದರಲ್ಲಿರುದ ಅನುಕೂಲತೆಗಳನ್ನು ಮತ್ತು ಅನಾನುಕೂಲತೆಗಳನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಈ ಬಗ್ಗೆ ಆಸಕ್ತಿವಹಿಸಿ ಸಾಲದ ಸುತ್ತಯಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ನಾವು ರೈತಸಂಘ ಪ್ರಭಲವಾಗಿರುವ ಹಾಸನ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಪರಿಶೀಲನೆ ನಡೆಸಿದೆವು. ಅಲ್ಲಿ ವಿವಿಧ ವರ್ಗದ ರೈತರಿಗೆ ದೊರಕಿರುವ ಸಾಲದ ಬಗ್ಗೆ, ಸಾಲದ ಎರಡುಪಟ್ಟು ಬಡ್ಡಿಕಟ್ಟಿ ಸಾಲಮನ್ನಾ ಆಗದ ರೈತರ ಬಗ್ಗೆ ಸಾವಿರಾರು ರೂಪಾಯಿ ಸಾಲ ತೆಗೆದುಕೊಂಡು ಸಾಲ ವಾಪಸ್ಸು ಮಾಡದ ದೊಡ್ಡ ರೈತರ ಬಗ್ಗೆ ಮಾಹಿತಿಸಂಗ್ರಹಿಸಿ ಈ ಲೇಖನ ಬರೆಯುತ್ತಿದ್ದೇವೆ.

ಗ್ರಾಮೀಣ ಸಹಕಾರಿ ಬ್ಯಾಂಕುಗಳು

ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿ ಮಾತನಾಡುತ್ತಿದ್ದ ಸರ್ಕಾರ ಅಲ್ಲಿರುವ ರೈತರ ಸಂಪನ್ಮೂಲಗಳನ್ನು ಹೆಚ್ಚಿಸುವ, ಆರ್ಥಿಕವಾಗಿ ಅವರಿಗೆ ಅನುಕೂಲವಾಗುವ ಯೋಜನೆಗಳ ಬಗ್ಗೆ ಚಿಂತಿಸಿ ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಕೊಂಡಿತು. ಅಂತಹವುಗಳಲ್ಲಿ ರೈತರಿಗೆ ವ್ಯವಸಾಯೋತ್ಪಾದನೆಯಲ್ಲಿ ತೀರ ಅಗತ್ಯವಾಗಿ ಬೇಕಾಗುವ ಸಾಲ ದೊರಕಿಸಿ ಕೊಡುವ ಯೋಜನೆಯು ಒಂದು. 1950 ರ ವೇಳೆಗೆ ರಿಸರ್ವ್ ಬ್ಯಾಂಕು ಕರ್ನಾಟಕದಲ್ಲಿ 'ರೂರಲ್ ಕ್ರೆಡಿಟ್ ಸರ್ವೆ' ಗ್ರಾಮೀಣ ಸಾಲವನು ಕೊಡುವ ಬಗ್ಗೆ ಒಂದು ಸಮೀಕ್ಷೆ ನಡೆಸಿ ಕೆಲವು ಸಲಹೆಗಳನ್ನು ನೀಡಿತು. ಈ ಸಮೀಕ್ಷೆಯಲ್ಲಿ ಆಯ್ಕೆ ಮಾಡಿಕೊಂಡ ಮೂರು ಜಿಲ್ಲೆಗಳೆಂದರೆ, ಬೆಂಗಳೂರು, ಮೈಸೂರು ಮತ್ತು ಹಾಸನ.

ಈ ಸಮೀಕ್ಷೆಯ ಆಧಾರದ ಮೇಲೆ ಭೂಮಾಲೀಕರ ಬಡ್ಡಿಯಹಣದ ವಿಷವರ್ತುಲದಲ್ಲಿ ಸಿಕ್ಕಿ ತೊಳಲಾಡುತ್ತಿದ್ದ ರೈತರನ್ನು ವಿಮುಕ್ತಿಮಾಡಲು ಕೆಲವು ಸಲಹೆಗಳನ್ನು ಮಂಡಿಸಿತು. ಅದರಲ್ಲಿ ಈ ಗ್ರಾಮೀಣ ಸಹಕಾರಿ ಬ್ಯಾಂಕು ಕೂಡಾ ಒಂದು. ಈಗ ಗ್ರಾಮೀಣ ಬ್ಯಾಂಕಿನ ರಚನೆಯನ್ನು ನೋಡೋಣ.

ಈ ಸಹಕಾರಿ ಬ್ಯಾಂಕನ್ನು ಮೂರು ಹಂತಗಳಲ್ಲಿ

ಸಮೀಕ್ಷೆ

ಅರ್ಥ ಮಾಡಿಕೊಳ್ಳಬಹುದು. ಅತ್ಯಂತ ಮೇಲು ಹಂತದಲ್ಲಿರುವ ಬ್ಯಾಂಕೆಂದರೆ, ಅಪೆಕ್ಸ್ ಬ್ಯಾಂಕು. ಇದು ರಾಜ್ಯ ಮಟ್ಟದಲ್ಲಿ ಕಾರ್ಯಾಚರಣೆ ಮಾಡುತ್ತಿರುವುದು. ಇಲ್ಲಿ ಶೇಕಡಾ 50ಶೇರುಗಳು ರಾಜ್ಯ ಸರ್ಕಾರದ್ದಾಗಿರುತ್ತವೆ. ಇನ್ನುಳಿದ ಶೇಕಡಾ 20 ಖಾಸಗಿಯವಾಗಿರುತ್ತವೆ.

ಎರಡನೇಯದು ಜಿಲ್ಲಾ ಹಂತದಲ್ಲಿರುವ ಡಿ. ಸಿ. ಸಿ. ಬ್ಯಾಂಕು. ಇದು ಗ್ರಾಮಮಟ್ಟದಲ್ಲಿರುವ ಸಹಕಾರಿ ಬ್ಯಾಂಕುಗಳಿಗೆ ಹಣ ಮತ್ತು ವ್ಯವಸಾಯೋತ್ಪನ್ನ ಸಲಕರಣೆಗಳ ರೂಪದಲ್ಲಿ ಒದಗಿಸಿಕೊಡುತ್ತದೆ. ಇನ್ನು ಮೂರನೇ ಹಂತದಲ್ಲಿರುವ ಗ್ರಾಮಾಂತರ ಸಹಕಾರಿ ಬ್ಯಾಂಕುಗಳು ಹಳ್ಳಿಗಾಡಿನ ಜನಜೀವನದಲ್ಲಿ ಯಾವ ರೀತಿ ಪಾತ್ರ ವಹಿಸುತ್ತವೆ ಅನ್ನುವುದು ಇಲ್ಲಿ ಮುಖ್ಯವಾದ ವಿಷಯ.

ಆಯಾ ಗ್ರಾಮಗಳಲ್ಲಿರುವ ಸಹಕಾರಿ ಬ್ಯಾಂಕುಗಳಲ್ಲಿ ಇಂತಿಷ್ಟು ಶೇರು ಹಣವನ್ನು ಸಂಗ್ರಹಿಸಿ ಈ ಬ್ಯಾಂಕುಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇಲ್ಲಿ ಶೇರುದಾರರಿಂದ ಚುನಾಯಿಸಲ್ಪಟ್ಟ ಒಂಬತ್ತರಿಂದ ಹನ್ನೊಂದುಮಂದಿ ಡೈರಕ್ಟರುಗಳಲ್ಲಿ ಒಬ್ಬ ಅಧ್ಯಕ್ಷ ಹಾಗೂ ಇಬ್ಬರು ಕಾರ್ಯದರ್ಶಿಗಳಿರುತ್ತಾರೆ. ಇದರಲ್ಲಿ ಒಬ್ಬ ಸರ್ಕಾರದಿಂದ ನೇಮಕಗೊಂಡ ಕಾರ್ಯದರ್ಶಿಯಾಗಿರುತ್ತಾರೆ. ಸೂಕ್ತವಾದ ರೀತಿಯಲ್ಲಿ ಹಣವಿತರಣೆ ಮಾಡುವ ಮತ್ತು ವಸೂಲು ಮಾಡುವ ಜವಾಬ್ದಾರಿ ಇವರದಾಗಿರುತ್ತದೆ.

ಡೈರಕ್ಟರುಗಳ ಕೈವಾಡ

ಸಾಮಾನ್ಯವಾಗಿ ಆಯ್ಕೆಯಾಗುವ ಡೈರೆಕ್ಟರುಗಳು ಜಾತೀಯ ಮತ್ತು ಆರ್ಥಿಕ ದೃಷ್ಟಿಯಿಂದ ಪ್ರಭಲರಾದವರಾಗಿರುತ್ತಾರೆ. ಸಾಲ ವಿತರಣೆ ಮಾಡುವಲ್ಲಿ ಇವರ ಕೈವಾಡ ಅಧಿಕವಾಗಿರುವುದರಿಂದ ತಮಗೆ ಬೇಕು ಬೇಕಾದ ಜನಗಳಿಗೆ ಸಾಲ ಒದಗಿಸುವಲ್ಲಿ ಇವರು ಚುರುಕಾಗಿರುತ್ತಾರೆ. ಇದೆಷ್ಟೆ ಅಲ್ಲದೆ ಡೈರಕ್ಟರುಗಳೇ ನೇರವಾಗಿ ದೊಡ್ಡಮೊತ್ತದ ಸಾಲ ಪಡೆದವರಾಗಿರುತ್ತಾರೆ. ಇವರು ಒಬ್ಬೊಬ್ಬರೇ ಹಲವಾರು ಜನರ ಹಲವಾರು ಖಾತೆಗಳ ಆಧಾರದ ಮೇಲೆ ಸಾವಿರಾರು ರೂಪಾಯಿ ಸಾಲ ಪಡೆದುಕೊಂಡಿರುತ್ತಾರೆ. ಇದಷ್ಟೆ ಅಲ್ಲದೆ ವಿವಿಧರೀತಿಯ ಸಾಲಗಳನ್ನು ಲಪಟಾಯಿಸುತ್ತಾರೆ. ಸಾಲ ಹಿಂತಿರುಗಿಸುವಲ್ಲಿಯೂ ಇವರು ತಪ್ಪಿತಸ್ಥರಾಗಿರುತ್ತಾರೆ. ಡೈರಕ್ಟರುಗಳಷ್ಟೆ ಅಲ್ಲ ಇತರ ದೊಡ್ಡ ರೈತರು ಸಾಲ ಹಿಂದಿರುಗಿಸದ (Will ful Defaulters) ವರಾಗಿರುತ್ತಾರೆ. 1982–83ರ ಲೆಕ್ಕಚಾರವನ್ನೇ ನೋಡೋಣ. ಹಾಸನ ಜಿಲ್ಲೆಯಲ್ಲಿ ಸಣ್ಣ ರೈತರು 53.79 ಲಕ್ಷ ರೂ.ಗಳನ್ನು ಹಿಂದಿರುಗಿಸಿದ್ದಾರೆ. ದೊಡ್ಡ ರೈತರು ಕೇವಲ 27.80 ಲಕ್ಷ ರೂ.ಗಳನ್ನು ಮಾತ್ರ ಹಿಂತಿರುಗಿಸಿದ್ದಾರೆ. ಸಣ್ಣ ಹಿಡುವಳಿದಾರರು ತಾವು ಪಡೆದುಕೊಂಡ ಸಾಲವನ್ನು ತೀರಿಸಲು ಅಸಮರ್ಥರಿದ್ದರೂ ಕೂಡ ಈಗಾಗಲೇ ಹೆಚ್ಚಿನ ಮೊತ್ತದ ಸಾಲವನ್ನು ಹಿಂತಿರುಗಿಸಿದ್ದಾರೆ. ಆದರೆ ದೊಡ್ಡ ರೈತರು ಸಾಲವನ್ನು ಹಿಂತಿರುಗಿಸಲು ಸಾಧ್ಯವಿದ್ದರೂ ಹಿಂತಿರುಗಿಸದೇ ಪಟ್ಟು ಹಿಡಿದಿದ್ದಾರೆ. ಸಹಕಾರಿ ಬ್ಯಾಂಕಿನ ಅಧಿಕಾರಿಗಳು ಇವರನ್ನು Will ful Defaulters ಎಂದು ಕರೆಯುತ್ತಾರೆ. ಈ ಡೈರೆಕ್ಟರು ಮತ್ತು ದೊಡ್ಡ ರೈತರ ಇನ್ನೊಂದು ಮುಖವನ್ನು ನೋಡುವ ಅಗತ್ಯವಿದೆ. ವಿಪರ್ಯಾಸವೆಂದರೆ ಗ್ರಾಮೀಣ ಮಟ್ಟದಲ್ಲಿರುವ ಕರ್ನಾಟಕ ರೈತಸಂಘದಲ್ಲಿ ಇವರೇ ನಾಯಕತ್ವ ವಹಿಸಿದವರಾಗಿರುತ್ತಾರೆ. ಒಂದು ಕಡೆ ಬ್ಯಾಂಕಿನ ಡೈರಕ್ಟರುಗಳಾಗಿ ಸಾಲ ವಸೂಲು ಮಾಡುವ ಜನರಾಗಿದ್ದರೆ, ಇನ್ನೊಂದು ಕಡೆ ರೈತ

ಗೆ ರೈತರ ಸಮಸ್ಯೆ ಸಾಮಾಜಿಕ ಸಂಘಟನೆಯ ದೃಷ್ಟಿಯಿಂದ ಅಷ್ಟು ಮಹತ್ವವಿರಲಿಲ್ಲ. ಅವನಿಗೆ, ಉದಾರವಾದೀ ಅರ್ಥಶಾಸ್ತ್ರಜ್ಞರಂತೆ ಮಾನವನ ಹಸಿವಿಗೆ ಉತ್ತರ ಬೇಕಿತ್ತು. ಪ್ರೌಧಾನ್‌ನಂಥವರು ಮೊದಮೊದಲು ಮಾರ್ಕ್ಸ್‌ನ ಅಭಿಪ್ರಾಯಗಳನ್ನು ಪುಷ್ಟೀಕರಿಸಿದರೂ, ಮಾರ್ಕ್ಸ್ ತನ್ನ ಜೊತೆ ಸೇರಿ ಇದರ ಬಗ್ಗೆ ಆಳವಾಗಿ ಚಿಂತಿಸುವುದಕ್ಕೆ ನೀಡಿದ ಕರೆಯನ್ನು ಆತ ತಿರಸ್ಕರಿಸಿದ್ದು ಆಶ್ಚರ್ಯವೆನಿಸುತ್ತದೆ. ಭಾರತದ ರೈತ ಆರ್ಥಿಕ ಪದರುಗಳಷ್ಟೇ ಅಲ್ಲ ಜಾತೀಯ ಪದರುಗಳಲ್ಲೂ ಸೊರಗಿದ್ದಾನೆ. ಬಹುಶಃ ಮಾರ್ಕ್ಸ್ ಬಯಸಿದ್ದ ರೈತ ಸಂಘಟನೆಗಳು ಜಾತಿಯನ್ನು ಮೀರಿದ ಹೋರಾಟವನ್ನು ನಡೆಸಲು ಸಾಧ್ಯವಾಗಬಹುದು. ಆದರೆ ಅಂಥ ಸಂಘಟನೆಗಳು ಈ ನೆಲದಲ್ಲಿ ಊರ್ಜಿತಗೊಳ್ಳಲಾರವು. ಊರ್ಜಿತಗೊಳ್ಳಬೇಕಾದರೆ ಮೇಲ್ಜಾತಿಯ ಆ ಮೂಲಕ ಭೂಮಾಲೀಕ ಮರ್ಜಿಗೆ ಒಳಗಾಗಬೇಕು.

ಮೂಲಭೂತವಾಗಿ ಅಂಥ ಸಂಘಟನೆಗಳು ಗಟ್ಟಿಯಾಗಿ ಕೆಳಸ್ತರದಿಂದ ರೂಪುಗೊಳ್ಳಬೇಕು. ಅದಕ್ಕೆ ತಕ್ಕ ಪರಿಸರದ ಅಧ್ಯಯನ ನಡೆಯಬೇಕು. ಭೂಮಿ, ಅದರ ಗುಣ ಮತ್ತು ಮನುಷ್ಯನ ಸಂಬಂಧಗಳು ಇಲ್ಲಿ ಮೊದಲು ಮುಖ್ಯ. ನಂತರ ಉತ್ಪಾದಿತ ವಸ್ತುಗಳಿಗೆ ದೊರಕುವ ಮಾರುಕಟ್ಟೆ. ಪ್ರಸ್ತುತ ರೈತ ಸಂಘಟನೆ ಇನ್ಯಾವುದರ ಬಗ್ಗೆಯೂ ಗಂಭೀರವಾದ ಗಮನ ಹರಿಸಿಲ್ಲ ಅನ್ನಿಸುತ್ತದೆ. ಮೊದಲಿಗೆ ಈ ರೈತ ಸಂಘಟನೆಗೆ ತನ್ನ ಕ್ಯಾಡರ್‌ಗಳನ್ನೇ ತಯಾರು ಮಾಡಲಾಗಿಲ್ಲ ಎಂಬುದು ಪ್ರಮುಖ ಸಂಗತಿ. ಇದರಿಂದಾಗಿ ಅರಾಜಕತೆ ಸಂಘಟನೆಯಲ್ಲಿ ಕಂಡುಬರುತ್ತಿದೆ ಎಂಬುದಕ್ಕೆ ಅನೇಕ ಘಟನೆಗಳು ಸಾಕ್ಷಿಯಾಗಿವೆ. ಅಧಿಕಾರಿಗಳ ವಿರುದ್ಧ ಕೂಗುವುದು, ಸಾಧ್ಯವಾದರೆ ಬಡಿಯುವುದು, ಊರೊಳಗೆ ಬಾರದಿರಿ ಎಂದು ಬೋರ್ಡ್ ಹಾಕುವುದು, ರೈತ ಸಂಘಟನೆಯ ಹೆಸರಿನಲ್ಲಿ ತಮಗಾಗದವರನ್ನು ತುಳಿಯುವುದು, ಊರಿನ ಕೃಷಿ ಕಾರ್ಮಿಕರನ್ನು ಬೆದರಿಸಿ ತಮ್ಮ ಇಷ್ಟಕ್ಕೆ ತಕ್ಕಂತೆ ನಡೆಸಿಕೊಳ್ಳುವುದು ರೈತ ಸಂಘಟನೆಯ ಕ್ರಿಯೆಗಳಾದರೆ ಅವರು ತಲುಪಿರುವ ಹತಾಶ ಸ್ಥಿತಿಯನ್ನು ಅದು ತೋರಿಸುತ್ತದೆ. ಅಥವಾ ಹತಾಶ ಸ್ಥಿತಿಯಿಂದಲೇ ಸಂಘಟನೆ ಪ್ರಾರಂಭಿಸಿ ಅರಾಜಕತೆಗೆ ದಾರಿ ಮಾಡಿಕೊಡುತ್ತಿದ್ದಾರೆ. ಇದು ರೈತರನ್ನು ಹಾಗೂ ಅಧಿಕಾರಿಗಳನ್ನು ಎದುರುಬದುರು ನಿಲ್ಲಿಸಿ ತೊಡೆ ತಟ್ಟುವ ಕೆಲಸ ಅಲ್ಲ. ಇದಕ್ಕೆ ಬೇಕಾದ ಸಮಗ್ರ ಬದಲಾವಣೆ ಪ್ರಾರಂಭವಾಗಬೇಕಾಗಿರುವುದು ನಿಜವಾದ ರೈತರ ಮಟ್ಟದಲ್ಲಿ. ನಿಜವಾದ ರೈತರು ಇಂದು ನಿಧಾನವಾಗಿ ಕಣ್ಮರೆಯಾಗುತ್ತಿದ್ದಾರೆ. ಸಣ್ಣ ಹಿಡುವಳಿದಾರನ ಭೂಮಿ ಭಾರೀ ಹಿಡುವಳಿದಾರನಿಂದ ಪಡೆದ ಸಾಲಕ್ಕೆ ಪಾವತಿಯಾಗುತ್ತಿದೆ. ಅದರ ಫಲವಾಗಿ ಸಣ್ಣ ಹಿಡುವಳಿದಾರ ಹಾಗೂ ಮಧ್ಯಮಾವಧಿ ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ ಅಥವಾ ಹಣ ಇಲ್ಲದೆ ಭೂಮಿಯ ಗುಣಮಟ್ಟ ಕಾಯ್ದುಕೊಳ್ಳಲಾರದೆ ಹೆಣಗುತ್ತಿದ್ದಾರೆ. ಅವರ ಸ್ಥಾನವನ್ನು ಭಾರೀ ಭೂಮಾಲೀಕರು ಆಕ್ರಮಿಸಿಕೊಳ್ಳುತ್ತಿದ್ದಾರೆ. ಇದು ಸಮಸ್ಯೆ. ಸಂಘಟನೆ ಚಳುವಳಿ ಪ್ರಾರಂಭವಾಗಬೇಕಾಗಿರುವುದು ಇಲ್ಲಿಂದ.

ನಾವು ಸಂಘಟಿಸಬೇಕಾದದ್ದು 'ಉಳುವವ'ನನ್ನೆ ಹೊರತು, 'ಉಳಿಸುವವ'ನನ್ನಲ್ಲ.

ಮಂಡ್ಯ ತಾಲ್ಲೂಕು ಅಭಿವೃದ್ಧಿ ಮಂಡಲಿ ವತಿಯಿಂದ ಸ್ಥಾಪಿಸಿದ ಪ್ರಗತಿ ಮತ್ತು ಕಾರ್ಯಕ್ರಮಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ತೆಗೆದುಕೊಂಡ ಕಾಮಗಾರಿಗಳು

		82—83	83—84
1.	ಶಾಲಾ ಕಟ್ಟಡಗಳು	18	—
2.	ಸಮುದಾಯ ಕಟ್ಟಡಗಳು	5	—
3.	ಪಂಚಾಯಿತಿ ಕಟ್ಟಡಗಳು	13	—
4.	ಸಮುದಾಯ ಕಟ್ಟಡಗಳು (ಹರಿಜನ ಕಾಲೋನಿಯಲ್ಲಿ)	4	1
5.	ಗ್ರಾಮ ನೈರ್ಮಲ್ಯ ಕೆಲಸಗಳು	11	9
6.	ರಸ್ತೆ ಕೆಲಸಗಳು	112	49
7.	ಗೋ ಕಟ್ಟೆಗಳು	77	—
8.	ಪಶುವೈದ್ಯಶಾಲಾ ಕಟ್ಟಡಗಳು	2	1
9.	ಗ್ರಾಮಲೆಕ್ಕಿಗರ ವಸತಿ ಗೃಹ	—	6
10.	ಜನತಾ ವಸತಿ ಗೃಹ	—	5
	ಒಟ್ಟು	229	71

ಖರ್ಚಾದ ಒಟ್ಟು ಹಣ ರೂ. 9 ಲಕ್ಷದ 85,000, ಧಾನ್ಯ 750 ಕ್ವಿಂಟಾಲ್, ವ್ಯಯ ಮಾಡಿರುತ್ತೆ. ಮೇಲ್ಕಂಡ ಕಾಮಗಾರಿಗಳಲ್ಲಿ ಒಟ್ಟು 10732 ಮಾನವ ದಿನಗಳ ಕೆಲಸ ಒದಗಿಸಲಾಯಿತು. 4,35850 00 ರೂ. ಖರ್ಚು ಮಾಡಿರುತ್ತೆ. ಮತ್ತು 83-84 ರ ಸಾಲಿನಲ್ಲಿ ಈವರೆಗೆ 4350/- ರೂ.ಗಳನ್ನು ಖರ್ಚು ಮಾಡಿರುತ್ತೆ. ಮತ್ತು 40580 ಮ್ಯಾನ್‌ಡೇಸ್‌ಗೆ ಕೂಲಿ ಒದಗಿಸಲಾಗಿದೆ.

ತಾಲ್ಲೂಕು ಅಭಿವೃದ್ಧಿ ಮಂಡಲಿ ಕಾಮಗಾರಿಗಳು :

1.	ರಸ್ತೆ ಮತ್ತು ಸೇತುವೆ	150
2.	ಮೂತ್ರ ಕೋಣೆಗಳು	10
3.	ಬಸ್ ನಿಲ್ದಾಣಗಳು	15
4.	ಸಮುದಾಯ ಕಟ್ಟಡಗಳು	1
5.	ಸಣ್ಣ ನೀರಾವರಿ	6
6.	ಶಾಲಾ ಕಟ್ಟಡಗಳು	2

ಹೀಗೆ ಒಟ್ಟು 184 ಕೆಲಸಗಳನ್ನು ತೆಗೆದುಕೊಂಡಿದ್ದು 305653/- ರೂ.ಗಳನ್ನು ಖರ್ಚು ಮಾಡಲಾಗಿದೆ.

ಹರಿಜನ ಕಲ್ಯಾಣಕ್ಕಾಗಿ ಖರ್ಚಾದ ಹಣ :

ಶೇ. 18 ಭಾಗದ ಹಣ141152/- ರೂ.ಗಳನ್ನು ಆಳವಡಿಸಿಕೊಂಡಿದ್ದು ಆ ಬಾಬ್ತು 1982-83 ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದ 16ಶಿಶುವಿಹಾರಗಳನ್ನು ನಡೆಸಲಾಗುತ್ತಿದೆ. ಅವರಿಗೆ ವಸ್ತ್ರಗಳನ್ನು ಒದಗಿಸಲಾಗಿದೆ. ವಸತಿ ಗೃಹಗಳಿಗೆ ವಿದ್ಯುತ್‌ಸೌಲಭ್ಯ30 ಹರಿಜನ ಕುಟುಂಬಗಳಿಗೆ ಒದಗಿಸಲಾಗಿದೆ. ಒಟ್ಟು ಹಣ 1,17,977 ರೂ.ಗಳನ್ನು ಖರ್ಚು ಮಾಡಲಾಗಿದೆ. 1983-84 ನೇ ಸಾಲಿನಲ್ಲಿ 1,40,191 ರೂ.ಗಳನ್ನು ಹರಿಜನ ಕಲ್ಯಾಣಕ್ಕಾಗಿ ಮುಡುಪಾಗಿಡಲಾಗಿದೆ.

ಜನತಾ ಮನೆಗಳು :

1.	ಹುಡ್ಕೊ ಯೋಜನೆಯಲ್ಲಿ	270
2.	ಬ್ಯಾಂಕ್ ನೆರವು	300
3.	ಕಡಿಮೆ ವೆಚ್ಚದ ಮನೆಗಳು	220
	ಒಟ್ಟು	790

ಮೇಲಿನ ಯೋಜನೆಯಲ್ಲಿ 745 ಮನೆಗಳನ್ನು ಪೂರ್ಣ ಮುಗಿಸಿ ರೂ. 21,7500 ಹಣ ಖರ್ಚು ಮಾಡಲಾಗಿದೆ. ನಿವೇಶನರಹಿತ 10273 ಗುರುತಿಸಿದ್ದು ಅವರಲ್ಲಿ ಇದುವರೆವಿಗೆ 9785 ಜನರಿಗೆ ಹಂಚಲಾಗಿದೆ. ತಾಲ್ಲೂಕಿನಲ್ಲಿ 71 ಜನ ಜೀತ ವಿಮುಕ್ತರಿಗೆ ತಲಾ 4000 ರೂ.ಗಳಂತೆ 2,84000 ರೂ.ಗಳನ್ನು ಖರ್ಚು ಮಾಡಲಾಗಿದೆ.

ಭಾಗ್ಯಜ್ಯೋತಿ ಯೋಜನೆ : ಈ ಯೋಜನೆಯಲ್ಲಿ ಈ ಸಾಲಿನಲ್ಲಿ 180 ಪ್ರಯೋಜನದಾರರಿಗೆ ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ದೀಪಗಳನ್ನು ಹಾಕಿಸಲು ಆಯ್ಕೆ ಮಾಡಲಾಗಿದೆ. ಮೇಲ್ಕಂಡ ಯೋಜನೆಗಳ ಬಗ್ಗೆ ವಿವರಕ್ಕಾಗಿ ಸಾರ್ವಜನಿಕರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಗೆ ಒಮ್ಮೆ ಭೇಟಿ ಕೊಡಿ.

ಎಸ್. ಮಹಾದೇವಯ್ಯ ಕೆ. ಎ. ಎಸ್.
ಆಡಳಿತಾಧಿಕಾರಿಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ
ಮಂಡ್ಯ ಜಿಲ್ಲೆ

ಡಿ. ಪ್ಯಾಟ್ರಿಕ್
ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ
ತಾ. ಅ. ಸ. ಮಂಡ್ಯ

ಮಾತು–ಕತೆ


ದೇಮ : ರೈತ ಸಂಘದಲ್ಲಿ ಲಿಂಗಾಯಿತ ಒಕ್ಕಲಿಗ ಜನತೆಯೇ ಹೆಚ್ಚಾಗಿದ್ದು ಈ ರೈತ ಜನಸ್ತೋಮವು ಅಸ್ಪೃಶ್ಯ ಜನಾಂಗವನ್ನು ಅವಮಾನಿಸುತ್ತ, ವಂಚಿಸುತ್ತ. ತುಳಿಯುತ್ತ, ಕೊಲ್ಲುತ್ತ ಬರುತ್ತಿರುವ ಜಟಿಲ ಪರಿಸ್ಥಿತಿಯನ್ನು ಮಾನವೀಯಗೊಳಿಸುವ ಕಡೆ ತಮ್ಮ ಚಿಂತನೆ, ಕಾರ್ಯಕ್ರಮಗಳೇನು ?

ನಂ. ಸ್ವಾಮಿ : ನಮ್ಮ ಹಳ್ಳಿಯ ಆಸ್ತಿ ಸಂಬಂಧವನ್ನು ಬದಲಾವಣೆ ಮಾಡೋದೆ ನಿಮ್ಮ ಮೇಲಿನ ಪ್ರಶ್ನೆಗೆ ಉತ್ತರ. ಸಾಮಾಜಿಕ ಅಸಮಾನತೆ ನಿವಾರಣೆಗೆ ಶೋಷಕ–ಶೋಷಿತ ಇಬ್ಬರಿಗೂ ಶಿಕ್ಷಣದ ಅವಶ್ಯಕತೆ ಇದೆ.

ದೇಮ : ಹಳ್ಳಿಯ ಆಸ್ತಿ ಸಂಬಂಧಪಟ್ಟ ಬದಲಾವಣೆ ಅಂತಂದ್ರೆ.... ?

ನಂ. ಸ್ವಾಮಿ : ಭೂಮಿ ಅಥವಾ ಕೈಗಾರಿಕಾ ಘಟಕ ಅಥವಾ ವ್ಯಾಪಾರಿಘಟಕ ಯಾವುದೇ ಆಗಿರಲಿ, ಕೂಲಿ ಅವಶ್ಯಕತೆ ಇಲ್ಲದಷ್ಟು ಉತ್ಪಾದನಾ ಸಾಧನ ಉಳಿಸಿಕೊಳ್ಳುವಂಥ ಮಾಲೀಕತ್ವ ಮಾತ್ರ ಉಳಿಯುವಂಥ ಒಂದು ವ್ಯವಸ್ಥೆಗಾಗಿ ಹೋರಾಡುವುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದಾದರೆ– ಈಗ ಕರ್ನಾಟಕದ 3 ಕೋಟಿ ಜನರು ಎರಡುಕೋಟಿ ಎಕರೇನ ವ್ಯವಸಾಯ ಮಾಡ್ತಾ ಇದ್ದೀವಿ. ತಲಾ 20ಗುಂಟೆ ವ್ಯವಸಾಯ ಖಾಸಗಿ ಬಡತನದ ಆಧಾರದ ಮೇಲೆ ಬೇಸಾಯ

ರೈತಸಂಘವನ್ನು ಕಟ್ಟಿಬೆಳೆಸುತ್ತಾ ಅದರ ಕಣ್ಣಿನಂತೆಇರುವ ಪ್ರೊ. ನಂಜುಂಡಸ್ವಾಮಿಯವರು ತಮ್ಮೊಳಗೆ ಇಟ್ಟುಕೊಂಡಿರುವ ಸಮಾಜವಾದಿ ಚಿಂತನೆಗಳನ್ನು ಇನ್ನೂ ರೈತಸಂಘಕ್ಕೆ ಕೊಟ್ಟಂತೆ ಕಾಣುವುದಿಲ್ಲ. ಹೀಗೆ ಕೊಡುವ ಕಾಲಕ್ಕೆ ನಂಜುಂಡಸ್ವಾಮಿಯವರೇ ರೈತಸಂಘಕ್ಕೆ ನುಂಗಲಾರದ ತುತ್ತಾಗಬಹುದು ಅಥವಾ ರೈತಸಂಘವೇ ನಂಜುಂಡಸ್ವಾಮಿಯವರಿಗೆ......
ನಮ್ಮ ದೇವನೂರ ಮಹಾದೇವ ಆತ್ಮೀಯತೆಯಿಂದ ಹಳೆಯ ಸಮಾಜವಾದಿ ನೆನಪುಗಳೊಂದಿಗೆ ನಂಜುಂಡಸ್ವಾಮಿಯವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ :



ಪ್ರೊ॥ ಎಂ. ಡಿ. ನಂಜುಂಡಸ್ವಾಮಿ

ನನ್ನ ಕಣ್ಣೆದುರೇ ಕಳೆದೋದ ಸಮಾಜವಾದಿ ಪಕ್ಷದ ಬಗೆಗೆ

ದೇವನೂರ ಮಹಾದೇವ

ನಾನು ನಂಜುಂಡಸ್ವಾಮಿಯವರ ಸಂದರ್ಶನ ಮಾಡಲು ಬಯಸಿರಲಿಲ್ಲ. ಯಾಕೆಂದರೆ ಇಸವಿ 1968. ನಂಗಿನ್ನೂ ಮೀಸೆ ಬಂದಿರಲಿಲ್ಲ. ನಂಜನಗೂಡ ಕೋರ್ಟಲ್ಲಿ ಒಬ್ಬ ಲಾಯರು ಕನ್ನಡದಲ್ಲಿ ವಾದಿಸುತ್ತಿದ್ದರು. ಹೊರಗೊಬ್ಬ ಸೂಟುಬೂಟಿನ ಗಡ್ಡದಾರಿ ಬಹುಶಃ ಆ ಗಡ್ಡದ ಒಂದು ಕೂದಲೂ ಕೊಳೆ ಇಲ್ಲದಂತಹದು, ಹಣೆಗಂಟಿಕ್ಕಿ ಸಿಗರೇಟು ಸೇದುತ್ತ ನಿಂತಿತ್ತು. ದೇವರ ದಯದಿಂದ ಆಗ ನನ್ನ ಜೋಬಲ್ಲೊಂದು ಸಿಗರೇಟಿತ್ತು. ಆ ವ್ಯಕ್ತಿಯ ಹಣೆಗಂಟನ್ನು ಇನ್ನೂ ಹೆಚ್ಚಿಸಬೇಕೆಂದು ನಾನು ಆತನ ಬಳಿಗೆ ಹೋಗಿ ಸಿಗರೇಟು ಮುಂದೊಡ್ಡಿ ಬೆಂಕಿ ಕೇಳಿದೆ. ಆ ವ್ಯಕ್ತಿ ಮುಖದಲ್ಲಿ ಯಾವ ವಿಕಾರವೂ ಕಂಡುಬರದೆ ತಾನೆ ಬೆಂಕಿ ಕಡ್ಡಿ ಗೀರಿ ನನ್ನ ಸಿಗರೇಟಿಗೆ ಹಚ್ಚಿತು. ಆತನ ಮುಖದ ಹಣೆಗಂಟು ಮಾಯವಾಗಿ ಪ್ರಸನ್ನತೆ ಮೂಡಿತು ! ಆತನ ಹಣೆಗಂಟು ನನ್ನ ಹಣೆಗೆ ಬರುವಂತದಾಯ್ತು.

ಆರ್. ಎಸ್. ಎಸ್. ನಿಂದ ಸಮಾಜವಾದಿಗೆ

ಆರ್. ಎಸ್. ಎಸ್. ನಲ್ಲಿ ಇದ್ದ ನನ್ನನ್ನು, ನನ್ನ ನಿಜಗುರು ಸೂ. ರಮಾಕಾಂತ ಸಮಾಜವಾದಿ ಪಕ್ಷಕ್ಕೆ ತಂದ ಮೇಲೆ ತಿಳಿಯಿತು–ಕನ್ನಡದಲ್ಲಿ ವಾದಿಸುತ್ತಿದ್ದ ಲಾಯರು ಟಿ. ಎನ್. ನಾಗರಾಜ್‌ರವರು, ಆ ಗಡ್ಡದಾರಿಯು ಪ್ರೊ॥ ನಂಜುಂಡಸ್ವಾಮಿಯವರು. ಅಂದಿನಿಂದ ನಂಜುಂಡಸ್ವಾಮಿಯವರೊಡನೆ ಒಡನಾಡಿದ್ದೇನೆ. ಆಗಲೇ ಅಂದರೆ ಪಿ. ಯು. ಸಿ. ಫೇಲಾದ ನನ್ನನ್ನು ಆ ಚಿಕ್ಕ ಹುಡುಗನನ್ನು ತನ್ನ ಸಮಾನವಾಗಿ ಕಂಡ ದೊಡ್ಡ ಮನುಷ್ಯ ಆತ. ಆತ ಯಾಕೊ ನನ್ನೊಬ್ಬನನ್ನು ಸ್ವಲ್ಪವಾದರೂ ಬಿಟ್ಟು ಇತರರೊಡನೆ ಕಟುವಾಗಿ ನಡೆದುಕೊಂಡದ್ದನ್ನು ನಾನು ಬಲ್ಲೆ. ಆಗಲೂ ಎಷ್ಟೋ ಸಲ ನಾನು ಮಹಾ ದೊಡ್ಡವನಂತೆ ಆತನ ಸುಮ್ಮನಿರಿಸಿದ್ದೇನೆ. ಉದಾಹರಣೆಗೆ–ಡಾ. ಯು. ಆರ್. ಅನಂತಮೂರ್ತಿ, ಪ್ರೊ. ನಂಜುಂಡಸ್ವಾಮಿ ನಂಜುಂಡಸ್ವಾಮಿಗೆ ಕೇಳುತ್ತಿದ್ದೆ–'ಅನಂತಮೂರ್ತಿಯಂಥವರು ಆರ್ ಎಸ್ ಎಸ್ ನಲ್ಲಿ ಇದ್ದಿದ್ದರೆ, ಆರ್ ಎಸ್ ಎಸ್ ಕುಣಿದಾಡುತ್ತಿತ್ತು. ಆ ಹೆಸರ ಹೇಳಿ ಸಂಘಟನೆ ಮಾಡಿಬಿಡುತ್ತಿತ್ತು. ನಾವು ಯಾಕೆ ಹೀಗೆ ?' ಹಾಗೆ ಅನಂತಮೂರ್ತಿಗೆ ಕೇಳುತ್ತಿದ್ದೆ–'ನೀವೇ ಬ್ರಾಹ್ಮಣರ ಬಗ್ಗ

ರೈತಸಂಘಕ್ಕೆ ನುಂಗಲಾರದ ತುತ್ತಾಗುವ ಪ್ರೊ. ನಂಜುಂಡಸ್ವಾಮಿ ಚಿಂತನೆಗಳು..

ಮಾಡಿದರೆ ಲುಕ್ಸಾನು ಆಗುವುದರಿಂದ ಸಾಮಾಜಿಕ ಒಡೆತನದ ಬೇಸಾಯದತ್ತ ನಡೆಯುವುದು ನಮ್ಮದಾಗಬೇಕು.

ದೇಮ : ಹಳ್ಳಿಗಳಲ್ಲಿ ಅನೇಕ ಜಾತಿ ಇದ್ರೂ ಅಣ್ಣತಮ್ಮಂದಿರಂತೆ ಬಾಳಿಕೊಂಡು ಬರುತ್ತಿದ್ದರು ಅಂತಾರಲ್ಲ, ಈ ಬಗ್ಗೆ.... ?

ನಂ.ಸ್ವಾಮಿ : ನಂಗಂತೂ ಕಂಡಿಲ್ಲಪ್ಪ. ಜಾತಿ ಇರುವಾಗ ಸಾಮರಸ್ಯ ಇರುತ್ತೇನು? ಯಾವ್ದೇ ಕಾಲದಲ್ಲು ನಿಜವಾದ ಅರ್ಥದಲ್ಲಿ ಅಣ್ಣತಮ್ಮಂದಿರಂತೆ ಇದ್ದಿರುವುದನ್ನು ಇತಿಹಾಸದ ದಾಖಲೆಗಳೂ ತಿಳಿಸುವುದಿಲ್ಲ.

ದೇಮ : ಹೀಗಿರುವಾಗ ದಲಿತನೇನಾದರು ಧ್ವನಿ ಎತ್ತರಿಸಿದರೆ, ರೈತ ಸಂಘ ಬಯಸುವ 'ಹಳ್ಳಿಯೆ ಒಂದು ಘಟಕ' ಎಂಬುದು ನಡೆಯುದಿಲ್ಲವಲ್ಲ!

ನಂ.ಸ್ವಾಮಿ : ನಿಜ, ದಲಿತ ಸಮಾನತೆಗೆ ನಿಂತಾಗ ಅಲ್ಲಿ ಸಾಮರಸ್ಯ ಹೋಗಿಬಿಡ್ತದೆ. ಈ ರೀತಿಯಾಗುವುದು ಎಲ್ಲಿ ಎಂದರೆ ಸಂಪ್ರಾದಾಯಿಕ ವ್ಯವಸ್ಥೇನ ಒಂದು ಚೂರೂ ಅಲ್ಲಾಡಿಸದೆ ಸ್ವಾಭಾವಿಕವಾಗಿ ಹಳೇ ಸಂಬಂಧ ಮುಂದು ವರಿಯುವ ಕಡೆ ಹೀಗಾಗುತ್ತದೆ. ಆದರೆ ಹಳೆ ಸಂಬಂಧ ಕಿತ್ತು ಹಾಕುವುದೂ ನಮ್ಮ ಗುರಿತಾನೆ?

ದೇಮ : ಹಾಗಾದರೆ 'ಅಸ್ಪೃಶ್ಯನ ಮನೆಯಲ್ಲಿ ಉಂಡವನು ಮಾತ್ರ ರೈತಸಂಘದಲ್ಲಿ ಓಟುಮಾಡಲು ಹಕ್ಕುಳ್ಳವನು' ಎಂದು ಪ್ರಣಾಳಿಕೆಯಲ್ಲಿ ಘೋಷಿಸಿ ಆಚರಣೆಗೆ ತರುವ ತಾಕತ್ತು ರೈತ ಸಂಘಕ್ಕೆ ಇದೆಯೆ?

ನಂ.ಸ್ವಾಮಿ : ಸಾವಿರಾರು ವರ್ಷದ ಜಡ್ಡನ್ನು ಒಂದೆರಡು ದಿನಗಳಲ್ಲಿ ನಾಶ ಮಾಡುವ ಆಶಾವಾದವನ್ನೂ ನಾನು ಇಟ್ಟುಕೊಂಡಿಲ್ಲ. ಮೊದಲು ನಾನು ಉದಾಹರಣೆ ಆಗುವ ಮೂಲಕ....

ದೇಮ : ನೀವು ಬ್ಯಾಡ್ರಪ್ಪ. ಒಂದ್ಸಲ ಉಂಡಾದ ಮೇಲೆ ಸಾಕು. ನಾವು ಎಲ್ಲಿಂದ ತಂದಿಕ್ಕುವ ? ನಾನು ಕೇಳ್ತಾ ಇರೋದು 'ಅಸ್ಪೃಶ್ಯನ ಮನೆಯಲ್ಲಿ ಉಂಡವನು ಮಾತ್ರರೈತಸ್ಂಘದಲ್ಲಿ ಓಟುಮಾಡಲು ಹಕ್ಕುಳ್ಳವನು' ಎಂದು ಆಚರಣೆಗೆ ಹೊರಟರೆ ರೈತ ಸಂಘಕ್ಕೆ ನುಂಗಲಾರದ ತುತ್ತಾಗುವುದಿಲ್ಲವೆ ? ರೈತ ಸಂಘವೇ ಇಲ್ಲದಂತೂ ಆಗಬಹುದಲ್ಲವೆ ?

ನಂ.ಸ್ವಾಮಿ : ಆ ಮಟ್ಟಕ್ಕೆ ರೈತಸಂಘ ಹೋಗಿಲ್ಲ. ಇದು ನುಂಗಲಾರದ ತುತ್ತಾದರೂ ಮಾಡಲೇಬೇಕು. ಭಯ ಪಡಬೇಕಾಗಿಲ್ಲ. ಇಂಥದನ್ನೆಲ್ಲ ಮಾಡ್ದೆ ಸಂಘ ಕಟ್ಟಿದರೆ ದೊಡ್ಡದಾಗಬಹುದು. ಆದರೆ ಅದು ಯಾವುದೇ ನೀತಿ ನಿಯಮ ಇಲ್ಲದ ಕಾಂಗ್ರೆಸ್‌ನಂತೆ ಆಗಬಹುದು. ನಾವುಬೆಳೆದಿರೋದೇ ಇಲ್ಲ. ಅದಕ್ಕಾಗಿ ಇಂಥ ಕಾರ್ಯಕ್ರಮದಿಂದ ಏನು ಪರಿಣಾಮ ಆಗುತ್ತೆ ಅನ್ನೋದನ್ನು ಆಲೋಚನೆ ಮಾಡದೆ ಮಾಡಬೇಕು.

ದೇಮ : ಕೆಲವು ಕಡೆ ರೈತಸಂಘದವರೇ ಅಸ್ಪೃಶ್ಯರಿಗೆ ಬಹಿಷ್ಕಾರ ಹಾಕಿರುವುದಾಗಿ ಸುದ್ದಿ ಇದೆಯಲ್ಲ ?

ನಂ.ಸ್ವಾಮಿ : ಎಲ್ಲಿ ? ವಿವರ ಕೊಡಿ. We are not allowing such things to happen. We will expell that village from ರೈತಸಂಘ, ಗೊತ್ತೇನು ?

ದೇಮ : 'ಹರಿಜನ ಗಿರಿಜನರಿಗೆ ಭೂಮಿ ಯಾಕೆ? ಕಡ್ಲೆಪುರಿಗೋ ಹೆಂಡಕ್ಕೋ ಮಾರಿಕೊಳ್ತಾರೆ' ಅಂತ ನೀವೋ ರುದ್ರಪ್ಪನವರೊ ಹೇಳಿದರೆಂದು ಕೇಳಿ ಬೇಜಾರಾಯ್ತು....

ನಂ.ಸ್ವಾಮಿ : ನಾನಂತು ಹೇಳಿಲ್ಲಪ್ಪ. ರುದ್ರಪ್ಪನವರು ಹೇಳಿದ್ರೂ ನನಗೆ ಕಂಡುಬಂದಿಲ್ಲ.

ದೇಮ : ಒಳ್ಳೇದು. ನಮ್ಮ ಸಮಾಜದಲ್ಲಿ ಅನೇಕರಿಗೆ ಈ ಭಾವನೆ ಇದೆಯಲ್ಲ ?

ನಂ.ಸ್ವಾಮಿ : ರಾಜಕೀಯವಾಗಿ, ಸಾಮಾಜಿಕವಾಗಿ ಕಿಂಚಿತ್ತೂ ಅರಿವಿಲ್ಲದವ ಆಡೋ ಮಾತು ಅದು. ಯಾತಕ್ಕಾಗಿ ಕಡ್ಲೆಪುರಿಗೊ ಹೆಂಡಕ್ಕೊ ಮಾರಿಕೊಳ್ತಾನೆ ? ಆ ಕಾರಣ ನಿರ್ಮೂಲನವೇ ನಮ್ಮ ದೇಶದ ರಾಜಕೀಯ.

ದೇಮ : ಕೈಗಾರಿಕೆಗೆ ದಕ್ಕುತ್ತಿರುವ ಸವಲತ್ತು ಕಂಡು ಕರುಬುತ್ತ ರೈತಸಂಘ ಅಂಥದೇ ಸವಲತ್ತು ಬಯಸುತ್ತಿರುವಂತೆ ಕಂಡು ಬರುತ್ತಿದೆಯಲ್ಲ?

ನಂ.ಸ್ವಾಮಿ : ನೊ. ನೊ. ರೈತ ಸಂಘದ ಉದ್ದೇಶವೇ ಬೇರೆ. ಎಲ್ಲಾ ಕ್ಷೇತ್ರಗಳನ್ನು ಕೈಗಾರಿಕಾ ಕ್ಷೇತ್ರ ಹೀಗೆ ಶೋಷಣೆ ಮಾಡ್ತಾ ಇದೆ, ಅಂತಹ ಶೋಷಣೆಗಳನ್ನು ನಾಶ ಮಾಡುವಂತಹ....

ದೇಮ : ಅದಿರಲಿ ಟ್ರಾಕ್ಟರ್ ಆದಿಯಾಗಿ ಕೈ ಕೆಲಸ ಕಿತ್ತು ನಮ್ಮ ಗರೀಬರ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿರುವ ಯಂತ್ರ ಕುಸಂಸ್ಕೃತಿಯೇ ಬೇಡ

ಕಟುವಾಗಿ ಮಾತಾಡಿ ಅದನ್ನು ನಂಜುಂಡಸ್ವಾಮಿಯವರು ಮಾತಾಡಿದರೆ ಅಸಹನೆಗೆ ಒಳಗಾಗುತ್ತೀರಿ. ಯಾಕೆ ಹೀಗೆ?

ನಾನು ಅತ್ತೆನು

ನಂಜುಂಡಸ್ವಾಮಿಯವರ ಬಗ್ಗೆ ನಾನು ಇನ್ನೂ ತಾಳಿಕೊಳ್ಳಲಾರದ್ದು ಒಂದು ಮಾತ್ರವೇ. ಊರು ಬಿಟ್ಟು ರಮೇಶ ಬಂದಗದ್ದೆ ಬಗ್ಗೆ 'ಹೊಟ್ಟೆಗೆ ಗತಿ ಇಲ್ಲದೆ ಓಡಾಡಿಕೊಂಡಿದ್ದಾನೆ' ಎಂದದ್ದು ನನ್ನ ಹೊಟ್ಟೆಯನ್ನು ಕಿವುಚುತ್ತಿದೆ. ನಮ್ಮಂಥ ಹೊಟ್ಟೆಗಿಲ್ಲದವರೇ ಸಮಾಜವಾದಿ ಪಕ್ಷವಾಗದಿದ್ದರೆ ಇನ್ನಾರು ಆಗಬೇಕು ? ನಾನು ಅತ್ತೆ. ಕರ್ನಾಟಕದಲ್ಲಿ ಸಂಯುಕ್ತ ಸಮಾಜವಾದಿ ಪಕ್ಷವೂ ಎರಡಾಗಿ ಒಂದಾಗುವಾಗ ಸೂ. ರಮಾಕಾಂತರೇ ಅದನ್ನು ಕೆಡಿಸಿದರು. ನಾನು ಅತ್ತೆ. ಇದನ್ನು ನಂಜುಂಡಸ್ವಾಮಿ ಓದಿದರೆ 'ನೀವೂ ಅಳುತ್ತಲೇಇರಬೇಕಾಗುತ್ತೆ. ಗೊತ್ತೇನು?' ಅಂತಾರೆ. ಆದರೆ ಈ ಜಗದ ಮಾನವ ಕೋಟಿಯನ್ನು ಏಕಮಾನವನನ್ನಾಗಿ ಕನಸು ಕಾಣುವ ನಾವು, ಕೇವಲ ನಾವೇ ಏಕಮಾನವರಾಗ ದಿದ್ದರೆ ನಾವು ಮಾಡುವುದಾದರೂ ಏನನ್ನು ?

ಸವತಿಗಳ್ mean ಅದೇ ಸೌತೀರು

ಯಾಕೋ ತುಂಬಾವೆ ಸೀರಿಯಸ್ಸಾಯ್ತು. ಕೇವಲ ಒಂದೆರಡು ಫೆಗ್ ವೈನ್ ಮಾತ್ರದ್ದು ನನ್ನ ಹೊಟ್ಟೆಯೊಳಗಾಡುತ್ತಿತ್ತು. ಅದು ಸುಮ್ಮನಿರದೆ it makes me to speak in Englis. Most unluckilly that bloody Mr. Sudra Srinivas infront me. I told to that Sudra-"Mr. Sudra Srinivas ! your name and your sudra patrike and you, all fantastic fellows. And also your title 'ಕನಸಿನೊಳಗೊಳಗೊಂದು ಕಣ್ಣು' nodody can imagine. I am giving one insightfull subject for your 'ಕನಸಿನೊಳಗೊಳಗೊಂದು ಕಣ್ಣು' That is-in Kannada literature there are two ಸವತಿಗಳ್ ಐಸೆ. ಸವತಿಗಳ್ mean one husband two wifes ಜಲಸಿ ಲೇಡೀಸ್. ಅದೇ ನಮ್ಮ ಕಡೆ ಅಂತಾರಲ್ಲ ಸೌತೀರು ಅದೇಸೆ. one Ananthamurthy, ofcourse she is kind. onther one Lankesh, that Lankesh. She is full of audacity ಐಸೆ. full mean full. You go now and popularise this concept in thisworld. Let they feal lovely shame, lovely shame. But... ಒಪ್ಪಿಕೊಂಡು ಬೆಂಗಳೂರಿಗೆ ಹೋದ ಶೂದ್ರಶ್ರೀಗೆ ಆ ರಾತ್ರಿ ಆ ಲಂಕೇಶ್ ಕನಸಿಗೆ ಬಂದು ಒಂದಾ ಏನೊ ಮಾಡಿಕೊಂಡನೊ ಏನೊ ಅದೆಲ್ಲ ಅವ್ನ ವೈಯಕ್ತಿಕ ನನಗೇಕೆ ?

ಹೊಸತಾಗಿ ಹುಟ್ಟಲಾರೆವ ?

ಈ ನಾಡ ಜೀವನಾಡಿ ಬಲ್ಲ ಜೆ. ಎಚ್. ಪಟೇಲರು ಅಧಿಕಾರ ಬಿಟ್ಟು ಬರಲಾರರೆ ? ದೊಡ್ಡ ನಾಯಕನಾಗಬಹುದಿದ್ದ ಕಾಗೋಡು ತಿಮ್ಮಪ್ಪನವರು ತಾವು ಮಾಡಿರುವ

ಎಂಬುದೇ ರೈತಸಂಘದ ಉಸಿರು ಎಂಬುದು ನನ್ನ ಅನಿಸಿಕೆ........

ನಂ.ಸ್ವಾಮಿ : ನಿಮ್ಮ ಅನಿಸಿಕೆಯೇ ನನ್ನದೂ ಆಗಿದೆ. ಆದರೆ ಈಗ ಆಗ್ತಾ ಇರೋ ಂ ತಕ್ಷಣದ ಶೋಷಣೇನಾ ನಿಲ್ಲಿಸೋ ಕಾರ್ಯಕ್ರಮ. ಪ್ರಚಾರದ ಮಟ್ಟದಲ್ಲಿ ದೊಡ್ಡ ಕೈಗಾರಿಕೆಗಳನ್ನು ತಿರಸ್ಕರಿಸುವ ಮತ್ತು ಗ್ರಾಮ ಕೈಗಾರಿಕಾ ಧೋರಣೆ ಹೊಂದಿದ್ದೇವೆ.

ದೇಮ : ಸಾಮಾಜಿಕ ಸಾಂಸ್ಕೃತಿಕ ರಚನಾತ್ಮಕ ಕಾರ್ಯಕ್ರಮಗಳು ರೈತಸಂಘದಿಂದ ಹೆಚ್ಚಾಗಿ ನಡೆದಿಲ್ಲ ಯಾಕೆ ?

ನಂ.ಸ್ವಾಮಿ : ನೋಡಿ, ಹೋದ ಗುಂಡೂರಾಯರ ಸರ್ಕಾರ ಮೂರು ತಿಂಗಳಿಗೊಮ್ಮೆ ಗೋಲಿಬಾರ್ ಮಾಡ್ತಿತ್ತು. ಈ ಆಘಾತ ಚೇತರಿಸಿಕೊಳ್ಳೋಕೆ ವೈಯಕ್ತಿಕವಾಗಿ ನಮಗೇನೆ ಒಂದೂ ಒಂದುವರೆ ತಿಂಗಳು ಹಿಡೀತಿತ್ತು. ಆನಂತರ ಅಲ್ಲಿ ಹೋಗಿ ಸಂತೈಸೋದು, ಪರಿಹಾರ, ಹಣಕಾಸು ಮು ್ಗಟ್ಟು, ಈ ನಡುವೆ ಸಂಘಟನೆ ಆಗುತ್ತಿದ್ದುದರಿಂದ ರಚನಾತ್ಮಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡದಿಲ್ಲ.

ದೇಮ : (ಮೌನ)

ನಂ.ಸ್ವಾಮಿ : ನಿಮ್ಮ ಮುಂದಿನ ಪ್ರಶ್ನೆ–ರೈತಸಂಘ ಕೇಳುತ್ತಿರುವ ಸಾಲ ರದ್ದನ್ನು ಸರಿಯಲ್ಲ–ಎಂದು ಆಕ್ಷೇಪಿಸಿದ್ದೀರಿ ರೈತನ ಬೆಳೆಗೆ ಬೆಲೆನಲ್ಲಿ ಆಗಿರೋ ಮೋಸಕ್ಕಾಗಿ ಸಾಲ ರದ್ದು ಮಾಡಿ ಎಂದು ಕೇಳ್ತಾ ಇದ್ದೀವಿ. ನಮ್ಮ ವ್ಯವಸಾಯದ ವೆಚ್ಚದ $\frac{1}{2}$ಬೆಲೆಗೆ ತಗೊಂಡು ಊಟ ಮಾಡಿರೋರು ನೀವು. ಆದ್ದರಿಂದ ಆ ಸಾಲವೇ ಕೃತಕ. ಕಾಗದದ ಲೆಕ್ಕಾಚಾರ. ಈ ಕೃತಕ ಕಾಗದದ ಲೆಕ್ಕಾಚಾರ ರದ್ದಾಗಬೇಕು ಎಂದಷ್ಟೆ ನಾವು ಕೇಳುತ್ತಿರುವುದು.

ದೇಮ : ಕೇವಲ ನೂರು ರೂಪಾಯಿ ಸಾಲವನ್ನು ತಿಂಗಳಿಗೆ 10 ರೂಪಾಯಿ ಬಡ್ಡಿಯಂತೆ ಒಕ್ಕಲಿಗ ಲಿಂಗಾಯಿತರಿಂದ ಪಡೆದು ಸಾವಿರವಾಗಿ ಸಾಲ ತೀರಿಸಲಾಗದೆ ಕದ್ದು ಕಾಫಿತೋಟ ಸೇರುತ್ತಿರುವ ದಲಿತರ ಸಾಲಶೂಲದ ಬಗ್ಗೆ ಏನು ಅನ್ನುತ್ತೀರಿ ?

ನಂ.ಸ್ವಾಮಿ : ಇದೂ ರದ್ದಾಗಬೇಕು.

ದೇಮ : ಇದಕ್ಕೂ ಏನಾರು ರೈತಸಂಘದಿಂದ ಕಾರ್ಯಕ್ರಮ ?

ನಂ.ಸ್ವಾಮಿ : ಮಂಡ್ಯ ಜಿಲ್ಲೇನಲ್ಲೆ ಕೆಲವು ಕಡೆ ಆಗಿದೆ. ವ್ಯಾಪಕಮಾಡಬೇಕು.

ದೇಮ : 'ಸರ್ಕಾರ–ರೈತ' ನಡುವಿನ ಸಾಲವನ್ನು ಕೃತಕ ಅಂದಿರುವ ನೀವು 'ರೈತ–ದಲಿತ' ಸಾಲವನ್ನು ಹೇಗೆ ಅನ್ನುವಿರಿ ?

ನಂ.ಸ್ವಾಮಿ : ಈಗ ರೈತ ಹೇಳ್ತಾ ಇರೋದು ನಮಗೆಷ್ಟು ಸಾಲ ಕೊಟ್ಟಿದ್ದೀರೊ ಅದರ ಹತ್ತರಷ್ಟನ್ನು ಧಾನ್ಯ ಬೆಳೆದುಕೊಟ್ಟಾಗಿದೆ ಅಂತ. ಅದೇ ರೀತಿ ರೈತನಿಂದ ದಲಿತ ಎಷ್ಟು ತಕ್ಕೊಂಡಿರುತ್ತಾನೊ ಅದರ ಹತ್ತರಷ್ಟನ್ನು ಬಡ್ಡಿಕೊಟ್ಟು ದುಡುದೊ ಇರ್ತಾನೆ. ರೈತ–ದಲಿತರ ಸಾಲವೂ ಕೃತಕಾನೆ.

ದೇಮ : ಆದರೆ ರೈತರು ಹಾಕೊ ಆಣೆ ವಾರದ ಬಡ್ಡಿ ನೋಡಿದರೆ ತೀರಿಸಿರುವುದು ಹತ್ತರಷ್ಟು ಮಾತ್ರ ಅನ್ನಬಹುದಾ ಸಾರ್ ?

ನಂ.ಸ್ವಾಮಿ : ಇಲ್ಲಿ ಗುಣಾಕಾರನೇ ಮಾಡಿ.

ದೇಮ : ನಾನು ಅರಳಾಳು ಸಂದ್ರದಲ್ಲೊಮ್ಮೆ ದೂಳಲ್ಲಿ ಅಲ್ಲೊಂದು ಇಲ್ಲೊಂದು ಚೆಲ್ಲಿಕೊಂಡಿದ್ದ ಕಾಳುಗಳನ್ನು ಆಯುತ್ತಿದ್ದ ರೈತಸಂಘದ ಸದಸ್ಯನೊಬ್ಬನನ್ನು ನೋಡಿ ಅಳುವಷ್ಟು ಭಾವುಕನಾದೆ. ಆಕಡೆ ಸಿರಿವಂತ ರೈತರು ರೈತಸಂಘದ ವಿರೋಧಿಗಳಾಗಿರುವುದನ್ನು ಕೇಳಿ ಖುಷಿಗೊಂಡೆ. ರೈತಸಂಘ ಈ ದಿಕ್ಕಲ್ಲೆ ನಡೆಯಬೇಕೆಂದು ನನ್ನ ಆಸೆ. ಈ ದಿಕ್ಕಲ್ಲಿ ನಡೆಯುವ ನಂಬಿಕೆ ನಿಮಗಿದೆಯೆ ?

ನಂ.ಸ್ವಾಮಿ : ಈ ರೀತಿ ನೀವು ಬಯಸೋದು ತಪ್ಪು ಅಲ್ಲವೇ ಅಲ್ಲ. ಈ ದಿಕ್ಕಲ್ಲಿ ರೈತ ಸಂಘ ನಡೆಸೊ ನಂಬಿಕೆ ನಮಗೆ ಸಂಪೂರ್ಣ ಇದೆ. ಅದಕ್ಕೆ ಕಾರಣಗಳನ್ನು ಹೇಳ್ತೀನಿ. ಕರ್ನಾಟಕದ ಒಟ್ಟು ಹಿಡುವಳಿಗಳಲ್ಲಿ ಸುಮಾರು ನೂರಕ್ಕೆ 60 ಭಾಗ 2 ಹೆಕ್ಟಾರ್‌ಗಿಂತ ಕಡಿಮೇವು. ಮತ್ತು ನೂರಕ್ಕೆ ತೊಂಬತ್ತು ಭಾಗ ಮಳೆಯಾಧಾರಿತ. ಇಂಥವರೇ ಈಗ ರೈತಸಂಘದ ಸದಸ್ಯರಾಗುತ್ತಿದ್ದಾರೆ. ಜೊತೆಗೆ ಪ್ರತಿದಿವಸ ರೈತ ತನ್ನ ಭೂಮಿ ಕಳೆದುಕೊಂಡು ಭೂಹೀನ ಆಗುತ್ತಿದ್ದಾನೆ. ಕೃಷಿಕರಲ್ಲದವರ ಕೈಗೆ ಭೂಮಿ ಹೋಗ್ತಾ ಇದೆ.

ದೇಮ : ಉದಾಹರಣೆಗೆ....... ?

ನಂ.ಸ್ವಾಮಿ : ದೂರ ಹೋಗಬೇಡಿ, ಇಣಕಲ್ ರಸ್ತೆಗುಂಟಲೊ, ಬೋಗಾದಿ ರಸ್ತೆಗುಂಟಲೊ ಹೋಗಿ ನೋಡಿ. ಅಥವಾ ಬನ್ನಿ, ಕನಕಪುರ ರೋಡಲ್ಲಿ ತೋರಿಸ್ತೀನಿ. ಸಾವಿರ ಎಕರೇನ ಖೋಡೆನವನು ತಕೊಂಡಿದ್ದಾನೆ.

ದೇಮ : ರಾಸಾಯನಿಕ ಗೊಬ್ಬರಕ್ಕೆ ಬೆಲೆ ಕಮ್ಮಿ ಮಾಡಿ ಎಂದು ಕೇಳುವ ಬದಲು ಅದನ್ನು ತಿರಸ್ಕರಿಸುವ ಕಡೆಗೇನೆ........ ?

ನಂ.ಸ್ವಾಮಿ : ಈ ಬಗ್ಗೂ ಪ್ರಚಾರ ನಡೀತಾ ಇದೆ. ಅಷ್ಟೇ ಅಲ್ಲ, ಸ್ವದೇಶಿತಳಿ ನಾಡಬಿತ್ತನೆ ವೃದ್ಧಿಗೊಳಿಸುವುದನ್ನೂ ನಾವೀಗ ಹೇಳ್ತಾ ಇದ್ದೇವೆ.

ದೇಮ : ಕನಿಷ್ಟ ಕೂಲಿಯನ್ನು ರೈತರಿಂದಲೇ ಕೊಡಿಸಲು ರೈತಸಂಘವೇ ಯಾಕೆ ಪ್ರಯತ್ನಿಸಬಾರದು ?

ಮುಂದಿನ ಪುಟಕ್ಕೆ

ಆಸ್ತಿ ಹಣವನ್ನು ಸುಟ್ಟು ಬರಲಾರರೆ ? 41 ವರ್ಷವಾಗಿದ್ದರೂ 14 ವರ್ಷದಂತಾಡುವ ಪ. ಮಲ್ಲೇಶ್‌ರಿಗೆ ವಯಸ್ಸು ಆಗದೆ ? ನಮ್ಮ ಶಂಕರಪ್ಪ ಯಂಗ್‌ಆಗಿ ಸಿನಿಮಾ ಮಾಡಲಾರನೆ ? ಕಳಕಳಿ ಬಂಗಾರಪ್ಪ ಒಡವೆ ವಸ್ತ್ರ ಅಹಂಕಾರ ಅಧಿಕಾರದಾಸೆ ಬಿಟ್ಟು ಬರಲಾರರೆ ? ಚಿಲುಮೆ ನೀರಂಥ ಸೃಷ್ಟಿಕರ್ತ ಲಂಕೇಶ್ ತಾನೊಂದು ನಕ್ಷತ್ರವೆಂದೂ ಉಳಿದುದು ಗ್ರಹವೆಂಬ ಭ್ರಮಾ ತ್ಯಜಿಸಿ ಕ್ಯಾತನ ಪಡ್ಡೆ ಗ್ರಹದಿಂದ ಹೊರಬರಲಾರರೆ ? ಕೊಣಂದೂರು ಲಿಂಗಪ್ಪ ಮೊದಲಿನ ಪ್ರೀತಿಯ ಮುದ್ದೆಯಾಗಲಾರರೆ ? ಚುನಾವಣಾ ಹಣ ಇಟ್ಟುಕೊಂಡಿರುವರೆಂದು ಅಪವಾದಕ್ಕೆ ಒಳಗಾಗಿರುವ ತಂದೆಯಂಥ ಟಿ. ಎನ್. ನಾಗರಾಜರು ಆ ಅಪವಾದ ನಿಜವಾದಲ್ಲಿ ಕಳೆದುಕೊಳ್ಳಲಾರರೆ ?

ಓ ಪ್ರಕೃತಿಯೇ ಓ ಕಾಲವೇ ಹೇಳು–ನಾವೇ ಹೊಸತಾಗಿ ಹುಟ್ಟಲಾರೆವ ?

ತೇಜಸ್ವಿ ತಪ್ಪಸ್

ಆ ತೇಜಸ್ವಿ ಮಾತ್ರ ಇವ್ರ ಸಾವಾಸಾನೆ ಬ್ಯಾಡ ಮಾರಾಯ ಅಂತ ಒಂಟಿಯಾಗಿ ಚಿಂತಿಸುತ್ತ ಮೀನು ಹಿಡಿಯುತ್ತ ತಪಸ್ಸು ಮಾಡುತ್ತ ಸಿದ್ಧಿಗಾಗಿ ಆ ಸಿದ್ಧಿಯಾದ ಯೋಗಾನಿದ್ರಾವು ಸಿಗುತ್ತೊ ಅಥವಾ ಸಿಗುವುದಿಲ್ಲವೊ ಎಂಬಂಥ ಆತಂಕದಿಂದ ಕಾಯುತ್ತಿರುವರು. ಯಾವ ತೇಜಸ್ವಿಯು ಯಾವ ಯೋಗಾನಿದ್ದಾ ಸಿದ್ಧಿಗಾಗಿ ತಪಸ್ಸಾಚರಣಾ ಮಾಡುತ್ತಿರುವರೊ ಆ ಯೋಗಾನಿದ್ರಾವು ನನ್ಮಗಂದು ಅದಾವ ತಪಸ್ಸಿಲ್ಲದೆ ನನಗೆ ಹುಟ್ಟುಟ್ಟುತ್ತಲೇ ಸಿದ್ಧಿಸಿಬಿಟ್ಟು ನಾನೊ ನಿದ್ದೆಯಲ್ಲಿರುವೆ.

ದ+ರೈ ನಾಡ ಕಟ್ಟಬಲ್ಲವೆ ?

ಇಷ್ಟೆಲ್ಲಾ ಇದ್ದೂ ಪ್ರೊ॥ ನಂಜುಂಡಸ್ವಾಮಿ ಮಾತುಗಳು ತಮ್ಮ ಕಟುತ್ವ ಕಳೆದುಕೊಂಡು ಹಣ್ಣಾಗಿರುವುದು, ಆಲೋಚನೆಯಲ್ಲಿ ತಾವು ಇರುವಂಥ ಸಂಘಟನೆಯೇ ಅಲ್ಲಾಡುವಂಥ ಎದೆಗಾರ ನುಡಿಗಳನ್ನು ಆಡಿರುವುದು ಅವರ ನುಡಿ ನಡೆಯಾಗುವುದಾದರೆ ನಾವೆಲ್ಲ ನಮ್ಮೆಲ್ಲದನ್ನೂ ಕಳೆದುಕೊಂಡು ಒಂದಾಗುವುದರ ಚಿಗುರು. ಆದರೆ ರೈತ ಸಂಘವು ಅಸ್ಪೃಶ್ಯ ಕೂಲಿ ನಾಯಕತ್ವ ಪಡೆಯದೆ, ಹಾಗೇ ದಲಿತ ಸಂಘವು ಜಲಗಾರ ನಾಯಕತ್ವ ಪಡೆಯದೆ, ಅವು ಎಷ್ಟೇ ಬೊಬ್ಬೆ ಹಾಕಿದರೂ ಅಷ್ಟೊ ಇಷ್ಟೊ ದಕ್ಕಿಸಿಕೊಳ್ಳಬಹುದೋ ಹೊರತು, ಅಂದರೆ ಅರೆಹೊಟ್ಟೆಯ ರೈತ ಸಂಘ ಮುಕ್ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೇ ಹೊರತು ಹಾಗೆ ಹೊಟ್ಟೆಗಿಲ್ಲದ ದಲಿತ ಸಂಘ ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೋ ಹೊರತು ಈ ನಾಡ ಕಟ್ಟುವ ಸಂಘಟನೆಗಳಾಗವು. 'ದ+ರೈ' ನಾಡ ಕಟ್ಟಬಲ್ಲವೆ ? ●

ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರ ಆಲೋಚನೆಗಳು

ಮನಾಪಲಿ ಬಿತ್ತನೆ ವಿರುದ್ಧವಾಗಿ

ಯಾವ ಮಟ್ಟಿಗೆ Seed Technology ನಮ್ಮ Monopaly ಮಾಡ್ಕೊಂಡಿದೇ ಅಂದ್ರೆ....ಒಂದು ಉದಾಹರಣೆ ಕೊಡ್ತೀನಿ; ಒಂದು ಟೊಮಾಟೋ ತಳಿ ತಯಾರು ಮಾಡಿದ್ದಾರೆ. ಅದಕ್ಕೆ ಯಾವುದೋ ಒಂದು Perticular Spray ಮಾಡ್ದೇ ಇದ್ರೆ ಅದು ಕೆಂಪಗೆ ಆಗೋದೇ ಇಲ್ಲ. ಹಸಿರಾಗೇ ಕುಂತಿರ್‍ತದೆ. Operation de Greening ಅಂತಾರೆ. ಅಷ್ಟರ ಮಟ್ಟಿಗೆ Seed Technology ನಲ್ಲಿ ಮನಾಪಲಿ ಪಡೆದಿದೆ. ಇದಕ್ಕೆ ಅಂತರ ರ್‍ರಾಷ್ಟ್ರೀಯ ಕುತಂತ್ರನೂ ಉಂಟು. Hybridge Varities ಬಂದಾಗ್ಲೇನೇ ನಮಗೆ ರಾಸಾಯನಿಕ ಗೊಬ್ಬರದ ಅವಶ್ಯಕತೆ ಬೀಳೋದು... ನಾಡ ತಳಿಗಳನ್ನು ಬೆಳೆಸಿಕೊಳ್ತಾ ರಾಸಾಯನಿಕ ತಿರಸ್ಕರಿಸಬೇಕು. ಬಿತ್ತನೆಯಲ್ಲಿ, ನಾಡ ಬಿತ್ತನೆಯನ್ನು ಹೆಚ್ಚಿಗೆ ಮಾಡೋ ಕಡೆ ನಡೀಬೇಕು.

ಅರಣ್ಯ : ಸಾಮಾಜಿಕವೋ ಕೈಗಾರಿಕೆಯೋ ?

ಒಂದು ಕಡೆ ಸರ್ಕಾರ ಸಾಮಾಜಿಕ ಅರಣ್ಯೀಕರಣ ಅಂತ ನೀಲಗಿರಿ ಕಾಡು ಬೆಳೆಸುತ್ತಿದೆ. ಇದು ಸಮಾಜೀಕ ಅರಣ್ಯೀಕರಣ ಅಲ್ಲ, ಕೈಗಾರಿಕಾ ಅರಣ್ಯೀಕರಣ. ಈ ಕೈಗಾರಿಕಾ ಅರಣ್ಯವನ್ನು ಸಾಮಾಜಿಕ ಮಾಡಲು ರೈತ ಸಂಘ ಹೊರಟಿದೆ. ಉದಾಹರಣೆಗೆ ನಮ್ಮ ತುಮಕೂರಿನ ಸ್ನೇಹಿತರು ಸುಮಾರಿಗೆ 1 ಲಕ್ಷ 20 ಸಾವಿರ ನೀಲಗಿರಿ ಸಸಿಗಳನ್ನು ಕಿತ್ತು ಬೀಸಾಕಿ ಅಲ್ಲಿ ಹುಣಸೆ ಹೊಂಗೆ ಹಿಪ್ಪೆ ಹಲಸಿನ ಗಿಡ ನೆಡುತ್ತಿದ್ದಾರೆ. ಈ ಕಾರ್ಯಕ್ರಮವ ಹೇಗಸರು ಮಕ್ಕಳ ಕಾರ್ಯಕ್ರಮವಾಗಿಸಿ ವ್ಯಾಪಕವಾಗುತ್ತಿದೆ. ಪಾಲಿಫೈಬರ್ ಇಂಡಸ್ಟ್ರಿಯಲ್ಲಿ ವಾತಾವರಣ ಕೆಡೋದುಹೆಚ್ಚು ಎಂದ ಅಮೇರಿಕಾದಲ್ಲಿ ಅದನ್ನು ನಿಲ್ಲಿಸಿ ಅದ ಇಲ್ಲಿ ಮಾಡಿಸುತ್ತಿದ್ದಾರೆ. ಜನರ ಹೊಟ್ಟೆ ತುಂಬಿಸದ ಸರ್ಕಾರ ಒಳ್ಳೆ ಗಾಳಿಯನ್ನು ಕಿತ್ತುಕೊಳ್ಳುತ್ತಿದೆ.

ಮನುಷ್ಯನ್ನ ಕೊಲ್ಲಬೇಕೋ ? ಸಹರಾ ಮರುಭೂಮಿ ಸರಿ ಮಾಡಬೇಕೊ ?

ಈ ದೇಶದ 35 ವರ್ಷದ ಉಲ್ಟಾಪಲ್ಟಾ ಯೋಜನೆಯಲ್ಲಿ ಶೇಕಡ ಹತ್ತು ಭಾಗ ಮಾತ್ರ ನೀರಾವರಿ ಆಗಿದೆ. ಗೊತ್ತೇನು ? ಇಡೀ ದೇಶಾನ ಮರುಭೂಮಿ ಮಾಡ್ತ ಆಹಾರ ಸಾಲ್ದು ಜನಸಂಖ್ಯೆ ಹೆಚ್ಚು ಅಂತ ಬೊಬ್ಬೆ ಹಾಕ್ತಾ ಇದ್ದಾರೆ. ಸಹರಾ ಮರುಭೂಮಿಯಲ್ಲಿ ಒಬ್ಬ ಮನುಷ್ಯನೂ Over Population ಅಲ್ಲೇನು ? ಅದಕ್ಕೇನು ಮಾಡಬೇಕು ? ಆ ಮನುಷ್ಯನ್ನ ಕೊಲ್ಲಬೇಕೊ ? ಸಹರಾ ಮರುಭೂಮಿ ಸರಿ ಮಾಡಬೇಕೊ ? ಹೆಚ್ಚು ನೀರಾವರಿ ಮಾಡಿದರೆ There is Short of Man Power ಅಂದ್ರೆ Surplus of Food ಅಂತ ಅರ್ಥ. ನೀರಾವರಿ ಮಾಡದಿರುವುದಕ್ಕೆ ಕಾರಣ ಅಲ್ಲಿ ಕೈಗಾರಿಕೆ ತೆಗೆದಾಗ ಕಮ್ಮಿ ದುಡ್ಡಿಗೆ ಕೂಲಿ ಸಿಗಲಿ ಅಂತ. ಗಂಗಾ ಕಾವೇರೀನ ಉಗರಲ್ಲಿ ಕೆರೆದು ಸೇರಿಸಬಹುದು. ಅಷ್ಟೊಂದು ಮಾನವ ಶಕ್ತಿ ನಮ್ಮಲ್ಲಿ ಇದೆ. ಪರದೇಶಿ ಸಾಲ aid ಅಂತ ಮಾಡಿ ಆಟಗಳ ಆಡಸ್ತಿದೆ ಸರ್ಕಾರ. ಆಮೇಲೆ ನಿಂತದಕ್ಕೆ ಕುಂತದಕ್ಕೆ ಕುಡಿಯೋ ನೀರು ಯೋಜನೆಗೆ KSRTC ಇಂಪ್ರೂಗೆ ಪರದೇಶಿ ಸಾಲ ! ಇದರ ಬಗ್ಗೆ ದೊಡ್ಡ ಚಳವಳಿ ಮಾಡ್ದೆ ಇದ್ರೆ ಹರಾಜ್ ಹಾಕಿಬಿಡ್ತಾರೆ ನಮ್ಮನ್ನ. ಗೊತ್ತೇನು ?

ಹೆಂಡ V/S ಹೆಂಗಸರು

ಹೆಂಡ ಮತ್ತು ಸಾರಾಯಿ ವಿಷದಿಂದಾಗಿ ನಮ್ಮ ಹಳ್ಳಿಯ ಆರೋಗ್ಯ ಕೆಡೋದರ ಜೊತೆಗೆ 1000 ಕೋಟಿ ರೂಪಾಯಿ ಹಣ ಹಳ್ಳಿಯಿಂದ ಆಚೆಗೆ ಹೋಗುತ್ತಿದೆ. ಮೊದಲು ಮನೆ ಮಧ್ಯ ವಾದ ಮಾಡ್ತಿದ್ದೆ. ಆದರೆ, ಬೆಳಿಗ್ಗೆ ಎದ್ದೇಟಿಗೆ ಕುಡೀತಾರೆ, ಮನೆ ಮಂದಿಯೆಲ್ಲ ಕುಡೀತಾರೆ ಅಂತ ದೂರು ಬರಲಾರಂಭಿಸಿವೆ. ಆದ್ದರಿಂದ ಹಳ್ಳಿ ಆಚೆಗೆ ಓಡಿಸೋ ಕಾರ್ಯಕ್ರಮಾನೆ ಉತ್ತಮ ಎನ್ನಿಸುತ್ತದೆ. ಹೆಂಗಸರ ಕೈಗೆ ಈ ಹೆಂಡದ ಕಾರ್ಯಕ್ರಮ ಕೊಟ್ಟರೆ ಯಶಸ್ವೀ ಆಗಲ್ಲವೇನು ? ರೈತ ಸಂಘ ದಲಿತ ಸಂಘ ಇದನ್ನು ಒಟ್ಟಾಗಿ ಆರಂಭಿಸಬಹುದು.

ನಂ.ಸ್ವಾಮಿ : ರೈತಸಂಘ ಮಾಡಿಲ್ಲ; ಅಂದು ಕೊಂಡಿದ್ದಿರೇನು ? ಶಿವಮೊಗ್ಗದಲ್ಲಿ ಕಬ್ಬಿಣ ಬೆಲೆ ಹೆಚ್ಚಾದಾಗ ಅಲ್ಲಿ ಕೂಲಿನೂ ಹೆಚ್ಚಿಗೆ ಕೊಡಿಸಿದ್ದೀವಿ. ನೀವು ಆಶ್ಚರ್ಯಪಡಬಹುದು, 24 ರೂಪಾಯಿ ಕಬ್ಬಿನ ಕೂಲಿ. ನಿಮ್ಮ ಕನಿಷ್ಟ ಕೂಲಿ ನಿಯಮಕ್ಕೆ ಮೀರಿ ಅಂಥಕಡೆ ಕೂಲಿ ಹೆಚ್ಚಿದೆ. ಅದಕ್ಕೆ ರೈತಸಂಘವೂ ಪ್ರಯತ್ನಿಸಿದೆ.

ದೇಮು : ನೀರಾವರಿ ಇಲ್ಲದ ಕಡೆ ಹೇಗಿದೆ ?

ನಂ.ಸ್ವಾಮಿ : ಅಗ್ತಾ ಇಲ್ಲ. ಅಲ್ಲಿ ರೈತನಿಗೆ ಕೊಡೊ ಶಕ್ತಿ ಇರೋಲ್ಲ. ಅದನ್ನು ಕೂಲಿಯವನು ಅರ್ಥಮಾಡಿಕೊಳ್ಳುತ್ತಾನೆ. ಪರಿಸ್ಥಿತೀನ ಇಬ್ಬರೂ ಅರ್ಥಮಾಡಿಕೊಂಡಿದ್ದಾರೆ. ಆರ್ಥಿಕ ಸಂಬಂಧಗಳಲ್ಲಿ ಕೂಲಿಗೂ 'ರೈತನಿಗೂ ಆರೋಗ್ಯಕರವಾದ ಅರ್ಥಮಾಡಿಕೊಳ್ಳುವ ಸಂಬಂಧಾನೆ ಇರೋದು

ದೇ ಮು : ಯಾಕೊ ನನ್ನ ಮನಸ್ಸು ಒಪ್ತಾ ಇಲ್ಲ. ಯಾಕೆಂದರೆ ಜಗಳಾಟವೂ ನಡೆದಿವೆಯಲ್ಲ ?

ನಂ. ಸ್ವಾಮಿ : ಅದು ಇಬ್ಬರಲ್ಲೂ ಇಲ್ಲದ್ದಕ್ಕೆ ನಡೀತಿರೋ ಜಗಳಾಟ.

ದೇಮು : ಈ ಜಗಳಾಟಾನ ಸಧ್ಯಕ್ಕೆ ಪೆಂಡಿಂಗ್ ನಲ್ಲಿ ಇಡೋಣ. ಆಮೇಲೆ, ಕೈಗಾರಿಕಾ ಬಟ್ಟೆ ಚಪ್ಪಲಿ ನಿರಾಕರಣಾ ಚಳುವಳಿ ಬಗ್ಗೆ....

ನಂ.ಸ್ವಾಮಿ : ಪ್ರಚಾರ ಆರಂಭವಾಗಿದೆ....

ದೇಮು : ಸುಡೋದಕ್ಕೆ ಆಗಿದೆಯೆ ?

ನಂ. ಸ್ವಾಮಿ : ಸುಡೋದು ಬೇಕಾಗಿಲ್ಲ. ಅದೂನು ಸ್ವದೇಶೀನೆ. ಇವತ್ತು ಟೆರಿಕಾಟ್ ತಗೊಂಡಿದಾರೆ. ಇದು ಇರುವರ್‍ಗೆ ಇರಲಿ. ನೀವು ಬೇರೆದನ್ನು ತಕ್ಕೊಂಡು ತೆರಿಗೆ ಕೊಡೋದು ತಪ್ಪತ್ತಲ್ಲ.

ದೇಮು : ಇದನ್ನು ನೀವು ಹಣಕಾಸು ವ್ಯವಹಾರ ದೃಷ್ಟೀಲಿ ನೋಡ್ತಾ ಇದ್ದೀರಿ. ನಾನು ಬದುಕಿನ ರೀತಿ ಎಂದು ನೋಡ್ತಾ ಇದ್ದೀನಿ.

ನಂ. ಸ್ವಾಮಿ : way of living ಅಂತ ತಗೋಬೇಕು, ಸರಿ. ಗಾಂಧೀಜಿ ಅದನ್ನು ಸುಡೋ ಅಂತ ಮಟ್ಟಕ್ಕೆ ಹೋಗಬೇಕಾದ್ರೆ ಅಂತ ಕಾಲ ಒಂದಿತ್ತು. ಈಗ ಅದೇ ಪರಿಸ್ಥಿತೀಲಿ ಇದೀವ

ದೇಮು : ಕೈಗಾರಿಕಾನ ಬಿಳಿ ಸಂಸ್ಕೃತಿ; ಟ್ರ್ಯಾಕ್ಟರ್ ಆದಿಯಾಗಿ ಎಲ್ಲವೂ ಇಲ್ಲಿನ ಜನರ ಕೆಲಸ ಕಳೆದು ಕೈ ಕತ್ತರಿಸುತ್ತಿವೆ ಅಂತ ನೋಡಿದಾಗ....

ನಂ. ಸ್ವಾಮಿ : ಆಯ್ತು. ನಿಮ್ಮ ಅಭಿಪ್ರಾಯ ಸ್ವೀಕರಿಸೋಕೆ ನಾವು ತಯಾರಾಗಿದ್ದೀವಿ. ಆದರೂ ನಿಮ್ಮೊಳಗೆ ನಮ್ಮ ಸಮಾಜಿಕ ಕಾರ್ಯಕ್ರಮದ ಬಗ್ಗೆ ಆತಂಕ ಇನ್ನೂ ಇದ್ದಂತೆ ಇದೆ, ಹೌದೇನು ?

ದೇಮು : ಪರಿಸ್ಥಿತಿ ಆ ರೀತಿಯಾಗಿ ಇದೆಯಲ್ಲ !

ನಂ. ಸ್ವಾಮಿ : ಅಸ್ಪೃಶ್ಯತೆ ವಿರುದ್ಧವಾಗಿ, ಜಾತೀಯತೆ ವಿರುದ್ಧವಾಗಿ ಸಹಭೋಜನ, ಊರಿಗೆ ಒಂದೇ ಬಾವಿ, ಅಂತರ್‌ಜಾತಿ ವಿವಾಹ, ಅಸ್ಪೃಶ್ಯನ ಮನೆಯಲ್ಲಿ ಉಂಡವನೇ ರೈತ ಸಂಘದಲ್ಲಿ ಓಟು ಹಕ್ಕುಳ್ಳವನು' ಇತ್ಯಾದಿ ಕಾರ್ಯಕ್ರಮ ಮಾಡದಿದ್ದರೆ ಅಂಥ ಸಂಘ ಯಾಕೆ ಬೇಕು ಹೇಳಿ? ಅಂಥ ಸಂಘ ಬ್ಯಾಡವೇ ಬೇಡ.

ದೇಮು : ನಿಮ್ಮ ಆಲೋಚನೆ ಈ ರೀತಿ ಇರುವಾಗ ರೈತ ಸಂಘ ದಲಿತ ಸಂಘ ಯಾಕೆ ಒಟ್ಟಿಗೆ ಕೆಲಸ ಮಾಡಬಾರದು.

ನಂ. ಸ್ವಾಮಿ : ಅದನ್ನೇ ನಾನೂ ಕೇಳೋದು.

ದೇಮು : ಅದನ್ನೆ ನಾನೂ ಕೇಳೋದು.

ನಂ. ಸ್ವಾಮಿ : ಆಯ್ತು, ಯಾವಾಗ ಸೇರೋಣ

ದೇ ಮು : ರಾಟೆ ತಿರುಗಿಸುವುದು ಆರಂಭವಾಗಲಿ

ಕಮ್ಯೂನಿಸ್ಟ್ ಪಶ್ಚಿಮ ಬಂಗಾಲ ಮತ್ತು ದಲಿತರ ತಳಮಳ

> ''ನಮ್ಮನ್ನು ಅಲಕ್ಷಿಸಲಾಗಿದೆ. ಎಲ್ಲಾ ಕಾರ್ಖಾನೆಗಳನ್ನೂ ಕಲಕತ್ತೆಯ ಸುತ್ತಮುತ್ತಲೇ ತೆರೆಯಲಾಗುತ್ತಿದೆ. 'ಭೂಸುಧಾರಣೆ ಕಾನೂನನ್ನೂ ಜಾರಿಗೆ ತಂದಿಲ್ಲ, ಟೀ ತೋಟಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನೂ ನೀಡಲಾಗುತ್ತಿಲ್ಲ, ಸಿ. ಪಿ. ಎಂ. ಸರ್ಕಾರ 'ದಲಿತರಿಗೆ ವಿಶೇಷವಾದ ಸಮಸ್ಯೆಗಳಿವೆ' ಎಂಬುದನ್ನೇ ಒಪ್ಪಲು ಸಿದ್ಧವಿಲ್ಲ. ಸರ್ಕಾರದಲ್ಲೂ ಸಹ ದಲಿತರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲ. ಇಂಥ ಹಲವಾರು ಬೇಡಿಕೆ ಕುರಿತು ಮನವಿ ಅರ್ಪಿಸಿ, ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದಾಗ ನ್ಯಾಯಯುಕ್ತವಾದ ಹೋರಾಟಕ್ಕಿಳಿದರೆ ಸಿ. ಪಿ. ಎಂ. ಸರ್ಕಾರದ ದೃಷ್ಟಿಯಲ್ಲಿ ದಲಿತರು ವಿಚ್ಛಿದ್ರಕಾರಿ ಶಕ್ತಿಗಳಾಗುತ್ತಾರೆ''. ಪಶ್ಚಿಮ ಬಂಗಾಲಕ್ಕೆ ಹೋಗಿದ್ದ ನಮ್ಮ ಏಕಲವ್ಯ ವರದಿ ಮಾಡುತ್ತಾರೆ.

ಏಕಲವ್ಯ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಂ.) ಪಶ್ಚಿಮ ಬಂಗಾಲದಲ್ಲಿ ಸರ್ಕಾರವನ್ನು ಎರಡನೇ ಅವಧಿಗೆ ರಚಿಸಿದೆ. ಆದರೆ ಪಶ್ಚಿಮ ಬಂಗಾಲದ ಉತ್ತರ ಭಾಗವಾದ ಉತ್ತರ ಬಂಗಾಲ ಪ್ರದೇಶವನ್ನು ಕುರಿತಂತೆ ಸಿ.ಪಿ ಎಂ. ಸರ್ಕಾರದ ಧೋರಣೆ ಕಾಂಗ್ರೆಸ್ ಸರ್ಕಾರಗಳ ಧೋರಣೆಗಿಂತ ಯಾವ ರೀತಿಯಲ್ಲೂ ಭಿನ್ನವಾಗಿಲ್ಲ. ಉತ್ತರ ಬಂಗಾಲ ಪ್ರದೇಶದಲ್ಲಿ ಜಲಪಾಯಿಗುರಿ, ಕೂಚ್‌ಬಿಹಾರ, ದಾರ್ಜಿಲಿಂಗ್, ಪಶ್ಚಿಮ ದೀನಾಜಪುರ ಮತ್ತು ಮಾಲ್ಡಾ ಎಂಬ ಐದು ಜಿಲ್ಲೆಗಳು ಸೇರುತ್ತವೆ. ಈ ಭಾಗದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 55 ರಷ್ಟು ಜನಸಂಖ್ಯೆ ದಲಿತರದ್ದಾಗಿದೆ. ಟೀ ತೋಟಗಳಿಂದ ತುಂಬಿರುವ ಈ ಭಾಗದಲ್ಲಿ ಜೂಟ್ ಪ್ರಮುಖ ಬೆಳೆಯಾಗಿದೆ. ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರಿಗಳಲ್ಲಿ ಸೂಕ್ತ ಪ್ರಮಾಣದ ಮೀಸಲಾತಿಯನ್ನು ತುಂಬಲಾಗಿಲ್ಲ. ಉತ್ತರ ಬಂಗಾಲದ ಮೂಲ ನಿವಾಸಿ ದಲಿತರಂತೆಯೇ ಬಿಹಾರದ ರಾಂಚಿ ಜಿಲ್ಲೆಯಿಂದ, ಚೋಟಾ ನಾಗಪುರ ಜಿಲ್ಲೆಯಿಂದಲೂ ಸಹ ದಲಿತರು ವಲಸೆ ಬಂದು ಟೀ ತೋಟಗಳಲ್ಲಿ ದುಡಿಯುತ್ತಿದ್ದಾರೆ.

ಉತ್ತರ ಬಂಗಾಲದಲ್ಲಿ ಶೈಕ್ಷಣಿಕ ಸೌಲಭ್ಯಗಳೂ ಸಹ ಕಡಿಮೆ. ಭಾಗದ ಒಂದೇ ವಿಶ್ವವಿದ್ಯಾಲಯ (ಉತ್ತರ ಬಂಗಾಲ ವಿಶ್ವವಿದ್ಯಾಲಯ) ದಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿಯಲ್ಲಿದೆ. ಇಲ್ಲಿ ಸಹ ಮೀಸಲಾತಿಯ ಪ್ರಮಾಣವನ್ನು ತುಂಬಿಲ್ಲ. ಅಷ್ಟೇ ಅಲ್ಲ ಇರುವ ಸುಮಾರು 102 ಜನ ಶಿಕ್ಷಕ ಸಿಬ್ಬಂದಿ (ಟೀಚಿಂಗ್ ಸ್ಟಾಫ್) ನಲ್ಲಿ ಕೇವಲ ಮೂರು ಜನ ಮಾತ್ರ ದಲಿತರಿದ್ದಾರೆ. ಶಿಕ್ಷಕೇತರ ಸಿಬ್ಬಂದಿಯಲ್ಲೂ ಸಹ ಮೀಸಲಾತಿಯನ್ನು ತುಂಬಿಲ್ಲ. ದಲಿತರಲ್ಲಿ ಬಹುಪಾಲು ಜನರು ಟೀ ತೋಟಗಳಲ್ಲಿ ಹಾಗೂ ಜೂಟ್ ಹೊಲಗಳಲ್ಲಿ ದುಡಿಯುತ್ತಿದ್ದು ಆರ್ಥಿಕವಾಗಿ ಅತ್ಯಂತ ಶೋಷಿತರಾಗಿದ್ದಾರೆ. ಉತ್ತರ ಬಂಗಾಲದಲ್ಲಿ ಅಸ್ಪೃಶ್ಯತೆ ಎದ್ದು ಕಾಣುತ್ತಿಲ್ಲ; ಅಸ್ಪೃಶ್ಯತೆಯ ಹಿನ್ನೆಲೆಯ ಸಾಮಾಜಿಕ ಅವಮಾನ ದಲಿತರಿಗೆ ಆಗುವುದು ಕಡಿಮೆ. ಆದಾಗ್ಯೂ ಹಲವಾರು ಗ್ರಾಮಗಳಲ್ಲಿ ಇಂದಿಗೂ ದೇವಸ್ಥಾನ–ಸಾರ್ವಜನಿಕ ಬಾವಿಗಳಲ್ಲಿ ದಲಿತರಿಗೆ ಮುಕ್ತ ಪ್ರವೇಶ ಇಲ್ಲ.

ಉತ್ತರ ಬಂಗಾಲದ ಮೂಲ ನಿವಾಸಿ ದಲಿತರ ಉಪಜಾತಿ ರಾಜವಂಶಿ. ಬ್ರಿಟಿಷರು ಭಾರತದ ಈ ಭಾಗಕ್ಕೆ ಕಾಲಿಡುವ ಮುನ್ನ ರಾಜವಂಶಿ ಜನರು ಪುಟ್ಟ ರಾಜ್ಯಗಳನ್ನು ಹೊಂದಿದ್ದರು. ಕೂಚ್ ಬಿಹಾರ ಜಿಲ್ಲಾ ಕೇಂದ್ರದ ಮಧ್ಯ ಭಾಗದಲ್ಲಿ ಈಗಲೂ ಇರುವ ದೊಡ್ಡ ಅರಮನೆಯನ್ನು ತೋರಿಸಿ ಇಲ್ಲಿಯೇ ರಾಜವಂಶಿ ಮಹಾರಾಜ ಇರುತ್ತಿದ್ದದ್ದು ಎಂದು ದಲಿತ ಮಿತ್ರರು ಹೇಳಿದರು. ಉತ್ತರ ಬಂಗಾಲದ ದಲಿತರಲ್ಲಿ ರಾಜವಂಶಿ ಉಪಜಾತಿಯದೇ ಜನಸಂಖ್ಯೆ ಒಟ್ಟು ದಲಿತರ ಶೇಕಡಾ 70 ರಷ್ಟು ಇದೆ. ಉಳಿದಂತೆ ಉರಾಂವ್, ಮುಂಡಾ, ಆದಿವಾಸಿ, ನವಶೂದ್ರ, ಮುಂತಾಗಿ ದಲಿತ ಉಪಜಾತಿಗಳಿವೆ. ರಾಜ್ಯದಲ್ಲಿ ಅಗಸ, ಬಡಿಗ, ಕಮ್ಮಾರ, ಕುಂಬಾರ ಮೊದಲಾದ ಜಾತಿಗಳವರನ್ನೂ ಸಹ ಪರಿಶಿಷ್ಟ ಜಾತಿವರ್ಗಗಳಲ್ಲಿ ಗಣಿಸಲಾಗಿದೆ. ಉತ್ತರ ಬಂಗಾಲದ ದಾರ್ಜಿಲಿಂಗ್ ಮತ್ತು ಜಲಪಾಯಿಗುರಿ ಜಿಲ್ಲೆಯ ಕೆಲ ಭಾಗಗಳು ಅತಿವೃಷ್ಟಿ ಪೀಡಿತ ಪ್ರದೇಶಗಳಾಗಿದ್ದರೆ ಉಳಿದ ಭಾಗ ಹಲವಾರು ವರ್ಷ ಅನಾವೃಷ್ಟಿ ಪೀಡಿತ ಪ್ರದೇಶವಾಗುತ್ತದೆ.

ಉತ್ತರ ಬಂಗಾಲ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿರುವ ದಲಿತ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. 1979 ರಲ್ಲಿ ದಲಿತ ವಿದ್ಯಾರ್ಥಿಯೊಬ್ಬನು ಹೆಚ್ಚು ಅಂಕಗಳನ್ನು ಗಳಿಸಿದ್ದನ್ನು ಸಹಿಸದ ಸವರ್ಣೀಯ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿಯ ಮೇಲೆ, ವಿನಾಕಾರಣ ಹಲ್ಲೆ ನಡೆಸಿದರು. ಈ ಘಟನೆಯಿಂದ ಚಿಂತನೆಗೆ ತೊಡಗಿದ ವಿಶ್ವವಿದ್ಯಾಲಯದ ಹಲವಾರು ದಲಿತ ವಿದ್ಯಾರ್ಥಿಗಳು ತಮ್ಮ ಭಾಗದಲ್ಲಿ ದಲಿತ ಸಂಘಟನೆಯೊಂದರ ಅವಶ್ಯಕತೆಯನ್ನು ಮನಗಂಡರು. ಅಲ್ಲಿಯೇ ತಾತ್ಕಾಲಿಕವಾಗಿ ದಲಿತ ವಿದ್ಯಾರ್ಥಿಗಳ ಸಂಘಟನೆಯೊಂದನ್ನು ಪ್ರಾರಂಭಿಸಿ ಅನಂತರ 1980 ರಲ್ಲಿ ಅದನ್ನೇ 'ಉತ್ತರ ಬಂಗಾಲ ದಲಿತ ಮತ್ತು ಆದಿವಾಸಿ ಸಂಘಟನೆ' ಎಂದು ಕರೆದರು.

1980ರಿಂದಲೂ ಉತ್ತರ ಬಂಗಾಲದ ಎಲ್ಲಾ ಜಿಲ್ಲೆಗಳಲ್ಲಿ ಸಂಘಟನೆಯನ್ನು ಕಟ್ಟಿ ದಲಿತ ಯುವ ಜನರು ಸಕ್ರಿಯವಾಗಿ ಕಾರ್ಯ ನಿರತರಾಗಿದ್ದಾರೆ. ಈ ಭಾಗದಲ್ಲಿ ರಾಜವಂಶಿ ಉಪಜಾತಿ ಪ್ರಭಾವ ಹೆಚ್ಚು ಇರುವುದಾದರೂ ಸಂಘಟನೆಯಲ್ಲಿ, ಸಂಘಟನೆಯ ಪದಾಧಿಕಾರಿಗಳಲ್ಲಿ ಎಲ್ಲಾ ಉಪಜಾತಿಗಳ ಯುವ ಜನರು ಹಾಗೂ ಆದಿವಾಸಿಯ ಯುವಜನರು ಇರುವ ಹಾಗೆ ನೋಡಿಕೊಂಡಿದೆ. ನನಗೆ ಅತ್ಯಂತ ಆಶ್ಚರ್ಯ ಹಾಗೂ ಹೆಮ್ಮೆಯನ್ನು ಮೂಡಿಸಿದ ಸಂಗತಿಯೆಂದರೆ ಈಗ ಈ ಸಂಘಟನೆಗೆ ಅಧ್ಯಕ್ಷರಾಗಿ ಮಹಿಳೆಯೊಬ್ಬರು–ಶ್ರೀಮತಿ ರಂಜನ ರಾಯ್–ಇರುವುದು ತಿಳಿದಾಗ. ಕೂಚ್‌ಬಿಹಾರ ಜಿಲ್ಲೆಯ ತೂಫಾನಗಂಜಿನ ನರೇಂದ್ರ ನಾಥ ದಾಸ್ ಪೂರ್ಣಾವಧಿ ಕಾರ್ಯಕರ್ತರಾಗಿಯೂ, ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಘ

ಟನೆಯ ಬೌದ್ಧಿಕ ಬೆನ್ನೆಲುಬಾಗಿ ನರೇಂದ್ರ ನಾಥ ದಾಸ್, ಜುಗಲ್ ಕಿಶೋರ್ ರಾಯ್ ಬೀರ್ ನಿಶಿಶ್ ಬರ್ಮನ್, ಪ್ರಭಾತ್ ಬರ್ಮನ್, ಮುಂತಾದವರು ಇದ್ದಾರೆ. ಜಲಪಾಯಿಗುರಿಯಲ್ಲಿ ನನಗೆ ಆತ್ಮೀಯರಾದ ಕಮಲ್ ಬ್ಯಾನರ್ಜಿಯಂಥ ಹಲವಾರು ಜನ ಸವರ್ಣೀಯರೂ ಸಹ ಈ ಸಂಘಟನೆಯ ಬಗ್ಗೆ ಅಭಿಮಾನ ಹೊಂದಿರುವುದು, ಎಲ್ಲಾ ರೀತಿಯ ಸಹಕಾರ ನೀಡುತ್ತಿರುವುದು ತಿಳಿಯಿತು. ರಾಜ್ಯ ಸರ್ಕಾರದಲ್ಲಿ ಒಟ್ಟು 7 ಲಕ್ಷ ಸರ್ಕಾರಿ ನೌಕರರಿದ್ದು ದಲಿತರು ಕೇವಲ 40 ಸಾವಿರ ಮಾತ್ರ ಇರುವುದನ್ನು ಬ್ಯಾನರ್ಜಿ ವ್ಯಕ್ತಪಡಿಸಿ ಇಂಥ ಸರ್ಕಾರಕ್ಕೆ ಕಮ್ಯುನಿಸ್ಟ್ ಸರ್ಕಾರ ಎನ್ನುವುದೇ ಕಮ್ಯುನಿಜಂಗೆ ಅಪಮಾನ ಮಾಡಿದಂತೆ ಎಂದು ನುಡಿದರು.

ಸುಮಾರು ಹತ್ತು ಸಾವಿರ ಸದಸ್ಯರನ್ನು ಹೊಂದಿರುವ ಉತ್ತರ ಬಂಗಾಲ ದಲಿತ ಮತ್ತು ಆದಿವಾಸಿ ಸಂಘಟನೆ (ಉತ್ತರ ಬಂಗ ತಪಸೇಲಿ, ಜಾತಿ, ಆದಿವಾಸಿ ಸಂಘಟನೆ) ತನ್ನ ವಿದ್ಯಾರ್ಥಿ ಅಂಗ ಸಂಘಟನೆಯನ್ನೂ 1982ರಿಂದ ಸಂಘಟಿಸಲು ತೊಡಗಿದೆ. ಹಳ್ಳಿಗಾಡುಗಳಲ್ಲಿರುವ ದುಡಿಯುವ ದಲಿತರನ್ನು ಸಂಘಟಿಸಿ ಅವರಿಗೆ ಭೂಮಿ ದೊರಕಿಸಿ ಕೊಡುವ ಕಾರ್ಯ ಈ ಸಂಘಟನೆಯದು. ಕೊಚ್‌ಬಿಹಾರದಲ್ಲಿ 1980ರಲ್ಲಿ ಸಮ್ಮೇಳನ ನಡೆಸಿದಂತೆ ಈ ವರ್ಷ ದಲಿತ ವಿದ್ಯಾರ್ಥಿಗಳ ಸಮ್ಮೇಳನವೊಂದನ್ನು ಮಾಡುವ ವಿಚಾರವನ್ನು ನರೇಂದ್ರನಾಥ ದಾಸ್ ತಿಳಿಸಿದರು. ಮೇಲರಿಮೆ (ಸುಪೀರಿಯಾರಿಟಿ ಕಾಂಪ್ಲೆಕ್ಸ್) ಹೊಂದಿರುವ ರಾಜವಂಶಿ ಜನರನ್ನು ಇತರ ದಲಿತ ಜಾತಿಗಳ ಹಾಗೂ ಆದಿಜನರ ಜೊತೆಗೆ ಸಂಘಟಿಸುವುದು ಕಷ್ಟಸಾಧ್ಯ ಎಂಬ ತಮ್ಮ ಅನುಭವವನ್ನೂ ಸಹ ಅವರು ಹಂಚಿಕೊಂಡರು.

ಟೀ ತೋಟಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ದಲಿತ ಜಾತಿ ಹಾಗೂ ಆದಿವಾಸಿ ಜಾತಿಗಳವರಾಗಿರುವುದನ್ನು ಗಮನಿಸಿ ಸಂಘಟನೆಯು 1982ರಿಂದ ಟೀ ತೋಟಗಳ ಕಾರ್ಮಿಕರನ್ನು ಸಂಘಟಿಸಲುತೊಡಗಿತು. ಈಗಾಗಲೇ ತನ್ನ ನೆಲೆಯನ್ನು ಭದ್ರಗೊಳಿಸಿಕೊಂಡಿರುವ ಸಿಪಿಎಂ ಪಕ್ಷದ ಕಾರ್ಮಿಕಸಂಘಟನೆ ಸಿ. ಐ. ಟಿ.ಯು. ದಲಿತ ಸಂಘಟನೆಯ ಕಾರ್ಯಕರ್ತರನ್ನು ಬೆದರಿಸಿ ಇಲ್ಲದೇ ಹಲ್ಲೆಗೂ ಯತ್ನಿಸಿದ್ದಾಗಿ ದಲಿತ ಮಿತ್ರರು ತಿಳಿಸಿದರು. ಸಂಘಟನೆಯ ರಾಜಕೀಯ ನಿಲುವಿನ ಬಗ್ಗೆ ಪ್ರಶ್ನೆ ಮಾಡಿದಾಗ ತಮ್ಮ ಸದಸ್ಯರು ಯಾವುದೇ ಪಾರ್ಟಿಯನ್ನು ಬೆಂಬಲಿಸಲು ಸ್ವತಂತ್ರರಿದ್ದಾರೆಂದು ಹೇಳಿದರು. ಇದರ ಬಗ್ಗೆ ವಿವರವಾಗಿ ಮಾತಾಡಿದಾಗ ಸಂಘಟನೆಯು ಕಾಂಗ್ರೆಸ್ (ಐ)ಯನ್ನು ವಿರೋಧಿಸಿದಷ್ಟೇ ಸಿ. ಪಿ. ಎಂ. ಪಕ್ಷವನ್ನೂ ಸಹ ವಿರೋಧಿಸುತ್ತಿರುದಾಗಿ ತಿಳಿಯಿತು. ಕೆಲಬಾರಿ ಸಂಘಟನೆಯು ದಲಿತ ಮಿತ್ರರು ಮಾತಾಡುವುದರ ಮೇಲಿಂದ ಕಾಂಗ್ರೆಗಿಂತ ಹೆಚ್ಚು ಸಿಪಿಎಂ ಪಕ್ಷವನ್ನು, ಸಿಪಿಎಂ ಸರ್ಕಾರವನ್ನು ವಿರೋಧಿಸುತ್ತಿರುವುದೂ ಗಮನಕ್ಕೆ ಬಂತು. ಇದರ ಬಗ್ಗೆ ಪ್ರತ್ಯೇಕವಾಗಿ ಕೆಲವು ಮಿತ್ರರನ್ನು ವಿಚಾರಿಸಿದಾಗ ಕಾಂಗ್ರೆ ತುಸು ವಾಸಿ ಎನ್ನುವ ಅಭಿಪ್ರಾಯವೂ ಇರುವುದಾಗಿ ತಿಳಿದು ಬಂತು. ನಿಜಕ್ಕೂ ನನಗೆ ದಿಗ್ಭ್ರಮೆ ತಂದ ಸಂಗತಿ ಇದಾಗಿತ್ತು.

ದಲಿತ ಸಂಘಟನೆಯ ಪ್ರಮುಖ ನಾಯಕರಲ್ಲೊಬ್ಬರಾದ ಶ್ರೀ. ಜುಗಲ್ ಕಿಶೋರ್ ರಾಯ್ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಸಮಾಜವಾದಿ ವಿಚಾರಗಳನ್ನು ಹೊಂದಿದವರೂ ಈಗಲೂ ಸಮಾಜವಾದಿ ಬಣಕ್ಕೆ ಹತ್ತಿರವಾದವರೂ ಆಗಿದ್ದಾರೆ. ಪ್ರಗತಿಪರ ವಿಚಾರಗಳನ್ನು ಹೊಂದಿ ಸಂಘಟನೆಯೊಂದಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಹಾಗೂ ದಲಿತ ಮಿತ್ರರ ವಿಶ್ವಾಸವನ್ನು ಪಡೆದುಕೊಂಡಿರುವ ಹಲವಾರು ಸವರ್ಣೀಯ ಮಿತ್ರರೂ ಸಹ ಸಮಾಜವಾದಿ ಬಣಕ್ಕೆ ಸೇರಿದವರಾಗಿದ್ದಾರೆ. ಕೊಚ್‌ಬಿಹಾರದಲ್ಲಿ ದಿನಾಂಕ 20-5-83 ರಂದು

ವಿಶೇಷ ವರದಿ


ನಡೆದ ಸೆಂಟ್ರಲ್ ಕಮಿಟಿ ಸಭೆಯ ಅನಂತರ ಶ್ರೀಮತಿ ರಂಜನಾ ರಾಯ್, ನರೇಂದ್ರನಾಥ ದಾಸ್ ಮತ್ತು ಜುಗಲ್ ಕಿಶೋರ್ ರಾಯ್ ಅವರೊಂದಿಗೆ ನಾನು ಚರ್ಚಿಸಿದಾಗಲೂ ಸಹ ಅವರು ತಮಗೆ ಸಮಾಜವಾದಿ ವಿಚಾರಗಳಲ್ಲಿ ಹೆಚ್ಚು ಆಸ್ಥೆ ಇರುವುದಾಗಿಯೂ, ಒಂದಲ್ಲ ಒಂದು ದಿನ ಸಮಾಜವಾದಿ ಬಣವೇ ದಲಿತರಿಗೆ ನಿಜವಾಗಿಯೂ ಸಹಕಾರಿಯಾದೀತು ಎಂದೂ ತಮ್ಮ ಆಶಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನಾನು ಪ್ರತಿಪಾದಿಸಿದ 'ದಲಿತರಿಗೇ ನಾಯಕತ್ವ' ಎಂಬ ವಿಚಾರವನ್ನು ಕಿಶೋರ್ ರಾಯ್ ಪೂರ್ಣವಾಗಿ ಒಪ್ಪದೇ 'ದಲಿತರ ಶಕ್ತಿ ಅಂದರೆ ಜನಸಂಖ್ಯೆಗೆ ತಕ್ಕಷ್ಟು ಪ್ರಾತಿನಿಧ್ಯ' ಎಂಬುದನ್ನು ಪ್ರತಿಪಾದಿಸುತ್ತಿದ್ದುದನ್ನು ನಾನು ಅಚ್ಚರಿಯಿಂದ ಗಮನಿಸಿದೆ.

ಅಂದು ರಾತ್ರಿ ಸುಮಾರು 2-30 ಗಂಟೆಯವರೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬಗೆಗೆ ನನಗೆ ತಿಳಿದಿದ್ದ ವಿಚಾರಗಳನ್ನು ವಿವರಿಸಿ ಹೇಳಿದಾಗ 'ದೇಶದಲ್ಲಿ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ದಲಿತ ಸಂಘಟನೆಗಳ ಹೋರಾಟ-ಕಾರ್ಯಕ್ರಮಗಳ ಬಗ್ಗೆ ಸುವ್ಯವಸ್ಥಿತವಾದ ಸಂಪರ್ಕವನ್ನು ಹೊಂದುವುದು ಅತ್ಯವಶ್ಯಕ ಎಂಬುದನ್ನು ಎಲ್ಲಾ ಮಿತ್ರರೂ ಒಪ್ಪಿದರು. ದಸಂಸ ರಾಜ್ಯ ಸಂಚಾಲಕರ ವಿಳಾಸವನ್ನು ಅವರಿಗೆ ನೀಡಿ ಸಂಪರ್ಕ ಇಟ್ಟುಕೊಳ್ಳಲು ವಿನಂತಿಸಿದಾಗ ಅವರು ಭಾಷೆಯ ಸಮಸ್ಯೆಯನ್ನು ಹೇಳಿದ್ದಕ್ಕೆ ಇಂಗ್ಲಿಷ್ ಅಥವಾ ಹಿಂದಿ ಆಗಬಹುದು ಎಂದು ಸೂಚಿಸಲಾಯಿತು.

ಕೊಚ್‌ಬಿಹಾರ ಜಿಲ್ಲೆಯಲ್ಲಿ ದಲಿತರ ಗುಡಿಸಲುಗಳನ್ನು ಸಿ. ಪಿ. ಎಂ. ಪಕ್ಷದ ಕೆಲವು ಕಾರ್ಯಕರ್ತರು ಕಿತ್ತಿ ಹಾಕಿದಾಗ ಪ್ರತಿಭಟಿಸಿದ ದಲಿತ ಸಂಘಟನೆಯ ಕಾರ್ಯಕರ್ತರು ಸತ್ಯಾಗ್ರಹ ನಡೆಸಿದರು. ಸುಮಾರು 3000 ದಲಿತರ ಪ್ರತಿಭಟನಾ ಪ್ರದರ್ಶನದೆದುರು ವಿನಾ ಕಾರಣ ಸಿ. ಪಿ. ಎಂ. ಸರ್ಕಾರದ ಪೋಲೀಸರು ಗೋಲಿಬಾರ್ ಮಾಡಿದ ಪರಿಣಾಮವಾಗಿ ದಲಿತ ಸಂಘಟನೆಯ ನರೇಂದ್ರ ಬರ್ಮನ್ ಎಂಬ 24 ವರ್ಷದ ಯುವಕ ಸಾವನ್ನಪ್ಪಿದ. ಗೋಲಿಬಾರ್ ಬಗ್ಗೆ ವಿಚಾರಣೆ ನಡೆಸಬೇಕೆಂದು ಒತ್ತಾಯಿಸಿದರೂ ಬಡವರ ಪಕ್ಷವೆಂದೂ, ಸರ್ಕಾರವೆಂದೂ ಬೊಬ್ಬೆ ಹಾಕುವ ಸಿ. ಪಿ. ಎಂ. ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಯುವಜನರನ್ನು ಸಂಘಟಿತಗೊಳಿಸಲು, ಅವರಲ್ಲಿ ವೈಚಾರಿಕ ಜಾಗೃತಿ ಮೂಡಿಸಲು ದಲಿತ ಸಂಘಟನೆ ವಿಚಾರ ಸಂಕಿರಣ, ಅಧ್ಯಯನ ಶಿಬಿರಗಳನ್ನು ಏರ್ಪಡಿಸುತ್ತಿದೆ. ಅಧ್ಯಯನ ಶಿಬಿರಗಳಿಗೆ ದಲಿತ ವಿಚಾರವಂತರನ್ನೂ, ಪ್ರಗತಿಪರ ಚಿಂತನಕಾರರನ್ನೂ ಆಹ್ವಾನಿಸಿ ದಲಿತ ಯುವಜನರನ್ನು ತರಬೇತುಗೊಳಿಸುವ ಕಾರ್ಯ ಸಾಗಿದೆ. ಸಿ. ಪಿ. ಎಂ. ಸರ್ಕಾರ ಮಾತ್ರ ಈ ದಲಿತ ಸಂಘಟನೆಯನ್ನು ವಿಚ್ಛಿದ್ರಕಾರಿ ಗುಂಪೆಂದು ಗಣಿಸಿರುವುದನ್ನು ದಲಿತ ಮಿತ್ರರು ತೀವ್ರ ವಿಷಾದದಿಂದ ಹೇಳಿದರು. "ನಮ್ಮ ಭಾಗವನ್ನು ಅಲಕ್ಷಿಸಲಾಗಿದೆ. ಎಲ್ಲಾ ಕಾರ್ಖಾನೆಗಳನ್ನು ಕಲಕತ್ತೆಯ ಸುತ್ತಮುತ್ತಲೇ ತೆರೆಯಲಾಗುತ್ತಿದೆ. ಭೂಸುಧಾರಣೆಯ ಕಾನೂನನ್ನು ಜಾರಿಗೆ ತಂದಿಲ್ಲ; ಟೀ ತೋಟಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಟ ಕೂಲಿಯನ್ನೂ ನೀಡಲಾಗುತ್ತಿಲ್ಲ; ಸಿ. ಪಿ. ಎಂ. ಸರ್ಕಾರ ದಲಿತರಿಗೆ ವಿಶೇಷವಾದ ಸಮಸ್ಯೆಗಳಿವೆ' ಎಂಬುದನ್ನ ಒಪ್ಪಲು ಸಿದ್ಧವಿಲ್ಲ. ಸರ್ಕಾರದಲ್ಲೂ ಸಹ ದಲಿತರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲ. ಸರ್ಕಾರಿ ಹಾಗೂ ಅರೆ ಸರ್ಕಾರಿ ಸೇವೆಗಳಲ್ಲಿ ಮೀಸಲಾತಿಯನ್ನು ಜಾರಿಗೆ ತಂದಿಲ್ಲ; ಇಂತಹ ಹಲವಾರು ಬೇಡಿಕೆ ಕುರಿತು ಮನವಿ ಅರ್ಪಿಸಿ, ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದಾಗ ನ್ಯಾಯಯುತವಾದ ಹೋರಾಟಕ್ಕಿಳಿದರೆ ಸಿ. ಪಿ. ಎಂ. ಸರ್ಕಾರದ ದೃಷ್ಟಿಯಲ್ಲಿ ವಿಚ್ಛಿದ್ರಕಾರಿ ಶಕ್ತಿಗಳಾಗುತ್ತಾರೆ, ರಾಜ್ಯ ಒಡೆಯುವ ಸಂಘಟನೆಯವರಾಗುತ್ತಾರೆ, ದೇಶಕ್ಕೆ ಗಂಡಾಂತರ ತರುವವರಾಗುತ್ತಾರೆ.

ಎಪ್ಪತ್ತರ ದಶಕದ ಸಾಹಿತ್ಯ ಮತ್ತು ರಾಜಕೀಯದ ಬಗ್



ಡಾ. ಯು. ಆರ್. ಅನಂತಮೂರ್ತಿ

ಡಾ. ಅನಂತಮೂರ್ತಿಯವರ ಲೇಖನವನ್ನು ಪಂಚ
ನೀಡಲುಹರ್ಷಿಸುತ್ತದೆ. ಕನ್ನಡದ ಮುಖ್ಯ ಲೇಖಕರಾ
ಅನಂತಮೂರ್ತಿಯವರು ಚಿಂತಕರಾಗೂ ನಮಗೆ ಮುಖ
ರಾಗಿದ್ದಾರೆ. ಜನಾಭಿಪ್ರಾಯ ತನ್ನ ವಿರುದ್ಧವಿದ್ದಾಗಲ
ತನ್ನ ನಿಲುವನ್ನು ಹೇಳುವ ಎದೆಗಾರಿಕೆಯ ಅನಂ
ಮೂರ್ತಿಯವರನ್ನು, ಬಸವಲಿಂಗಪ್ಪ ಹಗರಣದಲ್ಲಿ
ಅವರ ದಲಿತಪರ ನಿಲುವನ್ನು ಈಗಲೂ ನೆನಪಿಸಿ
ಕೊಳ್ಳುವಂತಿದೆ. ಸಾಮಾನ್ಯವಾಗಿ ಸದಾ ವಿವಾದಕ್ಕೊ
ಳಗಾಗುವ ಅನಂತಮೂರ್ತಿಯವರು, ತಾವು ಚಿಂತಿಸಿದ್ದ
ರಲ್ಲಿ ತಮ್ಮ ತಪ್ಪಿನ ಅರಿವು ಬಂದಾಗ ಅದನ್ನು ಒಪ್ಪಿ
ನಡೆಯುವ ಗುಣದ ಅನಂತಮೂರ್ತಿಯವರ ಲೇಖನ
ವನ್ನು ವಿವಾದಕ್ಕೊಳಗಾಗಲಿ ಎಂದು ಪ್ರೀತಿಯಿಂದ
ಗೇಲಿಮಾಡಿ ನಿಮ್ಮ ಮುಂದಿಡುತ್ತಿದ್ದೇವೆ.

ಇವತ್ತು ನಾನು ಈ ವಿಷಯವನ್ನು ಒಂದು ಚರ್ಚೆಯಾಗಿ ಮಂಡಿಸುತ್ತಿದ್ದೇನೆ-ಕೆಲವು ಸಮಸ್ಯೆಗಳನ್ನು ಎತ್ತುವ ದೃಷ್ಟಿಯಿಂದ. ಈ ವಿಷಯದ ಬಗ್ಗೆ ನಾನು ಎಷ್ಟು ಬರೆದೋ, ಮಾತನಾಡಿಯೋ ಇದ್ದೇನೆ ಎಂದರೆ, ಈಗ ಮತ್ತೆ, ನಿಮ್ಮೆದುರು ನಿಂತು ಹೊಸದೇನೂ ಹೇಳುವುದು ಇಲ್ಲದಿದ್ದರೂ ಪ್ರೊ. ಶಿವರುದ್ರಪ್ಪನವರ ವಿಶ್ವಾಸದ ಕರೆಗೆ ಒಪ್ಪಿಬಿಟ್ಟಿದ್ದರಿಂದ, ವಿಷಾದಪಡುತ್ತಾ ಮಾತನಾಡುತ್ತಿದ್ದೇನೆ.

ಎಪ್ಪತ್ತರ ದಶಕದ ಕೊನೆ ಅನೇಕ ಭ್ರಮೆಗಳ ಕೊನೆ ಎಂದು ನಾನು ಈಗಾಗಲೇ ಹಲವು ಸಾರಿ ಹೇಳಿಯಾಗಿದೆ ; ಬರೆದೂ ಆಗಿದೆ. ಈ ಶತಮಾನದ ಮೊದಲಿನಿಂದ ಈವರೆಗೆ, ಪರ್ಯಾಯ ವ್ಯವಸ್ಥೆ ಎನ್ನಿಸಿದ್ದ ರಷ್ಯಾದ ಸೋವಿಯತ್ ಮಾಡೆಲ್, ಚೈನಾದ ಮಾಡೆಲ್, ವಿಯೆಟ್ನಾಂ ಮಾಡೆಲ್, ಕ್ಯೂಬಾದ ಮಾಡೆಲ್‌ಗಳೂ ಕೂಡ–ಅವುಗಳ ಘೋಷಿತ ಉದ್ದೇಶ ಏನೇ ಇರಲಿ ತೋರಿಕೆಯ ವ್ಯತ್ಯಾಸಗಳು ಏನೇ ಇರಲಿ–ಆಧುನಿಕ ಯಂತ್ರ ನಾಗರಿಕತೆಯನ್ನು ತಮ್ಮ ತಮ್ಮ ದೇಶಗಳಲ್ಲಿ ಆದಷ್ಟು ಬೇಗ ತಂದು ಕೊಳ್ಳಲು ಮಾಡಿದ ಪ್ರಯತ್ನಗಳೇ ಎಂದು ಎಪ್ಪತ್ತರ ದಶಕ ಮುಗಿಯುತ್ತಿದ್ದಂತೆ ನಮ್ಮಲ್ಲಿ ಕೆಲವರಿಗಾದರೂ ಅನ್ನಿಸಿದೆ. ಏಕೆಂದರೆ ಇಪ್ಪತ್ತರ ದಶಕದ ಯುರೋಪಿನಲ್ಲಿ ಎಲ್ಲರಿಗೂ ರಷ್ಯಾ ಪರ್ಯಾಯ ವ್ಯವಸ್ಥೆ ತರುತ್ತೆ ಎಂದು ಅನ್ನಿಸಿತ್ತು. ಆದರೆ ತರಲಿಲ್ಲ. ಚೈನಾ ತರಬಹುದು ಅನ್ನಿಸಿತ್ತು. ಆದರೆ ಅದೂ ತರಲಿಲ್ಲ. ಈಗ ಚೈನಾ ದೇಶವೂ ಆಧುನೀಕರಣದ ಹಾದಿಯಲ್ಲೇ ಇದೆ. ಗಾಂಧೀಜಿ 1908ರಲ್ಲಿ ಹಿಂದ್ ಸ್ವರಾಜ್ ಎನ್ನುವ ಪುಸ್ತಕವನ್ನು ಬರೆದರು. ಇದು ಬಹಳ ಮುಖ್ಯವಾದ ಪುಸ್ತಕ. ಇದರಲ್ಲಿ ಮನುಷ್ಯ ಜೀವ ಕೃತಾರ್ಥತೆಗೆ ಈ ಆಧುನಿಕ ನಾಗರಿಕ ಅನಗತ್ಯ ಮಾತ್ರವಲ್ಲ, ಮಾರಕ ಕೂಡ ಎಂದಿದ್ದರು. ಆದರೆ ಆ ಆಧುನಿಕ ನಾಗರಿಕತೆಯೇ ನಮಗೂ ಕೂಡ—ಇಂಡಿಯಾದಲ್ಲಿ—ಮಾಡೆಲ್ ಆಯಿತು. ಆಧ್ಯಾತ್ಮ ಮಾತ್ರ ನಮಗೆ ಮುಖ್ಯ ಎಂದು ಜಂಭಪಡುತ್ತಾ ಇದ್ದರೂ ಕೂಡ ನೆಹರೂ ನೇತೃತ್ವದಲ್ಲಿ ನಾವು ಆಯ್ದುದ್ದು ಈ ಆಧುನಿಕ ನಾಗರಿಕತೆಯನ್ನೇ.

ನೆಹರೂ ಪ್ರಧಾನಮಂತ್ರಿ ಆಗುವ ಸಂದರ್ಭದಲ್ಲಿ ಗಾಂಧೀಜಿ ನೆಹರೂಗೆ ಬರೆದ ಕಾಗದವೊಂದನ್ನು ಹೀಗೆ ಪ್ರಾರಂಭಮಾಡುತ್ತಾರೆ : ಈ ಕಾಗದವನ್ನು ಇಂಗ್ಲೀಷಿನಲ್ಲಿ ಬರೆಯಬೇಕೋ, ಹಿಂದೂಸ್ಥಾನಿಯಲ್ಲಿ ಬರೆಯಬೇಕೋ, ಗೊತ್ತಿಲ್ಲ ; ಬಹಳ ದಿನ ಯೋಚನೆ ಮಾಡಿ ಇದನ್ನು ಬರೆಯುತ್ತಾ ಇದ್ದೇನೆ. ನಮ್ಮ ದೇಶ ಬೇರೆ ದೇಶಗಳ ಹಾಗಾಗಬಾರದು. ನಮ್ಮ ಮಾರ್ಗ ಬೇರೆ ಆಗಬೇಕು. ನೀವು ಎಂದೂ ನಾನು ಬರೆದ "ಹಿಂದ್ ಸ್ವರಾಜ್" ಅನ್ನು ಸೀರಿಯಸ್ಸಾಗಿ ಗಣನೆಗೆ ತೆಗೆದುಕೊಂಡ ಹಾಗಿಲ್ಲ. ಎಂದ- ಮುಂತಾಗಿ ಗಾಂಧೀಜಿ ನೆಹರೂರವರನ್ನು ಪ್ರೀತಿಯಿಂದ ದೂರುತ್ತಾರೆ. ನೆಹರೂ ಅದಕ್ಕೆ ಉತ್ತರಿಸುತ್ತಾ. "ನಾನೂಹಿಂದ್‌ಸ್ವರಾಜ್ ಅನ್ನು ಓದಿದ್ದೇನೆ. ಆದರೆ ನನಗೆ ಅದು ವ್ಯಾವಹಾರಿಕ ಎಂದು ಅನ್ನಿಸುವುದಿಲ್ಲ. ನಾವು ಬೇರೆ ದಿಕ್ಕನ್ನೇ ಹಿಡಿಯಬೇಕು." ಮತ್ತೆ ಮುಂದುವರಿಸುತ್ತಾ ನೆಹರೂ ಹೇಳುತ್ತಾರೆ. "ಯಂತ್ರ ನಾಗರಿಕತೆಯ ಆಧುನಿಕೀಕರಣ ಪ್ರಾಯಶಃ ಅನಿವಾರ್ಯ. ಇಡೀ ಜಗತ್ತೇ ಆತ್ಮನಾಶದ ಹಾದಿಯಲ್ಲಿರುವಂತೆ

ಜನವರಿ 1981 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದವರು ನಡೆಸಿದ ಒಂದು ವಿಚಾರ ಸಂಕಿರಣದಲ್ಲಿ ನಾನು ಆಡಿದ ಮಾತುಗಳನ್ನು ಟೇಪ್ ರಿಕಾರ್ಡ್ ಮಾಡಿಕೊಂಡು, ಅದರಿಂದ ಪಡೆದ ಪಾಠವನ್ನು ಪರಿಷ್ಕರಿಸಿ (ಭಾಷೆಯ ದೃಷ್ಟಿಯಿಂದ) ಸಿದ್ಧಪಡಿಸಿದ್ದು ಇದು. ನನ್ನ ಭಾಷಣ ಆ ಸಭೆಯಲ್ಲೂ ನಂತರವೂ ವಿವಾದವನ್ನೆಬ್ಬಿಸಿತು. 'ಲಂಕೇಶ್ ಪತ್ರಿಕೆ'ಯಲ್ಲಿ ಗೆಳೆಯ ಚಂಪಾರವರೂ ತೇಜಸ್ವಿಯವರೂ ನನ್ನನ್ನು ಖಂಡಿಸಿ ಬರೆದರು. ಈ ಸಭೆಯ ನಂತರ ಊಟಮಾಡಿ ನಾವು ಬರುವಾಗ ಚಂಪಾ ಮತ್ತು ನನ್ನ ನಡುವೆ ನಡೆದೊಂದು ಮಾತುಕತೆಯೂ ಇಲ್ಲಿ ಉಲ್ಲೇಖಕ್ಕೆ ಅರ್ಹ. ದಾರಿಯಲ್ಲೊಬ್ಬರು ಚಂಪಾರನ್ನು ನಿಲ್ಲಿಸಿದರು. ಧಾರವಾಡದ ಕಡೆಯ ಹಳ್ಳಿಗರಂತೆ ಕಾಣುತ್ತಿದ್ದ ಅವರನ್ನು ಚಂಪಾ ಆತ್ಮೀಯತೆಯಿಂದ ಬೆಂಗಳೂರಲ್ಲಿ ಮಾತಾಡಿಸಿದ್ದು ಕಂಡು ನನಗೆ ಸಂತೋಷವಾಯಿತು. ಸಂಪ್ರದಾಯಸ್ಥರಂತೆ ಕಾಣುತ್ತಿದ್ದ ಹಳ್ಳಿಗ, ಪ್ಯಾಂಟ್ ಧರಿಸಿದ ವಿಚಾರವಾದಿ ಚಂಪಾ-ಇಂಥ ಇಬ್ಬರನ್ನು ಬೆಂಗಳೂರಿನ ಬೀದಿಯಲ್ಲೂ ಆತ್ಮೀಯರನ್ನಾಗಿ ಮಾಡಿದ್ದು ಯಾವುದು? ತಾವು ಒಂದೇ ಊರವರು ಎಂಬುದಿರಬಹುದು; ಜಾತಿಯೂ ಇರಬಹುದು. ನಾವು ವರ್ಗದಲ್ಲಿ ಬೇರೆ ಬೇರೆಯಾದಾಗಲೂ ಜಾತಿ ನಮ್ಮನ್ನು ಒಟ್ಟಿಗೆ ತರುತ್ತದೆ- ಒಳ್ಳೆಯದಕ್ಕೂ, ಕೆಟ್ಟದಕ್ಕೂ. ಆಧುನಿಕ ಕಾಲದ ಸಂವೇದನೆಗೆ ಅಗತ್ಯಗಳಿಗೆ ಅಸಂಗತ ಮತ್ತು ವಿನಾಶಕಾರಿ ಎನ್ನಿಸುವ ಜಾತಿ ಇವತ್ತಿಗೂ ನಮ್ಮ ಆಪ್ತ ಸಂಬಂಧಗಳನ್ನು ನಿರ್ಧರಿಸುತ್ತದೆ. ಇದನ್ನು ಚಂಪಾರಿಗೆ ಸೂಚಿಸಿದೆ. ನಮ್ಮ ಅನುಭವಕ್ಕೆ ನಿತ್ಯ ಬರುವ ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳದೆ ವಿಚಾರ ಮಾಡುವುದರಿಂದ ಆಲೋಚನಾ ಕ್ರಮದಲ್ಲಿ ನಾವು ಸುಳ್ಳಾಗುತ್ತೇವೆಂದು ವಾದಿಸಿದೆ. ಚಂಪಾರು ನನ್ನ ಮಾತನ್ನು ತಳ್ಳಿಹಾಕಿದರು.

ಜಾತಿಯನ್ನು ನಾವು ಮೀರಬೇಕಾಗಿದೆ- ಈ ಕಾಲಕ್ಕದು ಖಂಡಿತ ಸಲ್ಲುವ ವ್ಯವಸ್ಥೆಯಂತೂ ಅಲ್ಲ. ಲೇಖಕರಾಗಿ ಚಂಪಾ, ತೇಜಸ್ವಿ, ಮಹಾದೇವ ಮತ್ತು ನಾನು ನಮ್ಮ ವೃತ್ತಿಯಿಂದಾಗಿ ಪರಸ್ಪರ ಹಂಚಿಕೊಳ್ಳಬಲ್ಲ ಆಸಕ್ತಿಗಳು ನಮ್ಮ ನಮ್ಮ ಜಾತಿಯವರ ಜೊತೆ ನಮಗೆ ಇರುವುದಕ್ಕಿಂತಲೂ ಹೆಚ್ಚಿವೆ. ಇಷ್ಟಿದ್ದೂ ಜಾತಿ ನಮ್ಮೆಲ್ಲರನ್ನೂ ಕೆಟ್ಟದಕ್ಕೂ ಒಳ್ಳೆಯದಕ್ಕೂ ಸೆಳೆಯಬಲ್ಲ ಶಕ್ತಿಯಾಗಿ ಉಳಿದಿದೆ. ಇದನ್ನು ನಿಜದಲ್ಲಿ ಗೆಲ್ಲಬೇಕೆಂಬ ನಾವು ಕಣ್ಣುಬಿಟ್ಟು ಅನುಭವದ ಸತ್ಯವನ್ನು ನೋಡಬಲ್ಲವರಾಗಬೇಕು ಎಂಬ ಉದ್ದೇಶದಿಂದಲೇ ವಾಗ್ವಾದ ಮುಂದುವರಿಯಲೆಂದು, ಅದರಲ್ಲಿ ನಾನೇ ಸೋಲಲೆಂದು ಈ ಲೇಖನವನ್ನು 'ಪಂಚಮ'ದಲ್ಲಿ ಪ್ರಕಟಿಸಿ ಎಂದು ಸಂಪಾದಕರನ್ನು ಕೇಳಿಕೊಂಡಿರುವೆ.

ನನಗೆ ಅನ್ನಿಸುತ್ತಿದೆ. ಆದ್ದರಿಂದ ನಾವು ಬೇರೇನು ಮಾಡುವುದಕ್ಕೆ ಸಾಧ್ಯ ? "

ಹೀಗೆ ಅದರ ಬಗ್ಗೆ ಏನಾದರೂ ಮಾಡಲಿಕ್ಕೆ ಸಾಧ್ಯವಿದ್ದ ನೆಹರೂ, ಯಂತ್ರ ನಾಗರಿಕತೆಯನ್ನು ಒಂದು ಕಡೆ ಒಪ್ಪಿಕೊಂಡು ಇನ್ನೊಂದು ಕಡೆ ಬಹಳ ದೊಡ್ಡ ತತ್ವಜ್ಞಾನಿಯಂತೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಪ್ರಾಯಶಃ ನಮ್ಮೆಲ್ಲರ ಮನಸ್ಥಿತಿ ನೆಹರೂರವರದ್ದು ಎಂದು ಅನ್ನಿಸುತ್ತದೆ. ನಾವು ಕೂಡ ಅದೇ ರೀತಿ ಯೋಚನೆ ಮಾಡುವವರಾಗಿದ್ದೇವೆ. ಒಂದು ದೃಷ್ಟಿಯಿಂದ ನಾವು ಆ ನೆಹರೂ ಯುಗದ ಫಲಗಳೇ. ಇದರ ಹಿಂದೆ, ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತ ತಾನಾಗಿಯೇ ಯಾವ ಬದಲಾವಣೆಯನ್ನು ಮಾಡಿಕೊಳ್ಳಲಾರದೆಂದು ತಿಳಿದಿದ್ದ ರಾಜಾರಾಮಮೋಹನರಾಯ್‌ರವರು ಆಂಗ್ಲ ವಿದ್ಯಾಭ್ಯಾಸ ಮತ್ತು ಆಂಗ್ಲ ನಾಗರಿಕತೆ ಇಲ್ಲದ ಹೊರತು ನಾವು ಏನೂ ಆಗಲಿಕ್ಕೆ ಸಾಧ್ಯವಿಲ್ಲ ಎಂದಿದ್ದರು; ಇಂಗ್ಲೀಷ್ ಭಾಷೆಯನ್ನು ಕಲಿಸಿಕೊಡಬೇಕು ಎಂದು ರಾಯ್ ಆಗಲೇ ಬ್ರಿಟೀಷರನ್ನು ಬೇಡಿಕೊಂಡಿದ್ದರು. ಇವತ್ತು ನಾವು ಇರುವುದು ಅವತ್ತು ಮಾಡಿದ ಅನೇಕ ಆಯ್ಕೆಗಳ ಫಲ ಅನ್ನುವುದನ್ನು ನಾವು ಮರೆಯಬಾರದು.

ಅದರ ಜತೆಗೇ, ನಾವು ಯಂತ್ರ ನಾಗರಿಕತೆಯನ್ನು ಮತ್ತು ಆಧುನಿಕ ಐರೋಪ್ಯ ಸಂಸ್ಕೃತಿಯನ್ನು ಒಪ್ಪಿಕೊಂಡನಂತರ ಒಂದು ಪಾಪಪ್ರಜ್ಞೆಯಿಂದ ನರಳಲು ಆರಂಭಿಸಿದೆವು. ಅದಕ್ಕೋಸ್ಕರ ನಾವು ಪುರಾತನತೆಯನ್ನು ಆರಾಧನಾ ಭಾವದಿಂದ ಕಾಣುವ 'ಓರಿಯಂಟಲಿಸ್ಟ್' ಆದೆವು. ಹಿಂದೂ ದೇಶದ ಸಂಸ್ಕೃತಿ, ಧರ್ಮಗಳ ಬಗ್ಗೆ ಕ್ರಿಯಾಶೀಲವಾದ ವಿಮರ್ಶಕ ದೃಷ್ಟಿ ತಾಳದೇ ಅದನ್ನು ಕೇವಲ ಹೊಗಳುವ ಸ್ಥಿತಿಗೆ ಬಂದುಬಿಟ್ಟೆವು. ನಾವು ಏನನ್ನು ಮರೆತೆವು ಎಂದರೆ, ಹಿಂದೆ ಈ ಸಂಸ್ಕೃತಿ ಈ ದೇಶದಲ್ಲಿ ಗಾಢವಾಗಿದ್ದಾಗ ಜಗಳಗಳಲ್ಲಿಯೇ ಅದು ಬೆಳೆದುಬಂದದ್ದು ಎನ್ನುವುದನ್ನು. ರಾಮಾನುಜಾಚಾರ್ಯರನ್ನೂ ಶಂಕರರನ್ನೂ ಒಪ್ಪುವುದಿಲ್ಲ; ಆನಂದತೀರ್ಥರು ಶಂಕರರನ್ನೂ, ರಾಮಾನುಜಾಚಾರ್ಯರನ್ನೂ ಒಪ್ಪುವುದಿಲ್ಲ. ಅಂಥವರೆಲ್ಲ ಪರಸ್ಪರ ಗುದ್ದಾಡಿಕೊಂಡು ಬೆಳೆಸಿದ ಈ ಸಂಸ್ಕೃತಿ ನಂತರ ನಮ್ಮ ಪಾಲಿಗೆ ಒಂದು ಓರೆಯಾದ ಓರಿಯೆಂಟಲ್ ಸಂಸ್ಕೃತಿ ಆಯಿತು. ಯಾಕೆಂದರೆ ನಮ್ಮ ನಿತ್ಯಜೀವನದಲ್ಲಿ ನಾವು ಆಂಗ್ಲರಂತಾಗುತ್ತಾ ಹೋದ ಹಾಗೆ, ಭಾವುಕವಾಗಿ ಭಾರತೀಯರಾಗುತ್ತಾ ಹೋಗುತ್ತೇವೆ. ಹಿಂದೆ ರಾಜಾರಾಮಮೋಹನರಾಯ್ ಮತ್ತು ನೆಹರೂರವರು ಮಾಡಿದ ಈ ಆಯ್ಕೆಯ ಫಲ ನಾವು. ಇದರ ಪರಿಣಾಮವೆಂದರೆ, ಕ್ರಮೇಣ ಎಲ್ಲರಿಗೂ ಅಮೆರಿಕಾದಂತೆ ತಾವು ಆಗಬೇಕು ಎನ್ನಿಸುವುದು, ರಷ್ಯಾಕ್ಕೂ ಅಂಥ ಆಶೆ ಇದೆ. ಚೈನಾಕ್ಕೆ ರಷ್ಯಾದಷ್ಟಾದರೂ ಆಗಬೇಕು ಅನ್ನುವ ಆಶೆ ಇದೆ. ಎಲ್ಲಕಡೆಯೂ ಈ ಅಮೆರಿಕಾ ಒಂದು ಮಾಡೆಲ್. ಇದನ್ನು ಯೋಚನೆ ಮಾಡುವಾಗ ನನಗೆ ಅನ್ನಿಸುತ್ತೆ, ಮಾರ್ಕ್ಸ್ ಮಾಡಿದ ತಪ್ಪುಗಳು ಮುಖ್ಯವಾಗಿ ಎರಡು ಎಂದು :

(ಅ) ಉತ್ಪಾದನಾ ಸಾಧನಗಳು ಬೆಳೆದ ದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಅಂತರ್ವಿರೋಧಗಳಿಂದ ಸಮಾಜವಾದಿ ವ್ಯವಸ್ಥೆ ಉದ್ಭವಿಸುತ್ತದೆಂದು ತಿಳಿದದ್ದು ಮೊದಲನೆಯ ತಪ್ಪು.

(ಆ) ಎರಡನೆಯದು, ಮಾನವನ ಭೌತಿಕ ಪ್ರಗತಿ ಅಕುಂಠಿತವಾಗಿ ಬೆಳೆಯುವುದನ್ನು ಸಾಧ್ಯವಾಗಿಸುವ ಅಕ್ಷಯಪಾತ್ರೆ ಈ ನಮ್ಮ ಭೂಮಿ ಎಂದು ತಿಳಿದದ್ದು.

ಉತ್ಪಾದನಾ ಸಾಧನಗಳೆಲ್ಲಾ ಬೆಳೆದನಂತರ ಸಮಾಜವಾದ ಬರುತ್ತದೆಯೆಂದು ಮಾರ್ಕ್ಸ್ ತಿಳಿದದ್ದು ಯಾಕೆ ತಪ್ಪು ಅಂದರೆ :

(ಅ) ಜರ್ಮನಿ, ಅಮೆರಿಕಾಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ಸಮಾಜವಾದಿ ಆಗಲಿಲ್ಲ.

(ಆ) ಅವನ ತತ್ತ್ವವನ್ನೇ ಆಧರಿಸಿ ಲೆನಿನ್ ರಷ್ಯಾದಲ್ಲಿ ಕಟ್ಟಿದ ವ್ಯವಸ್ಥೆಯೂ ಮಾನವೀಯ ಸಂಬಂಧಗಳನ್ನು ಸಮಾಜವಾದಿ ತತ್ವದ ಆಧಾರದ ಮೇಲೆ ಬೆಳೆಸುವುದರಲ್ಲಿ ಸೋತಿದೆ.

ರಷ್ಯಾ ಇವತ್ತು ಸಮಾಜವಾದವನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಕ್ಕಿಲ್ಲ. ರಷ್ಯನ್ನರು ಬಹುತ್ವಸ್ಪನ್ನವನ್ನು ಆಶಿಸುವ ವ್ಯಕ್ತಿವಾದಿಗಳೇ. ಟೆಕ್ನಾಲಜಿ ಬೆಳೆದ ರಷ್ಯಾದಲ್ಲಿ ಇನ್ನೂ ನಾವು ಕಾಣುವ ಮನುಷ್ಯನ ಒಳ್ಳೆಯತನ, ಸ್ನೇಹ, ಪ್ರೇಮ, ಇತ್ಯಾದಿಗಳು, ದಾಸ್ತೋವಸ್ಕಿಯಂಥವರು ಝಾರ್ ಕಾಲದ ನರಕದಲ್ಲೂ ಕಂಡಂಥವೇ. ಅಂದಿನಿಂದ ಇಂದಿನವರೆಗೂ ಅದು ಉಳಿದುಬಂದಿದೆ. ಆದರೆ ಆಧುನಿಕತೆಯೇ (Modern Civilization) ಗುರಿಯಾದ ಯಂತ್ರ ವ್ಯವಸ್ಥೆ ಬೆಳೆದಂತೆ ಮನುಷ್ಯನಿಗೆ ಸಮುದಾಯದ ಕಲ್ಪನೆ ಸಡಿಲವಾಗುತ್ತಾ ಹೋಗುತ್ತದೆಂಬುದನ್ನೂ, ಆದರೆ ತೀರಾ ಬಡ ರಾಷ್ಟ್ರಗಳಲ್ಲಿ ವ್ಯಕ್ತಿಯು ಸಮುದಾಯದ ಅಂಗವೆಂಬ ಕಲ್ಪನೆ ಇನ್ನೂ ಹೆಚ್ಚಿನಮಟ್ಟದಲ್ಲಿ ಇರುತ್ತದೆಂಬುದನ್ನೂ ನಾವು ಮನಗಾಣಬೇಕಾಗಿದೆ. ಅಂದರೆ ಸಮಾಜವಾದಿ ವ್ಯವಸ್ಥೆ ಪ್ರಾಯಶಃ ಬೆಳೆದ

ದೇಶಗಳಲ್ಲಿಬರುವುದಕ್ಕಿಂತ ಬೆಳೆಯದೇ ಇರುವದೇಶಗಳಲ್ಲೇಹೆಚ್ಚುಸುಲಭವಾಗಿಬರುವುದುಸಾಧ್ಯ ಎಂದು ನಮಗೆ ಅನ್ನಿಸುವುದಕ್ಕೆ ಶುರುವಾಗಿದೆ. ಯಾಕೆಂದರೆ ಇಲ್ಲಿ, ಇಂಡಿಯಾದಲ್ಲಿ, ಪ್ರತಿಯೊಬ್ಬ ವ್ಯಕ್ತಿಯೂ ತನಗೊಂದು ಕಾರ್ ಬೇಕು, ತನಗೆ ಮನೆಯಲ್ಲಿ ಎರಡು ಟೆಲಿವಿಷನ್ ಸೆಟ್‌ಗಳು ಬೇಕು, ಎನ್ನುವ ಆಸೆಪಡುತ್ತಿಲ್ಲ— ಪಾಶ್ಚಾತ್ಯ ದೇಶದ ಜನಗಳು ಪಡುವಂತೆ. ಸಮುದಾಯದ ಕಲ್ಪನೆ ಇನ್ನೂ ಗಟ್ಟಿಯಾಗಿರುವುದು ಈ ಬಡರಾಷ್ಟ್ರಗಳಲ್ಲೇ ಹೊರತು ಬೆಳೆದ ರಾಷ್ಟ್ರಗಳಲ್ಲಲ್ಲ. ಇವತ್ತು ಕಮ್ಯೂನಿಸ್ಟ್ ಪೂರ್ವಜರ್ಮನಿ ಬಂಡವಾಳಶಾಹೀ ಪಶ್ಚಿಮ ಜರ್ಮನಿ ಎರಡರಲ್ಲೂ ಒಂದೇ ರೀತಿಯ ಸಮಾಜವಿದೆ. ಆದರೆ ಮಾರ್ಕ್ಸ್ ಕನಸುಕಂಡ ಸಮುದಾಯವೇ ಮುಖ್ಯವಾದ ಸಮಾಜ ಅಲ್ಲಿಲ್ಲ, ಟೆಕ್ನಾಲಜಿ ಬೆಳೆದಲ್ಲಿ ಅದು ಬರುವುದಿಲ್ಲ. ಟೆಕ್ನಾಲಜಿ ಬೆಳೆಯದೇ ಇರುವಲ್ಲಿ ಸಮಾಜವಾದ ತೀರಾ ಅಗತ್ಯ ಅಂತ ಕೂಡಾ ಅನ್ನಿಸುತ್ತದೆ. ಈಗ ನಾನು ಮೈಸೂರಿನಲ್ಲಿರುವ ನನ್ನ ಮನೆಯಿಂದ ಒಂದೆರಡು ಫರ್ಲಾಂಗ್ ಆಚೆಗೆ ಇರುವ ಬಡಜನರ ಕೊಪ್ಪಲಿಗೆ ಹೋದರೆ, ಅಲ್ಲಿ ಒಂದು ರೀತಿಯ ಸಮಾಜವಾದಿ ವ್ಯವಸ್ಥೆ ಇದ್ದೇ ಇರುತ್ತದೆ — ಅವರ ನಡುವಿನ ಕೊಡು ಕೊಳ್ಳುವಿಕೆಯ ಸಂಬಂಧಗಳಲ್ಲಿ, ಮತ್ತು ಬಡಿದಾಟಗಳಲ್ಲಿಯೂ ಕೂಡಾ.

ಬಹುಶಃ ಚೈನಾದಲ್ಲೂ ರಷ್ಯಾದಲ್ಲಿರುವುದಕ್ಕಿಂತ ಸ್ವಲ್ಪ ಹೆಚ್ಚಿನ ಸಮಾಜವಾದ ಇರುವ ಸಾಧ್ಯತೆ ಇದೆ. ಅದ್ದರಿಂದ ಚೈನಾ ರಷ್ಯಾಕ್ಕಿಂತ ಉತ್ತಮ. ಆಧುನಿಕವಾಗಬೇಕೆಂಬ ಈಗಿನ ನಾಯಕರ ಬಯಕೆಯಲ್ಲಿ ಚೈನಾ ಹಾಗೆಯೇ ಉಳಿದಿರುತ್ತದೋ, ತಿಳಿಯದು. ಹಾಂಗ್‌ಕಾಂಗ್‌ಗೆ ಬರುವ ಚೈನೀ ಪ್ರವಾಸಿ ಯುವಕರು ತಾವು ಕೊಳ್ಳುವ ಗಾಗಲ್ಸ್‌ನ ಮೇಲಿರುವ 'Made in America' ಚೀಟಿ ಕೀಳದೆ ಅದನ್ನು ಧರಿಸುತ್ತಾರೆಂದು ಹಾಂಗ್‌ಕಾಂಗ್‌ನಿಂದ ಬಂದವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಇದು ಸಾಂಸ್ಕೃತಿಕ ಕ್ರಾಂತಿ ಆದನಂತರವೂ ಚೈನಾದ ಯುವಕರಲ್ಲಿ ಉಳಿದಿರುವ ಆಸೆ. ಗಾಂಧೀಜಿ ಹೇಳಿದ ಸರಳ ಜೀವನದ ಸಮಾಜವಾದದ ಬದಲು ಆಧುನಿಕ ನಾಗರಿಕತೆಯನ್ನು ನಾವು ಆಯ್ದುದ್ದರಿಂದಲೇ ಎಪ್ಪತ್ತರ ದಶಕದ ತುರ್ತುಪರಿಸ್ಥಿತಿ ಅನಿವಾರ್ಯವಾದುದು. ಯಂತ್ರ ನಾಗರಿಕತೆ ಈ ದೇಶದಲ್ಲಿ ಊರಲು ಪ್ರಜಾತಂತ್ರದ ನಿಧಾನಗತಿ ಕಾಲ್ತೊಡಕಾಗಿ ಕಾಣದೇ ಇರಲು ಸಾಧ್ಯವೇ? ಆಧುನಿಕತೆಯನ್ನು ಗುರಿಮಾಡಿಕೊಂಡ ರಷ್ಯಾಕ್ಕೆ ಸ್ಟಾಲಿನನ ಕ್ರೂರ ಸರ್ವಾಧಿಕಾರ ಅನಿವಾರ್ಯವಾದ್ದು ಸಹಜವೇ. ನಾವಿರುವುದೂ ಅದೇ ಹಾದಿಯಲ್ಲಿ.

ಬಯಸಿದಷ್ಟು ಮುಂದುವರಿಯಲಾಗದಿದ್ದಾಗ ಮಿಲಿಟರಿ ಸರ್ವಾಧಿಕಾರ, ಏಕಾಧಿಪತ್ಯ ನರ–ಪರಗಳನ್ನು ಕತ್ತರಿಸುವ ಆತುರ, ಬಡವರಿಂದ ಬಿಸಿಲಲ್ಲಿ ಕಲ್ಲೊಡೆಸುವ ಕಾನಸೆನ್‌ಟ್ರೆಶನ್ ಕ್ಯಾಂಪುಗಳು ಎಲ್ಲಾ ಅಗತ್ಯವಾಗುತ್ತವೆ. ಪಾಪ! ಸಂಜಯಗಾಂಧಿ ಇಂದಿರಾ ಗಾಂಧಿಯವರಿಗೆ ಪ್ರಜಾತಂತ್ರ ಕಾಲ್ತೊಡಕು ಅನ್ನಿಸಿದ್ದರೆ ಅದಕ್ಕೆ ರಾಯ್, ನೆಹರೂ ಪರಂಪರೆಯ ಈ ನಮ್ಮ ಆಯ್ಕೆಯೂ ಮುಖ್ಯ ಕಾರಣ ಎನ್ನದೇ ವಿಧಿ ಇಲ್ಲ. ಹಿಂಸೆಯಿಲ್ಲದೇ ಇಷ್ಟೊಂದು ಜನಸಂಖ್ಯೆಯ ದೇಶದಲ್ಲಿ ಆಧುನಿಕ ನಾಗರೀಕತೆ ಅಸಾಧ್ಯವೆಂಬುದು ಕಮ್ಯೂನಿಸ್ಟರಿಗೂ ಗೊತ್ತಿರಲೇಬೇಕು. ಆಧುನಿಕ ನಾಗರೀಕತೆ ದಿಕ್ಕಲ್ಲಿ ನಾವೂ ಚಲಿಸುವುದು ಅನಿವಾರ್ಯವೆಂದು ತಿಳಿದವರಿಗೆ ನಾನೇನೂ ಹೆಚ್ಚಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ರಾಷ್ಟ್ರ ಸಮೃದ್ಧವಾಗಿದ್ದರೂ ಅದರ ಜನ ಏಕಾಂಗಿತನದಿಂದ, ಸಾಂಸಾರಿಕ ತೊಡಕುಗಳಿಂದ, ಸಂಬಂಧಗಳ ಪೇಚುಗಳಿಂದ, ಸಾವಿನಂಥ ಕ್ರೂರ ನಿಷ್ಠುರ ನಿಜಗಳಿಂದ ನರಳಬಹುದೆಂಬುದು ಸೂಕ್ಷ್ಮ ಮನಸ್ಸಿನವನಿಗೆ ಗೊತ್ತಿರುತ್ತದೆ. ಸಮಾಜ ಎಷ್ಟು ಮುಂದುವರೆದರೂ, ಅದರ ವ್ಯವಸ್ಥೆಯ ಅನ್ಯಾಯಗಳು ಎಷ್ಟು ಕಮ್ಮಿಯಾದರೂ ಕೆಲವು ತೊಡಕುಗಳು ಮನುಷ್ಯನಿಗೆ ಉಳಿದೇ ಇರುತ್ತವೆ ಎನ್ನುವುದು ಅಂಥವನಿಗೆ ಗೊತ್ತಿರುತ್ತದೆ. ಎಂದರೆ ಸಾಮಾಜಿಕ ಬದಲಾವಣೆ ಆದ ಕೂಡಲೇ ಇಲ್ಲಿ ಎಲ್ಲ ಸ್ವರ್ಗವಾಗುತ್ತದೆ ಎಂದು ತಿಳಿಯುವುದು ಅವನಿಗೆ ಕಷ್ಟ. ಸಾಮಾಜಿಕ ಬದಲಾವಣೆಗಳು ಯಾವ ಕಾಲದಲ್ಲೂ ವ್ಯಕ್ತಿಯ ಒಳ ಜೀವನದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಲಾರವು. ಜೊತೆಗೇ ಇದು ಕೂಡಾ ಮುಖ್ಯ : ಸಾಮಾಜಿಕ ಅನ್ಯಾಯಗಳಿಂದ ಅನಿವಾರ್ಯವಲ್ಲದ ಕಷ್ಟಗಳಿಗೂ ಮನುಷ್ಯ ಒಳಗಾಗುತ್ತಾನೆಂಬುದು ನಮಗೆ ಗೊತ್ತಿರಬೇಕು. ಈಗ ನಾವು ಎದುರಿಸುತ್ತಿರುವಂಥ ಕಷ್ಟಗಳಲ್ಲಿ ಕೆಲವು ಸುಲಭವಾಗಿ ಹೋಗಲಾಡಿಸಬಲ್ಲಂಥವೂ ಕೂಡ ಇವೆ. ಅಂದರೆ ಯಾವುದು ಅನಿವಾರ್ಯ ಎನ್ನುವ ಪ್ರಜ್ಞೆ ಸಾಹಿತಿಗಂತೂ ಇರಲೇ ಬೇಕಾಗುತ್ತದೆ.

ನಮ್ಮಂಥ ದೇಶಗಳಲ್ಲಂತೂ ಎಷ್ಟೋ ಕಷ್ಟಗಳು ಸಾಮಾಜಿಕ ಬದಲಾವಣೆಯಿಂದ ಪರಿಹಾರವಾಗಬಲ್ಲಂಥವು ಎಂಬುದನ್ನು ಅರಿಯದೇ ಇರುವುದು. ತೀರಾ ಆತ್ಮವಂಚಕ ಅಧ್ಯಾತ್ಮಿಕತೆಯಾಗಿ ಬಿಡುತ್ತದೆ. ಈ ಇಬ್ಬಗೆಯ ಅರಿವಿನಲ್ಲಿ ಹುಟ್ಟುವ ಸಾಹಿತಿಯ ರಾಜಕೀಯ ಪ್ರಜ್ಞೆಯೇ ಅತ್ಯಂತ ಗಾಢವಾದುದಾಗಿರುತ್ತದೆ. ಪ್ರಾಯಶಃ ಕಬೀರ, ಬಸವ, ನಾನಕರಂಥ ಸಂತರಿಗೆ, ಆರ್ವೆಲ್, ಟಾಲ್‌ಸ್ಟಾಯ್ ಮುಂತಾದ ಪಾಶ್ಚಾತ್ಯ ದಾರ್ಶನಿಕರಿಗೆ ಈ ಇಬ್ಬಗೆಯ— ಯಾವುದು ಅನಿವಾರ್ಯ, ಯಾವುದು ನಿವಾರ್ಯ ಎಂಬ — ಅರಿವಿದೆ.

ನಾನು ರಷ್ಯಾದಲ್ಲೊಂದು ದೊಡ್ಡ ದುರಂತ ಕಂಡೆ. ಒಂದೇ ಕಾಲದಲ್ಲಿದ್ದವರು, ಟಾಲ್‌ಸ್ಟಾಯ್ ಮತ್ತು ಲೆನಿನ್. ಕಾಣಲು ಅಷ್ಟೇನೂ ಎತ್ತರದ ವ್ಯಕ್ತಿಯಲ್ಲದ ಸಾಮಾನ್ಯರು ಪ್ರೀತಿಸುವಂತಿದ್ದ ಲೆನಿನ್ ಒಂದೊಂದು ಊರಿನಲ್ಲೂ ರಾಕ್ಷಸ ಎತ್ತರದ ವಿಗ್ರಹವಾಗಿದ್ದಾನೆ. ಆದರೆ ಟಾಲ್‌ಸ್ಟಾಯನ್ನು ಹೂಳಿದ ಯಾಸ್ನಾ ಪೊಲ್ಯಾನಾಕ್ಕೆ ಹೋದರೆ, ರೈತರಿಗಿರುವ ಹಾಗೆ ಒಂದಿಷ್ಟೆತ್ತರದ ಮಣ್ಣಿನಿಂದ ಒಂದು ಗೋರಿಯನ್ನು ಟಾಲ್‌ಸ್ಟಾಯನ ಇಚ್ಛೆ ಮೇರೆಗೆ ಕಟ್ಟಲಾಗಿದೆ. ನಾನು ಹೇಳುತ್ತಿರುವುದರಲ್ಲಿ ಅನೇಕ ಅರ್ಥಗಳಿವೆ: ನನಗೆ ಲೆನಿನ್‌ಗಿಂತ ಟಾಲ್‌ಸ್ಟಾಯ್ ಮುಖ್ಯವೆನ್ನಿಸುತ್ತಾನೆ– ಅವರಿಬ್ಬರೂ ಸತ್ತು ಈಗ ಉಳಿದಿರುವ ಕ್ರಮದಲ್ಲಾದರೂ. ಯಾಕೆಂದರೆ ಲೆನಿನ್ ಕಟ್ಟಿದ ರಷ್ಯಾ, ಅಮೆರಿಕಾದಂತಾಗುವ ಹಂಬಲವನ್ನು ಹೇಗೋ ಅದುಮಿಟ್ಟುಕೊಂಡಿದೆ. ಒಂದು ಚೂರು ಬಿರುಕುಬಿಟ್ಟರೆ ಅದರೊಳಗೆ ನುಗ್ಗುವುದು ಅಮೇರಿಕಾವೇ. ಆದರೆ ಟಾಲ್‌ಸ್ಟಾಯ್‌ಗೆ ಮಾತ್ರ ಇವೆಲ್ಲದಕ್ಕಿಂತ ಬೇರೆಯಾದ ಪರ್ಯಾಯ ಕಲ್ಪನೆ ಇತ್ತು: ನಮ್ಮ ದೇಶದಲ್ಲಿ ಗಾಂಧೀಜಿಯದ್ದಂಥ ಒಂದು ಪರ್ಯಾಯ ಕಲ್ಪನೆ

ಎಪ್ಪತ್ತರ ದಶಕದ ಎಮರ್ಜೆನ್ಸಿ ಇಂಥದೊಂದು ಆಳವಾದ ಚಿಂತನದಲ್ಲಿ ನಮ್ಮನ್ನು ತೊಡಗಿಸಬಲ್ಲುದಾಗಿದೆ : ನಮ್ಮ ಆಯ್ಕೆ ಯಾವುದಾಗಬೇಕಿತ್ತು ? ಈಗ ನಾವೇನಾಗಿದ್ದೇವೆ ? ಇಂದಿರಾ–ಸಂಜಯರ ನಿರ್ದಯ ಕಾರ್ಯಕ್ರಮಗಳಲ್ಲಿ ಅನೇಕವು ನಾವು ವಿದ್ಯಾವಂತ ಜನ, ನಮ್ಮ ಅಭ್ಯುದಯಕ್ಕಾಗಿ ಬಯಸಿದಂಥವೇ ಆಗಿದ್ದವು. ನಿರ್ಗತಿಕರಿಗೆ ಆಶೆ ಹುಟ್ಟಿಸುವಂತ ಕಾರ್ಯಕ್ರಮಗಳಲ್ಲಿ ಕೆಲವು, ತುರ್ತುಪರಿಸ್ಥಿತಿಯ ಪ್ರಾರಂಭದಲ್ಲಾದರೂ ಜಾರಿಗೆ ಬಂದವು. ಆದರೆ ಅದರಲ್ಲಿದ್ದ ಮುಖ್ಯವಾದ ದುಷ್ಟ ಬೀಜ, ನಮ್ಮ ಏಕಸ್ವಾಮ್ಯದ ಬಂಡವಾಳಶಾಹಿ ವರ್ಗ ಬಯಸುವ, ಆಧುನಿಕ ನಾಗರೀಕತೆಯನ್ನು ಕ್ಷಿಪ್ರವಾಗಿ ತರಬೇಕೆಂಬ ಆಮಿಷವೇ ಆಗಿತ್ತು. ಅದ್ದರಿಂದಲೇ ಆ ಆಶೆಯನ್ನು ತಮ್ಮ ಕಚ್ಚಾಟದಲ್ಲಿ ಪಾಲಿಸಲಾಗದೇ ಹೋದ ಜನತಾ ಸರಕಾರ ಅಷ್ಟು ಬೇಗ ಕೆಳಗಿಳಿಯಬೇಕಾಗಿ ಬಂತು. ನಾನು ಇವನ್ನೆಲ್ಲ ಹೇಳುತ್ತಿರುವ ಕ್ರಮ ಅತಿ ಸರಳವೆನ್ನಿಸಬಹುದು. ಆದರೆ ಸರಳಗೊಳಿಸುವ ಧೈರ್ಯ ಮಾಡದ ಹೊರತು ಕೆಲವು ಮೂಲಸತ್ಯಗಳು ಹೊಳೆಯುವುದೇ ಇಲ್ಲ.

* * *

ಎಪ್ಪತ್ತರ ದಶಕದ ರಾಜಕೀಯ ಮತ್ತು ಸಾಹಿತ್ಯಕ ಚಳವಳಿಗಳಲ್ಲೂ ನಮ್ಮಂಥ ಇಬ್ಬಂದಿಗಳ ಅನೇಕ ಗೊಂದಲಗಳಿವೆ. ಆದರೆ ಅದನ್ನು ನಾವು ಗಮನಿಸಿಲ್ಲ. ಎಮರ್ಜೆನ್ಸಿಯಲ್ಲಿ ನಾವು ಬಯಸಿ

ದ್ದರ ಜೊತೆಗೇ ನಾವು ಬಯಸದ್ದೂ ಕ್ರೂರವಾಗಿ ಪ್ರತ್ಯಕ್ಷವಾದಂತೆ ನಮ್ಮ ಉಳಿದ ಆಂದೋಳನಗಳಲ್ಲೂ –ಜಾತಿ ವಿನಾಶ, ವಿಚಾರವಾದ, ದಲಿತ ಚಳವಳಿಗಳು ಇತ್ಯಾದಿಗಳಲ್ಲೂ–ಅನೇಕ ಅಪ್ರತ್ಯಕ್ಷ ತೊಡಕುಗಳು ಇವೆ. ಉದಾಹರಣೆಗೆ: ಜಾತಿ. ಒಬ್ಬ ಅಸ್ಪೃಶ್ಯನ ದೃಷ್ಟಿಯಿಂದ ಇದಕ್ಕಿಂತ ಅನಿಷ್ಟವಾದದ್ದು ಇನ್ನೊಂದಿಲ್ಲ. ಅವನ ಪಾಲಿಗೆ ಗ್ರಾಮಜೀವನದಲ್ಲಿ ಅಸ್ಪೃಶ್ಯತೆ ನಾಶವಾಗುವುದು ಸದ್ಯದಲ್ಲಂತೂ ಅಸಂಭವ. ಆದರೆ ಅವನು ಪೇಟೆಗೆ ಬಂದಾಗ ಅದರ ಕಾಟದಿಂದ ಕಿಂಚಿತ್ತಾದರೂ ಪಾರಾಗುತ್ತಾನೆ. ಆದ್ದರಿಂದ ಬೇರೆ ಬಗೆಯ ಹಿಂಸೆಗಳಿಗೆ ಕಾರಣವಾಗಬಹುದಾದ ಆಧುನಿಕ ನಾಗರಿಕತೆಯೂ ನಗರೀಕರಣ ಅವನಿಗೆ ಸದ್ಯದ ಸೌಖ್ಯದ ದೃಷ್ಟಿಯಿಂದ ಎಷ್ಟೋ ಮೇಲೆನ್ನಿಸುವುದು ಸಾಧ್ಯ. ಅವನು ಖಂಡಿತ ಕೇಂದ್ರೀಕೃತ ವ್ಯವಸ್ಥೆಯಿಂದ ತನಗೆ ಲಾಭವೆಂದೇ ತಿಳಿಯುತ್ತಾನೆ. ಏಕೆಂದರೆ, ಅದು ಭ್ರಮೆಯೇ ಇರಲಿ, ಅವನದು ಅಖಿಲ ಅವರು ಅಸ್ತಿತ್ವದ ದೃಷ್ಟಿಯಿಂದ ಮೊದಲಿನವನ್ನೂ–ಅಂದರೆ ನಗರೀಕರಣ ಮತ್ತು ಕೈಗಾರೀಕರಣವನ್ನು–ವೈಚಾರಿಕವಾಗಿ ಎರಡನೆಯದನ್ನು ಅವರು ಆಯ್ದಾಗ ಯಾವ ಬಗೆಯ ದ್ವಂದ್ವಕ್ಕವರು ಗುರಿಯಾಗುತ್ತಾರೆ? ಇಲ್ಲಿ ನಮ್ಮಲ್ಲಿ, ಅನೇಕ ಜನರು ಸಮಾಜವಾದಿಗಳಾಗಿ ಸುಖ ಜೀವನ ನಡೆಸುವಾಗ ಯಾವ ದ್ವಂದ್ವ ಬರುತ್ತದೆ ಎಂದು ಇವತ್ತು ರಾಘವೇಂದ್ರರಾವ್ ಹೇಳಿದರೋ ಆ ರೀತಿಯ ದ್ವಂದ್ವ ಒಬ್ಬ ಹರಿಜನನಿಗೂ ಬರುವುದಕ್ಕೆ ಸಾಧ್ಯ. ಈ ದ್ವಂದ್ವದಿಂದ ಯಾವ ಬಗೆಯ ಸಾಹಿತ್ಯ ಹುಟ್ಟುತ್ತದೆ? ಈ ದ್ವಂದ್ವವನ್ನೊಮ್ಮೆ ಆತ ಎದುರಿಸಿದಾಗ, ಬರೀತನ್ನ ಜನರ ಗೋಳನ್ನಾಗಲೀ, ಸಿಟ್ಟನ್ನಾಗಲೀ ಬರೆಯುವ ಸಾಹಿತಿಯಾಗಿರುವುದು ಮಾತ್ರವೇ ಅಲ್ಲದೇ, ಅವನು ವೈಚಾರಿಕವಾಗಿಯೂ ಆತ್ಮಪರೀಕ್ಷೆಯ ಸಂದಿಗ್ಧಗಳಲ್ಲಿ ಮುಂದೆ ಹೋಗಲೇಬೇಕಾಗುತ್ತದೆ. ಏಕೆಂದರೆ ಅವನಿಗೂ ಬಹಳ ಮೂಲಭೂತವಾದ ವೈಚಾರಿಕ ತಾತ್ತ್ವಿಕ ಸಮಸ್ಯೆ ವ್ಯಾವಹಾರಿಕ ಸತ್ಯಗಳಿಂದ ದೂರವಾಗುತ್ತ ಹೋಗಬೇಕಾಗಿ ಬರುತ್ತದೆ. ಅಶೋಕಪುರಂನಲ್ಲಿ ಎಲ್ಲರೂ ಯಾವುದನ್ನು ಆಯುತ್ತಾರೋ (ಉದಾಹರಣೆಗೆ ಇಂದಿರಾಗಾಂಧಿ), ಅಲ್ಲೇ ಬದುಕುವ ದೇವನೂರು ಮಹಾದೇವ ಅದನ್ನು ಆಯಲಾರರು. ಅಂದರೆ ಪ್ರತಿಯೊಬ್ಬ ಸಾಹಿತಿ ತನ್ನ ಜಾತಿಯಿಂದ ಹೇಗೆ ದೂರವಾಗುತ್ತಾನೋ–ಬ್ರಾಹ್ಮಣ ಸಾಹಿತಿ ಜಾತಿಯಿಂದ ದೂರವಾದಂತೆ–ಹಾಗೆಯೇ ದಲಿತ ಜಾತಿ ಸೂಕ್ಷ್ಮಜ್ಞರಾದಾಗ ಇಬ್ಬಂದಿಗಳಾಗುತ್ತಾರೆ. ಯಾವಬಗೆಯ ಒಳತೋಟಿಗಳಿಗಿವರು ಗುರಿಯಾಗುತ್ತಾರೆ? ರಾಜಕೀಯ ದೃಷ್ಟಿಯಿಂದಲೂ ಸಾಹಿತ್ಯದ ದೃಷ್ಟಿಯಿಂದಲೂ ಇದು ಅತ್ಯಂತ ಆಪ್ತ ಸೂಕ್ಷ್ಮ ವಿಚಾರಗಳನ್ನು ಎಬ್ಬಿಸಬಲ್ಲ ಪ್ರಶ್ನೆ ಎಂದು ನಾನು ತಿಳಿದಿದ್ದೇನೆ.

ಇನ್ನು ಎಪ್ಪತ್ತರ ದಶಕದಲ್ಲಿ ಪ್ರಾರಂಭವಾದ ವಿಚಾರವಾದಿಗಳ ಆಂದೋಳನ ನೋಡೋಣ. ನಾಗರಬನವನ್ನು ನಂಬುವ ಗ್ರಾಮದ ಧರ್ಮ

ನಮ್ಮ ಹಲವು ಜಾತಿಗಳು, ನಂಬಿಕೆಗಳು, ನಡವಳಿಕೆಗಳು, ವಿಕೇಂದ್ರೀಕೃತ ವ್ಯವಸ್ಥೆಯ ಫಲಗಳು. ನನಗೆ ಅನೇಕ ಸಾರಿ ಅನ್ನಿಸಿದೆ : ಈ ದೇಶದಲ್ಲಿ ಸರಕಾರ, ಕಾನೂನಿನ ವ್ಯವಸ್ಥೆ ಇಲ್ಲದೆ ಇದ್ದಾಗ್ಯೂ ಈ ದೇಶ ಹಾಗೂ ಹೀಗೂ ಮುಂದುವರಿದುಕೊಂಡು ಬಂದಿರುವುದಕ್ಕೆ ಕಾರಣ–ಜಾತಿ. ಜಾತಿ ಒಂದು ರೀತಿಯ ಬ್ಯಾಂಕ್‌ನ ಹಾಗೆ, ಒಂದು ವೆಲ್‌ಫೇರ್ ಸಿಸ್ಟಂನ ಹಾಗೆ ಕೆಲಸ ಮಾಡುತ್ತಾ ಬಂದಿರುವುದರಿಂದಲೇ ಅದು ಕ್ರಿಯೇಟಿವ್ ಆಗಿ ಉಳಿದುಕೊಂಡಿದೆ. ಹರಿಜನರ ದೃಷ್ಟಿಯಿಂದ ಎಲ್ಲ ಜಾತಿಗಳೂ ಕೆಡುಕಾಗಿದ್ದರೂ ಉಳಿದ ಜಾತಿಗಳಿಗೆ ಅವಕ್ಕಂಟಿಕೊಂಡವರ ಭರವಸೆಗಳು, ಆಸೆಗಳು ಕಳೆದುಹೋಗುವಷ್ಟು ಅವು ಕೆಟ್ಟಿಲ್ಲ. ಕೆಟ್ಟುಹೋಗಿದ್ದ ಪಕ್ಷದಲ್ಲಿ ಅವುಗಳನ್ನು ನಾಶಮಾಡಿಬಿಡಬಹುದಿತ್ತೇನೋ ?

ಭಾರತ ಜಾತಿಯೆಂಬ ಭಾವನೆ ಅವನಿಗಿದೆ. ಆದರೆ ದಲಿತರಲ್ಲಿ ಸೂಕ್ಷ್ಮಜ್ಞರೂ ಮುನ್ನೋಟ ಉಳ್ಳವರೂ ವಿಕೇಂದ್ರೀಕರಣ ಬೇಕೆಂದು ಬಯಸುತ್ತಾರೆ. ನಮ್ಮಂಥ ಮೇಲಿನ ಜಾತಿಯವರು ನಮ್ಮ ಐಡೆಂಟಿಟಿ ಹುಡುಕಿಕೊಂಡು ಹೋದರೆ ದಲಿತನಿಗೆ, ತನ್ನ ಭಾಷೆಯಲ್ಲಿ, ನಡಾವಳಿಯಲ್ಲಿ, ಬಟ್ಟೆ ಬರೆಯಲ್ಲಿ, ಹೆಸರಲ್ಲಿ, ತನ್ನ ಬತ್ತಿದ ಕೆನ್ನೆಗಳಲ್ಲಿ ತನ್ನ ಜಾತಿಯನ್ನು ಅಚ್ಚೊತ್ತುವ ಐಡೆಂಟಿಟಿಯನ್ನು ಪೇಟೆಯಲ್ಲಿ ಕಳಕೊಂಡು ಅನಾಮಿಕನಾಗುವುದೇ ಹಾಯೆನ್ನಿಸುತ್ತದೆ. ಅಮೆರಿಕಾದ ನೀಗ್ರೋಗೆ ಅವನ ಬಣ್ಣದಿಂದಾಗಿ ಇದು ಸಾಧ್ಯವಿಲ್ಲ. ಆದ್ದರಿಂದ ಅವನು Black is beautiful ಎನ್ನುತ್ತಾನೆ. ಈ ಪ್ರಶ್ನೆಯನ್ನು ನಾನು ಎತ್ತಲು ಮುಖ್ಯ ಕಾರಣ ಇದು: ಹರಿಜನರ ಧೀಮಂತರು ನಗರೀಕರಣ, ಪಾಶ್ಚಾತ್ಯೀಕರಣ– ಅಂದರೆ ಕೇಂದ್ರೀಕರಣ–ವನ್ನು ಬಯಸುತ್ತಾರೆಯೇ ಅಥವಾ ವಿಕೇಂದ್ರೀಕೃತ ವ್ಯವಸ್ಥೆಯನ್ನು ಬಯಸುತ್ತಾರೆಯೇ? ಅಥವಾ ಏಕಕಾಲದಲ್ಲಿ ಗಳಿವೆ. ದಲಿತ ಚಳುವಳಿಗಳಲ್ಲಿ ನನಗೆ ಮುಖ್ಯರೆನ್ನಿಸುವ ದೇವನೂರು ಮಹಾದೇವ, ಗೋವಿಂದಯ್ಯನಂಥವರಿಗೆ ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ: ತಮ್ಮ ಜನರ ದಿನನಿತ್ಯದ ಹಿತಕಾಯುವ ಕ್ರೂರ ಹೋರಾಟದಲ್ಲಿರುವ ಇವರಿಗೆ ನಮ್ಮ ದೇಶದ ಮುಖ್ಯ ಸ್ರೋತವೆನ್ನಿಸುವ ಚಳವಳಿಗಳಲ್ಲಿ ಭಾಗವಹಿಸುವುದು ಸಾಧ್ಯವೇ? ಉದಾಹರಣೆಗೆ, ಎಮರ್ಜೆನ್ಸಿ ಕಾಲದಲ್ಲಿ ಇವರ ಒಳಜೀವನ ಹೇಗೆ ಮಿಡಿಯಿತು? ಈಗ ರೈತ ಚಳವಳಿಯಲ್ಲಿ ಅವರು ಮನಃಪೂರ್ವಕವಾಗಿ ಭಾಗಿಗಳಾಗಲು ಸಾಧ್ಯವೇ? ಯಾಕೆಂದರೆ, ಹಳ್ಳಿಯಲ್ಲಿ ಅವರ ಮನೆಗಳಿಗೆ ಬೆಂಕಿ ಹಚ್ಚುವ ಜನರೇ ಈಗ ರೈತರ ಚಳವಳಿಯಲ್ಲೂ ಹಸಿರು ಟೋಪಿ ಹಾಕಿಕೊಂಡು ಓಡಾಡುತ್ತಿರುವವರು. ನಮ್ಮ ಭಾಷೆಯಲ್ಲಿ ಹಾಸುಹೊಕ್ಕಾಗಿರುವ ಧಾರ್ಮಿಕ, ಪೌರಾಣಿಕ ಅಲ್ಯೂಶನ್‌ಗಳಿಂದ ಭಾಷೆಯನ್ನಿವರು ಕಿತ್ತು ಉಪಯೋಗಿಸಬಲ್ಲರೇ? ಅವರು ಸೂಕ್ಷ್ಮಜ್ಞರಾದಂತೆಲ್ಲಾ ನಮ್ಮ ಸ್ವಂತ ಜನ ನಿತ್ಯಜೀವನದಲ್ಲಿ ಮಿಡಿಯುವ ಕ್ರಮದಿಂದ ನಿಷ್ಠುರು ಟೆಕ್ನಾಲಜಿಯಿಂದ ಮೋಹಿತರಾದ ವಿಚಾರವಾದದ ವೈಜ್ಞಾನಿಕ ಬೆಳಕಲ್ಲಿ ಬೆಳೆದು ಬಂದವರಿಗಿಂತ ಗಾಢವಾದ ಜೈವಿಕಪ್ರಜ್ಞೆ ಉಳ್ಳವರಾಗಿ ಕಂಡಾಗ ಪ್ರಾಮಾಣಿಕನಾದ ವಿಚಾರವಾದಿಗೆ ಏನನ್ನಿಸುತ್ತದೆ? ನನಗೊಬ್ಬರು ಆಂಥ್ರೊಪಾಲಜಿಸ್ಟ್ ಹೇಳಿದರು. ಮಹಾರಾಷ್ಟ್ರದಲ್ಲಿ ಇವರು ಎಷ್ಟು ಪ್ರಚಾರ ಮಾಡಿದರೂ ಯಾವ ಕಾಡೂ ಉಳಿಯಲಿಲ್ಲವಂತೆ. ಅಲ್ಲಿ ಇವತ್ತಿಗೂ ಉಳಿದಿರುವುದು, ಎಲ್ಲೆಲ್ಲಿ ಧರ್ಮದ ನಿಷ್ಠೆಯಿಂದಾಗಿ ಕೆಲವು ಕಾಡುಗಳಿದ್ದವೋ ಅವು ಮಾತ್ರ. ಆದ್ದರಿಂದ ವಿಚಾರವಾದಿಗಳೆಂದುಕೊಂಡು ಧರ್ಮವನ್ನು ನಾವು ಅಲ್ಲಗಳೆದು, ಧರ್ಮಗಳಲ್ಲಿ ಹಾಸುಹೊಕ್ಕಾಗಿರುವ ಜೀವದಯೆಯನ್ನು ನಾಶಪಡಿಸಿಬಿಟ್ಟಲ್ಲಿ ಏನೇನು ಆಗಬಹುದು ಅನ್ನುವ ಪ್ರಶ್ನೆ ವಿಚಾರವಾದಿಯನ್ನು ಬಾಧಿಸಲೇಬೇಕಾಗುತ್ತದೆ.

ನಮ್ಮ ಹಲವು ಜಾತಿಗಳು, ನಂಬಿಕೆಗಳು, ನಡವಳಿಕೆಗಳು, ವಿಕೇಂದ್ರೀಕೃತ ವ್ಯವಸ್ಥೆಯ ಫಲಗಳು ನನಗೆ ಅನೇಕ ಸಾರಿ ಅನ್ನಿಸಿದೆ: ಈ ದೇಶದಲ್ಲಿ

ಸರಕಾರ, ಕಾನೂನಿನ ವ್ಯವಸ್ಥೆ ಇಲ್ಲದೇ ಇದ್ದಾಗ್ಯೂ ಈ ದೇಶ ಹಾಗೂ ಹೀಗೂ ಮುಂದು ವರಿದುಕೊಂಡು ಬಂದಿರುವುದಕ್ಕೆ ಕಾರಣ—ಜಾತಿ. ಜಾತಿ ಒಂದು ರೀತಿಯ ಬ್ಯಾಂಕ್‌ನ ಹಾಗೆ, ಒಂದು ವೆಲ್‌ಫೇರ್ ಸಿಸ್ಟಮ್‌ನ ಹಾಗೆ ಕೆಲಸ ಮಾಡುತ್ತಾ ಬಂದಿರುವುದರಿಂದಲೇ ಅದು ಇವತ್ತಿಗೂ ಆಯಾಯ ಜಾತಿಗಾದರೂ ಕ್ರಿಯೇಟಿವ್ ಆಗಿ ಉಳಿದುಕೊಂಡಿದೆ. ಹರಿಜನರ ದೃಷ್ಟಿಯಿಂದ ಎಲ್ಲ ಜಾತಿಗಳೂ ಕೆಡುಕಾಗಿದ್ದರೂ ಉಳಿದ ಜಾತಿಗಳಿಗೆ ಅವಕ್ಕಂಟಿಕೊಂಡವರ ಭರವಸೆಗಳು, ಆಸೆಗಳು ಕಳೆದುಹೋಗುವಷ್ಟು ಅವು ಕೆಟ್ಟಿಲ್ಲ, ಕೆಟ್ಟುಹೋಗಿದ್ದ ಪಕ್ಷದಲ್ಲಿ ಅವುಗಳನ್ನು ನಾಶಮಾಡಿಬಿಡಬಹುದಿತ್ತೇನೋ ? ಒಂದು ರೀತಿಯ ಚಲನಶಕ್ತಿಯನ್ನು ಆಯಾ ಜಾತಿಗಳು ಉಳಿಸಿಕೊಂಡಿವೆ ಎನ್ನಿಸುತ್ತದೆ. ಇದು ಸರಿ ಅಥವಾ ತಪ್ಪು ಎಂದು ನಾನು ಹೇಳುತ್ತಾ ಇಲ್ಲ. ನಾನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಾ ಇದ್ದೇನೆ. ಜಾತಿ ವ್ಯವಸ್ಥೆ ಇರಬೇಕು ಅಂತ ನಾನು ಹೇಳಿದೆ ಎಂದು ದಯವಿಟ್ಟು ತಿಳಿಯಬೇಡಿ. ನಾನು ಹೇಳುತ್ತಿರುವುದು, ಒಬ್ಬ ಸಾಹಿತಿಯಾಗಿ ಆ ಪ್ರಶ್ನೆ ಎತ್ತುವಾಗ-ನಾನು ಮೇಲೆ ಹೇಳಿದ ಸತ್ಯ ಎದುರಾದಾಗ — ಸಾಹಿತಿ ಏನು ಮಾಡುತ್ತಾನೆ? ಇಂಥದನ್ನು ಎದುರಿಸದೇ ಇದ್ದರೆ ನಾವು ಗಾಢವಾದ ಸಾಹಿತ್ಯಕೃತಿಯನ್ನು ರಚಿಸುವುದಕ್ಕೆ ಸಾಧ್ಯವಿಲ್ಲ.

ಅಲ್ಲದೇ ಜಾತಿ ಕೂಡ ಒಂದು ವಿಕೇಂದ್ರೀಕೃತ ವ್ಯವಸ್ಥೆಯ ಫಲವೇ ಆದ್ದರಿಂದ ಮೇಲಿನ ಪ್ರಶ್ನೆಗಳನ್ನು ನಾನು ಶಿವರಾಮಕಾರಂತರಲ್ಲಿ ಅಥವಾ ಗೆಳೆಯ ತೇಜಸ್ವಿಯಲ್ಲಿ ಮಾತ್ರ ಕೇಳಬಲ್ಲೆ. ಈ ಪ್ರಶ್ನೆ ಕೇವಲ ವೈದಿಕ ಒಳಸಂಚಿನಿಂದಲೋ ಅಥವಾ ವೈದಿಕ ಗುಪ್ತಪ್ರೀತಿಯಿಂದಲೋ ಹುಟ್ಟಿದ್ದೆಂಬ ಗುಮಾನಿಯನ್ನು ಪಡದೇ ನನ್ನ ಪ್ರಶ್ನೆಗೆ ಅವರು ತಮ್ಮೊಳಗೂ ಉತ್ತರ ಹುಡುಕುವರೆಂಬ ಭರವಸೆ ನನಗಿದೆ. ಯಾಕೆಂದರೆ, 'ನೀನು ಬ್ರಾಹ್ಮಣ ಆದುದರಿಂದ ನಿನಗೆ ಜಾತಿ ಇದ್ದರೆ ಒಳ್ಳೆಯದೇನೇ ಅದಕ್ಕೇ ನೀನು ಹೀಗೆ ಹೇಳ್ತಿದೀಯ' ಅಂದರೆ, ಅದಕ್ಕೆ ನನ್ನ ಹತ್ತಿರ ಯಾವ ಉತ್ತರವೂ ಇಲ್ಲ. ಜನರ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುವ ಪುರೋಹಿತಶಾಹಿಯ ಹುಟ್ಟಡಗಿಸಲು ರಷ್ಯಾದ ಟ್ಯಾಂಕುಗಳನ್ನು ಬೇಕಾದರೂ ಈ ದಿನ ಆಮಂತ್ರಿಸಲು ತುದಿಗಾಲಲ್ಲಿ ಕಾತರರಾಗಿ ನಿಂತವರನ್ನು ನಾನು ಈ ಪ್ರಶ್ನೆ ಕೇಳಿ ಪ್ರಯೋಜನವಿಲ್ಲ. ಏಕೆಂದರೆ ಜನರ ಮೌಢ್ಯವನ್ನು ಟ್ಯಾಂಕಿನಿಂದ-ಅದೂ ರಷ್ಯನ್ ಟ್ಯಾಂಕಿನಿಂದ–ಹೋಗಲಾಡಿಸಬಹುದು ಅಂತ ತಿಳಿದವರಿಗೆ ನಾನೇನೂ ಹೇಳಲಾರೆ. ಹಾಗೆಯೇ ಕೋಕಾಕೋಲಾ ಇತ್ಯಾದಿ ಮಾರುವ ಬಹು ರಾಷ್ಟ್ರ ಸಂಸ್ಥೆಗಳ ಆಪ್ತ ಒಳಸಂಚಿನಿಂದ ನಮ್ಮನ್ನು ಜನಿವಾರ, ಶಿವದಾರಗಳಿಂದ ಬಿಡುಗಡೆ ಮಾಡಬೇಕೆನ್ನುವವರನ್ನೂ ನಾನು ಈ ಪ್ರಶ್ನೆ ಕೇಳುವುದಿಲ್ಲ. ಯಾಕೆಂದರೆ, ರಷ್ಯನ್ ಟ್ಯಾಂಕಿಗಿಂತ ಹೆಚ್ಚು ಶಕ್ತಿಯುಳ್ಳದ್ದು ಕೋಕಾಕೋಲಾ. (ಕೋಕಾಕೋಲಾವನ್ನು ದೇಶದಿಂದ ಓಡಿಸಿದ ಜಾರ್ಜ್ ಫರ್ನಾಂಡಿಸ್ ರವರು ಇಲ್ಲಿ ಇದ್ದಾರಲ್ಲ–ಅವರನ್ನೇ ಬೇಕಾದರೆ ಕೇಳಿ)

ಇರಲಿ— ಮೂಢನಂಬಿಕೆಗಳು ಯಾಕೆ ತಪ್ಪು ಅಂದರೆ, ನಮ್ಮ ಅರಿವಿನ ಮಟ್ಟ ಏರದೇ ಇದ್ದ ಹಾಗೆ ಅವು ತಡೆಯುತ್ತವೆ-ಅದ್ದರಿಂದ. ನಮ್ಮ ಅರಿವಿನ ಮಟ್ಟ ಏರದೇ ಇದ್ದರೆ ಅಷ್ಟರಮಟ್ಟಿಗೆ ಸಂಪೂರ್ಣ ಮಾನವತ್ವವನ್ನು ಪಡೆಯುವುದು ಸಾಧ್ಯವಾಗದೇ ಹೋಗುತ್ತದೆ. ಅದಕ್ಕೇ ನಾವು ಮೂಢನಂಬಿಕೆಗಳನ್ನು ತೊಡೆದುಹಾಕಬೇಕು. ಅಥವಾ ಕೆಲವು ರೀತಿಯ ಧಾರ್ಮಿಕ ಆಚರಣೆಗಳೂ ಸಹ ಸುಲಭ ಸಾಂತ್ವನ ನೀಡಿ ನಮ್ಮ ಅರಿವಿನ ಮಟ್ಟವನ್ನು ಕೆಳಗೆ ಇಳಿಸುತ್ತವೆ. ಆದರೆ ವೈಜ್ಞಾನಿಕ ವೈಚಾರಿಕತೆಯೂ ಮೂಢನಂಬಿಕೆಯಷ್ಟೇ ನಮ್ಮ ಅರಿವನ್ನು ಮೊಂಡುಗೊಳಿಸಬಲ್ಲುದೆಂಬುದನ್ನು ಮರೆಯಬಾರದು. ಇದಕ್ಕೊಂದು ಉದಾಹರಣೆ ಕೊಡುತ್ತೇನೆ. ಬಂಗಾಲದಲ್ಲಿ ಕಾಲರಾ ಹರಡಿದಾಗ ಎರಡು ರೀತಿಯ ವಿವರಣೆಗಳು ಬಂದವು:

(ಅ) ಬ್ರಿಟೀಷರು ವೈಜ್ಞಾನಿಕವಾಗಿ ಕೊಟ್ಟ ವಿವರಣೆ : ಈ ಬೆಂಗಾಲಿಗಳು ಕೊಳಕು ನೀರನ್ನು ಕುಡಿಯುತ್ತಾರೆ, ಅವರಿಗೆ ಸ್ವಚ್ಛತೆ ಬಗ್ಗೆ ನೈರ್ಮಲ್ಯದ ಬಗ್ಗೆ ಹೆಚ್ಚು ಕಾಳಜಿ ಇಲ್ಲ, ಆದ್ದರಿಂದ ಅವರು ಕಾಲರಾದಿಂದ ಸಾಯುತ್ತಿದ್ದಾರೆ.

(ಆ) ಆದರೆ ಬೆಂಗಾಲೀಗಳು ಏನೆಂದು ತಿಳಿದುಕೊಂಡರೆಂದರೆ:- ನಮ್ಮ ದೇಶಕ್ಕೆ ಮೈಲಿಗೆ ಆಗಿಬಿಟ್ಟಿದೆ; ಪರಕೀಯರು ಬಂದಿದ್ದಾರೆ; ಆದ್ದರಿಂದ ಕಾಳಿಗೆ ಕೋಪ ಬಂದಿದೆ; ಹಾಗಾಗಿ ಕಾಲರಾ ಬಂತು— ಅಂತ.

ಇವೆರಡನ್ನೂ ವಿಶ್ಲೇಷಣೆ ಮಾಡಿ ನೋಡಿದಾಗ ಯಾವುದು ಹೆಚ್ಚು ವೈಜ್ಞಾನಿಕ ಎಂದು ಕೇಳಿದರೆ, ಬೆಂಗಾಲೀ ಜನರ ಮೂಢನಂಬಿಕೆಯಿಂದ ಹುಟ್ಟಿದ ಪುರಾಣವೇ ಹೆಚ್ಚು ವೈಜ್ಞಾನಿಕ. ಏಕೆಂದರೆ ಈ ಬ್ರಿಟೀಷರು ಬೆಂಗಾಲಿಗಳು ಕುಡಿಯುತ್ತಾ ಇದ್ದ ನೀರು ಕೊಳಕಾಗಿಬಿಡುವಷ್ಟು ಅಲ್ಲಿನ ನೀರಿನ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿದ್ದರು. ಆದ್ದರಿಂದ ಯಾವುದೋ ಒಂದು ಪುರಾಣದ ನೆಲೆಯಲ್ಲಿ ಅವರು ನಾಡಿನ ದೇವತೆಯಾದ ಕಾಳಿಗೆ ಮೈಲಿಗೆಯಾಗಿದೆ ಅಂತ ತಿಳಿದಿರುವುದರಲ್ಲಿ ಹೆಚ್ಚು ಸತ್ಯಗಳನ್ನು ಒಳಗೊಳ್ಳುವಂಥ ಆಲೋಚನಾಕ್ರಮ ಇರುವುದಕ್ಕೆ ಸಾಧ್ಯವಿದೆ; ಆದರೆ ಬ್ರಿಟೀಷರು ವೈಜ್ಞಾನಿಕವಾಗಿಯೇ ವಿವರಿಸಿದ್ದು–ಕೊಳಚೆ ನೀರು ಕುಡಿದರು, ಆದ್ದರಿಂದ ಸತ್ತರು ಅನ್ನುವುದು–ಕಣ್ಣಿಗೆ ಕಾಣುವಂತೆ ನಿಜ, ಆದರೆ ಒಟ್ಟಿನಲ್ಲಿ ಅದು ನಿಜವಲ್ಲ. ಯಾಕೆಂದರೆ ಯಾಕೆ ಅವರು ಕೊಳಕು ನೀರನ್ನು ಕುಡಿಯಬೇಕಾಗಿ ಬಂತು ಅನ್ನುವುದನ್ನು ವಿಶ್ಲೇಷಣೆ ಮಾಡುವಷ್ಟು ವೈಜ್ಞಾನಿಕತೆ ಅಲ್ಲಿರಲಿಲ್ಲ. ಆದ್ದರಿಂದ ನಮ್ಮ ಜನ ಒಂದೊಂದು ಸಾರಿ ತಮ್ಮ ನಂಬಿಕೆಗಳ ಮೂಲದಿಂದಲೂ ಹೆಚ್ಚಿನ ವಿವರಣೆಯನ್ನು ತಮ್ಮ ಪಾಡಿಗೆ ಕೊಟ್ಟುಕೊಳ್ಳುವುದಕ್ಕೆ ಸಾಧ್ಯ ಅನ್ನುವ ವಿನಯ ನಮ್ಮಲ್ಲಿ ಇರಬೇಕು.

'ಭಾರತೀಪುರ' ಬರೆದ ನಾನು ಒಂದು ಸಾರಿ ತುರ್ತುಪರಿಸ್ಥಿತಿ ಕಾಲದಲ್ಲಿ ಧರ್ಮಸ್ಥಳಕ್ಕೆ ಹೋಗಿದ್ದೆ. ಅಲ್ಲಿಯ ಕಾಲೇಜಿನಲ್ಲಿ ಮಾತಾಡಲಿಕ್ಕೆಂದು. ತಲೆ ಬೋಳಿಸಿಕೊಂಡು ನೂರಾರು ಜನ ಧರ್ಮಸ್ಥಳದ ಮಂಜುನಾಥನ ದರ್ಶನಕ್ಕೆ ನಿಂತದ್ದನ್ನು ನೋಡಿದೆ. ಈ ದೇಶದಲ್ಲಿ ಶಕ್ತಿಯ ಕೇಂದ್ರವಿರುವುದು ಒಂದಲ್ಲ, ಹಲವು ಶಕ್ತಿಯ ಕೇಂದ್ರಗಳು ಇವೆ ಅನ್ನಿಸಿತು. ದೆಹಲಿಯಲ್ಲಿ ಮಾತ್ರ ಶಕ್ತಿಕೇಂದ್ರವಿರುವುದಿಲ್ಲ. ಹಳ್ಳಿಗಳಲ್ಲಿರುವ ಪ್ರತಿ ಭೂತವೂ ಶಕ್ತಿ ಕೇಂದ್ರವೇ. ಆದ್ದರಿಂದ ಜನರನಂಬಿಕೆಯನ್ನು ಸದ್ಯ ವಿರೋಧಿಸಬಾರದೋ ಏನೋ ಅಂತ ಅನ್ನಿಸಿತು. ಆದರೆ ಆ ದೇವಸ್ಥಾನವನ್ನು ನಡೆಸುವವರು ಆರ್ಥಿಕ ಕಾರಣಗಳಿಗಾಗಿ-ಸರ್ವಾಧಿಕಾರಿಯ ಬ್ಲಾಕ್ ಮೇಲ್‌ಗೆ ಒಳಗಾಗಬಹುದು ಎಂಬುದನ್ನು ಕಡೆಗಣಿಸಬಾರದು. ಆದ್ದರಿಂದ ಜನರ ಈ ನಂಬಿಕೆಗಳೂ ಕೂಡ ಎಲ್ಲ ಕಾಲಕ್ಕೂ ಸಮರ್ಥ ರೀತಿಯಲ್ಲಿ ಸರ್ವಾಧಿಕಾರವನ್ನು ತಡೆದು ನಿಲ್ಲಿಸುತ್ತವೆ ಎಂದು ನಾನು ಹೇಳುತ್ತಾ ಇಲ್ಲ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಎಲ್ಲ ಜನರ ಮನಸ್ಸನ್ನೂ ಹಿಡಿಯುವಂಥ ಒಂದು ಸರ್ವಾಧಿಪತ್ಯವನ್ನು ಈ ದೇಶದಲ್ಲಿ ನಿರ್ಮಿಸುವುದು ಕಷ್ಟ ಅಂತ ಅನ್ನಿಸುವಂತೆ ಜನ ಬದುಕುವುದನ್ನು ಕಾಣುತ್ತೇವೆ. ನಾನೂ ಈ ಜನರಂತೆ ಈ ದೇವರುಗಳನ್ನೆಲ್ಲ ನಂಬುವೆನೋ ಇಲ್ಲವೊ ಇಲ್ಲಿ ಮುಖ್ಯವಲ್ಲ. ನಾನು ಒಬ್ಬ ಲೇಖಕನಾದ್ದರಿಂದ ಮತ್ತು ರಾಜಕಾರಣಿಯಂತೆ ಹೇಳಿಕೆ ಕೊಡಬೇಕಾಗಿಲ್ಲದಿರುದರಿಂದ ಇದನ್ನು ಹೇಳುತ್ತಿದ್ದೇನೆ, ಆಲ್ಲದೇ ಸಾಹಿತಿಯಾಗಿ ನಾನು ಎಂದೆಂದೂ ವಿಚಾರವಾದಿಗಳಂತೆ ಗೀತೆಯನ್ನಾಗಲೀ, ಬೈಬಲ್ಲನ್ನಾಗಲೀ, ಖುರಾನನ್ನಾಗಲೀ ಸುಡು ಎಂದು ಹೇಳಲಾರೆ. ಸೃಷ್ಟಿರಹಸ್ಯದ ಬಗ್ಗೆ ಇರುವ ಬೆರಗಿಗೆ ವಿಜ್ಞಾನವೂಕಿಂಡಿಯಾದಾಗ ಧರ್ಮ, ವಿಜ್ಞಾನಗಳು ಅವಳಿ–ಜವಳಿಗಳಾಗುತ್ತವೆ. ನನಗೆ ಇತ್ತೀಚೆಗೆ ಅದಕ್ಕೊಂದು ಉದಾಹರಣೆ ಸಿಕ್ಕಿದ್ದೆಂದರೆ ತೇಜಸ್ವಿಯವರ 'ಕರ್ವಾಲೋ'ನಲ್ಲಿ. ಅದು ಒಂದು ಧಾರ್ಮಿಕ ಚಿಂತನೆ ಹುಟ್ಟಿಸಬಹುದಾದ ಸೃಷ್ಟಿಯಲ್ಲಿನ ರಹ

ಶ್ಯದ ಭಾವನೆಯನ್ನು ನಮ್ಮಲ್ಲಿ ಹುಟ್ಟಿಸಲು ಯತ್ನಿಸುವ ಕೃತಿ. ಆದರೆ ಧರ್ಮ, ಮತಗಳ ಬಗ್ಗೆ ಒಂದು ವಿಷಯ ನಮಗೆ ನೆನಪಿರಬೇಕು: ಧರ್ಮವನ್ನು ನಾವು ಶುದ್ಧಮಾಡುತ್ತೇವೆ ಎಂದು ಸಿಪ್ಪೆ ಸುಲಿಯುತ್ತಾ ಹೋದರೆ ಅದರ ಸಿಪ್ಪೆಯೇ ತಿರುಳು; ಇನ್ನೇನೂ ಬೇರೆ ತಿರುಳಿಲ್ಲ. ಅವುಗಳ ಶುದ್ಧರೂಪದಲ್ಲಿ ಮಾತ್ರ ಧರ್ಮ, ಮತಗಳನ್ನು ಒಪ್ಪುತ್ತೇನೆ ಎನ್ನುವುದು ಈ ಕಾರಣದಿಂದ ಸಾಧ್ಯವಾಗದೇ ಹೋಗಬಹುದು.

ಈಗ ಪ್ರಚಾರದ ಮೂಲಕ ಪ್ರಸಿದ್ಧರಾಗಿರುವ ಪವಾಡಪುರುಷರಾದ ಸಾಯಿಬಾಬಾರಂಥವರನ್ನು ವಿರೋಧಿಸಲು ಡಾ|| ಎಚ್. ನರಸಿಂಹಯ್ಯನಂಥವರ ನಾಯಕತ್ವದಲ್ಲಿ ಬಹಳ ಪ್ರಯತ್ನ ನಡೆದಿದೆ. ಆದರೆ ಈ ಪವಾಡಪುರುಷರು ಅನೇಕರಿಗೆ ಸೈಕಿಯಾಟ್ರಿಸ್ಟರಂತೆ ಮನಸ್ಸಿಗೆ ಸಾಂತ್ವನವನ್ನು ಕೊಡುತ್ತಿರುವುದರಿಂದ ಇಂಥ ಚಳುವಳಿಗಳು ಎಪ್ಪತ್ತರ ದಶಕದಲ್ಲಿ ಕೇವಲ ಅಲ್ಪಸಂಖ್ಯಾತ ಚಳವಳಿಗಳಾಗಿ ಉಳಿದವು. ಧರ್ಮದ ಬಗ್ಗೆ ಗಾಢವಾದ ತಿಳುವಳಿಕೆ

ಬಗೆಯ ದಿಢೀರ್ ಪವಾಡಪುರುಷರ ಬಗ್ಗೆ ಚಕಾರವೆತ್ತದೇ ಸುಮ್ಮನಿರುವುದು. ಶಂಕರ, ರಾಮಾನುಜ, ಆನಂದತೀರ್ಥ, ಬಸವ, ಅಲ್ಲಮ ಯಾರೇ ಆಗಲೀ ಅರಿವಿಗಾಗಿ ಧರ್ಮವನ್ನು ಹಿಡಿದವರಾದ್ದರಿಂದ, ತಮ್ಮ ಹಿಂದಿನದನ್ನು, ಸಮಕಾಲೀನವಾದುದನ್ನು ನಿಷ್ಠುರವಾಗಿವಾಗಿ ವಿಮರ್ಶಿಸುತ್ತಲೇ ತಮ್ಮ ವಾದಗಳನ್ನು ಮಂಡಿಸಿದರು. ಈಗಲೂ ಯೂರೋಪ್‌ನಲ್ಲಿ ಕ್ರಿಶ್ಚಿಯಾನಿಟಿ ಸೃಜನಶೀಲವಾಗಿಉಳಿದಿದೆ. ಉದಾಹರಣೆಗೆ ಕೆರ್ಕೆಗಾರ್ಡ್ ಮತ್ತು ಎಲಿಯಟ್‌ರಂಥ ಲೇಖಕರು ಅಲ್ಲಿ ಬಂದಿದ್ದಾರೆ. ಆದರೆ ಭಾರತದಲ್ಲಿ ಮಾತ್ರ ಪ್ರಾಯಶಃ ರಾಮಕೃಷ್ಣ, ರಮಣ ಮಹರ್ಷಿಗಳ ನಂತರ ನಮ್ಮ ಧಾರ್ಮಿಕ ಚಿಂತನೆ ಮೊಂಡಾಗಿದೆ. ಇಲ್ಲವಾದಲ್ಲಿ ಗೊಡ್ಡು ಧಾರ್ಮಿಕತೆಗೆ, ಚೀಪಾದ ಪವಾಡಗಳಿಗೆ ಧರ್ಮದ ಒಳಗಿಂದಲೇ ಚುರುಕಾದ ವಿರೋಧ ಹುಟ್ಟುತ್ತಿತ್ತು. ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ, ಒಂದು ಕಷ್ಟಕರವಾದ ಪ್ರಶ್ನೆಯನ್ನು ಎತ್ತುವುದಕ್ಕೆ ನಾನಿಲ್ಲಿ ನೋಡುತ್ತಿದ್ದೇನೆ: ಜಾತಿ ನಿರ್ಮೂಲನವನ್ನು

ದ್ದರೆ ಬಹುಶಃ ಜಾತಿವ್ಯವಸ್ಥೆಯ ಕೆಡುಕುಗಳನ್ನು ಬಹಳ ಬೇಗ ನಿರ್ನಾಮ ಮಾಡಬಹುದಿತ್ತು. ಹಿಂದೆ ದಯಾನಂದ ಸರಸ್ವತಿ ಇತ್ಯಾದಿ ಬಂದರಲ್ಲ–ಆ ಬಗೆಯಲ್ಲಿ, ಕುವೆಂಪು, ಅಡಿಗ, ಶ್ರೀರಂಗ, ಮಾಸ್ತಿಯಂಥವರು ಆ ಪರಂಪರೆಯಲ್ಲಿ ಬಂದವರು. ಆದ್ದರಿಂದಲೇ ಭಾರತದ ಧರ್ಮದಲ್ಲಿ ಉತ್ತಮವಾದ ಕೆಲವನ್ನು ಉಳಿಸಿಕೊಂಡೂ ಅಸಹ್ಯವೆನ್ನಿಸುವ ಕೆಲಸವನ್ನು ಬಿಡುವುದು ಹೇಗೆಂದು ಅವರು ಚಿಂತಿಸುತ್ತಾ ಚಿಂತಿಸುತ್ತಾ ಬಂದಿದ್ದಾರೆ. ಈಗ ವಿಚಾರವಾದ ಎಂದು ಮೆರೆಯುತ್ತಾ ಇರುವುದು ಆಧುನಿಕ ನಾಗರಿಕತೆಗೆ ಮತ್ತು ಕೇಂದ್ರೀಕರಣಕ್ಕೆ ನಮ್ಮ ಮನಸ್ಸುಗಳನ್ನು ಸಿದ್ಧಪಡಿಸುವಂಥ, ಜನಸಾಮಾನ್ಯರಿಂದ ನಮ್ಮನ್ನು ದೂರಮಾಡುವಂಥ ಉಪಾಯಗಳು ಎಂದು ಅನ್ನಿಸಿದಾಗ ಅನುಮಾನಗಳು, ಸಂದಿಗ್ಧಗಳು ಹುಟ್ಟಿಕೊಳ್ಳುತ್ತವೆ. ಈ ವಿಚಾರವಾದದ ಪರಿಣಾಮ ನಾವು ಬಯಸಿದ ರೀತಿಯಲ್ಲಿ ಆಗದೇ ಇನ್ನೊಂದು ರೀತಿಯಲ್ಲಿ ಆಗಬಹುದು. ರಷ್ಯನ್ ಟ್ಯಾಂಕುಗಳನ್ನು ನಂಬುವವರಿಗೆ ಈ ಪ್ರಶ್ನೆ

ಹತ್ತೊಂಬತ್ತನೆಯ ಶತಮಾನದಲ್ಲಿ ನಾವು ಹೀಗೆಯೇ ಪಾಶ್ಚಾತ್ಯೀಕರಣವಾಗದೇ ಇಂಡಿಯಾ ಉದ್ಧಾರವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು ರಾಜಾರಾಮ ಮೋಹನರಾಯರಂಥವರ ನೇತೃತ್ವದಲ್ಲಿ ನಾವಿರುವ ಪ್ರಸ್ತುತ ಹಾದಿಯನ್ನು ಅಗಲೇ ಹಿಡಿದೆವು ಎಂದು ಹಿಂದೆ ಹೇಳಿದೆ. ಇದು ಇನೊಂದು ಬಗೆಯ ಮೂಢನಂಬಿಕೆಗೆ, ಈಗಿರುವುದಕ್ಕಿಂತಲು ಹೆಚ್ಚು ವಿನಾಶಕಾರಿಯಾದ ಮಾನವ ಜೀವಿತಕ್ಕೆ ಯಾವುದು ಒಳಿತೆಂದೇ ತಿಳಿಯಲಾರದ ಮೌಢ್ಯಕ್ಕೆ ನಮ್ಮನ್ನು ತಳ್ಳಬಹುದು. ಆದರೆ ನಮ್ಮ ವಿಚಾರವಾದಿಗಳು ಇಂಥ ಪ್ರಶ್ನೆಗಳಿಂದ ತಲೆ ಕೆಡಿಸಿಕೊಂಡಂತೆ ನನಗಂತೂ ಕಾಣುವುದಿಲ್ಲ.

ರುಳ್ಳ ಯಾರೂ, ನನ್ನ ಪ್ರಕಾರ, ಶೇಷಸಾಹಿ ತ್ಯಾದಿ ಭಂಗಿಗಳಲ್ಲಿ ಫೋಟೋ ತೆಗೆಸಿಕೊಳ್ಳುವ ೀ ಬಾಬಾರನ್ನು ಒಪ್ಪಿಕೊಳ್ಳಲಾರರು. ಶಾಸ್ತ್ರದ ನ್ನೂ, ಒಳಾನುಭವವನ್ನೂ, ಪರಂಪರೆಯಿಂದ ದ ವೇದೋಪನಿಷತ್ತುಗಳನ್ನೂ ಒಪ್ಪಂದದಲ್ಲಿ ಡಿಸಿಕೊಳ್ಳಲು ಪ್ರಯತ್ನಿಸಿದ ನಮ್ಮ ದೇಶದ ಾವ ದೊಡ್ಡ ಮತಸ್ಥಾಪಕರೂ–ಶಂಕರ, ರಾಮಾಜ, ಆನಂದತೀರ್ಥರಂಥವರು–ಈ ಬಗೆಯ ಾಡಪುರುಷರನ್ನು ಒಪ್ಪಿಕೊಳ್ಳಲಾರರೆಂದು ನನ ಸುತ್ತದೆ. ಧರ್ಮ ನಮ್ಮ ಅರಿವಿನ ಮಟ್ಟ ನ್ನು ಹಿಗ್ಗಿಸುವುದು, ಮನಸ್ಸಿನ ಸಾಂತ್ವನಕ್ಕಾಗಿ ತ್ರ ಅದನ್ನು ಆಶ್ರಯಿಸದೇ ಇದ್ದಾಗ: ಅಂದರೆ, ್ಯನ್ವೇಷಣೆಗೆ ಅದು ಸಾಧನವಾದಾಗ, ಧ್ಯಾನದ ದ್ದಾಗ ಮಾತ್ರ ಅದು ಗಾಢವಾದದ್ದಾಗು ೆ. ಆದ್ದರಿಂದ ನಮ್ಮ ಧರ್ಮಗಳ ಅವನತಿ ದಾಗಿಯೇ–ಅಂದರೆ ಅನ್ವೇಷಕ ಮನಸ್ಸು ದ ಆಚರಣೆಗಳಿಂದ ಮಾಯವಾದ್ದರಿಂದಲೇ ಧರ್ಮಾಧಿಪತಿಗಳೆನ್ನಿಸಿಕೊಂಡವರೆಲ್ಲ ಈ

ಆಧುನಿಕ ನಾಗರಿಕತೆಯ ಮೂಲಕ, ಕೇಂದ್ರೀಕರಣವನ್ನು ಆಗತ್ಯಮಾಡುವ ನಗರೀಕರಣದ ಮೂಲಕ ಸಾಧಿಸುವುದನ್ನು ಒಪ್ಪದಿದ್ದವರಿಗೆ ಮಾತ್ರ ಈ ಪ್ರಶ್ನೆ ಏಳುತ್ತದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ನಾವು ಹೀಗೆಯೇ ಪಾಶ್ಚಾತ್ಯೀಕರಣವಾಗದೇ ಇಂಡಿಯಾ ಉದ್ಧಾರವಾಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದು ರಾಜಾರಾಮಮೋಹನರಾಯರಂಥವರ ನೇತೃತ್ವದಲ್ಲಿ ನಾವಿರುವ ಪ್ರಸ್ತುತ ಹಾದಿಯನ್ನು ಆಗಲೇ ಹಿಡಿದೆವು ಎಂದು ಹಿಂದೆ ಹೇಳಿದೆ. ಇದು ಇನ್ನೊಂದು ಬಗೆಯ ಮೂಢನಂಬಿಕೆಗೆ, ಈಗಿರುವುದಕ್ಕಿಂತಲೂ ಹೆಚ್ಚು ವಿನಾಶಕಾರಿಯಾದ, ಮಾನವ ಜೀವಿತಕ್ಕೆ ಯಾವುದು ಒಳಿತೆಂದೇ ತಿಳಿಯಲಾರದ ಮೌಢ್ಯಕ್ಕೆ, ನಮ್ಮನ್ನು ತಳ್ಳಬಹುದು. ಆದರೆ ನಮ್ಮ ವಿಚಾರವಾದಿಗಳು ಇಂಥ ಪ್ರಶ್ನೆಗಳಿಂದ ತಲೆ ಕೆಡಿಸಿಕೊಂಡಂತೆ ನನಗಂತೂ ಕಾಣುವುದಿಲ್ಲ. ಏಕೆಂದರೆ ನಮ್ಮ ಧರ್ಮದಲ್ಲೇ ಇರುವ ಒಂದು ಶಕ್ತಿಯ ಮುಖಾಂತರ ಇದಕ್ಕೆ ವಿರೋಧ ಬಂದಿ

ಗಳೇ ಇಲ್ಲ; ನಂಬದೇ ಇರುವವರಿಗೆ–ಗಾಂಧೀ, ಲೋಹಿಯರಾರ ಹಿಂದೆ ಬಂದವರಿಗೆ–ಈ ಪ್ರಶ್ನೆಗಳಿವೆ.

ನನಗಿದು ಯಾವಾಗ ತೀವ್ರವಾಗಿ ಅನ್ನಿಸಿತು ಹೇಳುವೆ. ರಷ್ಯಾದ ಒಂದು ಮೀಟಿಂಗನಲ್ಲಿ ನಾನಿದನ್ನು ಹೇಳಿದೆ. ರಷ್ಯಾದಲ್ಲಿ ಕನ್ಸ್ಯೂಮರಿಸಮ್–ಅಂದರೆ ಗ್ರಾಹಕ ದುರಾಸೆ–ಶುರುವಾಗಿದೆ. ಎಲ್ಲಿ ಹೋದರೂ 'ಡಾಲರ್, ಡಾಲರ್' ಅಂತ ಕೇಳುತ್ತಾರೆ. ನಮ್ಮಲ್ಲೂ ಇದೆ ಅದು–ನಗರಗಳಲ್ಲಿ. ಆದರೆ ನಾನು ಅಮೆರಿಕಾಕ್ಕೆ ಹೋಗಿ ಹತ್ತು ತಿಂಗಳಿದ್ದು ಹಿಂದಕ್ಕೆ ಬರುವಾಗ ಮನೆಯಲ್ಲಿನ ಎಲ್ಲರಿಗೂ ಏನೇನು ಕೊಂಡುಕೊಳ್ಳಬೇಕು ಎಂದು ಯೋಚಿಸುತ್ತಿದ್ದಾಗ ನನ್ನ ತಾಯಿಗೆ ಏನು ತೆಗೆದುಕೊಳ್ಳಬೇಕು ಅಂತ ಗೊತ್ತಾಗಲಿಲ್ಲ. ಅಂದರೆ ನನ್ನ ತಾಯಿಗೆ ಬೇಕಾದಂಥ ವಸ್ತು ಅಮೆರಿಕಾದಲ್ಲಿರಲಿಲ್ಲ. ಅಂದರೆ ಇಂಥ ಒಬ್ಬ ಅಗ್ರಾಹಕಳನ್ನು ನಮ್ಮ ಧರ್ಮ ಸೃಷ್ಟಿಸಿದೆ. ಕಮ್ಯೂನಿಸಮ್‌ಗೂ ಅದನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗಿಲ್ಲ. ಗ್ರಾಹಕ ದುರಾಸೆಯಲ್ಲಿ

ಒಂದು ಈವಿಲ್ ಇದೆಯೆಂದು ನೀವು ತಿಳಿದವರಾದರೆ ಅದನ್ನು ಸೃಷ್ಟಿಸುವ ವೈಜ್ಞಾನಿಕ ನಾಗರಿಕತೆಯಲ್ಲಿ–ಬಂಡವಾಳಶಾಹಿ ವ್ಯವಸ್ಥೆ ಎರಡರಲ್ಲೂ–ನಿಮಗೆ ಸಂದೇಹ, ಅನುಮಾನ ಉಂಟಾಗುತ್ತೆ.

ನಮ್ಮ ಸಾಹಿತ್ಯ ಪ್ರಪಂಚದ ಮೇಲೆ ನಾನು ಹಿಂದೆ ಎತ್ತಿದ ಎಮರ್ಜೆನ್ಸಿ ಮತ್ತು ವಿಚಾರವಾದದ ಪ್ರಶ್ನೆಗಳು ಯಾವ ಬಗೆಯ ಪರಿಣಾಮ ಮಾಡಿತೆಂದು ಸ್ಪಷ್ಟಪಡಿಸಿಕೊಳ್ಳಲು ಈಗ ಪ್ರಯತ್ನಿಸೋಣ: ರೇಡಿಯೋ ಆಣತಿಯ ಮೇರೆಗೆ ಯಾವ ವಿಷಯದ ಮೇಲೆ ಬೇಕಾದರೂ ಕವನ ಬರೆಯಬಲ್ಲಂಥವರು, ಎಮರ್ಜೆನ್ಸಿಯಲ್ಲಿಯೂ 'ಇಪ್ಪತ್ತು ಅಂಶ' ಗಳನ್ನು ಹೊಗಳಿ ಬರೆದರು. ಆದರೆ ಸ್ವಾನುಭವದ ಮೇಲೆ, ಹಿನ್ನೋಟವನ್ನು ಅಗತ್ಯಗೊಳಿಸುವ ಸಾಂದ್ರತೆಯ ಮೇಲೆ, ವೈಯಕ್ತಿಕ ಸಾಕ್ಷಿತ್ವದ ಮೇಲೆ ಒತ್ತು ಹಾಕಿದ್ದ ನಮ್ಮ ಸಾಹಿತ್ಯದ ಮಾರ್ಗ–ಪ್ರಜಾತಂತ್ರದಲ್ಲಿ ಮಾತ್ರ ಬೆಳೆಯಬಲ್ಲ ಪ್ರಯೋಗಶೀಲ ಮನೋಧರ್ಮದ ಮಾರ್ಗವಾದ್ದರಿಂದ–ಎಮರ್ಜೆನ್ಸಿಗೆ ತಕ್ಷಣದಲ್ಲಿ ಪ್ರತಿಕ್ರಿಯಿಸಲಾರದೇ ಹೋಯಿತು. ಅಡಿಗ, ಜಿ. ಎಸ್. ಸದಾಶಿವ, ಪಾಟೀಲರಂಥವರು ಮಾಡಿದ ಪ್ರತಿಕ್ರಿಯೆ ಕೂಡ ಸೂಕ್ಷ್ಮಜ್ಞರನ್ನು ಮಾತ್ರ ತಲುಪುವಂಥದ್ದಾಗಿತ್ತು; ಅಂದರೆ ರೂಪಕದ ಭಾಷೆ ಅರ್ಥ ಆಗುವವರಿಗೆ ತಲುಪುವಂಥದಾಗಿತ್ತು. ಉದಾಹರಣೆ, ಗಾಂಧೀ ಸ್ಮರಣೆ' ಯಂಥ ಪದ್ಯದ ಐರನಿ ಕೂಡ ತಲುಪುವುದು ಯಾರಿಗೆ ಅಂದರೆ, ಐರನಿ ಅಂದರೆ ಏನು ಅಂತ ಅರ್ಥ ಆಗುವವರಿಗೆ

ಜನರ ಮನಸ್ಸನ್ನು ರಾಜಕೀಯವಾಗಿ ತಕ್ಷಣ. ಪರಿಣಾಮಕಾರಿಯಾಗುವಂತೆ ಬೇರೆ ದಿಕ್ಕಲ್ಲಿ ಕಟ್ಟುವುದು ಪ್ರಾಯಶಃ ದಟ್ಟ ಸಾಂದ್ರ ಮಾಧ್ಯಮಕ್ಕೆ ಸಾಧ್ಯವಿಲ್ಲ. ಈ ಪ್ರಶ್ನೆಯಿಂದ ನಾನೀಗ ಒಕ್ಕೂಟದ ಪ್ರಶ್ನೆಗೆ ಬರುತ್ತೇನೆ. ಅದು ವೈದಿಕ ಧರ್ಮವನ್ನು ವಿರೋಧಿಸುವುದಕ್ಕೋಸ್ಕರವಾಗಿ ಹುಟ್ಟಿದ ಒಂದು ಚಳವಳಿ, ಅದರ ಬಗ್ಗೆ ನಾನು ಈಗಾಗಲೇ ಬೇರೆ ಕಡೆ ಬರೆದಿರುವುದರಿಂದ ಇನ್ನೊಂದು ಹೊಸ ವಿಷಯ ಅಂತ ಅನ್ನಿಸಿದ್ದನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

ನವೋದಯ ಮಾರ್ಗದಲ್ಲಿ ಬರೆದ ಕುವೆಂಪುರಂಥವರೂ ಸಂಸ್ಕೃತೀಕರಣವನ್ನು ಒಪ್ಪಿಕೊಂಡವರು. ಆಮೇಲೆ ಅವರ ದಿಕ್ಕಿನಲ್ಲೇ ಬೆಳೆದ ಬ್ರಾಹ್ಮಣೇತರ ಲೇಖಕರಾದ ಕಣವಿಯವರಿಗೇ ಆಗಲಿ ಶಿವರುದ್ರಪ್ಪನವರಿಗೇ ಆಗಲಿ ಸಂಸ್ಕೃತೀಕರಣ ಸಮಸ್ಯೆಯಾಗಲಿಲ್ಲ. ಅಂದರೆ ಈ ನವ್ಯಯುಗದಲ್ಲಿ ಬಂದ, ನನ್ನ ಜೊತೆಗೇ ಬೆಳೆದುಬಂದ, ಕೆಲವರಿಗೆ ಈ ಸಂಸ್ಕೃತೀಕರಣದ ಮುಖಾಂತರ ಜಾತಿಯನ್ನು ಮೀರುವುದು ಸಾಲದು ಅಂತ ಅನ್ನಿಸಿತು. ಆಗ ಇದಕ್ಕಿಂತ ಉತ್ತಮವಾದ ಬೇರೆ ಮಾರ್ಗ ಯಾವುದು ಅನ್ನುವ ಪ್ರಶ್ನೆ ಹುಟ್ಟುತ್ತದೆ. ನಮಗೆ ನಮಗೆ ಕಾಣುತ್ತ ಇರುವ ಹಾಗೆ ಇನ್ನೊಂದು ಮಾರ್ಗವೆಂದರೆ, ಪಾಶ್ಚಾತ್ಯೀಕರಣ. ಆದರೆ ಇವೆರಡು ಮಾರ್ಗಗಳನ್ನೂ ಒಪ್ಪಿಕೊಳ್ಳದೇ ಇರುವವರಿಗೆ ಬಹಳ ತೊಡಕುಗಳಿವೆ.

ನನಗೆ ಈಚೆಗೆ ಒಂದು ವಿಷಯ ಹೊಳೆಯಿತು. ಅದನ್ನು ನಾನಿನ್ನೂ ಹೋಚಿಸಿ ಬೆಳೆಸಿಲ್ಲ. ಲಂಕೇಶರ 'ಅವ್ವ' ಪದ್ಯವನ್ನು ಒಂದು ವರ್ಕ್‌ಷಾಪಿನಲ್ಲಿ ವಿವರಿಸುತ್ತಿದ್ದಾಗ ಥಟ್ಟದೆ ಅದರಲ್ಲೊಂದು ಸೂಕ್ಷ್ಮ ಕಂಡಿತು. ಪ್ರಾಯಶಃ ಬ್ರಾಹ್ಮಣೇತರ ಬಡ ಕುಟುಂಬದಲ್ಲಿ ಹುಟ್ಟಿಬಂದವರು ಬೆಳೆಯುತ್ತಾ ನಗರೀಕರಣವಾದ ನಂತರ ತಮ್ಮ ಜನರ ಬಗ್ಗೆ ಒಂದು ರೀತಿಯ ಸಂಕೋಚವನ್ನೂ ಅವಮಾನವನ್ನೂ ಬೆಳೆಸಿಕೊಳ್ಳುವುದಕ್ಕೆ ಸಾಧ್ಯ. ಬ್ರಾಹ್ಮಣ ಹುಡುಗರನ್ನೂ ಈ ಸಮಸ್ಯೆ ಅಷ್ಟು ಭಾಧಿಸಲಾರದು. ಬ್ರಾಹ್ಮಣೇತರ ಹುಡುಗರಿಗೆ ಇದು ಬಹುಶಃ ಬೆಳೆಯುವ ಕ್ರಿಯೆಯಲ್ಲಿ ವಿದ್ಯಾಭ್ಯಾಸದ ಕ್ರಿಯೆಯಲ್ಲಿ ಇರಬಹುದಾದ ಸಮಸ್ಯೆ ಎಂದು ಕಾಣುತ್ತದೆ. ಹಿಂದೆ ಕುವೆಂಪುರವರು ಸಂಸ್ಕೃತೀಕರಣವನ್ನು ಒಪ್ಪಿಕೊಂಡಾಗ ಇನ್ನೂ ಗೊಡ್ಡು ನಂಬಿಕೆಗಳಿರುವವರ ಜೊತೆಗೆ ಹೂವಯ್ಯನಿಗಿರುವ ಸಂಬಂಧವನ್ನು 'ಕಾನೂರು ಹೆಗ್ಗಡತಿ'ಯಲ್ಲಿ ಅವರು ಚಿತ್ರಿಸುವ ಬಗೆ ನೋಡಿ. ನಂತರ ಇದಕ್ಕೆ ವ್ಯತಿರಿಕ್ತವೆನ್ನಿಸುವಂತಿರುವ ಲಂಕೇಶರ ಪದ್ಯದಲ್ಲಿ ಅವ್ವನ ಜೊತೆ ಕವನದ ನಾಯಕನಿಗಿರುವ ಸಂಬಂಧ ನೋಡಿ. ಅಲ್ಲಿರುವ ಪ್ರತಿಯೊಂದು ಸಾಲೂ ಹೇಗಿದೆಯೆಂದರೆ: ಇವಳು ಹುಡುಕಿಕೊಂಡು ಹೊರಟದ್ದು ಅನ್ನುತ್ತಾರೆ— ಅಂದರೆ, 'ಏನೋ ಒಂದು ಧರ್ಮಕ್ಕಾಗಿ' ಅನ್ನುವ ಆಶೆಯನ್ನು ಪ್ರಚೋದಿಸಿ 'ಕಳೆದುಹೋದ ಎಮ್ಮೆಗಾಗಿ' ಅನ್ನುತ್ತಾರೆ. ಅಂದರೆ ಸಂಸ್ಕೃತೀಕರಣದ ಮೌಲ್ಯಗಳನ್ನು ಅಪೇಕ್ಷಿಸುವಂಥ ಸಾಲುಗಳನ್ನು ಸೃಷ್ಟಿಸಿ, ಅವುಗಳ ಕೊನೆಯಲ್ಲಿ ಅವಳು ಬರೇ ಕಾಯಕ ಜೀವಿಯಾಗಿದ್ದದ್ದನ್ನು ತೋರಿಸಿ ಅದನ್ನೇ ಕೀರ್ತಿಸುತ್ತಾರೆ. 'ನಮ್ಮವ್ವನಿಗೆ ಭಗವದ್ಗೀತೆ ಇತ್ಯಾದಿಗಳು ಬೇಡ' ಎನ್ನುತ್ತಾರೆ. ಎಲ್ಲಿ ಒಂದು ದ್ವಂದ್ವ ಮತ್ತು ಘರ್ಷಣೆ ಹುಟ್ಟಿಕೊಳ್ಳಬಹುದಿತ್ತೋ ಅಲ್ಲಿ ಇವರು ಶೂದ್ರತ್ವವನ್ನು ಅದು ಇರುವಂತೆಯೇ ಒಪ್ಪಿಕೊಳ್ಳುವ ನಿಲುವಿನಲ್ಲಿ ನಿಂತು ಸಂಕೋಚವನ್ನು ಮೀರುತ್ತಾರೆ. ಆದರೆ ಇದು ಎಷ್ಟು ಕಷ್ಟದ್ದು ಎಂಬುದಕ್ಕೆ ಇವರ ಇನ್ನೊಂದು ಪದ್ಯ 'ಅಕ್ಕ–ತಮ್ಮ' ಅನ್ನುವುದನ್ನು ನೋಡಬಹುದು: ಅಲ್ಲಿ ತನ್ನಕ್ಕನ ಬಗ್ಗೆ ಅವನಿಗೆ ಸಂಶಯ ಬರುತ್ತದೆ; ಜೊತೆಯ ಹುಡುಗರು ಹಾಸ್ಯಮಾಡುತ್ತಿರುತ್ತಾರೆ; ಆಗ ಕವನದ ನಾಯಕ ಕುಡುಮಿಯಾಗಿಬಿಡುತ್ತಾನೆ. ಅಂದರೆ ತಾನು ದೊಡ್ಡ ವಿದ್ಯಾವಂತನಾಗುವುದರ ಮುಖಾಂತರ ತನ್ನ ಜನರ ನಡುವಿನ ಗೊಂದಲಗಳನ್ನು ಮೀರುವುದಕ್ಕೆ ನೋಡುತ್ತಾನೆ ಅಕ್ಕನನ್ನು, ಇವನು ಹಠಮಾಡಿದನೆಂದು, ಮನೆಯವರು ಅವಳು ಒಲ್ಲದ ಗಂಡನ ಮನೆಗೆ ಕಳುಹಿಸುತ್ತಾರೆ. ಅದರಿಂದಾಗಿ ಕವನದ ನಾಯಕ ಪಾಪಪ್ರಜ್ಞೆಗೆ ಒಳಗಾಗುತ್ತಾನೆ.


'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಎನ್ನುವ ಕಥೆಯಲ್ಲಿ ನಾಯಕ ಸ್ಕಾಲರ್‌ಶಿಪ್ ಪಡೆದುಕೊಳ್ಳುವುದಕೋಸ್ಕರವಾಗಿ. ಆ ಮನೆಯ ಯಜಮಾನನ ಹತ್ತಿರ ಹೋಗಿದ್ದಾಗ (ಯಜಮಾನನ ಮಗಳು ಇವನ ಸಹಪಾಟಿ ಕೂಡ ಆಗಿರುತ್ತಾಳೆ) ಅಲ್ಲಿ ಅವನ ತಾಯಿ ಮತ್ತು ಅಕ್ಕ ತರಕಾರಿಯನ್ನೋ, ಏನನ್ನೋ ಕದ್ದು, ಭಾರೀ ಅವಮಾನದ ಒಂದು ಪ್ರಸಂಗ ಅವನಿಗೆ ಒದಗುತ್ತದೆ. ಆದರೆ ಉಮಾಪತಿ ಈ ಸನ್ನಿವೇಶದಿಂದ ಸಿಳ್ಳುಹೊಡೆಯುತ್ತ ನಡೆದುಬಿಡುತ್ತಾನೆ— ಇದು ಕೂಡ ಒಂದು ಮೀರುವ ಬಗೆಯೇ.

ಸಂಸ್ಕೃತೀಕರಣದಬಗ್ಗೆ ಸಂಕೋಚ, ಪಾಶ್ಚಾತ್ಯೀಕರಣದ ಬಗ್ಗೆ ಅನುಮಾನ, ಆದರೆ ಜಾತಿಪದ್ಧತಿಯನ್ನು ಮೀರಬೇಕು ಅನ್ನುವ ಆಶೆ, ಜೊತೆಗೇ ಶೂದ್ರತ್ವದ ಜೀವನ ಸಂತೋಷ ಎಷ್ಟೋ ಮೌಲ್ಯಗಳನ್ನು ಕಾದಿರಿಸಿಕೊಂಡಿದೆ ಎಂಬ ಭಾವನೆ— ಇವೆಲ್ಲವೂ. ಲೇಖಕನ ಪ್ರಜ್ಞೆಯಲ್ಲಿ ಮಿಳಿತವಾದಾಗ ಅದು ಸೃಜನಶೀಲತೆಯಲ್ಲಿ ಜೀವನದ ಹೊಸ ಸಾಧ್ಯತೆಗಳನ್ನು ಹುಡುಕಲು ತೊಡಗುತ್ತದೆ. ಒಕ್ಕೂಟದಿಂದ ಪ್ರಾರಂಭವಾದ ಚಳವಳಿ, ಚಿಲ್ಲರೆ ಪ್ರಶ್ನೆಗಳಲ್ಲಿ ತನ್ನ ಶಕ್ತಿಯನ್ನು ವ್ಯಯ ಮಾಡಿಕೊಳ್ಳದಿದ್ದಲ್ಲಿ. ಅದು ಇಂಥ ಗಂಭೀರ ಪ್ರಶ್ನೆಯನ್ನು ಎದುರಿಸಬಹುದಿತ್ತು: ಸಂಸ್ಕೃತೀಕರಣ ಪಾಶ್ಚಾತ್ಯೀಕರಣ–ಇವೆರಡನ್ನೂ ಒಪ್ಪಿಕೊಳ್ಳದೇ, ಇರುವ ಸ್ಥಿತಿಯಲ್ಲೇ ನಾವು ಜೀವನಕೆನ್ನು ಒಪ್ಪಿಕೊಳ್ಳುವ ಕ್ರಮಗಳು ಇವೆಯೋ ? ಇಂಥ ಪ್ರಶ್ನೆಗೆ ಉತ್ತರ ಹುಡುಕುವ ತಾಳ್ಮೆಯಿದ್ದಲ್ಲಿ ಮಾತ್ರ ಜಾತಿಯ ಬಗ್ಗೆ ನಡೆದ ಚಳವಳಿ ಸಾಹಿತ್ಯದ ದೃಷ್ಟಿಯಿಂದ ಸಾರ್ಥಕವಾಗಬಹುದು. ಅದಿಲ್ಲದೇ ನೀವು, ಅನಂತಮೂರ್ತಿ ಬ್ರಾಹ್ಮಣ ಎಂದು ನನ್ನನ್ನು ಬಯ್ಯೋದು, ಹಾಸ್ಯಮಾಡೋದು. ಅಡಿಗ ಬ್ರಾಹ್ಮಣ ಅಂತ ಅವರನ್ನು ಬಯ್ಯೋದು, ಹಾಸ್ಯಮಾಡೋದು-ಇವುಗಳಲ್ಲಿ ತೃಪ್ತರಾದರೆ ನೀವು ಜುಜುಬಿಯಾಗಿಬಿಡುತ್ತೀರಿ, ಅಷ್ಟೇ.

ಒಟ್ಟಿನಲ್ಲಿ ನನ್ನ ಮಾತಿನ ತಾತ್ಪರ್ಯ ಇದು ವಿಚಾರವಾದದ ಚಳವಳಿ, ದಲಿತ ಚಳವಳಿ, ಇತ್ಯಾದಿಗಳು ಎದುರಿಸಲೇಬೇಕಾದ ಮೂಲಪ್ರಶ್ನೆ

(74 ನೇ ಪುಟ ನೋಡಿ)

ಡೆಯಲಾಗದ ರುದ್ರಪ್ಪನವರು ನಮ್ಮ ಆಸೆ ಚಿವುಟಿದರು



ಂಚಮ : "ಹರಿಜನ ಗಿರಿಜನರಿಗೆ ಭೂಮಿ
ಕೆ? ಮಾರಿಕೊಳ್ಳುತ್ತಾರೆ" ಎಂಬ ಬಗ್ಗೆ ನಿಮ್ಮ
ಪ್ರಾಯ?

ದ್ರಪ್ಪ : ಹರಿಜನರ ಉದ್ಧಾರ ಭೂಮಿಯಿಂದ
ಧ್ಯವಿಲ್ಲ, ಕಾರಣ ನಷ್ಟದಲ್ಲಿ ನಡೆಯುವ
ದ್ಯಮ. ಆದಕ್ಕಾಗಿಯೇ ರೈತಹೋರಾಟ.
ನನ್ನ ಅಭಿಪ್ರಾಯದಲ್ಲಿ ಹರಿಜನರ ಉದ್ಧಾರ
–ಸಣ್ಣ ಕೈಗಾರಿಕೆಗಳಿಂದ ಮತ್ತು ಇತರೆ
ದ್ಯಮಗಳಿಂದ ಸಾಧ್ಯ. ವ್ಯವಸಾಯದ ಭೂಮಿ,
ಜನರಿಗೆ-ಗಿರಿಜನರಿಗೆ, ಮತ್ತು ಹಿಂದುಳಿದವರಿಗೆ
ಡುವುದಾದರೇ 10 ಸ್ಟ್ಯಾಂಡರ್ಡ್ ಎಕರೆಗಿಂತ
ಮ ಇರಬಾರದು. ಜೊತೆಗೆ ಎಲ್ಲಾ ಆರ್ಥಿಕ
ನ್ನು ಮುಂಗಡವಾಗಿ ಒದಗಿಸಿದಲ್ಲಿ ಮಾತ್ರ
ಮಟ್ಟಿಗೆ ಅನುಕೂಲವಾಗಬಹುದು. ಭಾರ
ವಿನಹಃ ಬೇರೆ ಯಾವ ರಾಷ್ಟ್ರದಲ್ಲಿಯೂ
7 ಭಾಗದ ಜನ ವ್ಯವಸಾಯದಲ್ಲಿ ತೊಡಗಿಲ್ಲ.
ಂಖ್ಯೆ ಕಡಿಮೆಯಾಗಬೇಕು. ವ್ಯವಸಾಯೊತ್ಪ
ಗೆ ವೈಜ್ಞಾನಿಕ ಬೆಲೆ ಸಿಗದೇ ಇರುವುದೇ
ವರ್ಷ ಸಣ್ಣ ಹಿಡುವಳಿದಾರರು ತಮ್ಮ
ನುಗಳನ್ನು ಮಾರಿಕೊಳ್ಳುವುದಕ್ಕೆ ಮುಖ್ಯ
.

ಮ : 'ಅಸ್ಪೃಶ್ಯನ ಮನೆಯಲ್ಲಿ ಉಂಡವನು
ರೈತಸಂಘದಲ್ಲಿ ಓಟುಮಾಡಲು ಹಕ್ಕುಳ್ಳ
ಎಂಬ ನೀತಿ ತರುವ ತಾಕತ್ತು ರೈತ ಸಂಘಕ್ಕೆ
?

ಪ್ಪ : ನಾನು, ಅಪ್ಪಟ ಗಾಂಧಿವಾದಿ, ಹರಿಜನರ ಉದ್ಧಾರದ ಬಗ್ಗೆ ಹೋರಾಡಿದವನು. ನಮ್ಮ ರೈತ ಸಂಘಟನೆಯಲ್ಲಿ ಇನ್ನೂ ಮೇಲ್ಮಟ್ಟದ ಚಿಂತಕರಿದ್ದಾರೆ. ಜಾತಿವಾದದಲ್ಲಿ ನಮಗೆ ನಂಬಿಕೆ ಇಲ್ಲ. ರೈತ ಸಂಘದ ಸದಸ್ಯತ್ವ ಹೊಂದುವ ಅರ್ಹತೆ, ಹರಿಜನರ ಮನೆಯಲ್ಲಿ ಉಂಡವನಿಗೆ ಎಂಬುದು ಹಾಸ್ಯಾಸ್ಪದ. ರೈತ ಸಂಘಟನೆಯ್ಯು ಒಂದು ಕೋಮಿನದಲ್ಲ ಅಥವಾ ಒಂದು ಜಾತಿಯದಲ್ಲ. ಸಮಗ್ರ ರೈತ ಮತ್ತು ಕೃಷಿಕಾರ್ಮಿಕರ ಏಳಿಗೆಗಾಗಿ ಮತ್ತು ಅವರ ಆರ್ಥಿಕ ಸಾಮಾಜಿಕ, ಶೈಕ್ಷಣಿಕ, ಸಮಾನತೆಗಾಗಿಯೇ ಇರುವ ಸಂಘಟನೆ.

ಪಂಚಮ : ಟ್ರಾಕ್ಟರ್ ಆದಿಯಾಗಿ ಕೈಕೆಲಸ ಕತ್ತರಿಸುವ ಕೈಗಾರಿಕೇನೇ ನಮಗೆ ಬೇಡವೆನ್ನುವ ಕಡೆ ರೈತ ಚಳುವಳಿ ಇರಬೇಕಲ್ಲವೆ ? ಯಾಕಿಲ್ಲ ?

ರುದ್ರಪ್ಪ : ವ್ಯವಸಾಯವನ್ನು ಆದಿಮಾನವ ಕಾಲಕ್ಕೆ ಒಯ್ಯಬೇಕೆನ್ನುವ ನಿಮ್ಮ ಪ್ರಶ್ನೆ ಶೋಚನೀಯವಾದುದು. ಪಟ್ಟಣದಲ್ಲಿರುವ ಬಾರಿ–ಬಾರಿ ಉದ್ಯಮಗಳು ಮಾನವರಿಂದಲೇ ನಡೆದಿದ್ದರೆ, ಈ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇರುತ್ತಿರಲಿಲ್ಲ.

ಸಮಾಜವಾದ, ಸಮಾನತೆ, ಉದ್ದವಾದ ಭಾಷಣ, ಲೇಖನ ಬರೆಯುವ ವ್ಯಕ್ತಿಗಳು ಪಟ್ಟಣದ ಆಸ್ತಿಮಿತಿ ಬಗ್ಗೆಯೇ ಆಗಲಿ ವೆಚ್ಚದ ಮಿತಿ ಬಗ್ಗೆಯೇ ಆಗಲಿ ಮಾತನಾಡದೆಯೇ ಇರುವುದು ಒಂದು ವಿಪರ್ಯಾಸ. ಎಲ್ಲಾ ಸುಧಾರಣೆಯ ಪ್ರಯೋಗವೂ. ವ್ಯವಸಾಯ ಕ್ಷೇತ್ರದಲ್ಲೆ ಆಗಬೇಕೆನ್ನುವ ಪಟ್ಟಣಿಗರ ನಾಟಕ ಇನ್ನು ಮುಂದೆ ನಡೆಯಲಾರದು.

....ಹೀಗಿದ್ದಾರೆ....

ರುದ್ರಪ್ಪನವರು ಹೊಸಚಿಗುರಿಗೆ ಹಳೆಬೇರಿನ ಕೊಂಡಿಯಂತೆ ರೈತ ಸಂಘದ ಅಧ್ಯಕ್ಷರಾಗಿ ಇದ್ದಾರೆ. ಹೆಸರಿಗೆ ಮಾತ್ರ ಅಧ್ಯಕ್ಷರೆಂದು ಅವರ ಬಗ್ಗೆ ಟೀಕೆ ಇದ್ದರೂ ಮೂರ್ನಾಲ್ಕು ತಲೆಮಾರು ಒಂದು ಸಂಘಟನೆಯಲ್ಲಿ ಮಿಳಿತವಾಗುವುದೂ ಬದಲಾವಣೆಗೆ ಅನಿವಾರ್ಯ ಎಂದು ನಂಬುವ 'ಪಂಚಮ'ವು ರುದ್ರಪ್ಪನವರ ಅಧ್ಯಕ್ಷತೆಯನ್ನು ಒಳ್ಳೆಯದೆಂದು ಭಾವಿಸುತ್ತದೆ. ಹಳೆತಲೆಯ ರುದ್ರಪ್ಪನವರು ಗಾಂಧಿವಾದಿಗಳಾಗಿದ್ದುದರಿಂದ 'ಅಸ್ಪೃಶ್ಯನ ಮನೆಯಲ್ಲಿ ಉಂಡವನು ಮಾತ್ರ ರೈತಸಂಘದಲ್ಲಿ ಓಟು ಮಾಡಲು ಹಕ್ಕುಳ್ಳವನು ಎಂಬ ನೀತಿ ತರುವ ತಾಕತ್ತು ರೈತ ಸಂಘಕ್ಕಿದೆಯೆ?" ಎಂದು ಪಂಚಮ ಪ್ರಶ್ನಿಸಿ ಉತ್ತರಕ್ಕಾಗಿ ಆಸೆಯಿಂದ ನೋಡಿತು. 'ಪಂಚಮ'ದ ಆಸೆಯನ್ನು ರುದ್ರಪ್ಪನವರ ಉತ್ತರ ಚಿವುಟಿ ಹಾಕಿತು. ಮೇಲಿನ ಪ್ರಶ್ನೆಯನ್ನೆ ರೈತಸಂಘದ ಕಾರ್ಯಕರ್ತ ನೆಲಮನೆ ಕಡೆಯ ಒಕ್ಕಲಿಗರ ಹುಡುಗ ಕುಮಾರ್‌ಗೆ ಹಾಕಿದಾಗ ಆತ "ನಮ್ಮ ಹುಡುಗ್ರಲ್ಲಿ ನಡಿಸ್ಬೌದು ಕನಣ್ಣಾ. ಆದ್ರೆ ಹಳೆ ಮಿಷಣ್ಣುಗಳ ಹತ್ರ ಕಷ್ಟ" ಎಂದಿದ್ದರು. ರುದ್ರಪ್ಪನವರು ಒಂದು ಹೋರಾಟ ಸಂಘಟನೆಯ ನಾಯಕರಾಗಿದ್ದರೂ ಎಷ್ಟೇ ಆದರೂ ಹಳೆಮಿಷನ್ನು. ಹಾಗಾಗಿ ಪಂಚಮ ಪ್ರಶ್ನೆಗಳು ರುದ್ರಪ್ಪನವರ ಬಳಿ ನಡೆಯಲಿಲ್ಲ.

—ಸಂಪಾದಕ

ರೈತಸಂಘದವರಿಗೆ ಆಸ್ತಿಹಮ್ಮು ಹಾಗೂ ಜಾತಿಹಮ್ಮು

ದೀನರ, ಗರೀಬರ ಆಶಾಕಿರಣವಾದಂಥ ದಲಿತ ಸಂಘರ್ಷ ಸಮಿತಿಯು ಬರಬರುತ್ತಾ ಕರ್ನಾಟಕದ ಮೂಲೆ ಮೂಲೆಯಲ್ಲಿನ ಗರೀಬನನ್ನು ತಲುಪುತ್ತಾ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಇದೇ ಹಂತದಲ್ಲಿ ಕೂಡ ಕೆಲವು ಗಲಿಬಿಲಿಗಳಿಗೆ, "ಆರೋಪ" ಮಾತುಗಳಿಗೆ ಕೂಡ ಎಡೆಕೊಟ್ಟಿದೆ. ಈ ಕಾರಣದಿಂದಲೇ, ದಲಿತ ಸಂಘರ್ಷ ಸಮಿತಿಯ ಜವಾಬ್ದಾರಲ್ಲೊಬ್ಬರರಾದ ವಿಭಾಗ ಸಂಚಾಲಕ ಹರಿಹರಆನಂದಸ್ವಾಮಿಗೆ ನಾನು ಕೇಳಿದ ಮೊದಲ ಪ್ರಶ್ನೆ.......

ಸೋನಿ : ದಲಿತ ಸಂಘರ್ಷ ಸಮಿತಿ ಹುಟ್ಟಿನ ಅನಿವಾರ್ಯತೆ ಏನಿತ್ತು ?

ಹರಿಹರ : ಬಾರತದಲ್ಲಿ ನಾನಾ ರೀತಿಯ ಚಳುವಳಿಗಳು ಕಾಣಿಸಿಕೊಂಡಿದ್ದರೂ ಯಾವುವೂ ಅಸ್ಪೃಶ್ಯತೆಯನ್ನ, ದಲಿತರ ಸಾಮಾಜಿಕ ಸ್ಥಾನಮಾನವನ್ನ ಮುಖ್ಯವಾಗಿ ತೆಗೆದುಕೊಳ್ಳಲಿಲ್ಲ. ಅಸ್ಪೃಶ್ಯರಾಗಿ ಸಾಮಾಜಿಕ ಅಸಮಾನರಾಗಿ ಶತಶತಕದ ನೋವುಂಡ ಜನ ಇಂದು ಚಿಂತಕರಾಗಿ ತಮ್ಮ ವಿಮೋಚನೆಗಾಗಿ ಹೋರಾಡಲೇ ಬೇಕಾಯ್ತು. ದ. ಸಂ. ಸ. ಇದಕ್ಕೊಂದು ವೇದಿಕೆಯಾಗಿ ರೂಪುಗೊಂಡಿತು.

ಸೋನಿ : ದ. ಸಂ. ಸ. ಗೆ ತಾತ್ವಿಕ ನೆಲೆಗಟ್ಟು ಇಲ್ಲಾಂತಾರಲ್ಲಾ ಏನು ಹೇಳ್ತೀರಿ ?

ಹರಿಹರ : ತಾ–ತ್ವಿ–ಕ ನೆಲೆಗಟ್ಟು....(ತಡವರಿಸುತ್ತಾ....) ಇಲ್ಲಾ ಅಂತೇನಲ್ಲಾ....ಈಗಾಗ್ಲೇ ನಾವು ಅಂಬೇಡ್ಕರ್ ಸಿದ್ಧಾಂತದ ಆಧಾರದಲ್ಲಿ ಮುಂದುವರೀತಿದ್ದೀವಲ್ಲಾ ? (ನಾನು ಮಧ್ಯೆ ಬಾಯಿ ಹಾಕಿ...... ನೀವು ಅಂಬೇಡ್ಕರ್ ಸಿದ್ಧಾಂತ ಅಂತಹೇಳಿದ್ರಿ....ಮೊನ್ನೆ ಕೋಲಾರದಲ್ಲಿ ದೇವನೂರ ಮಹಾದೇವ ಮಾತಾಡ್ತ........ ಎಣ್ಣೆ ಯಾರ್ದಾದ್ರೂ ಆಗಿರ್ಲಿ-ನಮ್ಮ ಅಂಬೇಡ್ಕರ್ ಜ್ಯೋತಿ ಉರಿಯೋದು ಮುಖ್ಯ ಅಂದ್ರಲ್ಲ–ಎಂದೆ ಅದಕ್ಕವರು, ಹೌದು ನಮ್ಮ Movement ಗೆ ಒಳ್ಳೇದಾಗೋದಾದ್ರೆ... ಎಂದರು.

ಸೋನಿ : ಸಮಾಜವಾದಿಗಳು, ಕಮ್ಯೂನಿಷ್ಟರು ಡಿ. ಎಸ್. ಎಸ್. ನಲ್ಲಿ ಹೆಚ್ಚಾಗಿರುವರು ಎಂದು ಕೇಳಿದ್ದೇನೆ. ಈ ರೀತಿ ಇರುವಾಗ ಇದು ಒಂದು ಏಕತ್ವ ಇರುವ ಸಂಘಟನೆಯಾಗಬಲ್ಲುದೆ ? (ಈ ಪ್ರಶ್ನೆಗಂತೂ ತುಂಬಾ ತಬ್ಬಿಬ್ಬಾಗಿ, ಆದ ಕಾರಣ ಗೊಂದಲದ ಉತ್ತರಕೊಟ್ಟರು)

ಹರಿಹರ : ಸಮಾಜವಾದಿಗಳು, ಕಮ್ಯೂನಿಷ್ಟರು ಇರಬಹುದು....ಆದ್ರೆ ಎಲ್ಲರ ಗುರಿ, ಹೋರಾಟ ಒಂದೇ ರೀತಿಯದು....

ಮಾತು–ಕತೆ



(ನಾನು ಮಧ್ಯೆ ಬಾಯಿ ಹಾಕಿ) ಗುರಿ ಒಂದೇ ಆದ್ರೂ ಹೋರಾಟದ ಮಾರ್ಗದ ಬಗ್ಗೆ ಒಬ್ಬೊಬ್ಬರೊಂದೊಂದು ರೀತಿ ಯೋಚಿಸಿದ್ರೆ ಏಕತೆ ಬರುತ್ತಾ ?

ಹರಿಹರ : ಇಲ್ಲಿ ತನಕ ಆ ರೀತಿ ಯಾವುದೂ ಆಗಿಲ್ಲ. ವ್ಯಕ್ತಿ ವೈಯಕ್ತಿಕವಾಗಿ ಏನೇ ಆಲೋಚನೆ ಮಾಡಿದ್ರೂ-Movement ನಲ್ಲಿ ಅದು ಸಾಧ್ಯವಿಲ್ಲ

ಸೋನಿ : ಕಮ್ಯೂನಿಷ್ಟರ ಪ್ರಭಾವದಿಂದಾಗಿ ಡಿ. ಎಸ್. ಎಸ್. ಕೆಟ್ಟಿದೆ ಅನ್ನುವ ವಾದಕ್ಕೆ ನೀವೇನು ಹೇಳ್ತೀರಾ ?

ಹರಿಹರ : 'ಇದುಹುರುಳಿಲ್ಲದ ಪ್ರಶ್ನೆ' ಎಂದು ಕಮ್ಯೂನಿಸ್ಟ್ ತರದ ಮಾರ್ಗಗಳೇ ನಮ್ಮಲ್ಲಿಲ್ಲ ಎಂಬರ್ಥದ ಮಾತು ಹೇಳಿದರು. ಅದಕ್ಕೆ ನಾನು ಹೋರಾಟದ ಹಾಡುಗಳಲ್ಲಿನ ಕೆಲವು ಧ್ವಂಸಕಾರೀ ಸಂದರ್ಭ ಹಾಗೂ ಇತ್ತೀಚಿನ ಧರಣಿ ಮತ್ತಿತರೆಗಳಲ್ಲಿ, ಮಾತು ಹಾಗೂ ನಡವಳಿಕೆಯಲ್ಲಿ ಮೇಲೆರಗುವಂಥ ಪ್ರವೃತ್ತಿಯನ್ನು ವಿವರಿಸಿದಾಗ ತಿರಸ್ಕರಿಸಿ, ನಾನು ಮಾತ್ರ ಶಾಂತಿಯಿಂದ ನಡೆದುಕೊಳ್ಳುವೆನೆಂದು ಸಾಬೀತುಪಡಿಸಲು ಹೆಣಗಿದರು.

ಸೋನಿ : ನೀವು ತಾಲ್ಲೋಕು ಸಂಚಾಲಕತ್ವದಿಂದ ಜಿಲ್ಲೆಗೆ, ಜಿಲ್ಲೆಯಿಂದ ವಿಭಾಗಕ್ಕೆ ಈಗ ಬಂದಿರುವಿರಿ. ಆದರೆ ಈಗ್ಗಿಂತ ನೀವು ತಾಲ್ಲೂಕು ಸಂಚಾಲಕರಾಗಿದ್ದಾಗಲೇ ಹೆಚ್ಚು ಕೆಲಸ ಮಾಡುತ್ತಿದ್ದಿರೆಂದು ನಮ್ಮ ಅನಿಸಿಕೆ ತಪ್ಪೆ ?

ಹರಿಹರ : ಅಂದ್ರೆ....ನಾನೆಂದೂ ಅಧಿಕಾರಕ್ಕೆ ಆಶೆಪಟ್ಟವನಲ್ಲ. (ಎಂದು ಪ್ರಶ್ನೆಯನ್ನು ತಪ್ಪಾಗಿ ಅರ್ಥಮಾಡಿಕೊಂಡರು. ಅದಕ್ಕೆ ನಾನು "ಅಂದರೆ ಡಿ. ಎಸ್. ಎಸ್. ನಿಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಟ್ಟು ಹೊರಿಸಿದ ಜವಾಬ್ದಾರಿ" ಎಂದಾಗ....) ನನಗೇನೂ ಹಾಗನ್ನಿಸುವುದಿಲ್ಲ ಯಾಕೆಂದ್ರೆ, ಸಂಘಟನೆ ಹೊರಿಸಿದ ಜವಾಬ್ದಾರಿಯನ್ನು ನಾನೆಂದೂ ಕೈಬಿಟ್ಟವನಲ್ಲ.

ಸೋನಿ : ರೈತಸಂಘ ಮತ್ತು ದಲಿತ ಸಂಘ ಒಟ್ಟಿಗೆ ಕೆಲಸ ಮಾಡುವ ಬಗ್ಗೆ ನಿಮ್ಮ ನಿಲುವೇನು?

ಹರಿಹರ : ಸಾಧ್ಯವಿಲ್ಲ. ಯಾಕೇಂದ್ರೆ ರೈತಸಂಘದವರಿಗೆ ಆಸ್ತಿಯ ಹಮ್ಮು ಹಾಗೂ ಜಾತಿ ಹಮ್ಮು ಇದೆ.

ಸೋನಿ : ನೀವು ಮಾಡುವ ಆರೋಪಕ್ಕೆ ರೈತ ಸಂಘದ ನಾಯಕರೂ ಸೇರ್ತಾರಾ ?

ಹರಿಹರ : ಇಲ್ಲ. ಆದ್ರೆ ರೈತ ಸಂಘದ ಹಳ್ಳಿಹಳ್ಳಿ ಮಟ್ಟದ ಕಾರ್ಯಕರ್ತರಲ್ಲಿ ಈ ರೀತಿ ಇದೆ. (ಮುಖಂಡರೊಡನೆ ಇದರ ಬಗ್ಗೆ ಮಾತಾಡಬಹುದಲ್ಲ ಎಂದಿದ್ದಕ್ಕೆ ಯೋಚಿಸುತ್ತಾ ಸುಮ್ಮನಾದರು)

ಸೋನಿ : ಸಾಂಸ್ಕೃತಿಕವಾಗಿ ಆರಂಭವಾದ ಡಿ.ಎಸ್.ಎಸ್. ಚಳುವಳಿ ತನ್ನ ಸಾಂಸ್ಕೃತಿಕತೆಯನ್ನ ಕಡಿಮೆ ಮಾಡಿಕೊಂಡಿದ್ದರ ಬಗ್ಗೆ ಏನು ಹೇಳ್ತೀರಾ ?

ಹರಿಹರ : ಸಾಂಸ್ಕೃತಿಕವಾಗಿ ಕಡಿಮೆಯೇನಾಗಿಲ್ಲ... ಸಮಸ್ಯೆಗಳು, ಆರ್ಥಿಕವಾದ ಸಮಸ್ಯೆಗಳೆಚ್ಚಾದಂತೆ ಸಾಂಸ್ಕೃತಿಕತೆ ಕೊಂಚ ಗೌಣವಾಯಿತಷ್ಟೆ. ಆದ್ರೆ ನಾವು ಹೆಚ್ಚು ಓದ್ಕೋಬೇಕಾಗಿದೆ, ಹೆಚ್ಚು ಬುದ್ಧಿವಂತರಾಗಬೇಕಾಗಿದೆ.

ಸೋನಿ : ಡಿ. ಎಸ್. ಎಸ್. ನಾಯಕತ್ವ ಸೋತಿದೆ ಎಂಬುದಕ್ಕೆ ನಿಮ್ಮ ಅಭಿಪ್ರಾಯವೇನು ?

ಹರಿಹರ : ನಾಯಕತ್ವ ಸೋತಿಲ್ಲ. ಮುಂಚೂಣಿಯ ಕೆಲ ನಾಯಕರಿಗೆ ಕೆಲವು ವೈಯಕ್ತಿಕ ಕಾರಣಗಳಿಂದ, ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು.

ಸೋನಿ : ಅಂದ್ರೆ ?

ಹರಿಹರ : "ಪ್ರತಿಯೊಬ್ಬರೂ ಜವಾಬ್ದಾರಿಯನ್ನು ಹೆಚ್ಚು ಹೊರಬೇಕು. ಹೆಚ್ಚು ಪ್ರಾಮಾಣಿಕವಾಗೆ ದುಡಿಯಬೇಕು ...ಆದ್ರೆ ನಾಯಕತ್ವ ಸೋತಿದೆ ಎಂಬುದನ್ನು ನಾನು ಖಂಡಿತಾ ಒಪ್ಪುವುದಿಲ್ಲ", ಎಂದರೂ ಕೂಡ ಹರಿಹರ ಆನಂದ ಸ್ವಾಮಿಯವರು ಖಿನ್ನರಾಗಿದ್ದರು.

—ಸೋಗಳ್ಳಿ ನಿಂಗನಾಯ್ಕ

ತಂತ್ರ ಜ್ಞಾನ ಮತ್ತು ಅಮಾನವೀಕರಣ

ಸಾವಿರದೊಂಬೈನೂರ ನಲವತ್ತೈದರ ಮಹಾ ದ್ಧದ ಸಮಯದಲ್ಲಿ ಹಿರೊಶಿಮಾ ಪಟ್ಟಣದ ಲೆ ಅಮೇರಿಕದ ವಿಮಾನದಿಂದ ಅಣುಬಾಂಬು ನ್ನು ಎಸೆಯಲಾಯಿತು. ಆ ವಿಮಾನದ ಚಾಲಕ ಬುಗಳು ಬೀಳುವುದನ್ನು– ಅವು ಸಿಡಿದು ಆದ ತ ಉರಿ– ಹೊಗೆ ಏಳುವುದನ್ನು ಅಲ್ಲಿನ ಮನೆ ಉರಿಯುವುದನ್ನು ನೋಡಿದ. ಇದಕ್ಕಿಂತ ದಲೇ ಅವನು ಆ ಪಟ್ಟಣದ ರಸ್ತೆಗಳು – ಆ ಗಳಲ್ಲಿ ಅಲೆದಾಡುತ್ತಿರುವ ಮಕ್ಕಳು ಮುದು – ಗರ್ಭಿಣಿ ಸ್ತ್ರೀಯರು– ಮನೆಗಳು ಗುಡಿ ಡಾರಗಳು ಇವುಗಳನ್ನೆಲ್ಲ ನೋಡಿದ್ದ. ಬಾಂಬು ದ ಆ ವಿಮಾನದ ಚಾಲಕ ನಂತರ ಹುಚ್ಚ ಬಿಟ್ಟ.

ಸಾವಿರದೊಂಬೈನೂರ ಎಪ್ಪತ್ತೆರಡರ ಡಿಸೆಂ ನಲ್ಲಿ ಅಮೇರಿಕದ ಬಿ–52 ಯುದ್ಧವಿಮಾನವು ಾಯ್‌ದ ಖಾಮ್‌ಥೀನ್ ರಸ್ತೆಯ ಮೇಲೆ ಬು ಎಸೆಯಿತು. ಈ ವಿಮಾನದ ಚಾಲಕನು ಬುಗಳನ್ನು ಎಸೆಯುವುದಕ್ಕೆ ಸೂಚನೆ ಕೊಡ . ಅವನು ಬಾಂಬು ಹಾಕಬೇಕಾದ ಕಡೆಗೆ ಾನವನ್ನು ನಡೆಸುವ ಅವಶ್ಯಕತೆಯೂ ಇರಲಿಲ್ಲ. ನಿಗಾಗಿ ಗಣಕಯಂತ್ರವೊಂದು ಈಎಲ್ಲ ಕಾರ್ಯ ನ್ನೂ ನೆರವೇರಿಸಿಕೊಟ್ಟಿತ್ತು. ಗಣಕಯಂತ್ರಕ್ಕೆ ಸಿಕೊಟ್ಟ ಕಾರ್ಯಗಳನ್ನು ಅದು ನೆರವೇರಿಸು ುವುದನ್ನು ನಿರೀಕ್ಷಿಸುವುದು ಮಾತ್ರ ಈ ವೈ ನಿಕನ ಕೆಲಸವಾಗಿತ್ತು. ಖಾಮಥೀನ್ ಉರಿ ತು. ಅಲ್ಲಿನ ಮನೆಗಳು, ಚರ್ಚುಗಳು, ರಸ್ತೆಗಳ ಮಕ್ಕಳು, ಮುದುಕಿಯರು, ಗರ್ಭಿಣಿಸ್ತ್ರೀ ರು ಎಲ್ಲರೂ ಆ ಬಾಂಬುಗಳ ಉರಿಯಲ್ಲಿ ಬೆಂದಿರ ದು. ಆದರೆ ಇಷ್ಟೆಲ್ಲ ನಡೆಯುತ್ತಿರುವುದನ್ನು ವೈಮಾನಿಕನಿಗೆ ಹಿರೊಶಿಮಾದ ಮೇಲೆ ಬು ಎಸೆದ ವೈಮಾನಿಕನಂತೆ ಹುಚ್ಚು ಮಾತ್ರ ಯಲೇ ಇಲ್ಲ.

ಇಷ್ಟೇ ಅಲ್ಲ, ನಂತರ ಅವನನ್ನು– 'ನಿನ್ನ ಕೈ ಲ್ಲಿ ಕೊಡಲಿಯೊಂದನ್ನು ಕೊಟ್ಟು ಖಾಮಥೀನ್ ಯಲ್ಲಿ ಮೊಟ್ಟ ಮೊದಲಿಗೆ ಕಾಣುವ ಮುದು ತಲೆ ಕತ್ತರಿಸಲು ಹೇಳಿದರೆ ಅದನ್ನು ನೆರವೇ ತ್ತೀಯಾ ?' ಎಂದು ಕೇಳಿದರೆ ಅವನು ಹಾ – ಸಾಧ್ಯವಿಲ್ಲವೆಂದು ಹೇಳಿದನಂತೆ. ಯಾಕೆಂ ಬೈಬಲ್ ಹೇಳಿದೆ– ನೀನು ಕೊಲ್ಲಕೂಡದು – u Shallnot Kill. ಅಂದರೆ ಆ ವೈಮಾನಿಕ ದ ಬಗೆಗೆ ಪ್ರಜ್ಞೆಯನ್ನು ಹೊಂದಿದವನು ಕೈಯಿಂದ ಕೊಡಲಿಯನ್ನು ಎತ್ತಿ ಒಂದು ುಕಿಯ ತಲೆಗೆ ಹೊಡೆದು ಕೊಲ್ಲುವುದು ್ ವಿರೋಧಿಯಾದ ಕ್ರಿಯೆ, ಮಹಾಪಾಪ ಅರಿತವನು. ಆದರೆ ತುಂಬ ವಿಚಿತ್ರವಾದ ವಿಷಯವೆಂದರೆ ಇದಕ್ಕಿಂತ ಸಹಸ್ರ ಪ್ರಮಾಣದ ಹಿಂಸ್ರ ಕೆಲಸವಾದ ಬಾಂಬು ಹಾಕುವ ಕಾರ್ಯದಲ್ಲಿ ಭಾಗವಹಿಸಿದ್ದರ ಬಗೆಗೆ ಅವನಿಗೆ ಧರ್ಮವನ್ನು ಮೀರಿದಂತಹ ಯಾವ ಪಾಪಪ್ರಜ್ಞೆಯೂ ಉಂಟಾಗಿರಲಿಲ್ಲ. ಬರೀ ಒಂದು ಮುದುಕಿಯಲ್ಲ– ಇಡೀ ಖಾಮ್‌ಥೀನ್ ರಸ್ತೆಯ ಎಲ್ಲ ಮುದುಕಿಯರು – ಗರ್ಭಿಣಿ ಸ್ತ್ರೀಯರು–ಮಕ್ಕಳು ಆದಿಯಾಗಿ ಎಲ್ಲರೂ ಇವನ ವಿಮಾನದಿಂದ ಎಸೆಯಲ್ಪಟ್ಟ ಬಾಂಬುಗಳ ಉರಿಯಲ್ಲಿ ಬೆಂದುಹೋದದ್ದು ಇವನ ಮನಸ್ಸಿಗೆ ಯಾವ ನೋವನ್ನೂ ಯಾಕೆ ಉಂಟುಮಾಡಲಿಲ್ಲ ? ಅವನಿಗೆ ಪಾಪಪ್ರಜ್ಞೆ ಯಾಕೆ ಕಾಡಲಿಲ್ಲ ?

ಇದಕ್ಕೆಕಾರಣವೆಂದರೆ–ಆ ವೈಮಾನಿಕನು ನೇರವಾಗಿ ತನ್ನ ಸ್ವಂತ ಕೈಗಳಿಂದಲೇ ಬಾಂಬುಗಳನ್ನು ಎಸೆದಿರಲಿಲ್ಲ. ಯಂತ್ರವೊಂದು ಈ ಕೆಲಸವನ್ನು ನಿರ್ವಹಿಸಿತ್ತು. ತಾನೇ ಸ್ವತಃ ಕೈಗಳಿಂದ ಎತ್ತಿ ಎಸೆಯದ ಬಾಂಬುಗಳ ದುಷ್ಪರಿಣಾಮ ತನ್ನದಲ್ಲವೆಂದು ಅನಿಸಬಹುದಲ್ಲವೆ ? ಗಣಕಯಂತ್ರ ಆ ಕೆಲಸ ಮಾಡಿದೆ. ಆ ಪಾಪದ ಜವಾಬ್ದಾರಿ ಅದರದು ಎನ್ನುವ ಭಾವನೆ ಮೂಡಬಹುದು. ವಾಲ್ಮೀಕಿಯ ಪೂರ್ವಾಶ್ರಮದಲ್ಲಿ ಅವನ ಹೆಂಡತಿ ಮಕ್ಕಳು ಅವನ ಪಾಪಕಾರ್ಯದಲ್ಲಿ ಜವಾಬ್ದಾರರಾಗಲು ಒಪ್ಪದ ಕಥೆಯು ನಮಗೆಲ್ಲ ತಿಳಿದೇ ಇದೆ.

ಅಂದರೆ ಇಲ್ಲಿ–ತಂತ್ರಜ್ಞಾನದಿಂದ ಮನುಷ್ಯ ಮತ್ತು ಅವನ ಕ್ರಿಯೆಯ ಜವಾಬ್ದಾರಿ ಇವುಗಳ ನಡುವೆ ಆಳವಾದ ಕಂದಕ ಉಂಟಾಗುತ್ತದೆ, ಕ್ರಿಯೆಯ ಪರಿಣಾಮದ ಜವಾಬ್ದಾರಿಯು ಮನುಷ್ಯನಿಂದ ಬೇರ್ಪಡುತ್ತದೆ. ಹೀಗೆ–ಕರ್ತೃ ಮತ್ತು ಕ್ರಿಯೆಯ ಪರಿಣಾಮದ ಜವಾಬ್ದಾರಿಯ ಬೇರ್ಪಡುವಿಕೆಯು ಅಮಾನವೀಕರಣದ ಪ್ರಥಮ ಹೆಜ್ಜೆಯಾಗಿದೆ. ಕರ್ತೃ ಮತ್ತು ಕ್ರಿಯೆಯ ಪರಿಣಾಮದ ಜವಾಬ್ದಾರಿಗಳ ನಡುವೆ ನುಸುಳಿಕೊಂಡ ತಂತ್ರಜ್ಞಾನದ ಪ್ರತಿಫಲವೇ 'ಅಮಾನವೀಕರಣ'.

ಕಾಡು-ಬೆಟ್ಟ-ಬನ-ಒಟ್ಟು ಎಲ್ಲ ಹಸಿರು ಮತ್ತು ನದಿ ಇತ್ಯಾದಿಗಳನ್ನೆಲ್ಲ ಸೇರಿಸಿ ನಾವು ಸೃಷ್ಟಿ ಅಥವಾ ಪ್ರಕೃತಿ ಎಂದು ಹೇಳುತ್ತೇವೆ. ಈ ಹಸಿರು ನೆರಳು ಕೊಟ್ಟು ತಂಪನ್ನೀಯುತ್ತದೆ. ಬದುಕಲು ಆಮ್ಲಜನಕವನ್ನೊದಗಿಸುತ್ತದೆ, ಹಸಿವಿಗೆ ಹಣ್ಣು ಹಂಪಲ-ಧಾನ್ಯ ದವಸಗಳನ್ನೊದಗಿಸುತ್ತದೆ. ಶಯನದ ಮನೆಗೆ ತೊಲೆಯಾಗುತ್ತದೆ. ಅಂದರೆ ಈ ಕಾಡು–ಬೆಟ್ಟ–ಗಿಡಮರಗಳು ಒಬ್ಬ ತಾಯಿಯ ಕೆಲಸ ಕಾರ್ಯಗಳನ್ನು ಪೂರೈಸುತ್ತವೆ. ಇದಕ್ಕೆ ಸರಿಹೊಂದುವಂತೆ ನಮ್ಮ ತತ್ವಜ್ಞಾನವು ಪ್ರಪಂಚವನ್ನು ಪ್ರಕೃತಿ–ಪುರುಷನೆಂದು ವಿಶ್ಲೇಷಿಸುವಾಗ ಪ್ರಕೃತಿಯನ್ನು 'ಸ್ತ್ರೀ' ಪದಕ್ಕೆ ಸಮಾನ ಅರ್ಥದಲ್ಲಿ ಬಳಸುತ್ತದೆ. ಪ್ರಕೃತಿಯು ಪ್ರಪಂಚದ ಮಾತೃಭಾಗವು.

ಪ್ರಕೃತಿ ಮತ್ತು ಕೆಲವು ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿರುವುದನ್ನು ನಾವು ಗಮನಿಸಬಹುದು. ತಂಪು ನೀಡುವ, ಉಸಿರಾಟಕ್ಕೆ ಆಮ್ಲಜನಕ-ಊಟಕ್ಕೆ ಅನ್ನಾದಿಗಳನ್ನು ಒದಗಿಸುವ ಸಸ್ಯಶ್ರೀ ಮತ್ತು ಮಗುವಿನ ಹಂತದಿಂದ ಮುದುಕನಾಗುವ ಗಂಡನ ಹಂತದವರೆಗೆ ಆರೈಕೆ ಮಾಡುವ–ಪಾಲಿಸುವ 'ಸ್ತ್ರೀ' ಇವೆರಡೂ ಮೃದುತ್ವ ಸಂಕೇತದ ಲಕ್ಷಣಗಳನ್ನು ಹೊಂದಿರುತ್ತವೆ. ಪ್ರೇಮ–ದಯೆ–ಅನುಕಂಪೆ – ಪುಷ್ಪದಂತೆ ಸಂವೇದನಾ ಶೀಲತೆ ಇತ್ಯಾದಿಗಳು ಈ ಮೃದುತ್ವದ ಲಕ್ಷಣಗಳು. ಈ ಲಕ್ಷಣಗಳನ್ನು ನಾವು 'ಮಾತೃಗುಣ'ಗಳೆಂದು ಹೇಳಬಹುದು. ಇದಕ್ಕೆ ಇದಿರಾಗಿ ಧಾಡಸಿತನ–ಸಾಹಸ ಕೌರ್ಯ ಮುಂತಾದ ಬಿರುಸುಪ್ರಧಾನವಾದ ಗುಣಗಳನ್ನು 'ಪುರುಷ ಗುಣ ಲಕ್ಷಣ'ಗಳೆಂದು ಕರೆಯಬಹುದು.

ಕೃತಿ ಮತ್ತು ಕರ್ತೃಗಳ ಮಧ್ಯದ ಜವಾಬ್ದಾರಿಯುತ ಸಂಬಂಧದ ಕೊಂಡಿಯನ್ನು ಬೇರ್ಪಡಿಸಿದ ತಂತ್ರಜ್ಞಾನವು ಅನ್ನ ಆಹಾರವಾಗಿ ಪ್ರಕೃತಿಯನ್ನು ಕಬಳಿಸುತ್ತಿದೆ. ನಮ್ಮ ಜಲವಿದ್ಯುತ್ ಘಟಕಗಳು–ಲೋಹ–ಅಲೋಹಗಳಿಗಾಗಿ ಕಾಡು ಅಗಿದು ಹೊರ ತೆಗೆಯುತ್ತಿರುವ ಖನಿಜಗಳು–ಪ್ರಕೃತಿಯನ್ನು ಭಕ್ಷಿಸುತ್ತಿರುವ ತಂತ್ರಜ್ಞಾನದ ಸರಳ ಚಿತ್ರಗಳು. ಈ ಭಕ್ಷಣೆಯ ಫಲವಾಗಿ ದಿನೇ ದಿನೇ ಮಾತೃಲಕ್ಷಣಗಳ ಪ್ರಮಾಣ ಕಡಿಮೆಯಾಗುತ್ತ ಬರುತ್ತಿದೆ. ಒಂದು ಅಸಮತೋಲನದ ಸ್ಥಿತಿ ಮೂಡುತ್ತಿದೆ. ಇದನ್ನೇ ನಾವು 'Ecological imbalance' ಎಂದು ಹೇಳುವುದು. ಬೆಳೆಯುತ್ತಿರುವ ಮರುಭೂಮಿಗಳು ಆಮ್ಲಜನಕದ ಪ್ರಮಾಣ ಕಡಿಮೆಯಾಗಿ ಮಲಿನಗೊಂಡ ವಾತಾವರಣ–ಕುಡಿಯಲು ಅನರ್ಹವಾದ ನೀರಿನ, ನಿರ್ಜೀವ ನದಿಗಳು–ಬಿಟ್ಟು ಆರೈಕೆಯ ಮಾತೃಗುಣ ಕಡಿಮೆಯಾಗಿ ಗಡುಸುವಾತಾವರಣದ ಆರ್ದ್ರತೆಯಿಲ್ಲದ ಮರುಭೂಮಿಯ ಪುರುಷಲಕ್ಷಣಗಳ ಪ್ರಮಾಣ ಹೆಚ್ಚಾಗುತ್ತಿದೆ.

ರಾಘವೇಂದ್ರ ಪಾಟೀಲ

ಇದಕ್ಕೆ ಸಂವಾದಿಯಾಗಿ – ಜನಾಂಗದಲ್ಲಿಯೂ ಮಾತೃಗುಣಗಳ ಪ್ರಮಾಣ ಕಡಿಮೆಯಾಗಿ ಧಾಡಿಸಿ ಗುಣಗಳ ಬಗೆಗೆ–ಪುರುಷ ಗುಣಗಳ ಬಗೆಗೆ ಹೆಚ್ಚಿನ ತುಡಿತ ಉಂಟಾಗಿದೆ. ನಮ್ಮ ಚಲನ ಚಿತ್ರಗಳಲ್ಲಿನ ವಿಪರೀತ ಹಿಂಸೆ–ಸಾಹಸಗಳು–ಪೌರುಷ ಪ್ರದರ್ಶನದ ಬಟ್ಟೆ ಬರೆಗಳು–ಹಿಪ್ಪಿಗಳಂತೆ–ಜಿಪ್ಸಿಗಳಂತೆ ಅಸೌಂದರ್ಯಕ್ಕಾಗಿನ ತುಡಿತ–ಇವೆಲ್ಲ ಒಟ್ಟು ಜನಾಂಗದಲ್ಲಿನ ಪುರುಷ ಲಕ್ಷಣಗಳ ಪ್ರಾಧಾನ್ಯತೆ ಮತ್ತು ಮಾತೃಲಕ್ಷಣಗಳ ಬಗೆಗಿನ ಅನಾದರಣೆಯ ಧೋರಣೆಯನ್ನು ತೋರಿಸಬಲ್ಲುವು.

ಅಮೇರಿಕದಲ್ಲಿನ ಕೆಲವು ಸಮಾಜಶಾಸ್ತ್ರಜ್ಞರು ಸಾಮಾಜಿಕ ಅಸಂತುಷ್ಟತೆಗೆ ಜನಾಂಗದಲ್ಲಿನ ಮಾತೃಲಕ್ಷಣಗಳ ಈ ಇಳಿತವನ್ನು ಕಾರಣವೆಂದು ಭಾವಿಸುತ್ತಿದ್ದಾರೆ. ಜನಾಂಗದಲ್ಲಿ ಈ ಮಾತೃ ಮೌಲ್ಯಗಳ ಪುನಃ ಸ್ಥಾಪನೆಯನ್ನು ಅವರು ಸಮಾಜದ ರೋಗಕ್ಕೆ ಯೋಗ್ಯ ಔಷಧಿ ಎಂದು ಪರಿಗಣಿಸುತ್ತಿದ್ದಾರೆ. ಸೆಕೆಂಡಿಗೆ ಸಹಸ್ರಗಟ್ಟಲೆ ಕೊಲೆ ನಡೆಯುವ ಪೌರುಷದ ಅಮೇರಿಕದಲ್ಲಿ ಇಂಥ ಚಳುವಳಿ ತುಂಬ ಸಹಜವಾದದ್ದು. ಈ ಚಳುವಳಿಯನ್ನು ಅಲ್ಲಿ 'Feministic movement' ಎಂದು ಗುರುತಿಸಿದ್ದಾರೆ. ಇಂಡಿಯಾ ಇನ್ನೂ ಅಮೇರಿಕದ ಸ್ಥಿತಿಯನ್ನು ತಲುಪಿಲ್ಲ. ಆದರೆ ಅದು ಅಮೇರಿಕ ಕ್ರಮಿಸಿದ ದಾರಿಯ ಮೇಲೆಯೇ ಚಲಿಸುತ್ತಿದೆ. ಈ ಸ್ಥಿತಿಯತ್ತಲೇ ಮುನ್ನಡೆಯುತ್ತಿದೆ. ಅಂದರೆ ನಮ್ಮ ಗುಡಿಸಲಿಗೂ ಬೆಂಕಿ ಬಿದ್ದಿದೆ. ಈಗಿನಿಂದಲೇ ನೀರು ಸಿಂಪಡಿಸಿದರೆ ಉರಿ ತಗ್ಗಬಹುದು. ನಮ್ಮ ಮೌಲ್ಯರಹಿತ ಸಾಮಾಜಿಕ ಪರಿಸ್ಥಿತಿಯಲ್ಲಿ ನಡೆಯುತ್ತಿರುವ 'ಚಿಪ್ಕೊ'ದಂತಹ ಚಳುವಳಿ ನಮಗೆ ಆಸೆಯನ್ನು ಮೂಡಿಸಬಹುದು. ಇಂದಿನ ಯುವಕರಲ್ಲಿ ಮಾತೃಮೌಲ್ಯಗಳ ಬಗೆಗೆ ಆದರ ಮೂಡಿದರೆ ಭವಿಷ್ಯದ ಬಗೆಗಿನ ನಮ್ಮ ಆಶಾವಾದ ಇನ್ನಷ್ಟು ಗಟ್ಟಿಗೊಳ್ಳಬಹುದು.

ನಾನು ಓದಿದ ವೈಜ್ಞಾನಿಕ ಕಾದಂಬರಿಯೊಂದರಲ್ಲಿ–ಒಂದು ಕಿರಣಸಮೂಹ ತನ್ನ ದಾರಿಗೆ ಅಡ್ಡವಾಗಿ ಬರುವ–ಸಜೀವವಾಗಲಿ–ನಿರ್ಜೀವವಾಗಲಿ–ಯಾವುದೇ ವಸ್ತುವನ್ನು ಸುಟ್ಟುಹಾಕಿ ಬಿಡುತ್ತದೆ. ಈ ಕಿರಣಸಮೂಹದ ಉಪಯೋಗವನ್ನು ಮಾಡುವುದು ಒಂದು ದುಷ್ಟಶಕ್ತಿಯಾಗಿತ್ತು. ಇಂದು ಇಂಥ ಹಿಂಸ್ರ ಉಪಕರಣಗಳು ಕಾದಂಬರಿಗಳ ಕಾಲ್ಪನಿಕತೆಯನ್ನು ಮೀರಿ ವಾಸ್ತವ ಪ್ರಪಂಚದ ಸತ್ಯಗಳಾಗಿ ಪರಿಣಮಿಸಿವೆ. ಅಣುಬಾಂಬುಗಳು–ಅಣುವಿಕಿರಣ ಪರಿಣಾಮಗಳು–ಲೇಸರ್‌ಕಿರಣಗಳು ನಮ್ಮ ಹಿಂಸ್ರ–ಪಾಶವೀಪ್ರವೃತ್ತಿಯ ಮನಸ್ಸಿನ ಕೈಗೆ ಸಿಕ್ಕ ಅತಿ ಆತಂಕಕಾರೀ ಉಪಕರಣಗಳಾಗಿವೆ. ಒಂದು ಕ್ಷಣದ ಬೇಜವಾಬ್ದಾರಿಯಲ್ಲಿ–ಒಂದು ಕ್ಷಣದ ಭ್ರಮಾಧೀನತೆಯಲ್ಲಿ ಅಥವಾ ಒಂದು ಕ್ಷಣದ ಆತ್ಮಹತ್ಯೆಯ ತುಡಿತದ ಸೆಳವಿನಲ್ಲಿ ಸಿಕ್ಕ ವಿಜ್ಞಾನಿ ಅಥವಾ ಈ ಹಿಂಸ್ರ ಉಪಕರಣಗಳನ್ನು ಬೆಳೆಸಿಕೊಂಡ ಒಂದು ರಾಷ್ಟ್ರದ ನಾಯಕ ಒತ್ತುವ ಒಂದು ಗುಂಡಿ ಇಡೀ ಮಾನವ ಪ್ರಪಂಚವನ್ನು ಒಂದು ಅರೆ ಕ್ಷಣದಲ್ಲಿ ನಾಶಮಾಡಿ ಬಿಡಬಲ್ಲದು.

ಇದು ನಮ್ಮ ಪರೀಕ್ಷೆಯ ಕಾಲ. ನಾಶದ ಅಂಚಿನಲ್ಲಿ ನಿಂತಿರುವ ನಮ್ಮ ಪ್ರಪಂಚವನ್ನು ಉಳಿಸಲಿಕ್ಕೆ ನಾವೇನು ಮಾಡುತ್ತಿದ್ದೇವೆ ಎಂಬುದನ್ನು ಕಾಲಪುರುಷನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾನೆ. ನಾವು ಇಡುವ ಒಂದು ತಪ್ಪು ಹೆಜ್ಜೆಯಿಂದ ಅವನು ಗಹಗಹಿಸಿ ನಕ್ಕು ನಮ್ಮ ಪ್ರಪಂಚವನ್ನು ವಿನಾಶದ ಪ್ರಪಾತಕ್ಕೆ ತಳ್ಳಿ ಬಿಡಬಹುದು.

ಮನುಷ್ಯನನ್ನು ಅವನ ದುಷ್ಟಕ್ರಿಯೆಯ ಜವಾಬ್ದಾರಿಯಿಂದ ಬಿಡುಗಡೆ ಮಾಡಿರುವ–ಮತ್ತು ಮಾನವ ಜನಾಂಗದಲ್ಲಿ ದಿನೇ ದಿನೇ ಮಾತೃಗುಣಗಳನ್ನು ಕಡಿಮೆ ಮಾಡುತ್ತಿರುವ ತಂತ್ರಜ್ಞಾನದ ವಿಪರೀತ ಪ್ರಭಾವದ ಪರಿಸ್ಥಿತಿಯಲ್ಲಿ ನಮ್ಮ ಜವಾಬ್ದಾರಿ ಇನ್ನೂ ಹೆಚ್ಚಾಗಿದೆ. ಈಗ ನಮ್ಮ ಮುಂದೆ ಇರುವ ಬಹು ಮುಖ್ಯ ಸವಾಲುಗಳೆಂದರೆ–ಒಂದು -ಮನುಷ್ಯ ಮತ್ತು ಅವನ ಕ್ರಿಯೆಯ ಜವಾಬ್ದಾರಿ ಇವುಗಳ ನಡುವಿನ ಕಂದಕವನ್ನು ಹೋಗಲಾಡಿಸಿ ಇವೆರಡು ಬದಿಗಳ ನಡುವೆ ಸೇತುವೆಯನ್ನು ನಿರ್ಮಿಸುವುದು. ಎರಡು–ನಮ್ಮ ಸಮಕಾಲೀನ ಜನಾಂಗದಲ್ಲಿ ಮಾತೃ ಮೌಲ್ಯಗಳನ್ನು ಪುನಃ ಪ್ರತಿಷ್ಠಾಪಿಸುವದು. ಈ ಸೆಳವಿನ ಕಾಲದಲ್ಲಿ ಇವೆರಡೂ ಸವಾಲುಗಳನ್ನು ನಿರ್ವಹಿಸಬಹುದಾದ ದಾರಿಯನ್ನು ನಾವು ಹುಡುಕಿಕೊಳ್ಳಬೇಕಾಗಿದೆ.

ನನ್ನ ಮನಸ್ಸಿಗೆ ತೋರುವ-ಈ ಸವಾಲುಗಳಿಗೆ ಉತ್ತರವಾದ ದಾರಿಯೆಂದರೆ-ಸಾಹಿತ್ಯ. ಸಾಹಿತ್ಯವು ಮಾನವನ ಇಡೀ ಇತಿಹಾಸವನ್ನು ತನ್ನಲ್ಲಿ ಹಿಡಿದಿಟ್ಟುಕೊಂಡು ಮನಸ್ಸಿಗೆ ಮುಟ್ಟುವಂತೆ ತೋರಿಸಿಕೊಡಬಲ್ಲದು. ಇದರಿಂದ ಅವನ ಕ್ರಿಯೆಯ ಪರಿಣಾಮ ಅವನ ಮನಸ್ಸಿನ ಮುಂದೆ ಮೂಡಿ ಅದರ ಜವಾಬ್ದಾರಿ ಅವನಿಗೆ ಗೋಚರವಾಗುತ್ತದೆ. ಅಲ್ಲದೇ ಸಾಹಿತ್ಯ ಹಿಡಿದಿಟ್ಟು ತೋರಿಸುವ ಗತಿಶೀಲ ಇತಿಹಾಸವು ಮನಸ್ಸಿನ ದ್ರವಿಸುವಿಕೆಗೆ ಕಾರಣವಾಗಿ ಮಾತೃ ಮೌಲ್ಯಗಳ ಪುನರುತ್ಥಾನ ಸಾಧ್ಯವಾಗಬಹುದು. ಫ್ರೆಂಚ್ ಕ್ರಾಂತಿಗೆ ವಾಲ್ಟೇರ್–ರೂಸೋರಂತಹವರ ಬರವಣಿಗೆಗಳು–ಗಾಂಧೀಜಿಯವರ ವ್ಯಕ್ತಿತ್ವ ನಿರ್ಮಾಣದಲ್ಲಿ 'Un to Last' ದಂತಹ ಕೃತಿ ಮತ್ತು ಟಾಲ್‌ಸ್ಟಾಯ್‌ರ ಜೀವನ ದೃಷ್ಟಿ ಮತ್ತು ಬರಹಗಳು ಕಾರಣವಾದದ್ದು ಸಾಹಿತ್ಯದ ಬಗೆಗಿನ ನನ್ನ ಈ ರೀತಿಯ ನಂಬಿಕೆಗೆ ಪುಷ್ಟಿಯನ್ನು ಕೊಡುತ್ತದೆ.

ಅದಕ್ಕೇ ಮ್ಯಾಕ್ಸಿಂ ಗಾರ್ಕಿ ಬಹು ಹಿಂದೆಯೇ Whose side are you on, masters of culture?" ಎನ್ನುವ ಪ್ರಶ್ನೆ ಹಾಕಿದ. ಗಾರ್ಕಿಗೆ ಕೇವಲ ಲೇಖಕರ ಜವಾಬ್ದಾರಿಯನ್ನು ನೆನಪಿಸುವ ಉದ್ದೇಶ ಮಾತ್ರವಿತ್ತು. ಯಾಕೆಂದರೆ ಯಾವುದೇ ಕಾಲದಲ್ಲಿ ಬರೆದದ್ದಾಗಲಿ, ಒಂದು ನಿಜವಾದ ಕಲಾಕೃತಿಯು ಯಾವಾಗಲೂ, ಯುದ್ಧವಿರೋಧಿಯಾದದ್ದು ಮತ್ತು ಎಲ್ಲ ರೀತಿಯ ಶೋಷಣೆಗಳ ವಿರೋಧಿಯಾದದ್ದು ಆಗಿರುತ್ತದೆ. ಆದರೂ ಗಾರ್ಕಿಯ ಪ್ರಶ್ನೆ ಇಂದಿನ ಲೇಖಕರನ್ನು ತೀವ್ರವಾಗಿ ಕಾಡಿಸಬೇಕಾದ ಪ್ರಶ್ನೆಯಾಗಿದೆ.


ಇನ್ನು ಸಾಹಿತ್ಯವು ಎರಡು ಬದಿಗಳನ್ನು ಹೊಂದಿದ ಸಾಧನವು. ಲೇಖಕನಿಂದ ಹೊರಟ ಇದು ಓದುಗನನ್ನು ತಲುಪಬೇಕಾಗಿರುವಂಥದು. ಓದುಗನ ಮನಸ್ಸಿನಲ್ಲಿಯೇ ಅದು ಸಾರ್ಥಕಗೊಳ್ಳಬೇಕಾದದ್ದು. ಒಂದು ಜನಾಂಗ ಸಾಹಿತ್ಯದೊಂದಿಗೆ ತನ್ನ ಕೊಂಡಿಯನ್ನು ಕಳಚಿಕೊಂಡರೆ ಸಾಹಿತ್ಯ ಸಾಧಿಸಬಹುದಾದ ಮುಖ್ಯ ಕ್ರಿಯೆಗಳು ಅಸಾಧ್ಯ

ಮುಂದಿನ ಪುಟಕ್ಕೆ

70ನೇ ಪುಟದಿಂದ

ಯಾವುದೆಂದರೆ, ಸಂಸ್ಕೃತೀಕರಣ, ಪಾಶ್ಚಾತ್ಯೀಕರಣ ಈ ಎರಡು ಮಾರ್ಗಗಳನ್ನೂ ಬಿಟ್ಟು ಬೇರೆ ರೀತಿಯಲ್ಲಿ ನಮ್ಮ ದೇಶ ಸೃಜನಶೀಲವಾಗುವುದು ಸಾಧ್ಯವಿದೆಯೇ ? ವಿಕೇಂದ್ರಿಕರಣ ಸಾಧ್ಯವೇ ? ವಿಕೇಂದ್ರೀಕರಣ ಆದರ್ಶವೇ ಮುಖ್ಯವೆಂದೂ ತಿಳಿದಾಗ, ವಿಕೇಂದ್ರಿಕರಣದ ಕೆಲವು ಅಂಶಗಳೂ ಇನ್ನೂ ಜೀವಂತವಾಗಿರುವ ಜಾತಿಪದ್ಧತಿಯ ಚೌಕಟ್ಟಿನೊಳಗೆ ಹರಿಜನರ ಪ್ರಶ್ನೆಯನ್ನು ಬಗೆಹರಿಸುವುದು ಸಾಧ್ಯವೇ ? ಅಥವಾ ನಮಗೆ ಇರುವ ಒಂದೇ ಮಾರ್ಗ, ಜಾತಿಸಮಾಜವನ್ನು ವರ್ಗಸಮಾಜವಾಗಿ ಮಾಡಿ ಅದರಿಂದ ಹುಟ್ಟುವ ತಿಕ್ಕಾಟಗಳ ಮುಖೇನ, ಅಥವಾ ರಷ್ಯಾದಿಂದಲೋ ಅಮೇರಿಕಾದಿಂದಲೋ ಪಡೆದ ಟ್ಯಾಂಕುಗಳ ಮುಖೇನ 'ಆಧುನಿಕ' 'ಪ್ರಗತಿಶೀಲ' 'ವೈಜ್ಞಾನಿಕ' ಇತ್ಯಾದಿ ಗುಣಸಂಪನ್ನನಾದ ಮನುಷ್ಯನನ್ನು ಇನ್ನೊಂದು ಬಗೆಯಲ್ಲಿ ನರಳುವಂತೆ ಮಾಡುವ, ಕೇಂದ್ರಿಕೃತ ಹೊಸವ್ಯವಸ್ಥೆಯನ್ನು ಹುಟ್ಟುಹಾಕುವುದೋ ? ಈ ಸಮಸ್ಯೆಯನ್ನು ಬಿಡಿಸಿಕೊಳ್ಳದ ಹೊರತು, ನಾವು ಜಾತಿ, ವಿಚಾರವಾದ ಇತ್ಯಾದಿಗಳ ಬಗ್ಗೆ ಏನೂ ತೊಡಕಿಲ್ಲ ಎಂದು ಮಾತಾಡಬಾರದು ತೊಡಕುಗಳಿವೆಯೆನ್ನುವುದಕ್ಕೋಸ್ಕರ ನಾನು ಈ ಪ್ರಶ್ನೆಯನ್ನು ಎತ್ತಿ ನನ್ನ ಮಾತುಮುಗಿಸುತ್ತೇನೆ. ●

77ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಲಿತ ಸಂಘರ್ಷ ಸಮಿತಿ ಸಂಚಾಲಕ ಾಗಿದ್ದ ಎಂ. ಡಿ. ಗಂಗಯ್ಯ ಈಗ ಬಿ. ಕೃಷ್ಣಪ್ಪನವರೊಂದಿಗೆ ರಾಜ್ಯಸಂಚಾ ರಾಗಿದ್ದಾರೆ. ಜಿಲ್ಲಾ ಸಂಚಾಲಕರಾಗಿದ್ದಾಗ ಇಡೀ ಜಿಲ್ಲೆಯ ಅಸ್ಪೃಶ್ಯ ತ್ತು ಅವಮಾನಿತ ಜಾತಿಯ ದಲಿತರನ್ನೆಲ್ಲ ಒಂದೇ ಮನೆಯವರೆನ್ನುವ ಟ್ಟಿಗೆ ಸಂಘಟಿಸುತ್ತಾ ಆಶೆಯ ಚಿಗುರಿನಂತಿದ್ದ ಗಂಗಯ್ಯ ಈಗ ಇಡೀ ಜ್ಯ ತಿದ್ದುತ್ತೇನೆಂದು ಗೊತ್ತುಗುರಿಯಿಲ್ಲದೆ ಜಿಲ್ಲಾ ಕೇಂದ್ರಗಳನ್ನು ಸುತ್ತುತ್ತಾ ಲ್ಲಾ ಕಡೆ ನಿರಾಶೆಯನ್ನು ಬಿತ್ತುತ್ತಿದ್ದಾರೆ. ರೈತ ಚಳುವಳಿಯ ಬಗೆಗಿನ ರ ಚಿಂತನೆ ಇಲ್ಲಿದೆ. —ಸಂ



ಸೆಯಿಂದ ನಿರಾಸೆಯೆಡೆಗೆ ರಾಜ್ಯಸಂಚಾಲಕ ಗಂಗಯ್ಯ

ವರು ಮಾತಾಡುತ್ತಿದ್ದರೆ ವಿಷಾದವೇ ಮಾತಾ ದೆ ಅಂತನ್ನಿಸುತ್ತದೆ. ವಿಷಾದ ಎಂದರೆ ಏನು ುದು ನಿಮಗೆ ಗೊತ್ತಿಲ್ಲದಿದ್ದರೆ ಎಂ. ಡಿ. ಯ್ಯನವರನ್ನೊಮ್ಮೆ ನೋಡಿ. ನಿಮ್ಮ ಒಳ ಕ್ಕು ಕೊರೆಯುವಂತಹ ವಿಷಾದ ಅವರ ಮುಖ ಹೆಪ್ಪುಗಟ್ಟಿರುವುದನ್ನು ನೀವು ಕಾಣಬಹುದು. ಮಗಳೂರು ಜಿಲ್ಲೆಯಲ್ಲಿ ದಲಿತಸಂಘರ್ಷಸಮಿತಿ ಾಲಕರಾಗಿ ಅವರು ಮಾಡಿದ ಕ್ಷೇತ್ರಕೆಲಸಗಳ ಈ ಲೇಖನ ಬರೆಯುವ ಹೊತ್ತಿನಲ್ಲಿ ನನ್ನನ್ನು ಕಾಡಿಸುತ್ತಾ ಪೀಡಿಸುತ್ತಿರುವ ಗೋವಿಂದಯ್ಯ ಯಿಂದ ಹೇಳಿಕೊಳ್ಳುತ್ತಿದ್ದಾರೆ.

ಂಗಯ್ಯ ಅವರ ಚಿಕ್ಕಮಗಳೂರು ಜಿಲ್ಲೆ ರೈತ ವಳಿಯ ಹೋರಾಟದ ಎರಡು ಕಣಗಳಂತಿರುವ ಮೊಗ್ಗ ಮತ್ತು ಹಾಸನ ಜಿಲ್ಲೆಗಳ ಮಧ್ಯೆ ಕೊಂಡಿರುವ ಕಾಫಿಪ್ಲಾಂಟರುಗಳ ಜಿಲ್ಲೆ. ಇಲ್ಲಿ ರೈತ ಚಳುವಳಿ ಎಂದರೆ ಇವರದ್ದೇ. ನಿಮಗೆ ಆಶ್ಚರ್ಯವಾಗಬಹುದು, ಗಂಗಯ್ಯ ಇದರಲ್ಲಿ ಒಳ್ಳೆಯದನ್ನೂ ಕಂಡಿದ್ದಾರೆ. ಅವರ ಜಿಲ್ಲೆಯ ರೈತ ಚಳುವಳಿ ಬಗ್ಗೆ ನಾನು ಒಟ್ಟಾಗಿ ಕೇಳಿದ ಒಂದು ಪ್ರಶ್ನೆಗೆ ಹೀಗೆಂದರು : ರೈತ ಚಳುವಳಿಯಿಂದ ಏನೂ ಆಗಿರಲಿ ಅಥವಾ ಆಗದಿರಲಿ, ಒಂದಂತೂ ನಿಜ. ಬಂಗಲೆಗಳಲ್ಲಿ ಸುಖಲೋಲುಪಜೀವನದಲ್ಲಿ ಕೊಳೆಯುತ್ತಿದ್ದ ಪ್ಲಾಂಟರ್ ಕುಟುಂಬಗಳ ಪಡ್ಡೆ ಹುಡುಗರು ರೈತ ಚಳುವಳಿಯ ಹೆಸರಲ್ಲಿ ಬೀದಿಗೆ ಬಂದಿದ್ದಾರೆ. ಅಷ್ಟೇ ಅಲ್ಲ, ಜೇಲಿಗೆ ಹೋಗುವುದಕ್ಕೆ ಅವರಿಗೇನೂ ಅಂಜಿಕೆ ಇದ್ದಂತೆಕಾಣುವುದಿಲ್ಲ. ನನ್ನ ಪ್ರಕಾರ ಇದೊಂದು ದೊಡ್ಡ ಬೆಳವಣಿಗೇನೇ……..

ನಾನು : ನೀವೂ ಅವರು ಸೇರಿಕೊಂಡು ಏನಾರ ಒಟ್ಟಿಗೆ ಕೆಲಸ ಮಾಡುವ ಪ್ರಯತ್ನ ಮಾಡಿದ್ದೀರಾ?

ಗಂ : ಈವರೆಗೆ ಇಲ್ಲ, ಅದಕ್ಕೆ ಅವಕಾಶ ಒದಗಿ ಬಂದಿಲ್ಲ.

ನಾನು : ಒದಗಿ ಬಂದರೆ ನೀವು ರೆಡಿಯಾ ?

ಗಂ : ಅಂಥ ಸಂದರ್ಭ ಇದ್ದಕ್ಕಿದ್ದಂಗೆ ಒದಗಿ ಬರೊಲ್ಲ. ಮೊದಲು ಮನಸ್ಸುಗಳು ಒಂದಾಗಬೇಕು. ನಮ್ಮ ಮತ್ತು ಅವರ ನಡುವೆ ಒಟ್ಟಿಗೆ ಕೆಲಸ ಮಾಡುವಂತಾ ಒಂದೆರಡಾದರೂ ಸಾಮಾನ್ಯ ಅಂಶಗಳಿವೇಂತ ಗೊತ್ತಾಗಬೇಕು.

ನಾನು : ಗೊತ್ತಾಗೋದು ಹ್ಯಾಗೆ ?

ಗಂ : ನೋಡಿ,ರೈತಚಳುವಳಿಯನ್ನ, ಅದೊಂದು ಹೋರಾಟ ಅನ್ನೋಮಟ್ಟದಲ್ಲಿ ಬೆಂಬಲಿಸಬಹುದು. ಆದರೆ ಅದು ಅವರ ಹೋರಾಟ ಮಾತ್ರ ಅಂತ ಅನ್ನಿಸುವಾಗ ಆ ಬೆಂಬಲ ದೂರದಿಂದ ಮಾತ್ರ ಇರುತ್ತದೆ.

ನಾನು: ನಾನು ಬೆಂಬಲದ ಪ್ರಶ್ನೆ ಕೇಳ್ತಿಲ್ಲ. ಒಟ್ಟಿಗೆ ಕೆಲಸಮಾಡೋ ಸಾಧ್ಯತೆ ಬಗ್ಗೆ; ಅದೇನಾದರೂ ಇದೆಯಾ ಅಂತ….

ಗಂ : ನನಗೆ ತಿಳಿದಿರೊ ಹಾಗೆ ರೈತಚಳುವಳಿ ಅಂದ್ರೆ ಸಾಲಮನ್ನಾ ಮತ್ತು ಲಾಭದ ಬೆಲೆ ನಿಗದಿ ಚಳುವಳಿ ಮಾತ್ರ. ಭೂಮಿ ಚಳುವಳಿ ಇನ್ನೂ ಆಗಿಲ್ಲ. ಅದಾದಾಗ ಅದು ನಮ್ಮ ಚಳುವಳಿಯೂ ಆಗ್ತದೆ.

ನಾನು : ಅದಾಗೋ ಸಂಭವ ಇದೆಯಾ ?

ಗಂ : ರೈತ ಚಳುವಳಿ ಭಾರಿ ಭಾರಿ ಕಾರ್ಯಕ್ರಮಗಳನ್ನ, ಜಾಥಾಗಳನ್ನ, ಮೆರವಣಿಗೆಗಳನ್ನ ನಡೆಸಿದೆ. ಆದರೆ, ಈವರೆಗೆ ಒಬ್ಬ ಭೂಮಾಲಿಕನನ್ನ ಹಿಡಕೊಂಡು 'ನಿನಗ್ಯಾಕೆ ಇಷ್ಟು ಭೂಮಿ, ನಿನ್ನ ಹಳ್ಳಿನಲ್ಲೇ ಭೂಮಿ ಇಲ್ಲದೆ ನೆಲೆ ನೀರು ಇಲ್ಲದೆ ಸಾಯ್ತಾ ಬದುಕಿರೋ ಜನ ಇರೋವಾಗ ?' ಅಂತ ಕೇಳಿಲ್ಲ. ಪಟ್ಟಣಗಳಲ್ಲಿ ಧಾನ್ಯಗಳನ್ನ ದಾಸ್ತಾನು ಮಾಡಿರೋ ವರ್ತಕರನ್ನ ಅಂಗಡಿಗಳ ಬಾಗಿಲುಗಳನ್ನ ತಟ್ಟಿಲ್ಲ. ಯಾಕೆ ಹೀಗೆ ?

ನಾನು : ರೈತಚಳುವಳಿ ಹುಡುಗರನ್ನ ಕಂಡ್ರೆ ನಿಮಗೆ ಏನನ್ನಿಸುತ್ತೆ ? ಶತ್ರುಗಳನ್ನ ನೋಡಿದಂಗ ಆಗುತ್ತೋ ?

ಗಂ : ಖಂಡಿತ ಇಲ್ಲ. ನಾನು ಮೊದಲೇ ಹೇಳಿದೆ. ಪ್ಲಾಂಟರುಗಳ ಮಕ್ಕಳು ಬೀದಿಗೆ ಬಂದಿರೋದೇ ಒಂದು ದೊಡ್ಡ ಸಂಗತಿ ಅಂತ. ಒಳಗೇ ಖುಷಿ ಕೊಡೊ ಸಂಗತಿ ಕೂಡಾ ಇದು.

ನಾನು : ಹಾಗಾದ್ರೆ ಎಂದಾದರೊಂದು ದಿನ ನೀವಿಬ್ರೂ ಒಟ್ಟಿಗೆ ಕೆಲಸ ಮಾಡುವ ಸೂಚನೆ ಇದೆಯಾ ?

ಗಂ : ಮೊದಲೇ ಹೇಳಿದ್ನಲ್ಲಾ, ರೈತಚಳುವಳಿ ನಾನೀಗ ಹೇಳಿದ ಮಿತಿಗಳನ್ನ ಮೀರಿ ಬೆಳೆದು ಅದು ನಮ್ಮೆಲ್ಲರ ಚಳುವಳಿ ಅನ್ನಿಸಿಕೊಂಡಾಗ ಇದೆಲ್ಲ ಆಗಬಹುದು.

—ಡಿಎಸ್ಸೆಸ್

ೆ ಪುಟದಿಂದ

ುತ್ತವೆ. ಬ್ರೆಕ್ಟನ ಒಂದು ಕವನದಲ್ಲಿ ಮಗ ಯನ್ನು ತಾನು ಗಣಿತ ಕಲಿಯಬೇಕೆ ?–ಇತಿ ಕಲಿಯಬೇಕೆ ? –ಫ್ರೆಂಚ್ ಕಲಿಯಬೇಕೆ ? ಕೇಳಿದಾಗ ಆ ತಂದೆಗೆ–ವಿಪರೀತ ಸೆಳವಿನ ಕಾಲದ ಸಂದರ್ಭದಲ್ಲಿ ಇವುಗಳೆಲ್ಲದರಿಂದ ಪ್ರಯೋಜನವೆಂದು ಹೇಳಬೇಕೆನಿಸುತ್ತದೆ. ಅವನು ಹಾಗೆ ಹೇಳುವುದಿಲ್ಲ. ಮಗನಿಗೆ– ಇತಿಹಾಸ ಕಲಿಯಬೇಕು-ಗಣಿತ ಕಲಿಯ -ಫ್ರೆಂಚ್ ಕಲಿಯಬೇಕು ಎಂದು ಪ್ರೋತ್ಸಾಹಿ ನೆ. ಯಾಕೆಂದರೆ ಇದರಿಂದ ಸೆಳವಿಗೆ ಸಿಕ್ಕಿ ಗೊಂದು ಸಂಸ್ಕಾರದ ಬಲ ಒದಗುತ್ತದೆ. ಯೇ ಸಾಹಿತ್ಯ ಕೂಡ. ವೇಗದ ಸುಳಿಯಲ್ಲಿ ುದುಕನ್ನು ಅದು ಬಿಳಿಬಟ್ಟೆತೊಟ್ಟ ಸಾರಿಗೆನಿ ಕ್ರಪೋಲೀಸನಂತೆ ನಿಯಂತ್ರಿಸಬಹುದು. ●

ಜಾನಪದ ಜಗದ್ಗುರು ಮಲೆಯ ಮಾದೇಶ್ವರ

ಇಂದಿನವರು ಶರಣಧರ್ಮವನ್ನು ಪ್ರಧಾನವಾಗಿ ಎರಡು ಕಾರಣಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಒಂದು : ಸಾಹಿತ್ಯದ ವಿದ್ಯಾರ್ಥಿಗಳು ವಚನ ಸಾಹಿತ್ಯದಲ್ಲಿ ಕಾವ್ಯಾಂಶ ಹುಡುಕುತ್ತಾರೆ. ಎರಡು : ಮತಾಭಿಮಾನಿಗಳು ಮತೀಯ ವಿಚಾರಗಳ ಸಮರ್ಥನೆಗಾಗಿ ಅವುಗಳನ್ನು ಧಾರಾಳವಾಗಿ ಉದ್ಧರಿಸುತ್ತಾರೆ. ಆದರೆ ಆ ದಿವ್ಯತತ್ವಗಳನ್ನು ಯಾರೊಬ್ಬರೂ ಆಂಶಿಕವಾಗಿಯಾದರೂ ಅನುಸರಿಸುತ್ತಿಲ್ಲವಾದ್ದರಿಂದ ಜಾತಿಯನ್ನು ನಾವು ಬಿಡುತ್ತಿಲ್ಲ; ಜಾತಿ ನಮ್ಮನ್ನು ಬಿಡುತ್ತಿಲ್ಲ.

ಗತಕಾಲದಿಂದ

ಜಾತಿಯಹೆಸರುಹೇಳದೆನಾವುಬದುಕುವುದೇಅಸಾಧ್ಯವೇನೋ ಎನ್ನುವಷ್ಟರ ಮಟ್ಟಿಗೆ ಅದರ ಸಮೃದ್ಧಿಯನ್ನು ಮುಗ್ಧಜೀವಿಗಳವರೆಗೆ ಎಲ್ಲರೂ ಕಂಡುಕೊಂಡಿದ್ದೇವೆ. ಆದ್ದರಿಂದಲೇ ನಮ್ಮ ದೇವರುಗಳೂ ಒಂದಲ್ಲ ಒಂದು ಜಾತಿಯ ಉರುಳಿನಲ್ಲಿ ಬಿಗಿಸಿಕೊಂಡು ಕುಳಿತಿವೆ. ಈಗ ಮಲೆಯ ಮಾದೇಶ್ವರನೂ ಒಂದು ದೇವರು. ಅವನು ದೇವರಾಗುವುದಕ್ಕೆ ಮುಂಚೆ ನಮ್ಮಂತೆಯೇ ತಿಂದು, ಉಂಡು, ಉಟ್ಟು, ಬಳಸಿ ಬದುಕಿ ಹೋದ ಒಬ್ಬ ಮಾನವ, ಅವನು ಮಾನವನಾದ ಮೇಲೆ ನಮ್ಮ ಸಮಾಜದ ಛಿದ್ರನೀತಿಯಲ್ಲಿ ಅವನೂ ಒಂದು ಜಾತಿಗೆ ಸೇರಿರಲೇ ಬೇಕಾಗಿದೆ. ಹೌದು. ಅವನಿಗೂ ಒಂದು ಜಾತಿಯಿದೆ. ಅವನು ಮಾದಿಗರವನಂ !

'ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಲೋಕವರಿಯೆ ನಾವಿದ ಕಾಣಿರೊ' ಎಂಬುದು ಬಸವೇಶ್ವರರೋಕ್ತ ವಚನದ ಕೆಲಭಾಗ. ಇವರುಗಳ್ಯಾರೂ ಯಃಕಶ್ಚಿತ್ ವ್ಯಕ್ತಿಗಳಲ್ಲ, ಅಸಾಮಾನ್ಯರು. ಆದರೂ ಇವರು ಬ್ರಾಹ್ಮಣರೇನಲ್ಲ ಅಥವಾ ಉತ್ತಮ ಜಾತಿಯವರೂ ಅಲ್ಲ. ಸರ್ವರಿಗೂ ಸಮಾನಾವಕಾಶಗಳಿದ್ದ ಅಪೂರ್ವ ಅವಧಿಯಲ್ಲಿ ಇವರೆಲ್ಲರೂ ತಮ್ಮ ಸತ್ವ ಸಾಮರ್ಥ್ಯಗಳನ್ನು ಮೆರೆದು ಹೋದವರು. ಮನುಮಹಾಶಯ ಚಾತುರ್ವರ್ಣ ಪದ್ಧತಿಯನ್ನು ಸ್ವೀಕರಿಸಲು ಪ್ರಯತ್ನಿಸಿದ್ದು ಮಾತ್ರವಲ್ಲ ಆವನ ಕಾಲದಿಂದಲೇ ಚಾತುರ್ವರ್ಣವನ್ನು ವೈಭವೀಕರಿಸಲಾಯಿತು. ಈ ಈಸ್ಟ್‌ಮನ್ ಕಲರ್ ಯುಗದಲ್ಲೇ ಚಾತುರ್ವರ್ಣದ ಜೊತೆಗೆ 'ಪಂಚಮ' ವರ್ಣವೂ ಸೃಷ್ಟಿಯಾಯ್ತು. ವೇದ ಉಪನಿಷತ್ತುಗಳ ಆದರ್ಶವನ್ನು ಸಾರುತ್ತ ಸರ್ವರಲ್ಲೂ ಸೋದರಿಕೆಯನ್ನು ಸಾಧಿಸುವ ಬದಲು ಇಡೀ ಸಮಾಜವನ್ನೇ ಛಿದ್ರಗೊಳಿಸಿತು. ಜಾತಿಜಾಡ್ಯದ ಪರಿಣಾಮವಾಗಿ ಪಂಚಮರು ದಾಸ್ಯ, ಅಜ್ಞಾನ, ಅವಿದ್ಯೆ, ಮೌಢ್ಯ ಸೇವಾವೃತ್ತಿಗಳಲ್ಲಿ ಬಂಧಿತರಾದರು. ಇವರು ಆಗೊಮ್ಮೆ ಈಗೊಮ್ಮೆ ಕಂಡೋ ಕಾಣದೆಯೋ ತಲೆಯೆತ್ತಿದ ವಿರಳಾತಿವಿರಳ ಪ್ರಸಂಗವೆಂದರೆ ಅದು ಬಸವಣ್ಣನವರ ದಿವ್ಯಪ್ರಭಾವಲಯದಿಂದ. ಆ ದಾರಿಯಲ್ಲಿ ಆಗೀಗ ಕಾಣಿಸಿಕೊಂಡವರೇ ಮಾದಿಗರ ಮಾದೇಶ್ವರ, ಹೊಲೆಯರ ಮಂಟೇಸ್ವಾಮಿ. ನಿಮ್ನವರ್ಗದ ವ್ಯಕ್ತಿಗಳು ಧಾರ್ಮಿಕನಾಯಕರುಗಳಾಗಿ ಇಡೀ ಸಮಾಜವನ್ನೇ ತಮ್ಮತ್ತ ಸೆಳೆದುಕೊಂಡ ಈ ಅದ್ಭುತ ಘಟನೆ ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲ ಇಡೀ ಸಮಾಜವನ್ನೇ ತಮ್ಮತ್ತ ಸೆಳೆದುಕೊಂಡ ಈ ಅದ್ಭುತ ಘಟನೆ ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲ ಇಡೀ ಭಾರತದ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ಬರೆಯುವಂತದ್ದು !

ಡಾ|| ಪಿ. ಕೆ. ರಾಜಶೇಖರ್

೨

ಮಾದೇಶ್ವರ ಐತಿಹಾಸಿಕ ವ್ಯಕ್ತಿ ಎಂಬುದು ನಿರ್ವಿವಾದವಾದರೂ ಅವನ ಕಾಲದ ಬಗ್ಗೆ ಖಚಿತವಾಗಿ ಹೇಳುವುದು ಅತ್ಯಂತ ತೊಡಕಿನದಾಗಿದೆ. ಈ ಸಮಸ್ಯೆಯ ಉದ್ಭವ ಕೇಂದ್ರ ಚಿತ್ರದುರ್ಗದ ಮುರುಘಾಮಠಾಧಿಪತಿಗಳ ಪರಂಪರೆಯನ್ನು ಬಿತ್ತರಿಸಲು ರಚಿತವಾಗಿರುವ 'ನಿರಂಜನ ವಂಶ ರತ್ನಾಕರ' ಎಂಬ ಗ್ರಂಥ. ಮೊದಲಿಗೆ ನಿರಂಜನ ವಂಶ ರತ್ನಾಕರ ಎಷ್ಟರಮಟ್ಟಿಗೆ ಐತಿಹಾಸಿಕ ಪುರಾವೆಗಳನ್ನು ಒದಗಿಸುವುದರಲ್ಲಿ ಸಫಲವಾಗಿದೆ ಎಂಬುದನ್ನು ನಿರ್ಧರಿಸಿಕೊಂಡು ಅನಂತರ ಅಲ್ಲಿಯ ವಿಷಯಗಳನ್ನು ಸ್ವೀಕರಿಸುವ ಯೋಚನೆ ಮಾಡಬಹುದು. ಈ ಗ್ರಂಥದಲ್ಲಿ ಬಸವೇಶ್ವರ ಲಿಂಗೈಕ್ಯವಾದ ಕಾಲವನ್ನು ಹೇಳುವಲ್ಲಿ 'ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ೧೧ ಏಕಾದಶಿ ಮಂಗಳವಾರ ಉದಯ ೨೫ ಗಳಿಗೆ'[1] ಎಂದಿದೆ. ಅಂದರೆ ಇದರ ಪ್ರಕಾರ ಬಸವಣ್ಣನವರ ಕಾಲ ೧೬ನೆಯಶತಮಾನವೆಂದಾಗುತ್ತದೆ. ಈ ಬಗೆಯ ಬಾಲಿಶಪ್ರಮಾದಗಳು ಈ ಗ್ರಂಥದುದ್ದಕ್ಕೂ ತುಂಬಿರುವುದರಿಂದ ಐತಿಹಾಸಿಕ ದಾಖಲೆಗಳ ಪ್ರಮಾಣ ಗ್ರಂಥವನ್ನಾಗಿ ಇದನ್ನು ಸ್ವೀಕರಿಸುವಲ್ಲಿ ಕಟ್ಟೆಚ್ಚರ ವಹಿಸಬೇಕಾಗುತ್ತದೆ. 'ತಾಲ್ಲೂಕು' 'ರೂಪಾಯಿ' ಮುಂತಾದ ಇತ್ತೀಚಿನ ಶಬ್ದಗಳ ಪ್ರಯೋಗ ಈ ಗ್ರಂಥದಲ್ಲಿರುವುದರಿಂದ ಬಹುಶಃ ಇದು ೨೦ನೆಯ ಶತಮಾನದ ರಚನೆಯಿರಬಹುದೆಂಬ ಓ. ಎನ್. ಲಿಂಗಣ್ಣಯ್ಯನವರ ಊಹೆ ಸರಿಯೆಂದೇ ಕಾಣುತ್ತದೆ.[2]

ಚಿತ್ರದುರ್ಗದ ಮುರುಘಾಮಠಾಧಿಪತಿಗಳ ಗುರುಪರಂಪರೆಯನ್ನು ಹೇಳುವ ನಿರಂಜನ ವಂಶ ರತ್ನಾಕರ ಮಠದ ಪ್ರಾಚೀನತೆಯನ್ನು ಸ್ಥಾಪಿಸಲು ಶ್ರಮಿಸಿದ್ದು, ಮಲೆಯ ಮಾದೇಶ್ವರನೇ ನಿರ್ಮಾಯಗಣೇಶ್ವರನೆಂದೂ ಅವನು ಈ ಪೀಠದ ೬ನೇ ಜಗದ್ಗುರುವೆಂದೂ ಹೇಳಿದೆ.[3] ವಾಸ್ತವ ಸಂಗತಿಯೆಂದರೆ ಚಿತ್ರದುರ್ಗದ ಮುರುಘಾಮಠ ೧೭ನೇ ಶತಮಾನದಲ್ಲಿ ಕಟ್ಟಿಸಿದ್ದೆಂದು ಇತಿಹಾಸ ನಿರ್ಧರಿಸುತ್ತದೆ.[4] ಆದ್ದರಿಂದ ಈ ಗುರುಪರಂಪರೆಯಲ್ಲಿ ಬಂದಿರುವ ನಿರ್ಮಾಯಗಣೇಶ್ವರನಿಗೂ ಮುರುಘಾಮಠಕ್ಕೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಓ. ಎನ್. ಲಿಂಗಣ್ಣಯ್ಯನವರು ಖಾತ್ರಿಪಡಿಸಿದ್ದಾರೆ.[5]

ಹಾಗಾದರೆ ಈ ನಿರ್ಮಾಯಗಣೇಶ್ವರ ಯಾರು ? ನಿರಂಜನ ವಂಶ ರತ್ನಾಕರಕ್ಕೆ ಈತನ ಹೆಸರು ಎಲ್ಲಿಂದ ಬಂತು ? ಎಂದು ಹುಡುಕಿದರೆ ಅದರ ಮೂಲ ತೋಂಟದ ಸಿದ್ಧಲಿಂಗ ಶಿವಯೋಗಿಯ ವಚನದಲ್ಲಿರುವಂತೆ ಕಾಣುತ್ತದೆ.[6] ಇದನ್ನು ತೆಗೆದುಕೊಂಡು ನಿರಂಜನ ವಂಶ ರತ್ನಾಕರಕಾರನು ಚಿತ್ರದುರ್ಗ ಮಠದ ಪರಂಪರಾ ಪ್ರಭೆಯನ್ನು ಬೆಳಗಲು ಯತ್ನಿಸಿರುವುದು ಸ್ಪಷ್ಟವಾಗುವುದಲ್ಲದೆ, ನಿರ್ಮಾಯಗಣೇಶ್ವರನೇ ಮಾದೇಶ್ವರನೆಂದು ಕಲ್ಪಿ

ದ್ದೂ ಅವನ ಊಹೆಯೆಂದೇ ಹೇಳಬೇಕಾಗು
ದೆ. ಈ ಗ್ರಂಥಕರ್ತೃವಿನ ಪ್ರಕಾರ ನಿರ್ಮಾಯ
ಣೇಶ್ವರನ ಶಿಷ್ಯ ನಿರಂಜನ ಸ್ವಾಮಿಗಳು "ಎಂಟು
ೂರನೆಯ ವಿಳಂಬ ಸಂವತ್ಸರದ ಚೈತ್ರ ೧೦ಗುರು
ಾರದಂದು ೧೨ ಗಳಿಗೆಯಲ್ಲಿ ಹೊಯ್ಸಳದೇಶದ
ಳೇಬೀಡು ವೇಲಾಪುರದರಸನು ವಿಷ್ಣುವರ್ಧನ
ಂಬ ಬಲ್ಲಾಳನಿಗೆ ಆ ದೇಶದ ಪಟ್ಟವಾಗಲು ಈತ
ಳ್ವಿಕೆಯಲ್ಲಿಹರಿಹರಾಚಾರ್ಯರು, ರಾಘವಾಂಕಯ್ಯ,
ೆಯ ಪದ್ಮರಸರು" ಮುಂತಾದವರಿಗೆ ದರ್ಶನಾ
ರ್ವಾದಗಳನ್ನು ಕೊಟ್ಟಂತೆ ಹೇಳಿದೆ[7] ಇಲ್ಲಿ
ಷ್ಣುವರ್ಧನನ ಹೆಸರು ಬಂದಿರುವುದು ತಪ್ಪಲ್ಲದೆ,
ರ್ಮಾಯ ಗಣೇಶ್ವರನೇ ಮಾದೇಶ್ವರನಾಗಿದ್ದರೆ
ಗ ಅವನ ಕಾಲ ಬಸವೇಶ್ವರನ ಕಾಲಕ್ಕೆ ಸರಾಗ
ಗಿ ನುಗ್ಗುತ್ತದೆ. ನಿರ್ಮಾಯ ಗಣೇಶ್ವರನೇ
ಾದೇಶ್ವರನೆಂದು ಭಾವಿಸಿದ ಓ. ಎನ್. ಲಿಂಗ
ಯ್ಯನವರೂ ಅಲ್ಲಮಪ್ರಭು ನವನಾಥಪಂಥದ
ನುಯಾಯಿಗಳಾಗಿದ್ದರೆ ಕಾಲದ ಸಂಗತಿಗಳನ್ನು
ತ್ತರಿಸಿ ಆ ಪೀಳಿಗೆಯಲ್ಲಿ ಅನಾದಿಗಣನಾಥ, ಆದಿ
ಣನಾಥ, ನಿರ್ಮಾಯ ಗಣೇಶ್ವರರನ್ನು ತಂದು
ಲ್ಲಿಸಿದ್ದಾರೆ.[8] ಆದರೆ ಮತ್ತೊಂದು ಕಡೆ
ೋಂಟದ ಸಿದ್ಧಲಿಂಗಸ್ವಾಮಿಗಳ ವಚನದ ಗುರು
ರಂಪರೆಯಲ್ಲಿ ಅಲ್ಲಮ ಚನ್ನಬಸವಣ್ಣ, ಸಿದ್ಧ
ಮರನಲ್ಲಿ ಹೆಸರಿಸಿಲ್ಲವೆಂದೂ[9] ಸಿದ್ಧರಾಮರ
ವಾಯ ರುದ್ರಸ್ವಾಮಿಗಳವರೆಗೆ ಶಿವಾನುಭವ
ಚಾರವೇ ಕರ್ನಾಟಕದಲ್ಲಿ ನಡೆಯಲಿಲ್ಲವೆಂದೂ,
ಪ್ಪತ್ತನೆಯ ಶತಮಾನದಲ್ಲಿ ಹುಟ್ಟಿದ ನಿರಂಜನ
ಶರತ್ನಾಕರ ಕಾಲಕಾಲದ ಪ್ರಮುಖ ವ್ಯಕ್ತಿಗಳಂ
ತೆ ಪ್ರಸಿದ್ಧನಿರಾಭಾರಿಗಳ ಮಾಲೆಯೊಂದನ್ನು
ಣೆಸಿದಂತೆ ಊಹಿಸಬಹುದೆಂದೂ ಇದೊಂದು
ಹಾಸಗ್ರಂಥವಲ್ಲ ಶೂನ್ಯ ಪುರಾಣವೆಂದೂ
ರೆ ಇದನ್ನು ರಚಿಸಿದ ಮಹಾನುಭಾವರು ವೀರ
ದ ವಾಙ್ಮಯದಲ್ಲಿ ವಿದ್ವಾಂಸರೆಂಬುದರಲ್ಲಿ ಅನು
ನವಿಲ್ಲವೆಂದೂ ಹೇಳುತ್ತಾರೆ.[10]

ಸಂಶೋಧನಾ ದೃಷ್ಟಿಯಲ್ಲೆ ನಡೆಯಲು ಪ್ರಯ
ದ ಓ. ಎನ್. ಲಿಂಗಣ್ಣಯ್ಯನವರು ಮಾದೇ
ರನ ಕಾಲ ನಿರ್ಣಯ ಮಾಡುವಾಗ ಹೆಚ್ಚು
ಾರ ಮಾಡದೆ ನಿರಂಜನ ವಂಶ ರತ್ನಾಕರವನ್ನೇ
ಬಿ ನಿರ್ಮಾಯ ಗಣೇಶ್ವರನೇ ಮಾದೇಶ್ವರ
ದುಕೊಂಡು ಮಾದೇಶ್ವರರು "ಸುತ್ತೂರು
ಠದಲ್ಲಿ ಕೆಲವು ಕಾಲವಿದ್ದರಂತೆ. ಸಿದ್ಧನಂಜ
ಶಿಕರು ಆಗ ಸುತ್ತೂರು ಪೀಠಾಧ್ಯಕ್ಷರಾಗಿದ್ದ
ೂ ಅವರ ಕಾಲ ಕ್ರಿ. ಶ. ೧೨೪೦ ಎಂದೂ
ರಾತ್ರಿ ಶಿವಚಾರ್ಯರು' ಗ್ರಂಥದಲ್ಲಿ ಹೇಳಿದೆ.
ದ್ದರಿಂದ ನಿರ್ಮಾಯಗಣೇಶ್ವರನ ಕಾಲ ಕ್ರಿ. ಶ.
ಸಾರು ೧೨೨೫ ಎಂದು ನಿರ್ಣಯಿಸಬಹುದು[11]

ಎಂದು ಥಟ್ಟನೆ ಹೇಳಿಬಿಟ್ಟಿದ್ದಾರೆ. ಯಾವ ಗ್ರಂಥ
ಐತಿಹಾಸಿಕ ಪುರಾವೆಗಳಿಗೆ ಅರ್ಹವಾಗಿಲ್ಲವೆಂದಿ
ದ್ದರೋ ಅದೇ ಗ್ರಂಥದ ವಿಷಯಗಳನ್ನು ಧಾರಾಳ
ವಾಗಿ ಬಳಸಿಕೊಳ್ಳುತ್ತಾ ಹೋಗುತ್ತಾರೆ. 'ಶಿವ
ರಾತ್ರಿ ಶಿವಚಾರ್ಯರು' 'ಸುತ್ತೂರು ವೀರಸಿಂಹಾಸನ
ಪರಂಪರೆ' ಗ್ರಂಥಗಳೂ ಇತ್ತೀಚಿನವಾಗಿದ್ದು ನಿರಂ
ಜನವಂಶರತ್ನಾಕರದ ಅನುಯಾಯಿಗಳೆಂಬುದನ್ನು
ಲಿಂಗಣ್ಣನವರು ಸ್ವಲ್ಪ ಶ್ರಮವಹಿಸಿದ್ದರೆ ಅವರ
ಸಂಶೋಧನಾದೃಷ್ಟಿಗೆ ಇದೇನು ಹಿಮಾಲಯ
ಪರ್ವತವಾಗಿ ಪರಿಣಮಿಸುತ್ತಿರಲಿಲ್ಲ.

ನಿರಂಜನ ವಂಶರತ್ನಾಕರದಲ್ಲಿ ಮಾದೇಶ್ವರ
ಸುತ್ತೂರು ಕುಂತೂರು ಮಠಗಳಿಗೆ ಬಂದಿದ್ದ
ಪ್ರಸ್ತಾಪವಿಲ್ಲ. ಈ ಗ್ರಂಥವೊಂದನ್ನು ಬಿಟ್ಟರೆ
'ಶಿವರಾತ್ರಿ ಶಿವಾಚಾರ್ಯ' 'ಮಾದೇಶ್ವರ ಸಾಂಗತ್ಯ'
'ಸುತ್ತೂರು ವೀರಸಿಂಹಾಸನ ಪರಂಪರೆ' ಗ್ರಂಥ
ಗಳಾಗಲಿ ಹೈದರಾಲಿ ಶಾಸನ, ಹರದನಹಳ್ಳಿ ಶಾಸನ
ಗಳಾಗಲಿ ಎಲ್ಲೂ ಮಾದೇಶ್ವರನನ್ನು ನಿರ್ಮಾಯ
ಗಣೇಶ್ವರನೆಂದು ಕರೆದಿಲ್ಲ. ಆದರೆ ನಿರಂಜನ ವಂಶ
ರತ್ನಾಕರವನ್ನೇ ಪಟ್ಟಾಗಿ ಹಿಡಿದ ಬಿ. ಶಿವಮೂರ್ತಿ
ಶಾಸ್ತ್ರಿಗಳು ಮಾತ್ರ ನಿರ್ಮಾಯ ಗಣೇಶ್ವರನೇ
ಮಾದೇಶ್ವರನೆಂದು ಅಭೇದ ಕಲ್ಪಿಸಿದ್ದಾರೆ. 'ನಿರಂ
ಜನ ವಂಶರತ್ನಾಕರದ ಪ್ರಕಾರ ಪರಿಶೀಲಿಸಿದರೂ
ಶ್ರೀಮಾದೇಶ್ವರರು ಅವರ ಉತ್ತರಾಧಿಕಾರಿ
ಶ್ರೀನಿರಂಜನ ಸ್ವಾಮಿಗಳು, ಅವರಿಗೂ ಶ್ರೀಮಾದೇ
ಶ್ವರರಿಗೂ ಯಾವ ಸಂಬಂಧವೂ ಕಂಡುಬರುವುದಿಲ್ಲ,
ಎಂಬುದಾಗಿ ಎಂ. ಜಿ. ನಂಜುಂಡಾರಾಧ್ಯರು ಅಭಿ
ಪ್ರಾಯಪಡುತ್ತಾರೆ.[11a] ೧೩೪೫ರ ಹರದನಹಳ್ಳಿ
ಶಾಸನ. (E. C. Vol iv (1975) ಪು. 187)
ಲಿಪಿ ಹಾಗೂ ಭಾಷೆಯ ವಿಚಾರಗಳಿಂದ ವಿಶ್ವಾಸಾ
ರ್ಹವೆನಿಸಿಲ್ಲ. ಇನ್ನು ಮಾದೇಶ್ವರ ಕುಂತೂರ
ಮಠಕ್ಕೆ ಬಂದಿದ್ದ ವಿಚಾರವನ್ನು ಈ ಶಾಸನಗಳೆಲ್ಲ
ಸಾರಿ ಹೇಳುವುದರಿಂದ ಈ ಮಠದ ಸ್ಥಾಪನೆಯಿಂದ
ಮಾದೇಶ್ವರನ ಕಾಲದ ಗಡುವನ್ನು ನಿರ್ಧರಿಸ
ಬಹುದೇನೊ, ಈ ಮಠ ಕ್ರಿ. ಶ. ೧೫೧೨ರಲ್ಲಿ
ಸ್ಥಾಪಿತವಾದರೆ ಮಾದೇಶ್ವರರ ಕಾಲವನ್ನೂ ಈ
ಮಠದ ಪ್ರಾಚೀನತೆಯೆಡೆಗೆ ತರಬಹುದು. ಹರದನ
ಹಳ್ಳಿ ಶಾಸನ ನಂಬಿಕೆಗೆ ಅರ್ಹವೆನಿಸಿದಾಗ ಮಾತ್ರ
ಮಾದೇಶ್ವರನ ಕಾಲ ೧೪ನೇ ಶತಮಾನಕ್ಕು ಹಿಂದಕ್ಕೆ
ಹೋಗುತ್ತದೆ.

೩

ಮಂಟೇಸ್ವಾಮಿಮತ್ತು ಮಾದೇಶ್ವರರು ಉತ್ತರ
ದೇಶದಿಂದ ದಕ್ಷಿಣಕ್ಕೆ ಬಂದವರೆಂದು ಜನಪದ
ಸಾಹಿತ್ಯ ಸಾರಿ ಹೇಳುತ್ತದೆ. ಮಂಟೇಸ್ವಾಮಿ
ಮೈಸೂರಿಗೆ ಬಂದಾಗ ಕಾರಗಳ್ಳಿ ಮಾರನಾಯಕ
ನನ್ನು ಸಂಹರಿಸಲು ಅರಸುಮನೆತನದವರಿಗೆ ನೆರ
ವಾದುದಲ್ಲದೆ ದೊಡ್ಡಮ್ಮತಾಯಿಯನ್ನು ದತ್ತು

ಪಡೆದದ್ದು ಐತಿಹಾಸಿಕ ಸತ್ಯವಾಗಿದ್ದು ಮಂಟೇ
ಸ್ವಾಮಿಯ ಕಾಲ ೧೪–೧೫ನೇ ಶತಮಾನದ ಅಂತರ
ವಿರಬಹುದೆಂದು ಹೇಳಬಹುದು. ಮಂಟೇಸ್ವಾಮಿ
ಯನ್ನು ಧರೆಗೆ ದೊಡ್ಡವರು ಎಂದು ಕರೆಯುವುದ
ರಿಂದ ಮಾದೇಶ್ವರ ಅವರ ಕಾಲಕ್ಕಿನ್ನೂ ಚಿಕ್ಕ
ಹುಡುಗನಾಗಿದ್ದನೆಂದು ಕಾಣುತ್ತದೆ, ಮಂಟೇ
ಸ್ವಾಮಿ ಹರಿಜನರಲ್ಲಿ ಬಲಗೈ ಪಂಗಡಕ್ಕೆ ಸೇರಿದವ
ನೆಂದು ಮಾದೇಶ್ವರ ಎಡಗೈ ಪಂಗಡಕ್ಕೆ ಸೇರಿದವ
ನೆಂದೂ ಜನಪದ ಸಾಹಿತ್ಯದಿಂದ ತಿಳಿದುಬರುತ್ತದೆ[13]
ಇದನ್ನು ಕ್ರಿ. ಶ. ೧೮೩೮ರಲ್ಲಿದ್ದ ದೇವಚಂದ್ರನ
'ರಾಜಾವಳಿ ಕಥೆ' ಯೂ ಸಮರ್ಥಿಸುತ್ತದೆ. ಅದ
ರಲ್ಲಿ ಮಾದೇಶ್ವರನನ್ನು ಕುರಿತು ಹೇಳುವಲ್ಲಿ
'ಕುಂತೂರು ಮಠದೊಳು ನಂಜಯ್ಯನೆಂಬ
ಜೋಳಿಗೆ ಒಡೆಯರಿರಲಲ್ಲಿಗೆ ಬಡಗು ಸೀಮೆಯಿಂ
ದೊರ್ವ ಮಾದಿಗರ ಹುಡುಗ.... ಬಂದಾ ಮಠಮಂ
ಸೇರಿ' ಎಂದು ಹೇಳಲಾಗಿದೆ. ಜನಪದ ಕಾವ್ಯ
ದಲ್ಲೂ ಆತ ಶ್ರವಣ ದೊರೆಯಿಂದ ಮಾದಾಲಿ
ಎಂದೇ ಕರೆಸಿಕೊಳ್ಳುತ್ತಾನೆ. ಅವನಿಗೆ ಪಾದರಕ್ಷೆ
ಮಾಡಲು ಒಪ್ಪುತ್ತಾನೆ.

ವಿದ್ವಾನ್ ಹ. ಜ. ಶಿವಶಂಕರಪ್ಪ ಎಂಬುವರು
ಈ ವಿಚಾರವನ್ನು ತಲೆಗೆ ಹಚ್ಚಿಕೊಂಡು ಸಿಡಿದು
ಹೋಗಿದ್ದಾರೆ. ಮಾದೇಶ್ವರನನ್ನು ಮಾದಿಗರವ
ನೆಂದು ಕರೆದ ದೇವಚಂದ್ರ ಬದುಕಿಲ್ಲವಾಗಿ ನೀಲ
ಗಾರ ಪುಟ್ಟಮಾದಯ್ಯನವರ ಮೇಲೆ ಕಿಡಿಕಾರಿ
ದ್ದಾರೆ. ಡಾ. ಎಂ. ಬಿ. ಕೆ. ಎಸ್. ರಾಯಭಾಗ
ಕರ್ ಎಂಬವರಿಂದ ಲಾಯರ್ ನೋಟೀಸ್ ಕಳಿಸಿ
ದ್ದಾರೆ. (ದಿ. 3. 7. 74) ಮಾದೇಶ್ವರನ ಬೆಟ್ಟ
ದಲ್ಲಿರುವ ಸಾಲೂರು ಮಠದ ಸ್ವಾಮಿಗಳ ಖಜಾನೆಗೆ
ಕೈಹಾಕಿ ಶ್ರೀಮಹದೇಶ್ವರಸ್ವಾಮಿಯ ಇತಿಹಾಸ
ಸಂಶೋಧನಾ ಸಂಸ್ಥೆಯಿಂದ ಹಲವಾರು ಪುಸ್ತಕ
ಗಳನ್ನು ಪ್ರಕಟಿಸಿ ಹಂಚುತ್ತಿದ್ದಾರೆ (ಉಚಿತವಾಗಿ
ಅಲ್ಲ) ತಮಗೆ ಅರ್ಥವಾಗದ ರಾಜಾವಳಿ ಕಥೆಗೆ
ವ್ಯಾಖ್ಯಾನ ಮಾಡಲು ಹ. ಕ. ರಾಜೇಗೌಡರನ್ನು
ಆಶ್ರಯಿಸಿದ್ದಾರೆ. ತೀಕ್ಷ್ಣಮತಿಗಳಾದ ಹ. ಕ.
ರಾಜೇಗೌಡರ ಬಗ್ಗೆ ಹಜಶಿ ಅವರಿಗೆ ಇರುವ
ಅಪಾರ ನಂಬಿಕೆಯಿಂದ ಅವರ ವ್ಯಾಖ್ಯಾನವನ್ನು
'ವಿದ್ವಾನ್' ಹಜಶಿಯವರು ಸಂತೋಷದಿಂದ
ಸ್ವೀಕರಿಸಿದ್ದಾರೆ. ಹ. ಕ.ರಾಜೇಗೌಡರ ವ್ಯಾಖ್ಯಾನ
ಇದು :

"ಅವನು (ಮಾದೇಶ್ವರ) ಮೊದಲನೆ ಭವಾಂ
ತರದಲ್ಲಿ ತಾಮಸಗುಣದಿಂದ ಎಡಗೈ ಜಾತಿಯವ
ನಾಗಿದ್ದ ವಿಷಯವೂ, ಎರಡನೇ ಭವಾಂತರದಲ್ಲಿ
ರಾಜಸಗುಣದಿಂದಕೂಡಿ ರಾಜನಾಗಿದ್ದ ವಿಷಯವೂ
ಕೊನೆಯ ಭವದಲ್ಲಿ ಸಾತ್ವಿಕ ಗುಣದಿಂದ ಕೂಡಿ
ಮಹದೇವನಾಗಿ ಅವತರಿಸಿದ ವಿಷಯವೂ ಇವು
ಗಳಲ್ಲಿ ಉಲ್ಲೇಖಿತವಾಗಿದೆ"।[4]

ಈ ಚಮತ್ಕಾರದ ಮಹಿತಿನಿಂದ ಗೌಡರು 'ವಿದ್ವಾನ್' ಹಜಶಿಯವರನ್ನು ಫೂಲ್ ಮಾಡಿದ್ದಾರೆ. ಹಜಶಿ ಫೂಲ್ ಆಗಿದ್ದಾರೆ. ಇಂಥವರು ನನ್ನನ್ನು ಪೂರ್ವಗ್ರಹ ಪೀಡಿತನೆನ್ನುತ್ತಾರೆ. ನನ್ನನ್ನಂತೂ ಪೂರ್ವಗ್ರಹವಾಗಲಿ ಪಶ್ಚಿಮಗ್ರಹವಾಗಲಿ ಒಂದೂ ಕಾಡುವುದಿಲ್ಲ. ಏಕೆಂದರೆ ನನಗೆ ಗ್ರಹಗಳಲ್ಲಿ ನಂಬಿಕೆಯಿಲ್ಲ. ಕಾಡುವುದಿದ್ದರೆ ಅದು ಹಜಶಿಯವರನ್ನೇ ಕಾಡಬೇಕು. ಅದು ಮಾದೇಶ್ವರನ ಜಾತಿ ರೂಪದಲ್ಲಿ ಅವರನ್ನು ಕಾಡುತ್ತಿದೆ.

ಡಾ. ಜೀಶಂಪ ಅವರು ಮಲೆಯ ಮಾದೇಶ್ವರನ ಬಗ್ಗೆ ಭಿನ್ನವಾದ ಅಭಿಪ್ರಾಯವುಳ್ಳವರಾಗಿದ್ದಾರೆಂಬ ಅರಿವು ನಮಗಾಗಿದೆ ಎಂದಿದ್ದಾರೆ ಹಜಶಿಯವರು. [15] ಹಾಗಾದರೆ ಜೀಶಂಪ ಅವರ ಅಭಿಪ್ರಾಯವೇನೆಂಬುದನ್ನೂ ನೋಡಿ ಹಜಶಿಯವರಿಗೆ ಸಮಾಧಾನವಾಗಲಿ. ಜೀಶಂಪ ಅವರ ಅಭಿಪ್ರಾಯ ಇದು :

''ಮಾದೇಶ್ವರ ಕಾವ್ಯದ ಉದ್ದಕ್ಕೂ ಶರಣನಾಗಿ ತೋರಿಬಂದರೂ ಅವನನ್ನು ವೀರಶೈವಕ್ಕೆ ಹೊರತಾದ ದೈವವಾಗಿಯೇ, ಸ್ಥಾವರಲಿಂಗವಾಗಿಯೇ ಜನ ಗುರುತಿಸುತ್ತಾರೆ, ಆರಾಧಿಸುತ್ತಾರೆ. ಅವನ ಒಕ್ಕಲೆಲ್ಲ ನೈಸರ್ಗಿಕ ಧರ್ಮವನ್ನು ಒಪ್ಪಿಕೊಂಡ ವೀರಶೈವೇತರರೇ ಹೆಚ್ಚಾಗಿದ್ದಾರೆ. ಮಾದೇಶ್ವರ ಅನ್ಯದೈವಗಳ ವ್ಯಾಪ್ತಿಯಿಂದ ಕೆಲವರನ್ನು ಬಲಾತ್ಕಾರವಾಗಿಯೂ ತನ್ನ ಹಿಡಿತಕ್ಕೆ ತೆಗೆದುಕೊಂಡದುಂಟು. ಆದರೆ ಯಾರಿಗೂ ಲಿಂಗದೀಕ್ಷೆಯನ್ನು ನೀಡಿದ ಸಂದರ್ಭ ಕಾವ್ಯದಲ್ಲಿ ಕಂಡುಬರುವುದಿಲ್ಲ. ಆದುದರಿಂದ ಈ ಕಾವ್ಯದ ಹಿನ್ನೆಲೆಯಲ್ಲಿ, ಕಾವ್ಯನಾಯಕನ ಹಿನ್ನೆಲೆಯಲ್ಲಿ ಶೈವದಪ್ರಾಚುರ್ಯವನ್ನು ಮಾತ್ರ ನಾವು ಕಾಣುತ್ತೇವೆ'' ![16]

ಈ ಹೇಳಿಕೆ ಅಡ್ಡಗೋಡೆ ಮೇಲೆ ದೀಪವಿಟ್ಟಂತಿದ್ದರೂ ಹಜಶಿಯವರಿಗಂತೂ ಖಂಡಿತ ನೆರವಾಗಲಾರದು. ಈ ಇಬ್ಬರು ವಿದ್ವಾಂಸರುಗಳ ತೋರಿಕೆಯ ತಂತ್ರಕ್ಕೆ ಹಜಶಿಯವರು ಮರುಳಾಗಿ ಹೋಗಿದ್ದಾರೆ. ಆ ಉತ್ಸಾಹದಲ್ಲೆ ಮನೆಮುಂದಿಯ ಹೆಸರಿನಲ್ಲೆಲ್ಲ ತಾವೇ ಲೇಖನಗಳನ್ನು ಬರೆದು ಪ್ರಕಟಿಸಿ ಧನ್ಯರಾಗಿದ್ದಾರೆ. 'ಮಾದೇಶ್ವರನು ನಿಜವಾಗಿಯೂ ಮಾದಿಗನೇ ಆಗಿದ್ದರೆ ಎಲ್ಲರೂ ಹೆಮ್ಮೆ ಪಡಬಹುದಾಗಿತ್ತು,' [17] ಎಂದು ಹೇಳುವ ಹಜಶಿ ಅವರು 'ನಿರಂಜನ ವಂಶರತ್ನಾಕರದಲ್ಲಿ ಸೂಚಿತವಾಗಿರುವ ಎಲ್ಲಾ ಪೀಠಾಧಿಕಾರಿಗಳೂ ವೀರಶೈವರಾಗಿದ್ದು ಅವರು, ಎಡಗೈಜಾತಿಯವನೆಂದೂ ಹೇಳಲ್ಪಡುವ ಮಾದೇಶ್ವರ ತಮ್ಮ ಮೂಲಗುರು ಪರಂಪರೆಯಲ್ಲಿ ಬಂದನೆಂದು ಹೇಳಿಕೊಳ್ಳುವಷ್ಟು ಬುದ್ಧಿಹೀನರಾಗಿದ್ದರೆ ? [18] ಎಂದೂ ಹೇಳುತ್ತಾರೆ. ಇದರಲ್ಲಿ ಅವರು ಯಾವುದಕ್ಕೆ ಹೆಮ್ಮೆಪಡುತ್ತಾರೆ ಯಾವುದಕ್ಕೆ ಅಸಹ್ಯಪಡುತ್ತಾರೆ ಎಂಬುದು ಅಂಗೈ ಹುಣ್ಣಿನಂತೆ ಸ್ಪಷ್ಟವಾಗಿದೆ. ಕುರುಡರಿಗೆ ಕನ್ನಡಿ ಕೊಟ್ಟರೂ ಪ್ರಯೋಜನವುಂಟೆ? ನೋವು ಅರಿವಿಗೆ ಬರಬೇಕು ; ಮುಟ್ಟಿ ನೋಡಿಕೊಳ್ಳಬೇಕು. ಹೀಗಿದ್ದೂ ಹಜಶಿ ಅವರು ಹರಿಜನೋದ್ಧಾರದ ಬಗ್ಗೆ ಭಾಷಣ ಬಿಗಿಯಲೂ ಮರೆತಿಲ್ಲ ! [19]

ಒಟ್ಟಿನಲ್ಲಿ ನಿರ್ಮಾಯ ಗಣೇಶ್ವರನೇ ಮಾದೇಶ್ವರನಾಗಿದ್ದಲ್ಲಿ ಅವನು ಯಾವ ಕೋಮಿಗೆ ಸೇರುತ್ತಿದ್ದನೋ ಗೊತ್ತಿಲ್ಲ. ಮಾದೇಶ್ವರನೂ ನಿರ್ಮಾಯ ಗಣೇಶ್ವರನೂ ಒಬ್ಬನೇ ಅಲ್ಲದಿರುವುದರಿಂದ ಮಾದೇಶ್ವರ ಮಾದಿಗರವನೆಂಬುದು ಸತ್ಯಸತ್ಯ. ಈ ಮಧ್ಯೆ ಸಿದ್ದಪ್ಪ ಶಾಸ್ತ್ರಿಗಳು ಮಾದೇಶ್ವರನನ್ನು ಚುಂಚಜಾತಿಯವನೆಂದು ಕರೆದಿರುವುದನ್ನೂ ಹಜಶಿಯವರು ಯಾರಿಂದಲಾದರೂ ವ್ಯಾಖ್ಯಾನ ಮಾಡಿಸಿ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಜಾತಿಯಭೂತದ ಹೊಡೆತದಿಂದ ಪಾರಾಗಲೆಂದೇ ಸುತ್ತೂರು ಕುಂತೂರು ಬದನಾಳು ಮಠಗಳನ್ನೆಲ್ಲ ತೊರೆದು ದುರ್ಗಮವಾದ ಏಳುಮಲೆ ನಡುವೆ ನೆಲಸಿದನೆಂದು ಕಾಣುತ್ತದೆ. ಬಸವೇಶ್ವರನ ವಿಶ್ವಧರ್ಮ ಶಿಥಿಲಗೊಂಡಿದ್ದ ಆ ಕಾಲದಲ್ಲಿ ಮಾದೇಶ್ವರ ಕಂಸಾಳೆ ಶೈವನಾಗಿಯೇ ಉಳಿದನೇನೋ !

ಳ

ಸಿದ್ದಪ್ಪಶಾಸ್ತ್ರಿಗಳು ತಮ್ಮ 'ಮಲೆಮಹದೇಶ್ವರ ನಿಜಪುರಾಣ'ದಲ್ಲಿ ಮಾದೇಶ್ವರನ ತಂದೆತಾಯಿಗಳು ಚುಂಚದಂಪತಿಗಳೆಂದು ಹೇಳಿದ್ದಾರೆ. ನಮ್ಮ ಜನಪದ ಗಾಯಕರಾದರೋ ಉತ್ತರದೇಶದ ಉತ್ತಮಪುರದ ಕಾಳೆ ಕಲ್ಯಾಣ ದೇವರು(ಅಥವಾ ಚಂದ್ರಶೇಖರಮೂರ್ತಿ) ಹಾಗೂ ಉತ್ತರಾಜಮ್ಮ ಎಂದು ಹೇಳುತ್ತಾರೆ. ನಂಜನಗೂಡಿನ ನಂಜುಂಡೇಶ್ವರ–ಚಾಮುಂಡಿ–ಮಾದೇಶ್ವರರ ಬಾಂಧವ್ಯದ ಬೆಸುಗೆಗಳನ್ನೂ ನಮ್ಮ ಜನಪದರು ಪ್ರಣಯಕಥೆಯಾಗಿ ಹಾಡುತ್ತಾರೆ. ಮಾದೇಶ್ವರನ ಗುರುವಿನ ವಿಚಾರಕ್ಕೆ ಬಂದಾಗ ಪ್ರಭುಸ್ವಾಮಿ ಎಂದು ಹೇಳುತ್ತಾರೆ. ಇವರು ಕುಂತೂರು ಮಠಾಧಿಪತಿಗಳಾಗಿದ್ದರೆಂದು ಜನಪದ ಸಾಹಿತ್ಯ ಮಾಹಿತಿಯನ್ನು ಒದಗಿಸುತ್ತದೆ. ಪ್ರಭುಸ್ವಾಮಿ ಎಂಬ ಹೆಸರಿನಿಂದಲೇ ಕೆಲವರು ಬಳ್ಳಿಗಾವೆಯ ಅಲ್ಲಮ ಪ್ರಭುವೇ ಮಾದೇಶ್ವರನಿಗೆ ಮಾರ್ಗದರ್ಶನ ಮಾಡಿದ ಗುರುವೆಂದು ತೀರ್ಮಾನಿಸಿ ಮಾದೇಶ್ವರನ ಚರಿತ್ರೆ (?) ಬರೆದಿದ್ದಾರೆ. ಬಿ. ಶಿವಮೂರ್ತಿ ಶಾಸ್ತ್ರಿಗಳು 'ಮಾದೇಶ್ವರನ ಗುರುದೇವರು ಶ್ರೀಶೈಲದ ಕದಳಿಯಲ್ಲಿ ಸಮಾಧಿಯಾದರು' [20] ಎಂದೂ 'ಮಾದೇಶ್ವರನ ಸಾಕ್ಷಾತ್ ಗುರುಗಳಾದ ಶ್ರೀಆದಿ ಗಣೇಶ್ವರರು ಕೊಳ್ಳೇಗಾಲಕ್ಕೆ ಸಮೀಪಗತವಾಗಿರುವ ಪ್ರಭುಲಿಂಗನ ಬೆಟ್ಟದಲ್ಲಿ ಐಕ್ಯರಾದರು''[2] ಎಂದೂ 'ಮಾದೇಶ್ವರರ ಮೂಲಗುರುಗಳಾದ ನಂ... ಕೇಶ್ವರರೂ ಅನಿಮಿಷದೇವರೂ ಶಿವಗಾಮ ಪರಂಪರೆಯ ಶಿವಯೋಗಿಗಳು'[22] ಎಂದುಹೇಳಿ ಮಾದೇಶ್ವರನ ಕಾಲವನ್ನು ೧೪ನೇ ಶತಮಾನಕ್ಕೆ ತಂದು ನಿಲ್ಲಿಸುತ್ತಾರೆ. ಇದರಿಂದ ಮಾದೇಶ್ವರ ೧೧ನೇ ಶತಮಾನದಿಂದ ೧೪ನೇ ಶತಮಾನದವರೆಗೂ ಬದುಕಿದ್ದನೆಂದು ಅವರು ಭಾವಿಸಿದಂತಿದೆ. ಅಲ್ಲಮಪ್ರಭುಗಳೂ ಜನಪದ ಸಾಹಿತ್ಯದಲ್ಲಿ ಬರುವ ಪ್ರಭುಸ್ವಾಮಿಗಳೂ ಒಬ್ಬರೇ ಎಂದು ಅವರು ಒಪ್ಪಿಕೊಂಡು ಬಂದುದರ ಫಲವಾಗಿ ಈ ಪ್ರಮಾದ ಪರಂಪರೆಯನ್ನು ಅವರು ನಿರಾಯಾಸವಾಗಿ ಸೃಷ್ಟಿಸಿದರೆಂದು ಕಾಣುತ್ತದೆ. ಅವರು ನಿರಂಜನ ವಂಶ ರತ್ನಾಕರವನ್ನು ನೋಡಿದ್ದರೂ ಅದರಲ್ಲಿ ಮಾದೇಶ್ವರನನ್ನು ಮಾದಿಗರ ಹುಡುಗ ಎಂದು ಕರೆದಿರುವುದನ್ನು ಮುಚ್ಚುವ ಪ್ರಯತ್ನ ಮಾಡಿರುವುದಂತೂ ಕೀರ್ತನಕೇಸರಿ ಶಾಸ್ತ್ರಿಯವರ ರಹಸ್ಯರಕ್ಷಣಾಪರಿಣತಿಯನ್ನು ತೋರಿಸುತ್ತದೆ. ಅವರು ಭಾವುಕಚಿತ್ತರಾಗಿ ಬರೆದಿರುವ ಕಲ್ಪನಾರಮ್ಯವಾದ ಶ್ರೀ ಮಾದೇಶ್ವರ ಚರಿತ್ರೆ' ಚಾರಿತ್ರಿಕ ವಿಷಯಗಳಿಗೆ ಹೊರತಾಗಿರುವ ಅಪಲಾಪಗಳಿಂದ ತುಂಬಿರುವುದಲ್ಲದೆ ಅವರ ದೃಷ್ಟಿಯೆಲ್ಲ ಮಾದೇಶ್ವರನ ಸಂಗತಿಗಳ ನಿರೂಪಣೆಗಿಂತ ಮೈಸೂರು ಮಹಾರಾಜರು ಆ ದೇವರಿಗೆ ದೇವಾಲಯಕ್ಕೆ ಏನೇನು ಕೊಟ್ಟಿದ್ದಾರೆಂದು ಪಟ್ಟಿ ಮಾಡಿ ಸ್ತುತಿಸುವುದರಲ್ಲೇ ತನ್ನ ಸಾರ್ಥಕ್ಯವನ್ನು ಪಡೆದಿದೆ. ಈ ಗ್ರಂಥದ ಅನುಭವಗೋಷ್ಠಿ ಎಂಬ ಅಧ್ಯಾಯದಲ್ಲಿ ನಿರ್ಮಾಯಗಣೇಶ್ವರನ ಶಿಷ್ಯ ನಿರಂಜನಸ್ವಾಮಿ, ಸುತ್ತೂರುಸ್ವಾಮಿ, ಕುಂತೂರು ಸ್ವಾಮಿ, ನಂಜನಗೂಡುಸ್ವಾಮಿ, ಕನಕಗಿರಿಸ್ವಾಮಿ, ಸಾಲೂರು ಸ್ವಾಮಿ–ಮುಂತಾದ ಸ್ವಾಮಿಗಳನ್ನೆಲ್ಲ ಒಂದು ಕಡೆ ಕೂಡಿ ಶಾಸ್ತ್ರಿಗಳು ಮಾಡಿರುವ ಪ್ರವಚನ ಕೀರ್ತನಕೇಸರಿ ಎಂಬ ಬಿರುದನ್ನು ಸಾರ್ಥಕಗೊಳಿಸಿದೆ. ಇತಿಹಾಸ ಸಮ್ಮತವಲ್ಲದ 'ಶ್ರೀ ಮಾದೇಶ್ವರ ಚರಿತ್ರೆ' ದೇವಸ್ಥಾನದ ಪ್ರಕಟಣೆಯಾಗಿದ್ದು ಅದರ ಪ್ರಸಾರ ಹೆಚ್ಚಾಗಿರುವುದರಿಂದ ಓದುವ ಜನಕ್ಕೆ ತಪ್ಪು ತಿಳುವಳಿಕೆಯನ್ನು ಶೀಘ್ರವಾಗಿ ಹರಡಬಲ್ಲದೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.

ಸಿದ್ದಪ್ಪಶಾಸ್ತ್ರಿಗಳು ಮಾದೇಶ್ವರನ ಬೆಟ್ಟದಲ್ಲೇ ಇದ್ದುಕೊಂಡು ಅಲ್ಲಿನ ಸ್ವಾಮಿಗಳ ಕೃಪಾಶೀರ್ವಾದದಿಂದ ತಮ್ಮ 'ಮಲೆಮಹದೇಶ್ವರ ನಿಜ ಪುರಾಣ' ವನ್ನು ಬರೆದಂತೆ. ಅವರ ಕೃತಿಯಲ್ಲಿ ಮಾದೇಶ್ವರ ಯಾವ ಕೆಲಸಕ್ಕೆ ಹೋಗುವಾಗಲೂ 'ಉಘೇ ಮಹಾಂತ ಮಲ್ಲಯ್ಯ' ಎನ್ನುತ್ತಿದ್ದನಂತೆ, ಶಿವ

ಮೂರ್ತಿಶಾಸ್ತ್ರಿಗಳು ಹೇಳದೆ ಬಿಟ್ಟಿದ್ದೊ ಅಥವಾ ಹೇಳಲು ಮರೆತಿದ್ದೊ ಈ ಹೆಸರು! ನಾನು ಮಲೆಯ ಮಾದೇಶ್ವರ ಗ್ರಂಥ ಪ್ರಕಟಣೆಗಾಗಿ ಮಾಹಿತಿ ಕಲೆಹಾಕಲು ಹೋದಾಗ ಸಾಲೂರು ಗುರುಪರಂಪರೆಯನ್ನೆಲ್ಲ ವಿಚಾರಿಸಿದೆ. ಆ ಮಠದ ಸ್ವಾಮಿಗಳಾದ ಮಹದೇವಸ್ವಾಮಿಗಳು ಹೇಳಿದ ಸಂಗತಿಗಳನ್ನೆಲ್ಲ ಪ್ರಸ್ತಾವನೆಯಲ್ಲಿ ಬಳಸಿಕೊಂಡೆ. ಆದರೆ ಅವರು ಅಪ್ಪಿತಪ್ಪಿಯೂ ಶಾಂತಮಲ್ಲಿಕಾರ್ಜುನಸ್ವಾಮಿ ಎಂಬ ಹೆಸರನ್ನು ಬಳಸಲಿಲ್ಲ. ಪುಸ್ತಕ ಪ್ರಕಟವಾದ ಮೇಲೆ ವಿದ್ವಾನ್ ಹಜಶಿಯವರು ಮಹದೇಶ್ವರ ದೇವಸ್ಥಾನದ ಆಡಳಿತಾಧಿಕಾರಿಗಳ ಸಭೆ ಕರೆಸಿ 'ಜನಪದ ಮಹಾಕಾವ್ಯ ಮಲೆಯಮಾದೇಶ್ವರ' ಮಿಸ್ ಮೇಯೋ ಎಂಬುವಳು ಬರೆದ ಮದರ್‌ಇಂಡಿಯಾದಂತಹ ಕೀಳ್‌ಕೃತಿಎಂದು ಗುಡುಗಾಡಿದಾಗ ಅಲ್ಲೇ ಭಿನ್ನಾಭಿಪ್ರಾಯಗಳು ತಲೆದೋರಿದಕಾರಣ ಸ್ವಾಮಿಗಳೂ, ಹಜಶಿಯವರು ತಾವೇ ಆ ಕೆಲಸ ಮಾಡಲು ಮುಂದಾಗಿ 'ಮಲೆಯ ಮಾದೇಶ್ವರ ಗ್ರಂಥದಲ್ಲಿಯ ಮಿಥ್ಯಾರೋಪಗಳು' ಪುಸ್ತಿಕೆಯನ್ನು ಪ್ರಕಟಿಸಿದ್ದಾರೆ. ಕೌತುಕದ ಸಂಗತಿಯೆಂದರೆ ಸಾಲೂರು ಮಠಕ್ಕೆ ಶಾಂತಮಲ್ಲಿಕಾರ್ಜುನ ಸ್ವಾಮಿ ಗದ್ದಿಗೆ ಎಂಬ ಬೋರ್ಡ್ ತಗುಲಿ ಹಾಕಿದ್ದು! ಈ ಶಾಂತಮಲ್ಲಿಕಾರ್ಜುನಸ್ವಾಮಿ ಐತಿಹಾಸಿಕ ವ್ಯಕ್ತಿಯಲ್ಲಿ ಮಠ ಮರಿ ಹಾಕಿದ್ದು! ಅಲ್ಲದೆ ಈ ಜನಪದ ಮಹಾಕಾವ್ಯವನ್ನು ಶಿಕ್ಷಣ ತರಗತಿಗಳಿಗೆ ಪಠ್ಯಪುಸ್ತಕವಾಗಿ ಇಡುವುದಿಲ್ಲವೆಂದು ಡಾ॥ ಹಾ. ಮಾ. ನಾಯಕರಿಂದ ಹಜಶಿಯವರು ಲಿಖಿತ ಭರವಸೆಯನ್ನೂ ಪಡೆದಿದ್ದಾರಂತೆ! [23]

೫

ಕಲಾವಿದ ಪುಟ್ಟಮಾದಯ್ಯನವರನ್ನು ಹಜಶಿಯವರು ತಮ್ಮ ಪುಸ್ತಿಕೆಯಲ್ಲಿ ತರಾಟೆಗೆ ತೆಗೆದ್ಕೊಂಡಿದ್ದಾರೆ. ಏಕೆಂದರೆ ಅವರು ಹಾಡುವಾಗ ಸಾಲೂರು ಮಠವನ್ನು ಸೋಲಿಗರ ದೊಡ್ಡಿ ಎಂದು ಕರೆದಿದ್ದಾರೆ. [24] ಡಾ॥ ಎಂ. ಬಿ. ಕೆ. ಎಸ್. ರಾಯಭಾಗಕರರು ತಮ್ಮ ಲಾಯರ್ ನೋಟೀಸಿನಲ್ಲಿ ಜಾಲುಪುರಗಳ ಮಠ ಸಾಲೂರು ಮಠ ಎಂದು ಹೇಳಿದ್ದಾರೆ. ವೈದ್ಯರ ಭಾಷಾಶಾಸ್ತ್ರಜ್ಞತೆ ಮೆಚ್ಚಬೇಕಾದ್ದೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಅರಿವಿಲ್ಲದೆ ಬಡಬಡಿಸುವುದು ಸರಿಯಲ್ಲ. ಪರಂಪರೆಯಿಂದ ಬಂದ ಗಾಯಕರ ಸ್ಮೃತಿ ಶಕ್ತಿಯನ್ನೇ ಶಂಕಿಸುವ ವೈದ್ಯರ ಬಗೆಗೆ ಮೌನವೇ ಸಿದ್ದು. ಸಾಲೂರು ಮಠವನ್ನು ಮಾದೇಶ್ವರ ಕಟ್ಟಿಸಿದನೆಂಬುದಕ್ಕೆ ಆ ಮಠದಲ್ಲಿ ಅಸ್ಥಿಭಾರವನ್ನು ಹಾಕುವಾಗ ಮಾದೇಶ್ವರನೇ ನೆಟ್ಟದ್ದೆಂದು ತೋರಿಸುವ ತವಸದ ಮರದ ಕಂಬ ಈ ಮಠದಲ್ಲಿದೆ. ಮಾದೇಶ್ವರ ಸಂಕಮ್ಮನ ಮಕ್ಕಳನ್ನು ದತ್ತು ತೆಗೆದುಕೊಂಡು ಬಂದು ಅವರಿಗಾಗಿ ಕಟ್ಟಿದ ಮಠ 'ಸೋಲಿಗರ ಮಠ' ಉಚ್ಚಾರಣಾ ಸೌಲಭ್ಯಕ್ಕಾಗಿ ಸೋಲಿಗರ ಮಠ ಸಾಲೂರು ಮಠ ಆಗಿದೆ. ಪುಟ್ಟಮಾದಯ್ಯನವರ ಈ ವಿವರಣೆಯನ್ನು ಅಲ್ಲಗಳೆಯಲು ಬೇರೆ ಆಧಾರಗಳಿಲ್ಲ, ಇದುತಪ್ಪು ಎನ್ನುವವರು ಸಾಲೂರುಶಬ್ದನಿಷ್ಪತ್ತಿಗೆ ಬೇರೆ ಮೂಲವನ್ನು ಒದಗಿಸಬೇಕಾಗುತ್ತದೆ. ದೇವಸ್ಥಾನದಲ್ಲಿ ಮಾದೇಶ್ವರನ ಮೂಲ ಗದ್ದಿಗೆಯೂ ಮಠದಲ್ಲಿ ಅವನ ತೋರುಗದ್ದಿಗೆಯೂ ಇದೆ. (ಇತ್ತೀಚೆಗೆ ಇಲ್ಲಿನ ಮಠಾಧಿಪತಿಗಳೂ ಮತ್ತು ಅರ್ಚಕರು ಈ ತೋರು ಗದ್ದಿಗೆಯನ್ನು ಮಾದೇಶ್ವರನ ಗುರು ಶ್ರೀ ಶಾಂತಮಲ್ಲಿಕಾರ್ಜುನರ ಗದ್ದಿಗೆ ಎಂದು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ) ಅಲ್ಲದೆ ಈ ಮಠದಲ್ಲಿ ಮಾದೇಶ್ವರ ಬಳಸುತ್ತಿದ್ದ ವಸ್ತುಗಳೆಂದು ಹೇಳುವ ಎರಡು ಜೋಳಿಗೆಗಳು, ನಾಗಬೆತ್ತ, ದಂತದ ಪಾದರಕ್ಷೆಗಳು, ಮರದ ಕರಡಿಗೆ, ಪಾದಪೆಂಡೆ, ಶಂಖ, ಕಂಸಾಳೆ, ಮರದ ಬಚ್ಚಿಕಲ್ಲು ಮುಂತಾದುವುಗಳನ್ನು ರಕ್ಷಿಸಿಕೊಂಡು ಬರಲಾಗಿದೆ.

ಹಾಗಾದರೆ ಈ ಸಾಲೂರು ಮಠವು ಕುಂತೂರು ಮಠದ ಶಾಖೆಯಾದುದು ಹೇಗೆ? ಎಂಬ ಅನುಮಾನ ಬರುವುದು ಸಹಜ. ಮಾದೇಶ್ವರ ಕುಂತೂರು ಮಠದ ಸ್ವಾಮಿಗಳೊಡನೆ ಮುನಿದುಕೊಂಡು ಬೆಟ್ಟದ ಕಡೆಗೆ ಮುಖ ಮಾಡಿದಾಗ ಸ್ವಾಮಿಗಳು ಮಾದೇವನನ್ನು ಕರತರಲಟ್ಟಿದ ಶೇಷಣ್ಣ ಹಾಗೂ ಬಸವಣ್ಣ ಹಿಂದಿರುಗಿ ಹೋಗದೆ, ಬರಲೊಪ್ಪದ ಮಾದೇಶ್ವರನ ಜೊತೆಯಲ್ಲೇ ಏಳು ಮಲೆಗೆ ನಡೆದರೆಂಬುದು ಸರಿಯಷ್ಟೆ. ಮಾದೇಶ್ವರನ ಕಾಲದಲ್ಲಿ ಅವರು ಸಾಲೂರುಮಠದ ಮೇಲ್ವಿಚಾರಕರಾಗಿದ್ದು ಮಾದೇಶ್ವರನ ನಂತರ ಅವರು ಕುಂತೂರು ಮಠದ ಸಂಬಂಧವನ್ನು ಕಡಿದುಹಾಕಿಕೊಳ್ಳದೆ ಉಳಿಸಿಕೊಂಡು ಬಂದರೆಂದು ಕಾಣುತ್ತದೆ. ಇದರಿಂದಾಗಿ ಸೋಲಿಗರ ಮಠ ಕುಂತೂರುಮಠದ ಶಾಖೆಯಾದುದಲ್ಲದೆ ಸಾಲೂರು ಮಠವಾಗಿಯೇ ಉಳಿದು ಬಂದಿದೆ.

ಸಾಲೂರು ಮಠದಲ್ಲಿ ಬ್ರಾಹ್ಮಣರು ಲಿಂಗಾಯಿತರು ಒಕ್ಕಲಿಗರನ್ನುಳಿದು ವಿಶೇಷವಾಗಿ ಹರಿಜನರಿಗೆ ಅಲ್ಲದೆ ಉಪ್ಪಲಿಗರು, ಗಂಗೇಮತದವರು, ಕುರುಬರು ಮುಂತಾದ ಹಿಂದುಳಿದವರಿಗೆಲ್ಲ ಗುಡ್ಡರ ದೀಕ್ಷೆಯನ್ನು ಕೊಡಲಾಗುತ್ತದೆ. ದೀಕ್ಷೆಯನ್ನು ಪಡೆದವರು ದೇವರ ಗುಡ್ಡರಾಗುತ್ತಾರೆಯೇ ವಿನಾ ವೀರಶೈವರಾಗುವುದಿಲ್ಲ, ಗುಡ್ಡರುಗಳ್ಯಾರೂ ಲಿಂಗವನ್ನು ಧರಿಸುವುದಿಲ್ಲ; ಒಂದು ರುದ್ರಾಕ್ಷಿಯನ್ನು ಕುತ್ತಿಗೆಗೆ ಕಟ್ಟಿಕೊಳ್ಳುತ್ತಾರೆ. ಮಾದೇಶ್ವರ ಭಿಕ್ಷೆ ಮಾಡಲು ಬಳಸುತ್ತಿದ್ದ 'ಬಿರುದು' ಕಂಚಿನ ಕಂಸಾಳೆಯನ್ನು ದೇವರು ಗುಡ್ಡರು ನುಡಿಸುತ್ತ ಮಾದೇಶ್ವರನ ಮಹಿಮೆಗಳನ್ನು ಹಾಡಿ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಾರೆ. ಮಂಟೇಸ್ವಾಮಿಯ ನೀಲಗಾರರ ಸಂಪ್ರದಾಯವೂ ಗುಡ್ಡರ ಸಂಪ್ರದಾಯವನ್ನೇ ಹೋಲುತ್ತದೆ. ವೀರಶೈವರ್ಯಾರೂ ಗುಡ್ಡರದೀಕ್ಷೆಯನ್ನು ಸ್ವೀಕರಿಸುವುದಿಲ್ಲ. ಗುಡ್ಡರಂತೆ ಕಂಸಾಳೆ ನುಡಿಸುತ್ತ ಮಾದೇಶ್ವರನನ್ನು ಸ್ತುತಿಸಿ ಭಿಕ್ಷೆ ಮಾಡುವುದಿಲ್ಲ. ಮಾದೇಶ್ವರನೇ ನಡೆಯುತ್ತಿದ್ದ ರೀತಿಯಲ್ಲಿ ಆ ಮಠಾಧಿಪತಿಗಳೂ ಕಂಸಾಳೆ ಬಳಸಿ ಭಿಕ್ಷೆ ಮಾಡಿ ಜೀವನ ನಡೆಸುವ ಸ್ಥಿತಿಯಲ್ಲಿಲ್ಲ. ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆದಾಗ ಅರ್ಚಕರಿಗೆ ನೆರವಾಗುತ್ತಾರಂತೆ.

೬

ಸಾಲೂರು ಮಠದ ಸ್ವಾಮಿಗಳು ಮಾದೇಶ್ವರನ ಅರ್ಚಕರಲ್ಲ. ಮಾದೇಶ್ವರನ ಪೂಜೆ ಮಾಡುವುದಕ್ಕಾಗಿಯೇ ಮೀಸಲಾಗಿರುವ ಒಂದು ಜನಾಂಗವಿದೆ. ಇವರನ್ನು ತಮ್ಮಡಿಗಳೆಂದು ಕರೆಯುತ್ತಾರೆ. ಈ ತಮ್ಮಡಿಗಳು ತಾವು ಬೇಡರ ಕಣ್ಣಪ್ಪನ ವಂಶಜರೆಂದು ಹೇಳಿಕೊಳ್ಳುತ್ತಾರೆ. ಇವರನ್ನು ಬ್ಯಾಡಗಂಪಣದ ಶಿವಾಚಾರದವರೆಂದೂ ಕರೆಯುತ್ತಾರೆ. ಇವರಿಗೂ, ವೀರಶೈವರಿಗೂ ಕೊಡುವ ತರುವ ಯಾವ ಸಂಬಂಧಗಳೂ ಇಲ್ಲ. ಮಠಾಧಿಪತಿಗಳ ನೆರವಿನಿಂದ ಇವರ ಕುತ್ತಿಗೆಗಳಲ್ಲೂ ಬೆಳ್ಳಿ ಕರಡಿಗೆಗಳು ಮಿನುಗುತ್ತವೆ. ಮೂಲದಲ್ಲಿ ಬೇಡರಾಗಿದ್ದ ಇವರಿಗೆ ಮಾದೇಶ್ವರ ಶೈವದೀಕ್ಷೆಯನ್ನು ಕೊಟ್ಟು ಶಿಷ್ಯರನ್ನಾಗಿ ಮಾಡಿಕೊಂಡಂತೆ ತಿಳಿದುಬರುತ್ತದೆ. ಇವರಲ್ಲಿ ಪ್ರಧಾನವಾಗಿ ಕಾಳಮಾದವಡೆಯ, ಬೋಳಮಾದವಡೆಯ, ಕೆಂಪಮಾದವಡೆಯರ ಸಂತಾನದ ಮೂರು ಒಕ್ಕಲುಗಳಿವೆ. ಇವರ ಸಂತತಿ ಗೇರುಮಾಳ, ಹಾಸನೂರು, ತಟ್ಟೆಬಾಗಿಲು ಮುಂತಾದ ಸ್ಥಳಗಳಲ್ಲೆಲ್ಲ ಹರಡಿಕೊಂಡಿವೆ. ಈ ಮೂರು ಒಕ್ಕಲಿನವರು ಮಾದೇಶ್ವರನ ಪೂಜೆಯನ್ನುನಾಲ್ಕು ನಾಲ್ಕು ತಿಂಗಳುಗಳು ಹಂಚಿಕೊಂಡಿದ್ದಾರೆ. ಇವರು ಇತರ ವೇಳೆಯಲ್ಲಿ ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸುತ್ತಿದ್ದರೂ ತಮ್ಮ ಪೂಜಾ ಅವಧಿಯ ಹೊತ್ತಿಗೆ ಸರಿಯಾಗಿ ಮಾದೇಶ್ವರನ ಬೆಟ್ಟದಲ್ಲಿರುವ ತಮ್ಮಡಿಗೇರಿಗೆ ಹಾಜರಾಗುತ್ತಾರೆ.

ಮಾದೇಶ್ವರನ ದೇವಾಲಯವನ್ನು ಕಟ್ಟಿಸಿದವನು ಆಲಂಬಾಡಿಯ ಕುರುಬಗೌಡ ಜುಂಜೇಗೌಡ ಎಂಬುವನು. ಮಾದೇಶ್ವರನ ಎಣ್ಣೆಮಜ್ಜನ ಮಾಡುವವರು ಸರಗೂರಿನ ಉಪ್ಪಲಿಗಸೆಟ್ಟರು. ಇವರು ಮಾದೇಶ್ವರನ ಸಿಸುಮಕ್ಕಳಾದ ಮೂಗಪ್ಪ ರಾಮವ್ವೆಯರ ವಂಶದವರು. ಆದರೆ ಇವರು ಶೈವರಂತೆ ವಿಭೂತಿ ಧರಿಸುವುದಿಲ್ಲ. ಬದಲಾಗಿ ವೈಷ್ಣವರಂತೆ ನಾಮ ಹಚ್ಚಿಕೊಳ್ಳುತ್ತಾರೆ. ಭಕ್ತರು ಮಾದೇಶ್ವರನಿಗೆ ಬೆಳೆದ ಬೆಳೆಯನ್ನು ಮೀಸಲು ಮಾಡುವುದಲ್ಲದೆ ಕೋಳಿ ಕುರಿ ಆಡು ದನಕರುಗಳನ್ನು ತಂದೊಪ್ಪಿಸುತ್ತಾರೆ. ತಮಿಳು ಭಕ್ತ

ನೊಬ್ಬ ಹಾಡಿರುವ ಜನಪದ ಗೀತೆಯಲ್ಲಿ ಮಾದೇಶ್ವರನಿಗೆ ಮಾಂಸದಡಿಗೆ ಮಾಡಿ ಬಡಿಸಿದ್ದಾನೆ.

ಅಯ್ಯ–ಕರಿಕೊಳಂಬು ವೈತ್ರೆನ್ ಮಾದಪ್ಪ
ಅಯ್ಯ–ಸಾವಾಡ ವಾಂಗಳಯ್ಯ ಮಾದಪ್ಪ ।

ಮಾತಂಗಿಯ ಮಗ ಮಾರ್ಕಂಡೇಯ ಮಹರ್ಷಿ ಯೂಗುವುದಾದರೆ ಮಾದಿಗರ ಮಾದೇಶ್ವರನೂ ಜನಾದರಣೀಯ ವ್ಯಕ್ತಿಯಾಗಿ ಜಾನಪದ ಜಗದ್ಗುರುವಾದದ್ದು ಅಸಹಜವೆನಿಸುವುದಿಲ್ಲ ಅಲ್ಲವೆ ?

ಮಾದೇಶ್ವರ ಯಾವ ಮತಗಳ ಅಥವಾ ಮತಗಳ ಜಗತ್ತಿನ ಗುರುವೂ ಅಲ್ಲ, ಅವನು ಏನಿದ್ದರೂ ಜಾನಪದ ಜಗದ್ಗುರು.

ಅಡಿ ಟಿಪ್ಪಣಿಗಳು

1. ನಿರಂಜನ ವಂಶ ರತ್ನಾಕರ. ಸಂ : ಫ. ಗು. ಹಳಕಟ್ಟಿ. ಶಿವಾನುಭವ ಗ್ರಂಥಮಾಲಾ. ವಿಜಾಪುರ. (೧೯೩೨) ಪು. ೧
2. ಓ. ಎನ್. ಲಿಂಗಣ್ಣಯ್ಯ. ಶೂನ್ಯ ಸಿಂಹಾಸನ. (೧೯೬೮) ಪು. ೧೦೫
3. ನಿರಂಜನ ವಂಶ ರತ್ನಾಕರ. ಪು. ೧೬
4. ಓ.ಎನ್. ಲಿಂಗಣ್ಣಯ್ಯ. ಪೂರ್ವೋಕ್ತ ಪು. ೧೨೨
5. ಅದೇ. ಪು. ೨೧೨
6. ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳು. ಸಂ : ಆರ್. ಸಿ. ಹಿರೇಮಠ. ಪು. ೪
7. ಫ. ಗು. ಹಳಕಟ್ಟಿ. ಪೂರ್ವೋಕ್ತ. ಪು. ೧೮
8. ಓ.ಎನ್. ಲಿಂಗಣ್ಣಯ್ಯ. ಪೂರ್ವೋಕ್ತ ಪು. ೨೧೧
9. ಅದೇ. ಪು. ೧೪೩
10. ಅದೇ. ಪು. ೧೪೪
11. ಅದೇ. ಪು. ೨೧೨

11ಎ. ಎಂ. ಜಿ. ನಂಜುಂಡಾರಾಧ್ಯ : ಸಿದ್ದಪ್ಪಶಾಸ್ತ್ರಿಗಳ 'ಮಲೆ ಮಹದೇಶ್ವರ ನಿಜ ಪುರಾಣ'ಕ್ಕೆ ಬರೆದ ಮುನ್ನುಡಿ. (೧೯೭೦) ಪು. ೪

12. ಎಂ. ಜಿ. ನಂಜುಂಡಾರಾಧ್ಯ. ಸಿದ್ದಪ್ಪಶಾಸ್ತ್ರಿಗಳ ಮಲೆ ಮಹದೇಶ್ವರ ನಿಜಪುರಾಣ'ಕ್ಕೆ ಬರೆದ ಮುನ್ನುಡಿ. (೧೯೭೦) ಪು. ೪
13. ನೋಡಿ : ೧. ಧರೆಗೆ ದೊಡ್ಡವರ ಕಾವ್ಯದ ಪ್ರಸ್ತಾವನೆ. ಸಂ: ಶಮುಂಪಮೂರ್ತಿ. ೨. ಮಲೆಯ ಮಾದೇಶ್ವರ. 'ಆದಿಶಕ್ತಿ ಸಾಲು' ಸಂ : ಪಿ. ಕೆ. ರಾಜಶೇಖರ
14. ಹ. ಕ. ರಾಜೇಗೌಡ. 'ಮಲೆಯ ಮಾದೇಶ್ವರ ಗ್ರಂಥದಲ್ಲಿಯ ಮಿಥ್ಯಾರೋಪಗಳು' ಲೇ : ಹಜಶಿವಶಂಕರಪ್ಪ ಶ್ರೀ ಮಹದೇಶ್ವರಸ್ವಾಮಿಯ ಇತಿಹಾಸ ಸಂಶೋಧನಾ ಸಂಸ್ಥೆ. ಮಧುವನಹಳ್ಳಿ. (೧೯೭೮) ಪು. ೬-೭
15. ಹಜಶಿವಶಂಕರಪ್ಪ. ಅದೇ. ಪು. ೩೪
16. ಡಾ. ಜೀಶಂಪ : ಡಾ. ಎಂ.ಎಸ್. ಸುಂಕಾಪುರ ಅವರು ಸಂಪಾದಿಸಿರುವ ಜಾನಪದ ಸಾಹಿತ್ಯದರ್ಶನ ಭಾಗ :೪ ರಲ್ಲಿನ ಲೇಖನ. ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ (೧೯೭೮) ಪು. ೧೮೧
17. ಹಜಶಿ. ಅದೇ. ಪು. ೩೨
18. ಅದೇ. ಪು. ೬
19. ಅದೇ ಪು. ೨೪–೨೬
20. ಬಿ. ಶಿವಮೂರ್ತಿ ಶಾಸ್ತ್ರಿ. ಶ್ರೀ ಮಾದೇಶ್ವರ ಚರಿತ್ರೆ. (೧೯೬೯) ಪು. ೯
21. ಅದೇ. ಅಲ್ಲೇ.
22. ಅದೇ. ಪು. ೧೦
23. ಹಜಶಿ. ಪೂರ್ವೋಕ್ತ ಪು. ೨೫
24. ಅದೇ. ಪು. ೧೬

ಅಂದು . . ಇಂದು . . ನಾಳೆ

ಅಪ್ಪ ಹಾಕಿದ
ಆಲಕ್ಕೆ
ನೇಣು ಬಿಗಿದ್ದ
ನಾವು

ಅಂದು :
ಒದೆಯುವವರಿಗೆ ಚೆಂಡು ;
ಒಡ್ಡುವವರಿಗೆ ಲಗ್ಗೆ,
ಮಲಗುವವರಿಗೆ ಹಾಸಿಗೆ ;
ಒರಗುವವರಿಗೆ ದಿಂಬು

ಇಂದು:
ಎದ್ದು ನಿಂತಿದ್ದೇವೆ ;
ನೊಂದು ಬರೆಯುತ್ತಿದ್ದೇವೆ.

ನಾಳೆ :
ಒದ್ದು ಹೇಳುತ್ತೇವೆ
ನಾವು ನಿಮ್ಮಪ್ಪನ ಮಕ್ಕಳಲ್ಲ,
ನೀವು ನಮ್ಮಪ್ಪನ ಮಕ್ಕಳೆಂದು.

ದಾರಿದೀಪಪುಟ್ಟರಾಮು

ಡಾ. ರಫೀಕ್ ಮತ್ತು ರೈತ ಚಳುವಳಿ

ಪ್ರಸ್ತುತ ವಿದ್ಯಮಾನಗಳ ಬಗ್ಗೆ, ಯಾವುದೇ ಆಗುಹೋಗುಗಳ ಬಗ್ಗೆಯೂ ಕಳಕಳಿಯಿಂದ ಪ್ರತಿಕ್ರಿಯಿಸಬಲ್ಲ ರಾಜ್ಯಶಾಸ್ತ್ರದ ಡಾ॥ ವೈ. ರಫೀಕ್ ಅಹಮದ್ ಅವರ ಜೊತೆ ಇತ್ತೀಚೀನ ರೈತ ಚಳುವಳಿ ಕುರಿತು ಮಾತಾನಾಡಿದಾಗ "ಯಾವುದೇ ಚಳುವಳಿಗಳು ಆಳುವ ವರ್ಗದ ವಿರುದ್ಧವಿದ್ದರೆ ನಾವದನ್ನು ಮಾನ್ಯ ಮಾಡಬಹುದು. ನಿಜ, ಆದರೆ ಬೆಳೆಯುತ್ತಿರುವ ಚಳುವಳಿ ಯಾರ ಪರವಾಗಿದೆ ? ಎಂದು ಚಿಂತಿಸುವುದು ತೀರ ಅಗತ್ಯ. ನಾನು ಈ ಚಳುವಳಿಯ ಆಳಕ್ಕೆ ಹೊಕ್ಕು ನೋಡದಿದ್ದರೂ, ಇದರ ಕಾರ್ಯಕ್ರಮ, ಬೇಡಿಕೆ ಮತ್ತು ಚಳುವಳಿಯ ಪರಿಣಾಮಗಳನ್ನು ನಾನು ಬಹಳ ಎಚ್ಚರಿಕೆಯಿಂದಲೇ ಗಮನಿಸಿದ್ದೇನೆ.

ರೈತಸಂಘ ಜಮೀನ್ದಾರರ, ಹಿತಾಸಕ್ತಿಗಳನ್ನು ಮಾತ್ರ ಕಾಪಾಡ ಬಲ್ಲಂತಹ ಸಂಘಟನೆ ಎಂದು ನನಗನಿಸುತ್ತದೆ. ಈ ಚಳವಳಿ ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಬಲ್ಲದಷ್ಟೆ ಅಲ್ಲದೆ, ಅಪರೋಕ್ಷವಾಗಿ ಕೂಲಿ ಕಾರ್ಮಿಕರ ಆದರಲ್ಲೂ ಸಮಾಜದ ಕೆಳಸ್ಥರದಲ್ಲಿರುವ ಹರಿಜನರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ ಎಂದು ಹೇಳಬಲ್ಲೆ.

ಬೆಳೆಯುತ್ತಿರುವ ದಲಿತ ಚಳುವಳಿ ಕುರಿತು ನಾನು ಹೇಳುವುದು–ಅದು ಇಂಡಿಯಾದ ಒಟ್ಟು ಬದಲಾವಣೆಗೆ ಸಮರ್ಥ ಮತ್ತು ಅತ್ಯಂತ ಅಗತ್ಯವಾದ ಚಳುವಳಿ. 'ಶ್ರೀಮಂತರ ಚಳುವಳಿ ಇದ್ದ ಮೇಲೆ ಬಡವರ ಚಳುವಳಿ ಬೇಕೇ ಬೇಕು' ಬಡವರೇ ಸಂಘಟನೆ ಯಾಗದಿದ್ದರೆ ಅವರ ಸಮಸ್ಯೆಗೆ ಕಣ್ಣು ಹಾಯಿಸುವವರಾರು ? ಆದ್ದರಿಂದ ಭೂಹೀನ, ಕೂಲಿ ಕಾರ್ಮಿಕರ, ದಲಿತರ ಚಳುವಳಿ ಬೆಳೆಯಬೇಕು. ಅಷ್ಟೆ ಅಲ್ಲ, ಅದು ಪ್ರಬಲ ಚಳುವಳಿಯಾಗುವವರೆವಿಗೂ ರೈತ ಸಂಘದ ಬೇಡಿಕೆಗಳನ್ನು ಪರಿಹರಿಸಲು ಸರ್ಕಾರ ಕ್ರಮಕೈಗೊಂಡರೆ, ಅದು ಕೂಲಿಕಾರರಿಗೆ ಅನ್ಯಾಯ ಮಾಡಿದಂತೆಯೂ ಮತ್ತು ಸರ್ಕಾರ ಜಮೀನ್ದಾರರ ಪರವಾಗಿದೆ ಎನ್ನುವುದನ್ನು ಸ್ಪಷ್ಟಮಾಡಿಕೊಟ್ಟಾಂತಾಗುತ್ತದೆ.

ರೈತ ಚಳುವಳಿಯ ಮುಂಚೂಣಿಯಲ್ಲಿರುವ ಬುದ್ಧಿಜೀವಿಗಳೆನಿಸಿಕೊಂಡಂತಹ ನಂಜುಂಡಸ್ವಾಮಿಯವರಂತಹ ಜನ ಹೀಗೆ ಜಮೀನ್ದಾರರನ್ನು ಸಂಘಟಿಸಿ ಅವರ ಬಗ್ಗೆ ಕಳಕಳಿಯಿಡುವ ಜೊತೆಗೆ ಕೂಲಿಕಾರ್ಮಿಕರ ದಲಿತರ ಸಂಘಟನೆ ಮಾಡಿ ಅವರ ಬಗ್ಗೆ ಏಕೆ ಕಳಕಳಿ ತೋರಿಸಬಾರದಿತ್ತು ? ಎಂದು ಡಾ॥ ರಫೀಕ್ ನೊಂದು ನುಡಿಯುತ್ತಾರೆ.

—ರಾಕ್ಷ

ರೈತಸಂಘ ಜಮೀನ್ದಾರರ, ಹಿತಾಸಕ್ತಿಗಳನ್ನು ಮಾತ್ರ ಕಾಪಾಡಬಲ್ಲಂತಹ ಸಂಘಟನೆ ಎಂದು ನನಗನ್ನಿಸುತ್ತದೆ. ಈಚಳುವಳಿ ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳ ಬಲ್ಲದಷ್ಟೇ ಅಲ್ಲದೆ, ಅಪರೋಕ್ಷವಾಗಿ ಕೂಲಿಕಾರ್ಮಿಕರ ಅದರಲ್ಲೂ ಸಮಾಜದ ಕೆಳಸ್ತರದಲ್ಲಿರುವ ಹರಿಜನರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ ಎಂದು ಹೇಳಬಲ್ಲೆ.

. . . . ರೈತ ಚಳುವಳಿಯ ಹಿಂದೆ ಮುಂದೆ . . . .

● ಎನ್. ಎಸ್. ಶಂಕರ್

ಅವರು ದಲಿತ ರೈತ ಚಳವಳಿಗಳೆರಡನ್ನೂ ತಮ್ಮ ಕಂಡುಂಡ ಅನುಭವದ ಹಿನ್ನೆಲೆಯಲ್ಲಿ ನೋಡುತ್ತ ತಮ್ಮನ್ನು ಕುರಿತು ನೋವೆ ಮಾತಾಡುವಂತೆ ಒಲವಿನಿಂದ ಬರೆದಿರುವುದು ಇಲ್ಲಿದೆ :

ಈ ಘಟನೆ ನಡೆದಿದ್ದು ಹೋದ ವರ್ಷ–ತಿಂಗಳು ಯಾವುದೋ ಮರೆತಿದ್ದೇನೆ. ಅಂದು ಸಂಜೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ರೈತ ಚಳುವಳಿ ಬಗ್ಗೆ ರಾಜ್ಯ ರೈತಸಂಘ ವಿಚಾರ ಸಂಕಿರಣ ಏರ್ಪಡಿಸಿತ್ತು. ಶಿವಮೊಗ್ಗ ಹಾಸನ ಮತ್ತಿತರ ಕಡೆಗಳಿಂದ ರೈತಮಿತ್ರರೂ ಸಾಕಷ್ಟು ಮಂದಿ ಬಂದಿದ್ದರು. ಗೆಳೆಯರಾದ ಇಂದೂಧರ ಹೊನ್ನಾಪುರ ಹಾಗೂ ಕೆ. ರಾಮಯ್ಯನವರಿಗೂ ಮಾತಾಡಲು ಕರೆದಿದ್ದರು.

ಸಭೆ ಆರಂಭವಾದಾಗ, ಮೊದಲಿಗೆ ಪ್ರೊ॥ ಎಂ. ಡಿ. ನಂಜುಂಡಸ್ವಾಮಿಯವರು ಪೀಠಿಕಾರೂಪದಲ್ಲಿ ಮಾತನಾಡಿ “ಸಮಗ್ರ ಸಾಮಾಜಿಕ ಪರಿವರ್ತನೆ ರೈತ ಚಳುವಳಿಯ ಗುರಿ. ಎಲ್ಲಾ ಬಗೆಯ ಶೋಷಣಾಸಂಬಂಧಗಳ ನಾಶ ರೈತ ಚಳುವಳಿಯ ಗುರಿ” ಎಂದು ಚಳುವಳಿಯ ಪರಿಚಯ ಮಾಡಿಕೊಟ್ಟರು. ಅಂದು ಸುಮಾರು ಜನ ಭಾಷಣಕಾರರಿದ್ದರೂ, ಈ ಅಮೂರ್ತ ತಾತ್ವಿಕ ವಿವರಣೆಯನ್ನು, ನನಗೆ ನೆನಪಿರುವ ಹಾಗೆ, ಮೂರ್ತವಾದ ಸಂಶಯಗಳ ಮೂಲಕ ಎದುರಿಸಿ, ಕೆಲವು ಸ್ಪಷ್ಟನೆ ಪಡೆಯಲು ಮತ್ತು ನೀಡಲು ಯತ್ನಿಸಿದವರು ರಾಮಯ್ಯ ಮತ್ತು ಇಂದೂಧರ ಇಬ್ಬರೇ. ವೇದಿಕೆ ಮೇಲೆ ಅಂಥಾ ಮೋಹಕ ಮಾತುಗಾರನೇನೂ ಅಲ್ಲದ ರಾಮಯ್ಯ (ಸ್ವಲ್ಪ ಅಳುಕಿನಿಂದಲೇ ಅಂತ ಕಾಣುತ್ತೆ) ರೈತರು ಮತ್ತು ದಲಿತರ ಸಂಬಂಧಗಳ ಪ್ರಶ್ನೆಯೆತ್ತಿದ. ಅವನು ಆರಂಭಿಸಿದ್ದನ್ನೇ ಇಂದೂಧರ ಇನ್ನಷ್ಟು ನಿಖರವಾಗಿ, ತನ್ನ ಮಾಮೂಲಿನ ಲೀಲಾಜಾಲವಾದ ಗಟ್ಟಿದನಿಯಲ್ಲಿ ಸ್ಪಷ್ಟವಾಗಿ ಸಭೆಯ ಮುಂದಿಟ್ಟ.

“ರೈತ ಚಳವಳಿ ಕೇವಲ ಆರ್ಥಿಕ ಲಾಭಕ್ಕೆ ಸೀಮಿತವಾದ ಟ್ರೇಡ್‌ಯೂನಿಯನ್ ಹೋರಾಟಗಳ ಥರ ಆಗಬಾರದು. ತನ್ನ ಸದಸ್ಯರ ಆಂತರಿಕ ಶಿಸ್ತು ಮತ್ತು ಮನುಷ್ಯತ್ವದ ಬೆಳವಣಿಗೆಗೂ ಮಹತ್ವ ಕೊಡಬೇಕು. ಹಾಗಾಗದಿದ್ದರೆ, ಈಗಿನ ಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಹೆಚ್ಚಿನ ಅಧಿಕಾರ ಕೊಟ್ಟರೆ (ರೈತಸಂಘದ ಬೇಡಿಕೆಗಳಲ್ಲಿ ಇದೂ ಒಂದು) ಅದು ಮೇಲ್ವರ್ಗದ ಪಾಲಾಗಿ, ದಲಿತರು ಇನ್ನಷ್ಟು ತುಳಿತಕ್ಕೆ ಒಳಗಾಗುತ್ತಾರೆ... ....” ಇದು ಅವರಿಬ್ಬರ ವಾದದ ಸಾರಾಂಶ. ಈ ಮಾತು ರೈತನಾಯಕರ ಪ್ರಾಮಾಣಿಕತೆ ಬಗ್ಗೆ ವ್ಯಕ್ತವಾದ ಗುಮಾನಿಯಲ್ಲ ಎನ್ನುವುದಕ್ಕೆ ಇಂದೂಧರ “ಮಹಾತ್ಮಗಾಂಧಿ ಶಿಷ್ಯರೆಲ್ಲರೂ ಮಹಾತ್ಮಾಗಾಂಧಿಗಳಾಗಲಿಲ್ಲ. ಅದೇ ರೀತಿ ರೈತನಾಯಕರ ದೊಡ್ಡತನ ಅವರ ಹಿಂಬಾಲಕರೆಲ್ಲರಿಗೂ ದಕ್ಕಿತೆನ್ನುವ ಭರವಸೆಯಿಲ್ಲ” ಎಂಬ ಬಿಚ್ಚುನುಡಿಯನ್ನೂ ಆಡಿದ.

ನಿಜಕ್ಕೂ ಸಭೆಯ ನಡಾವಳಿ ಕೌತುಕಮಯವಾದದ್ದು. ಈ ಮಾತುಗಳು ಹೊರಬಿದ್ದ ಮೇಲೆ ಒಮ್ಮೆಲೇ ಹೆಚ್ಚೂಕಮ್ಮಿ ಇಡೀ ಸಭೆ ಎದ್ದುನಿಂತು ‘ರೈತಚಳವಳಿಗೂ–ಇದಕ್ಕೂ ಸಂಬಂಧವಿಲ್ಲ’ ಎಂದು ಪ್ರತಿಭಟಿಸತೊಡಗಿತು. ಅದೂ ವ್ಯವಸ್ಥಿತವಾದ, ತಾಳ್ಮೆಯಿಂದ ಕೂಡಿದ ಸಹೃದಯ ಭಿನ್ನಾಭಿಪ್ರಾಯವೂ ಅಲ್ಲ. “ಹೋ” ಎಂಬ ಅರಚಿಕೆ, ಒಬ್ಬರ ಮಾತುಗಳು ಇನ್ನೊಬ್ಬರ ಕೂಗಿನೊಡನೆ ಕಲಸಿ ಬಿದ್ದಾಡಿ ಒಮ್ಮೆಲೇ ಮಹಾಗೊಂದಲದ ಗದ್ದಲ ಎದ್ದಂತಾಯಿತು. ಸ್ವಲ್ಪ ಹೊತ್ತಾದ ಮೇಲೆ ಇದೇ ಗಲಾಟೆ ಹಿನ್ನೆಲೆಯಲ್ಲಿ ಸಭಿಕರ “ಸಂದೇಹಗಳಿಗೆ” ಉತ್ತರ ಕೊಡಲು ಇಂದೂಧರನನ್ನು ಮತ್ತೆ ಕರೆದಾಗ ಅವನು ಅತಿ ಸಮಂಜಸವಾಗಿ ಇಡೀ ದೃಶ್ಯವನ್ನು ವರ್ಣಿಸಿದ್ದು ಹೀಗೆ– “ನಮ್ಮೂರಲ್ಲಿ ನಮ್ಮಕ್ಕ ತಂಗಿಯರನ್ನು ‘ದೊಡ್ಡವರು’ ಯಾರಾದರೂ ಕೆಡಿಸಿದರೆ ನಮ್ಮ ಪ್ರತಿಭಟನೆ ತೋರುವಂಥ ಸಂದರ್ಭದಲ್ಲಿ, ನಮ್ಮಾ ಧ್ವನಿಯನ್ನು ಮುಚ್ಚಿಹಾಕಲು ಏಳುವ ಗದ್ದಲದ ಹಾಗಿದೆ ನಿಮ್ಮ ಕೂಗು. ಇದು ನಿಮ್ಮ ಶತಮಾನಗಳ ಕೊಬ್ಬು ಮತ್ತು ಅಹಂಕಾರದ ಫಲ” ಆದರೆ ನೇರಮರ್ಮಕ್ಕೆ ನಾಟುವ ಇಂಥ ಮಾತೂ ಕೂಡ ಸಭೆಯನ್ನು ಇನ್ನಷ್ಟು ರೊಚ್ಚಿಗೆಬ್ಬಿಸುವಲ್ಲಿ ಮಾತ್ರ ಯಶಸ್ವಿಯಾಯಿತು. ನಂಜುಂಡಸ್ವಾಮಿಯವರ ಕೆಲವು ಸಹಾನುಭೂತಿಪರ ಮಾತುಗಳ ಹೊರತಾಗಿ ಇನ್ನಾರೂ ಇಂದೂಧರ–ರಾಮಯ್ಯನ ನಿಲುವು ಒಪ್ಪುವುದಿರಲಿ, ಅವರನ್ನು ಅರ್ಥಮಾಡಿಕೊಳ್ಳಲೂ ಖಡಾಖಂಡಿತವಾಗಿ ನಿರಾಕರಿಸಿಬಿಟ್ಟದ್ದು ಚಳವಳಿಯ ಬಗ್ಗೆ ನನ್ನಲ್ಲಿ ಮೊದಲ ಬಾರಿ ಅನುಮಾನ ಹುಟ್ಟಲು ಕಾರಣವಾಯಿತು.......

ಇದಾಗಿ ವರ್ಷದ ಮೇಲಾಗಿದೆ. ಈ ಅವಧಿಯಲ್ಲಿ ನಾನು ಚಳವಳಿಯ ದೊಡ್ಡ ಸಾಧನೆಗಳನ್ನೂ ಕಂಡಿದ್ದೇನೆ. ಹಾಸನ ಜಿಲ್ಲೆಯಲ್ಲಂತೂ ಇಡೀ ಅಧಿಕಾರಶಾಹಿ ಹೇಗೆ ಮಳಗಿ ಜನತೆಗೆ ಸ್ಪಂದಿಸಲಾರಂಭಿಸಿದೆ ಎನ್ನುವುದನ್ನೂ ಮೆಚ್ಚುಗೆಯಿಂದ ನೋಡಿದ್ದೇನೆ. ಅಲ್ಲಿ ಚಳವಳಿಯ ಮುಂಚೂಣಿಯಲ್ಲಿರುವ ದತ್ತ, ವೆಂಕಟೇಶಮೂರ್ತಿ ಮುಂತಾದ ಸ್ನೇಹಿತರ ಹುರುಪು ಚೇತನ, ಚಿಂತನೆ–ನಮ್ಮಲ್ಲಿ ಅನೇಕರನ್ನು ಮುದಗೊಳಿಸಿರುವುದೂ ಉಂಟು.

ಇದಕ್ಕೆ ಸಮಾಂತರದಲ್ಲಿ ಬಾಳ್ಳುಪೇಟೆಯ ‘ದುರಂತ’ ನಮ್ಮ ಕಣ್ಣ ಮುಂದೆಯೇ ಇದೆ. ರೈತಸಂಘದ ವಿಚಾರಸಂಕಿರಣ ಹುಟ್ಟಿಸಿದ ಅನುಮಾನಗಳನ್ನೇ ಮತ್ತಷ್ಟು ಪುಷ್ಟೀಕರಿಸುತ್ತಾ, ಒಂದು ಸಾಮುದಾಯಿಕ ಸಂಘಟನೆಯಾಗಿ ರೈತಸಂಘ ವರ್ತಿಸಿದ ರೀತಿಯನ್ನು ಪ್ರಶ್ನಿಸುತ್ತಿದೆ. ಹಾಗಾದಿ “ಸಮಾಜದ ಸಮಗ್ರ ಬದಲಾವಣೆಯ” ಸಂಕಲ್ಪ ತೊಟ್ಟ ರೈತಚಳವಳಿಯ ದಿಕ್ಕುದೆಸೆಗಳ ವಿವೇಚನೆಗೆ ಬಾಳ್ಳುಪೇಟೆಯ ಗಾಯಗಳ ಇನ್ನೂ ಮಾಯದ ಈಗಿನಂಥ ಸ್ಥಿತಿ ಸಕಾಲ ಎನ್ನಿಸುತ್ತದೆ.

ಸಮಾಜದ ವಿಕಾಸಶೀಲ ನಡೆಯನ್ನು ನಿರ್ಬಂಧಿಸುವ ಪ್ರಚಲಿತ ಯುಗಧರ್ಮ ಮತ್ತು ಅದನ್ನು ಮೀರಲೆಳಸುವ ವ್ಯಕ್ತಿಗತ ಮಾನವೀಯ ಚೇತನ ನಡುವಣ ಸೆಣಸಾಟ,–ಯಾವುದೇ ಆಂದೋಳನದ ದಿಕ್ಕು–ಮಿತಿಗಳನ್ನು ನಿರ್ಧರಿಸುತ್ತದೆ. ಈ ತಾಕಲಾಟ ರೈತಚಳವಳಿಯ ಸಂದರ್ಭದಲ್ಲಿ ಹೋದ ವರ್ಷದ ಸಂಕಿರಣದಲ್ಲಿನ ಸೂಚ್ಯರೂಪದಿಂದ–ಬಾಳ್ಳುಪೇಟೆಯ ಮೂರ್ತರೂಪದವರೆಗೆ ಬೆಳೆದು ಬಂದಿದೆ ಎನ್ನಬಹುದು.

ವಿಚಾರಸಂಕಿರಣದಲ್ಲಿ ರಾಮಯ್ಯ–ಇಂದೂಧರನ ಮೇಲೆ ಹರಿಹಾಯ್ದವರು ಅವರನ್ನು ಚೆನ್ನಾಗಿ ಬಲ್ಲ ಗೆಳೆಯರೇ ಎಂಬುದನ್ನು ಮರೆಯಬಾರದು. ಅವರುಗಳು ಸಭಿಕರಾಗಿದ್ದಾಗ, – ವೈಯುಕ್ತಿಕ ತುಡಿತಗಳು ಮಬ್ಬಾದ ಒಂದು ನಿರಾಕಾರ ಗುಂಪಾಗಿದ್ದಾಗ ಪ್ರತಿನಿಧಿಸುತ್ತಿದ್ದುದು ಯುಗಧರ್ಮವನ್ನು– ಅಂದರೆ ಜಾತಿ– ಒಂದು ಸಾಮೂಹಿಕ ಸ್ವಭಾವವಾಗಿ ತಳೆಯುವ ಕರಾಳತೆಯನ್ನು, ಅದೇ ಜನರೇ ತಮ್ಮ ವೈಯಕ್ತಿಕ ಸಜ್ಜನಿಕೆಯನ್ನು ಸಭೆ

ಮುಗಿದ ಮೇಲೆ ಆಚೆ ಇಂದೂಧರನೊಡನೆ ಮತ್ತೆ ವಾದಿಸುವಾಗ, ತಂತಮ್ಮ ಸುಪರಿಚಿತ ನೆಲೆಯಲ್ಲಿಯೇ ತರ್ಕಬದ್ಧವಾಗಿ ಚರ್ಚಿಸತೊಡಗುವ ಮೂಲಕ ತೋರಿಸಿದ್ದೂ ಆಕಸ್ಮಿಕವೇನಲ್ಲ.

ಈ ದ್ವಂದ್ವವೇ ಮತ್ತೆ ಬಾಳ್ಳುಪೇಟೆ ಪ್ರಕರಣದಲ್ಲಿ ಹೆಡೆಯೆತ್ತಿತು. ರೈತನಾಯಕರು ವೈಯುಕ್ತಿಕ ಮಟ್ಟದಲ್ಲಿ ದಲಿತರ ಸ್ವಾಭಿಮಾನಕ್ಕೆ ಒತ್ತಾಸೆಯಾಗಿ ನಿಲ್ಲುವ ಮನೋಭಾವದವರೇ ಆದರೂ, ರೈತ 'ಸಂಘ' ದಲಿತರನ್ನು ತುಳಿಯುವ ಶಕ್ತಿಗಳದ್ದಾಗಿತ್ತು. ಇದನ್ನು ನಮ್ಮ ಚಾರಿತ್ರಿಕ ಸಂದರ್ಭದ ಪರಿಮಿತಿಯೆಂದೇ ಒಪ್ಪಿಕೊಳ್ಳೋಣ. ಆದರೆ ಅದನ್ನು ಮೀರುವ ಸೆಳೆತವನ್ನು – ಏಕಮನಸ್ಕಥಲವನ್ನು 'ನಾಯಕರು' ತೋರಿದರೇ ? ತೋರುತ್ತಿದ್ದಾರೆಯೇ ?....... ಇದಕ್ಕೆ ಉತ್ತರ ಹುಡುಕುವ ಹೊಣೆಯನ್ನು ಅವರಿಗೇ ಬಿಡುತ್ತೇನೆ.

ಸದ್ಯಕ್ಕಂತೂ 'ಸಾಮೂಹಿಕ ನಾಯಕತ್ವ'ದ ಕಲ್ಪನೆ ನಮ್ಮ ಮಟ್ಟಿಗೆ ಒಂದು ಸುಂದರ ಕನಸಾಗಿ ಉಳಿದಿದೆ. ಇದಕ್ಕೆ ನನ್ನ ಪ್ರಕಾರ, ಪರಿವರ್ತನೆಯ ಆಶಯಗಳು ಮತ್ತು ಅವನ್ನು ನಿರಾಕರಿಸುವ ಕಾಲಧರ್ಮಗಳ ನಡುವೆ ಇರುವ ಅಗಾಧ ಕಂದಕವೇ ಕಾರಣ. ಬದಲಾವಣೆಯ ಹಂಬಲ ಏಕಕಾಲದಲ್ಲಿ ಎಲ್ಲರಲ್ಲೂ ಬೀಜರೂಪದಲ್ಲಾದರೂ ವ್ಯಕ್ತವಾಗುತ್ತಿದ್ದರೆ, ಅದನ್ನು ಮೊಳೆಯಿಸುವ ಆಂದೋಳನಕ್ಕೆ ಸೀಮಿತ ಅರ್ಥದಲ್ಲಾದರೂ 'ಸಾಮೂಹಿಕ ನಾಯಕತ್ವ' ಸಾಧ್ಯ. ಪರಿಸ್ಥಿತಿ ಹಾಗಿಲ್ಲವಾದ್ದರಿಂದ ಕ್ರಾಂತಿಕಾರಿ ಉದ್ದೇಶಗಳಿಗೆ ತಮ್ಮನ್ನು ಕೊಟ್ಟುಕೊಂಡ ನಾಯಕರೇ, ತಮ್ಮ ಬದುಕಿನ ಉದಾಹರಣೆ ಮೂಲಕ ಇತರರನ್ನು ಬೆಳೆಸುವ, ಎಲ್ಲರನ್ನೂ ಬೆಚ್ಚಗಿನ ಐಕ್ಯದಲ್ಲಿ ಬೆಸೆದು ಮುನ್ನಡೆಸುವ ಹೊಣೆ ಹೊರಬೇಕಾಗುತ್ತದೆ. ಹಾಗಾಗಿಯೇ ನಮಗೆ ಗಾಂಧೀಜಿ ಬೇಕಾಗುತ್ತಾರೆ, ಅಂಬೇಡ್ಕರ್ ಬೇಕಾಗುತ್ತಾರೆ. ಅದೇ ವೇಳೆಗೆ ಇಂಥ ವ್ಯಕ್ತಿಕೇಂದ್ರಿತ ನಾಯಕತ್ವಕ್ಕೂ ತನ್ನದೇ ಮಿತಿಗಳೂ ಇವೆ. ಉದಾಹರಣೆಗೆ ನಮ್ಮಲ್ಲಿ ಗಾಂಧೀ ನಂತರದ ಗಾಂಧಿಗಳಿಲ್ಲ, ಅಂಬೇಡ್ಕರ್ ನಂತರದ ಅಂಬೇಡ್ಕರ್‌ಗಳಿಲ್ಲ. ಅಂಥ ನಾಯಕರ ಅನುಭವ ಎಲ್ಲರ ಅನುಭವವಾಗಲು ಸಾಧ್ಯವಾಗಲೂ ಇಲ್ಲ. ಅದು ಹೇಗೇ ಆದರೂ ಮನುಷ್ಯತ್ವದ ಉನ್ನತಿಯ ಹಾದಿಯಲ್ಲಿ ಅಂಥ ನಾಯಕರೂ ಬೇಕು ಎನ್ನುವುದನ್ನೂ ಅಲ್ಲಗಳೆಯುವಂತಿಲ್ಲ. ಅದರಿಂದಾಗಿಯೇ ರೈತನಾಯಕರಿಗೂ ಅವರ ವ್ಯಕ್ತಿತ್ವದ ಎತ್ತರಕ್ಕೂ ಇಷ್ಟೊಂದು ಪ್ರಾಮುಖ್ಯ ಹಚ್ಚಿ ನಿರೀಕ್ಷಿಸಬೇಕಾಗಿದೆ. ಬಾಳ್ಳುಪೇಟೆ– ಆ ಮುಂದಾಳುಗಳ ಆತ್ಮಸಾಕ್ಷಿಯನ್ನು ಬುಡಮಟ್ಟ ಶೋಧಿಸಿ, ಅದರ ಬೆಳಕಿನಲ್ಲಿ ನಾವು ಉದಾತ್ತ ಮಾನವೀಯ ತ್ಯಾಗವನ್ನು–ಮನುಷ್ಯತ್ವದ ಕ್ರಿಯಾತ್ಮಕ ಕಸುವನ್ನು ಕಾಣುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು !..........

ಆ ಆಸೆಯನ್ನು ನಾನಿನ್ನೂ ಬಿಟ್ಟುಕೊಟ್ಟಿಲ್ಲ;

೨

ಸಾಮೂಹಿಕ ನಾಯಕತ್ವ ಸಾಧ್ಯವಾಗುವುದು ಯಾವಾಗ ? ಅಥವಾ ವ್ಯಕ್ತಿಗಳನ್ನು ಮೀರಿದ ಇಂಗಿತಗಳೇ ಸಮಾಜದ ಮುನ್ನಡೆಯನ್ನು ನಿರ್ಣಯಿಸಲು ಯಾವಾಗ ಶಕ್ಯವಾಗಬಹುದು ?

ಪ್ರಾಯಶಃ ಈ ವ್ಯವಸ್ಥೆಯಲ್ಲಿ 'ನಾಯಕರ' ಪಾತ್ರ ಮುಗಿದಾದಮೇಲೆ ಎಂದು ಕಾಣುತ್ತದೆ. ಚಲನಶೀಲತೆ–ಸಮಾಜದಲ್ಲಿ ಅಂತರ್ಗತವಾದ ಸಾವಯವ ಶಕ್ತಿಯಾಗಿ ವಿಕಾಸ ಹೊಂದಿದಾಗ ; ಅಂದರೆ ಜನಸಾಮಾನ್ಯರಲ್ಲಿ ವ್ಯಕ್ತಿನಿಷ್ಠ ಭದ್ರತೆಯ ಕಲ್ಪನೆಗೂ–ಸಾಮಾಜಿಕ ಸಾಮರಸ್ಯದ ಬಯಕೆಗಳಿಗೂ ದೊಡ್ಡ ವಿರಸವಿಲ್ಲದೆ ಹೋದಾಗ ಅಂಥ ಸಾಧ್ಯತೆಯನ್ನು ಕಾಣಬಹುದೇನೋ. ಇದನ್ನೇ ಕಮ್ಯೂನಿಸ್ಟರ ಪರಿಬಾಷೆಯಲ್ಲಿ ಹೇಳುವುದಾದರೆ, ಬೂರ್ಜ್ವಾ ಕ್ರಾಂತಿ ಪೂರ್ಣಗೊಂಡ ನಂತರ ಎನ್ನಬಹುದು. ಸಾಮೂಲಾಗ್ರ ಪರಿವರ್ತನೆ ಅತಿಹೆಚ್ಚು ಅರ್ಥವತ್ತಾಗುವುದು ದಲಿತಾತಿದಲಿತರಿಗೆ. ಅವರದೇ ಮುಂದಾಳ್ತನದ ಅನಿವಾರ್ಯತೆಯನ್ನು ಇಡೀ ಸಮಾಜ ಮನಗಂಡಾಗ ; ಹಾಗೆತಿಳಿಯುವುದೇ ಯುಗಧರ್ಮವಾದಾಗ, ಸಾಮುದಾಯಿಕ ಸತ್ವವೇ ಮಹತ್ವದ್ದಾಗುತ್ತದೆಂದು ನನ್ನ ನಂಬಿಕೆ. ಆದರೆ ಅಲ್ಲಿಯವರೆಗೆ ಬೇರೆ ವರ್ಗಗಳಿಂದ ಬರುವ ಬದಲಾವಣೆಯ ಹಂಬಲಗಳು ಆ ಅಂತಿಮ ಗುರಿಗೇ ಪೂರಕವಾಗಬೇಕಾಗುತ್ತದೆ.

ಕೃಷಿಯನ್ನು ಬದಿಗೊತ್ತಿ ಕೈಗಾರಿಕೋದ್ಯಮಿಗಳ ಹಿತಾಸಕ್ತಿಗಳನ್ನು ಮೆರೆಸುತ್ತಿರುವ ಈಗಿನ ಆರ್ಥಿಕ ಹಂದರದಲ್ಲಿ, ಕೃಷಿ ಮೂಲದಿಂದ ಪುಟಿದ ಚಳವಳಿ ಅರ್ಥಪೂರ್ಣವಾದುದೇನೋ ಸರಿ. ಆದರೆ ಅದರಲ್ಲೂ ಶೋಷಿತ ವರ್ಗಗಳಾದ ಕೃಷಿ ಕೂಲಿಕಾರರು (ಸಾಮಾಜಿಕವಾಗಿ ಆರ್ಥಿಕವಾಗಿ ಅವರೇ ದಲಿತರಲ್ಲವೇ ?) ಮುಂತಾದವರೇ ಆಂದೋಳನದ ದೀವಟಿಗೆ ಹಿಡಿಯುವವರೆಗೆ ಆರ್ಥಿಕ ಸಂಬಂಧಗಳ "ಸಮಗ್ರ" ಮರುವಿನ್ಯಾಸ ಅಸಾಧ್ಯ. ಆದ್ದರಿಂದ ಈಗಿನ ಚಳವಳಿಯ ಫಲಕ ಭೂಮಾಲೀಕರ ಕೈಯಲ್ಲೇ ಇದ್ದರೂ, ಅವರೂ ಸಹ ತಮ್ಮ ಕೆಳಗಿನ ಜಾತಿ/ವರ್ಗಗಳನ್ನು ಬೆಳೆಸುವ ಕೆಲಸಕ್ಕೆ ಕೈ ಹಚ್ಚಲೇಬೇಕು.

ಇಲ್ಲದಿದ್ದರೆ ಆಗುವ ಅನಾಹುತಗಳು ಎರಡು : 1. ರೈತ ಚಳವಳಿಯೂ ಕೇವಲ ಸ್ವಾರ್ಥಕ್ಕಾಗಿ ನಡೆಯುವ ಬಡಿದಾಟವಾಗಿ ಚಳವಳಿಯ ಘೋಷಣೆಗಳಿಗೆ ಅವಮಾನವಾಗುತ್ತದೆ. 2. ಈ ಚಳವಳಿ, ಎಲ್ಲ ಆಂದೋಲನಗಳಿಗೆ ಅಗತ್ಯವಾದ ಹೋರಾಟಗಾರರೆಲ್ಲರ ಭಾವಬಂಧ ಮತ್ತು ದಿಟ್ಟತನಗಳನ್ನು ಪಡೆಯಂದೆ, ಚಳವಳಿ ಎಂಬ ಬಿರುದಿಗೇ ಅನರ್ಹವಾಗಿ ಶಿಥಿಲಗೊಳ್ಳುತ್ತದೆ. (ಈಗಾಗಲೇ ಬಡರೈತರ ಸಂಘವೊಂದು ಅಸ್ತಿತ್ವಕ್ಕೆ ಬಂದಿದೆ).

ರೈತಸಮುದಾಯದ ಒಟ್ಟಾರೆ ಆತ್ಮಬಲವನ್ನು ಭಾವೈಕ್ಯವನ್ನು ಹೇಗೆ ಸಾಧಿಸಬಹುದೆನ್ನಲು ನನ್ನ ನಮ್ರ ಸಲಹೆಯನ್ನು ಇಲ್ಲಿ ರೈತಮಿತ್ರರ ಅವಗಾಹನೆಗೆ ತರಬಯಸುತ್ತೇನೆ,

ಗುರಿ ಮತ್ತು ಮಾರ್ಗಗಳ (ಗಾಂಧೀಜಿ ಪ್ರತಿಪಾದಿಸಿದ) ಜೈವಿಕ ಅನ್ಯೋನ್ಯತೆ ನಮಗೆಲ್ಲರಿಗೂ ತಿಳಿದದ್ದೇ. ಗುರಿಯು ಮಾರ್ಗವನ್ನೂ, ಮಾರ್ಗವು ಗುರಿಯನ್ನೂ-ಪರಸ್ಪರ ನಿರ್ಧರಿಸುತ್ತವೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಸೂಚನೆ : ಎಲ್ಲರ ಸಮಾನತೆ ರೈತ ಚಳವಳಿ ವ್ಯಕ್ತಪಡಿಸಿರುವ ಉದ್ದೇಶವಲ್ಲವೇ ? ಆದ್ದರಿಂದ ಈಗಿನಿಂದಲೇ ಸಮಾನತೆಯಲ್ಲಿ ಪ್ರಯೋಗಗಳನ್ನು ಆರಂಭಿಸಬಾರದೇಕೆ ?

ಸಮಾನತೆ ಎಂದರೆ ಆರ್ಥಿಕ ಸಮಾನತೆ ಮಾತ್ರವೇ ಅಲ್ಲವಾದರೂ, ಎಲ್ಲ ಸಮಾನತೆಯೂ ಪ್ರಾರಂಭವಾಗುವುದು ಆರ್ಥಿಕ ಸಮಾನತೆಯಿಂದಲೇ ಎಂಬುದನ್ನಂತೂ ಒಪ್ಪಲೇಬೇಕು. ಆದ್ದರಿಂದ ರೈತಚಳವಳಿಯಲ್ಲಿ ತೊಡಗಿರುವ ಭೂಮಾಲೀಕರಲ್ಲಿ ಹೆಚ್ಚು ಜಮೀನುಳ್ಳವರು, ಅದರ ಸ್ವಲ್ಪ ಭಾಗವನ್ನಾದರೂ ಭೂಹೀನರೊಡನೆ ಹಂಚಿಕೊಳ್ಳಲಿ. ಹಾಗೆ ಸಂಗ್ರಹವಾದ ಭೂಮಿಯನ್ನು ಬೇಕಾದರೆ ಸರಕಾರಿ ಕೃಷಿಗೆ ಒಳಪಡಿಸಬಹುದು. ಇದು ಯಶಸ್ವಿಯಾದರೆ, ಒಟ್ಟು ಭೂಮಿಯ ಸಾಮೂಹಿಕ ಸಾಗುವಳಿಯ ಕಡೆ ಹೆಜ್ಜೆ ಹಾಕಬಹುದು. ಆದರೆ ಈ "ಭೂದಾನ" ಸ್ವಯಂಪ್ರೇರಿತವಾಗಿದ್ದರೆ ಮಾತ್ರ ಸಾರ್ಥಕವಾದೀತು. (ಭೂಸುಧಾರಣೆಯಂಥ ಸರ್ಕಾರಿ ಕಾರ್ಯಕ್ರಮಗಳು ಸೋತಿವೆಯಲ್ಲ ?)

ಈ ಸಾಧನೆಯಿಂದ ದೊರೆಯುವ ಪ್ರಯೋಜನಗಳನ್ನು ನೋಡೋಣ :

ಸರ್ಕಾರದ ಜನದ್ರೋಹಿ ನಿಲುವುಗಳನ್ನು ವಿರೋಧಿಸುವ ಕೆಲಸ ರೈತಸಂಘಕ್ಕೆ ಈಗಾಗಲೇ ಅನಿವಾರ್ಯವಾಗಿದೆ. ಆದರೆ ಸರ್ಕಾರದಿಂದ ಸವಲತ್ತುಗಳನ್ನು ಪಡೆದು, ಅದನ್ನು 'ಮರುಪಾವತಿ' ಮಾಡದಿದ್ದರೆ, ಅಂಥ ಧೈರ್ಯವನ್ನು 'ದರೋಡೆ' ಎಂದೇ ಪರಿಗಣಿಸಬೇಕಾಗುತ್ತದೆ. ಈ ವಾದವನ್ನು ಒಪ್ಪದವರಿಗಾಗಿ 'ಸರ್ಕಾರ'ದ ಬದಲು 'ಜನತೆ' ಪದವನ್ನು ಬಳಸಬಹುದು. ಜನರು ತೆರಿಗೆಮೂಲಕ ರೈತರಿಗೆ ಒದಗಿಸಬಹುದಾದ ಸೌಕರ್ಯಗಳನ್ನು ರೈತರು ಯಾವ ರೂಪದಲ್ಲಾದರೂ ಜನರಿಗೆ ಹಿಂತಿರುಗಿಸದಿದ್ದರೆ, ರೈತ ಚಳವಳಿಯೂ "ಜನದ್ರೋಹಿ" ಯಾಗದೇ ?

ಇದರಿಂದ ಹೊರಡುವ ಅರ್ಥವಿಷ್ಟೇ : ರೈತರು

ಅಸ್ಪೃಶ್ಯ ಜನಾಂಗದ ಮಹಾ ಸಮ್ಮೇಳನ

ಮೈಸೂರಲ್ಲಿ ಅಸ್ಪೃಶ್ಯ ಜನಾಂಗ ಜಾಗೃತ ಸಮಿತಿ ರೂಪುಗೊಂಡಿದ್ದು ಅದು ಇಡೀ ಕರ್ನಾಟಕದ ಅಸ್ಪೃಶ್ಯ ಜನಾಂಗವನ್ನು ಒಟ್ಟಿಗೆ ಸೇರಿಸಿ ಮಹಾ ಸಮ್ಮೇಳನವೊಂದನ್ನು ಸಧ್ಯದಲ್ಲೇ ಜರುಗಿಸಿ ಅಲ್ಲಿ ಜನಾಂಗದ ಒಟ್ಟಾರೆ ಹಿತಕ್ಕಾಗಿ ಹೆಜ್ಜೆಗಳನ್ನು ರೂಪಿಸಲು ಸಜ್ಜಾಗುತ್ತಿದೆ.

"ಅಧರ್ಮದ ನಾಡಲ್ಲಿ ಧರ್ಮದ ಬೆಳಕಾದ ಬುದ್ಧಂಗೆ ಶರಣು, ಪುರಾತನ ಹೋರಾಟ ಮಾದಾರ ಮಲೇಮಾದೇಶ್ವರಂಗೆ ಶರಣು, ಅಸಮಾನತೆಗೆ ಸೆಟೆದು ನಿಂತ ತಂದೆ ಅಂಬೇಡ್ಕರಂಗೆ ಶರಣು"—ಈ ರೀತಿಯಾಗಿ ತನ್ನ ಕರಪತ್ರವನ್ನು ಆರಂಭಿಸಿರುವ ಜಾಗೃತ ಸಮಿತಿಯು—

"ನಾವು ಭಾರತದಲ್ಲಿ ಅಸ್ಪೃಶ್ಯರಾಗಿ ಹುಟ್ಟಿದ ಪ್ರಯುಕ್ತವಾಗಿ ನಮ್ಮ ಜನಾಂಗವನ್ನು ಒಂದು ಕಡೆಯಿಂದ ಧರ್ಮ ಜಾತಿ ಅಸ್ಪೃಶ್ಯತಾ ಅವಮಾನಗಳೂ ಇನ್ನೊಂದು ಕಡೆಯಿಂದ ಹಸಿವು ಬಡತನ ಕೊಲೆಗಳೂ ನಮ್ಮನ್ನು ತಿನ್ನುತ್ತ ಬರುತ್ತಿವೆ.

ಹೀಗಿರುವಾಗ ಚದರಿ ಚೆಲ್ಲಿಹೋಗಿರುವ ಅಸ್ಪೃಶ್ಯರು ಒಟ್ಟುಗೂಡುವುದು ಮತ್ತು ನಮ್ಮ ಜನಾಂಗದ ಹಸಿವು ಅವಮಾನಕ್ಕೆ ಸ್ಪಂದಿಸುವುದು ಇಂದಾದರೂ ಆಗಬೇಕಾಗಿದೆ.

ಜನಾಂಗದ ಹೆಸರಿನಲ್ಲಿ ಅಲ್ಪಮಟ್ಟಿಗಾದರೂ ಮುಂದೆ ಬಂದಿರುವ ವಿದ್ಯಾವಂತರಾದ ನಾವು ಜನಾಂಗದಲ್ಲಿ ಜಾಗೃತಿ ಉಂಟುಮಾಡಲು ಪ್ರಯತ್ನ ಮಾಡುವುದು ನಮ್ಮಗಳೆಲ್ಲರ ಕರ್ತವ್ಯವಾಗಿರುತ್ತೆ. ಈ ಕರ್ತವ್ಯಭಾರವು ಸ್ವಲ್ಪವಾದರೂ ಜೀವನದಲ್ಲಿ ಬೆಳಕು ಕಂಡಿರುವ ವಿದ್ಯಾವಂತರಾದ ನಮ್ಮ ನಿಮ್ಮೆಲ್ಲರ ಮೇಲಿದೆ" ಎಂದು ಕರೆ ನೀಡಿದೆ.

ಹೆಚ್ಚಿನ ವಿವರಕ್ಕೆ ಹಾಗೂ ಸಹಾಯ ಸಹಕಾರ ನೀಡುವವರು–ಎಲ್. ಹೆಚ್. ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ 'ಅಸ್ಪೃಶ್ಯ ಜನಾಂಗ ಜಾಗೃತ ಸಮಿತಿ' 101, ಇಂಡಸ್ಟ್ರಿಯಲ್ ಸಬರ್ಬ್, 1ನೇ ಸ್ಟೇಜ್ 5ನೇ ಮೆಯಿನ್ ರೋಡು, ವಿದ್ಯಾರಣ್ಯಪುರಂ, ಮೈಸೂರು–570008 ರವರಿಗೆ ಬರೆದು ತಿಳಿಸಬೇಕೆಂದು ವಿನಂತಿಸಲಾಗಿದೆ.

ಸರ್ಕಾರವನ್ನು ಧಿಕ್ಕರಿಸುವುದಿದ್ದರೆ ಸರ್ಕಾರದ ಸಹಾಯವನ್ನೂ ಧಿಕ್ಕರಿಸಬೇಕಾಗುತ್ತದೆ. ಅಂದರೆ ಸರ್ಕಾರದ "ಮಧ್ಯ ಪ್ರವೇಶ" ವಿಲ್ಲದೆಯೇ ತಮ್ಮ ಕಾರುಭಾರು ನಡೆಸಲು ಸಮರ್ಥರಾಗಬೇಕಾಗುತ್ತದೆ. ಉದಾಹರಣೆಗೆ ನ್ಯಾಯಾಲಯಗಳು ಮತ್ತು ಪೋಲೀಸ್ ಯಂತ್ರವನ್ನು ಬಹಿಷ್ಕರಿಸುವುದು ಅಂದರೆ ಅವುಗಳ ಅಗತ್ಯವೇ ಬೀಳದಂತೆ ತಂತಮ್ಮಲ್ಲೇ ಸರ್ವಸಮ್ಮತವಾದ ನ್ಯಾಯವಿತರಣೆ ಪದ್ಧತಿ ತರುವುದು–ಹೀಗೆ. ಅಂದಮಾತ್ರಕ್ಕೆ, ಪ್ರತಿಯೊಬ್ಬ ಪ್ರಜೆಗೂ ದೊರೆಯಬೇಕಾದ ಕನಿಷ್ಠ ಭದ್ರತೆಯನ್ನೂ ಪಡೆಯಬಾರದು ಎಂದು ನನ್ನ ವಾದವಲ್ಲ. ಆದರೆ ಅಷ್ಟನ್ನು ಬಿಟ್ಟು, ಸಾಧ್ಯವಾದಷ್ಟೂ "ಸ್ವಾವಲಂಬಿ" ಗಳಾಗಲು ಯತ್ನಿಸಬಹುದು. ಒಟ್ಟಾರೆ, ರೈತರು "ಪಡೆಯುವುದಕ್ಕೂ"-"ಕೊಡುವುದಕ್ಕೂ" ಗುಣಾತ್ಮಕ ಹೊಂದಾಣಿಕೆ, ತಾಳ–ಮೇಳ ಇರಲೇಬೇಕಾಗುತ್ತದೆ. ಏಕೆಂದರೆ ಸ್ವಾವಲಂಬನೆಯ ಆಯಾಮವಿಲ್ಲದ ಅಸಹಕಾರಕ್ಕೆ (ಕಾನೂನುಭಂಗ, ಸಾಲ ಮರುಪಾವತಿ ನಿರಾಕರಣೆ ಇತ್ಯಾದಿ) ಮರ್ಯಾದೆಯೇ ಇರುವುದಿಲ್ಲ... ... ಈ ಪ್ರಕ್ರಿಯೆಯಿಂದ ಅಂತಿಮವಾಗಿ ಸರ್ಕಾರದ ಅವಶ್ಯಕತೆಯೇ ನಶಿಸುವುದೆಂದು ಆಶಿಸಬಹುದು.

ಹೀಗೆ ಸರ್ಕಾರವನ್ನು, ಅಂದರೆ ರಾಜ್ಯ ವ್ಯವಸ್ಥೆಯನ್ನು ವಸ್ತುತಃ ಉದುರಿಸುವುದು ಮೊದಲ ಪ್ರಯೋಜನವಾದರೆ, ಎರಡನೆಯದು ಸ್ವಯಂ ಪೂರ್ಣ ಪರ್ಯಾಯ ರಚನೆ. ಅದೂ ಎಲ್ಲರ ನಡುವಣ ಸದ್ಭಾವನೆಯನ್ನೇ ತಳಹದಿಯಾಗಿ ಉಳ್ಳ ಪರ್ಯಾಯ. ಅದಕ್ಕೆ ಅಗತ್ಯವಾದ ಆಸ್ತಿಯ ಸಮಾಜೀಕರಣದ ಮುಖೇನ ಸರ್ವಾಂಗೀಣ ಸಮಾನತೆ ಹರಳುಗಟ್ಟಲಾರಂಭಿಸುತ್ತದೆ. ಮೊದಲೇ ಹೇಳಿದ ಹಾಗೆ, ಇದು ಸ್ವಯಂಸ್ಫೂರ್ತಿಯ ಫಲವಾಗಿದ್ದಲ್ಲಿ ಮಾತ್ರ, ಸಮಸ್ತ ಜನಸ್ತೋಮದ ಹಿತಚಿಂತನೆಯ ಹಿಡಿತ ಸಮಸ್ತ ಜನಸ್ತೋಮದ ಕೈಗೇ ದಕ್ಕಿದಂತಾಗುತ್ತದೆ........

ಇದು ಕೊನೆಗೂ ಅಸಾಧ್ಯದ ಅಪೇಕ್ಷೆಯೇ ಆಗಿರಬಹುದು. ಆದರೆ ಅಂಥ ಯತ್ನದಲ್ಲಿ ಸೋತರೂ ಕೂಡ ಆ ಸೋಲಿಗೂ ಒಂದು ಘನತೆಯಿರುತ್ತದೆ. ಕನಿಷ್ಠಪಕ್ಷ ಈ ಪ್ರಯತ್ನ ಸಾಮೂಹಿಕ ಚಿಂತನ ಕ್ರಮದಲ್ಲಿ ಬಿತ್ತುವ ಹೊಸ ಬೀಜಗಳಲ್ಲಿ ಕೆಲವಾದರೂ ಮೊಳೆತು ಅರಳಿ ನಿಲ್ಲುವುದನ್ನು ಎದುರು ನೋಡಬಹುದು.

ಇಂಥ 'ಸಾಹಸ' ಗಳ ಬಗ್ಗೆ ಯೋಚಿಸುವುದೇ ಅಗತ್ಯವಿಲ್ಲ ಎನ್ನುವುದಾದರೆ, ರೈತಚಳವಳಿ ನಿಜಕ್ಕೂ "ಸತ್ಯಾಗ್ರಹ" ವಾಗಲು ಮಾತ್ರ ಸಾಧ್ಯವಿಲ್ಲ.

—

"ಸುಗ್ಗಿಯ ಕನಸು"

ದಲಿತನೊಬ್ಬ ದುಡಿಯುತ್ತಿದ್ದಾನೆ
ಒಡೆಯನೊಲದಲ್ಲಿ
ಮಧ್ಯಾಹ್ನದ ಕೆಂಡದಂತ
ಬಿಸಿಲು ಅವನ ಬೆನ್ನ ಮೇಲೆ.
ಹಗಲೆನದೆ ರಾತ್ರಿ ಎನದೆ
ನಿದ್ದೆಗೆಟ್ಟು ಬೆವರು ಸುರಿಸಿ
ಕೊನೆಗೂ ಬಂತು ಸುಗ್ಗಿಯ ಕಾಲ.
ನಡುವಿನುದ್ದಕ್ಕೂ ಬೆಳೆದ ಬೆಳೆ
ನಗುನಗುತ್ತಾ ತಲೆದೂಗಿ ನಿಂತಾಗ
ಸಂತಸಗೊಂಡ ಒಡೆಯ
ಬೆಳೆ ಕೊಯ್ಯಲು ಅಪ್ಪಣೆ ಮಾಡಿದ.
ಕೊಯ್ದ ಬೆಳೆಯನ್ನೆಲ್ಲಾ ಒಪ್ಪಮಾಡಿ
ಒಡೆಯನ ದೊಡ್ಡ ಕಣಜಗಳೆರಡು
ತುಂಬಿದರೂ ದಲಿತನ ಮುರುಕು
ಗುಡಿಸಲಲ್ಲಿರುವ ಸಣ್ಣ ಕುಡಿಕೆಯಂತೂ
ತುಂಬಲೇ ಇಲ್ಲ
ಮತ್ತೆ ದಲಿತ ದುಡಿಯಹತ್ತಿದ
ಒಡೆಯನೊಲದಲ್ಲಿ ಮುಂದಿನ ಸುಗ್ಗಿಯ
ಕನಸು ಕಾಣುತ್ತಾ

—ಕೆ. ಎನ್. ಗುರುಪ್ರಸಾದ್

ಬರೀ ಅಸ್ಥಿಪಂಜರಗಳ ರೈತಸಂಘ ಮತ್ತು ದಲಿತಸಂಘ

ರೈತ ಚಳುವಳಿ ಮತ್ತು ದಲಿತ ಚಳುವಳಿಗಳ ಹೊರಗಿನ ಹೂರಣಗಳನ್ನೆಲ್ಲಾ ಬಲ್ಲ ನಮ್ಮ ಕೇಶವಪ್ರಸಾದ್ ಅತ್ಯಂತ ದುಃಖದಿಂದ ಬರೆಯುತ್ತಾರೆ : "ಎರಡೂ ಸಂಘಟನೆಗಳು ಪ್ರಾರಂಭದ ಹಂತದಲ್ಲಿದ್ದ ಬಿಸಿ ಮತ್ತು ಚಲನೆಯ ತೀವ್ರತೆಯನ್ನು ಕಳೆದುಕೊಂಡು ಬರಡಾದಂತೆ, ಕೇವಲ ಕೈಗಳ ಮೂಳೆಗಳು ಮಾತ್ರ ಎತ್ತರಿಸಿಪ್ರತಿಭಟಿಸುತ್ತಿವೆಯೇನೋ ಎಂಬಂತೆ ಒಮ್ಮೊಮ್ಮೆ ಭಾಸವಾಗುತ್ತದೆ"

ಕೆ. ಎಸ್ ಕೇಶವಪ್ರಸಾದ್

ಸಾಮಾಜಿಕ ಏಣಿಶ್ರೇಣಿಯಲ್ಲಿ ಕೆಳಸ್ತರದ ಶೂದ್ರ ಶಕ್ತಿಯ ಸಂಘಟನೆಯಾದ ರೈತ ಸಂಘಟನೆ ಮತ್ತು ದಲಿತ ಶಕ್ತಿಯ ಸಂಘಟನೆಯಾದ ದಲಿತ ಸಂಘರ್ಷ ಸಮಿತಿ ಕಳೆದ ದಶಕದಿಂದೀಚೆಗೆ ಕರ್ನಾಟಕದಲ್ಲಿ ರೂಪುಗೊಳ್ಳುತ್ತಿರುವ ಎರಡು ದೊಡ್ಡ ಎಡಪಂಥೀಯ ಧೋರಣೆಯ ಸಂಘಟನೆಗಳು. ಮೂಲಭೂತವಾಗಿ ಅಹಿಂಸಾತ್ಮಕ ಹೋರಾಟ ಸುಲಿಗೆಯಿಲ್ಲದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸಮಾಜದ ಗುರಿಯನ್ನಿಟ್ಟು ಕೊಂಡಿರುವ ಎರಡೂ ಸಂಘಟನೆಗಳು ಇವತ್ತು ಸಾವಿರಾರು ಹಳ್ಳಿಗಳಲ್ಲಿ ಒಂದು ರೀತಿಯಲ್ಲಿ ಮನುಷ್ಯ – ಮನುಷ್ಯರಲ್ಲಿರುವ ಪ್ರೀತಿ, ಸಿಟ್ಟು, ಅಸಮಾಧಾನಗಳನ್ನು ಕೆರಳಿಸಿವೆ. ಒಂದು ರೀತಿಯ ಸಾಮಾಜಿಕ ಕಾಳಜಿಯನ್ನು ಹುಟ್ಟಿಸಿವೆ.

ಶತಮಾನಗಳ ಕಾಲ ಅಸಂಘಟಿತರಾಗಿದ್ದ ಮತ್ತು ಸುಲಿಗೆಗೊಳಗಾಗಿದ್ದ ರೈತವರ್ಗದ ಸಂಘಟನೆ ರೈತಸಂಘದ ಗುರಿ. ಶತಮಾನಗಳಿಂದ ಮುಂದುವರೆದುಕೊಂಡು ಬಂದ ಅಸ್ಪೃಶ್ಯತೆಯ ವಿರುದ್ಧ, ಜಾತಿಯ ಕಾರಣಕ್ಕಾಗಿ ನಿರಂತರವಾಗಿ ನಡೆಯುತ್ತಿರುವ ಕೊಲೆ– ಸುಲಿಗೆ– ದೌರ್ಜನ್ಯ ಅತ್ಯಾಚಾರಗಳ ವಿರುದ್ಧ ದಲಿತರು ಮತ್ತು ಹಸಿದ ಜನತೆಯ ಸಂಘಟನೆ ದಲಿತ ಸಂಘರ್ಷ ಸಮಿತಿಯ ಗುರಿ.

ಎರಡೂ ಸಂಘಟನೆಗಳ ಕ್ರಾಂತಿಯ ನಂತರದ ವ್ಯವಸ್ಥೆ ಮತ್ತು ಕ್ರಾಂತಿಯ ಕಡೆಗೆ ಸಾಗುವಾಗಿನ ವ್ಯವಸ್ಥೆಯ ಬಗ್ಗೆ ಒಂದು ಪರಿಪೂರ್ಣ ಚಿತ್ರಣ-ಕಲ್ಪನೆಯೇ ನನಗೆ ಸಿಕ್ಕುತ್ತಿಲ್ಲವಾದ್ದರಿಂದ ಎರಡೂ ಸಂಘಟನೆಗಳು ಪ್ರಾರಂಭದ ಹಂತದಲ್ಲಿದ್ದ ಬಿಸಿ ಮತ್ತು ಚಲನೆಯ ತೀವ್ರತೆಯನ್ನು ಕಳೆದುಕೊಂಡು ಬರಡಾದಂತೆ– ಕೇವಲ ಕೈಗಳ ಮೂಳೆಗಳು ಮಾತ್ರ ಎತ್ತರಿಸಿ ಪ್ರತಿಭಟಿಸುತ್ತಿವೆಯೇನೋ ಎಂಬಂತೆ ಒಮ್ಮೊಮ್ಮೆ ಭಾಸವಾಗುತ್ತದೆ.

ಯಾಕೆಂದರೆ ಅಂಗವಿಕಲಗೊಂಡಿರುವ ನಮ್ಮ ಎಲ್ಲಾ ಹಳ್ಳಿಗಳ ಚಿತ್ರಣ ಕಣ್ಮುಂದೆ ಬಂದಾಗ ಎರಡೂ ಸಂಘಟನೆಗಳೂ ಕೂಡಾ ನಮ್ಮ ಹಳ್ಳಿಗಳ ಚಿತ್ರಣದಂತೆಯೇ ಅಂಗವಿಕಲಗೊಂಡಂತಿವೆ. ಒಂದು ಕಡೆ ಸವರ್ಣೀಯ ಜಾತಿಯ ಜನವೂ ಇನ್ನೊಂದು ಕಡೆ ಅಸ್ಪೃಶ್ಯ ಜಾತಿಯ ಜನವೂ ಬದುಕುತ್ತಿರುವ ಈ ವ್ಯವಸ್ಥೆಯ ಥರವೇ ಒಂದು ಕಡೆ ದಲಿತೇತರ ನಾಯಕತ್ವ ಮತ್ತು ಸಂಘಟನೆಯನ್ನು ಹೊಂದಿದ ರೈತಸಂಘ ಮತ್ತು ಇನ್ನೊಂದು ಕಡೆ ದಲಿತ ಸಂಘರ್ಷ ಸಮಿತಿ. ಈ ಚಿತ್ರಣದಲ್ಲಿ ಇವೆರಡೂ ಸಂಘಟನೆಗಳ ನಡುವಿನ ಅಂತರ ಇಷ್ಟೊಂದು ದೊಡ್ಡದಾಗಿ ಮತ್ತು ಸ್ಪಷ್ಟವಾಗಿ ಕಾಣಬೇಕಾದರೆ ಈ ಸಂಘಟನೆಗಳ ಆಸ್ತಿಸಂಬಂಧ (ಆರ್ಥಿಕ) ಮತ್ತು ಜಾತಿಸಂಬಂಧ (ಸಾಮಾಜಿಕ) ವಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳೇ ಕಾರಣ.

ಹಳ್ಳಿಗಳನ್ನು ಸುಲಿದ ನಗರಗಳ ವಿರುದ್ಧ, ರೈತವರ್ಗವನ್ನು ಸುಲಿದ ದಳ್ಳಾಳಿಗಳು ಮತ್ತು ನೌಕರಶಾಹಿ ವರ್ಗದ ವಿರುದ್ಧ ರೈತವರ್ಗದಸಂಘಟನೆಯೂ ಅಸ್ಪೃಶ್ಯತೆಯನ್ನು ಆಚರಿಸುವ ಸವರ್ಣೀಯರ ವಿರುದ್ಧ ಬಡಜನತೆಯನ್ನು ಮತ್ತು ಭೂರಹಿತ ಕೂಲಿಗಾರರನ್ನು ಕಿತ್ತು ತಿಂದ ಶ್ರೀಮಂತರು ಮತ್ತು ಭೂಮಾಲಿಕರ ವಿರುದ್ಧ ದಲಿತ ವರ್ಗದ ಸಂಘಟನೆಯೂ ಮೇಲ್ನೋಟಕ್ಕೆ ವರ್ಗ ಹೋರಾಟದ ಸಂಘಟನೆಗಳಂತೆ ಕಾಣುತ್ತವೆ. ಎಲ್ಲಾ ರೈತ ವರ್ಗವನ್ನು ಸಂಘಟಿಸುವಾಗ ಹರಿಜನರು ಮತ್ತು ಭೂರಹಿತರನ್ನು ಹೋರಾಟದಲ್ಲಿ ತೊಡಗಿಸಲು ರೈತ ಸಂಘಟನೆ ವಿಫಲವಾಗಿರುವುದು ಮತ್ತು ದ. ಸಂ. ಸಮಿತಿಯು ಸಾಮಾಜಿಕ ಸಮಸ್ಯೆಗಳನ್ನೇ ಕೈಗೆತ್ತಿಕೊಂಡರೂ ಎಲ್ಲಾ ಜಾತಿಯ ಬಡಜನತೆಯನ್ನು ಹೋರಾಟದಲ್ಲಿ ತೊಡಗಿಸಲು ವಿಫಲವಾಗಿರುವುದು ಮತ್ತು ಎರಡೂ ಸಂಘಟನೆಗಳು ಮುಸ್ಲಿಮರು ಮಹಿಳೆಯರು ಮತ್ತು ಇತರ ಅಲ್ಪಸಂಖ್ಯಾತ ಜಾತಿಗಳ ಶೇ 50ಕ್ಕೂ ಹೆಚ್ಚು ಜನರನ್ನು ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳದಿರುವುದು – ಇವುಗಳು ಕ್ರಾಂತಿಯತ್ತ ಸಾಗುವಾಗಿನ ಅಂದರೆ ಸಂಪೂರ್ಣ ಕ್ರಾಂತಿಯತ್ತ ಸಾಗುವಾಗಿನ ಸಂಘಟನೆಯ ಗರ್ಭದಲ್ಲಿ ಅಂಗವಿಕಲ ಶಿಶುವೊಂದು ರೂಪು ಪಡೆಯುತ್ತಾ ಹೋರಾಟದ ನಂತರ ಅಂಗವಿಕಲ ಶಿಶುವೊಂದನ್ನು ಮಾತ್ರ ಪಡೆಯಲು ಸಾಧ್ಯವಾಗುವ ಕಲ್ಪನೆಯನ್ನು ತರುತ್ತದೆ.

ವರ್ಗ ಹೋರಾಟದತ್ತ ತನ್ನ ಮನಸ್ಸನ್ನು ಕೇಂದ್ರೀಕರಿಸಿರುವ ರೈತಸಂಘ ರೈತ ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ, ಕೃಷಿ ಮತ್ತು ಕೈಗಾರಿಕೋತ್ಪನ್ನಗಳ ಬೆಲೆಗಳ ನಡುವೆ ಇರುವ ಅಂತರದ ನಿವಾರಣೆ, ಹಳ್ಳಿ ಮತ್ತು ನಗರದ ಬದುಕಿನ ಅಂತರದ ನಿವಾರಣೆ ಇವುಗಳನ್ನು ಗುರಿಯಾಗಿ ಇಟ್ಟುಕೊಂಡು ಈ ಮೂಲಕ ಸಮಾನತೆಯ ಸಮಾಜದ ಕಲ್ಪನೆಯನ್ನು ನಮ್ಮ ಮುಂದಿಡುತ್ತದೆ. ಇದರ ಪ್ರಕಾರ ಈಗಾಗಲೇ ಸಂಘವು ಸಾಲ ನಿರಾಕರಣೆ, ಲೆವಿ ನಿರಾಕರಣೆ, ತೆರಿಗೆ ನಿರಾಕರಣೆ, ಬೆಲೆ ನಿಗದಿಗಾಗಿ ಚಳುವಳಿ, ಲಂಚಕೋರ ನೌಕರರ ಘೇರಾವೊ, ಮೊದಲಾದ ಸೀಮಿತವಾದ ಹೋರಾಟ ನಡೆಸಿದೆ. ಜಾತಿ ಮತ್ತು ವರ್ಗ ಹೋರಾಟದ್ದೆಂದು ಹೇಳಲಾದ ದ. ಸಂ. ಸಮಿತಿ ಅಸ್ಪೃಶ್ಯತೆ ಆಚರಣೆಗಳ ವಿರುದ್ಧ, ಅಸಮಾನತೆಯ ವಿರುದ್ಧ ಪ್ರತಿಭಟನೆಗಳು, ದೌರ್ಜನ್ಯ-ಅತ್ಯಾಚಾರಗಳ ವಿರುದ ಜಾಥಾ ಮೊದಲಾದ ಕಾರ್ಯಕ್ರಮಗಳ ಮೂಲಕ ಜಾತಿವಾದದ ವಿರುದ್ಧ ಮತ್ತು ವರ್ಗವಿನಾಶಕ್ಕಾಗಿ ಹೋರಾಟ ನಡೆಸಿದೆ.

ಎರಡೂ ಸಂಘಟನೆಗಳು ಇಡೀ ಸಮಾಜದ ಒಟ್ಟು ವ್ಯವಸ್ಥೆಯನ್ನು ಬದಲಿಸುವ ಕ್ರಾಂತಿಕಾರಿ ಕಾಳಜಿಯನ್ನಿಟ್ಟುಕೊಂಡರೂ ಸಂಘಟನೆಯ ಕಾರ್ಯಕ್ರಮಗಳೇ ಬೇರೆಯಾಗಿರುವುದರಿಂದ ವಸ್ತುಸ್ಥಿತಿ ಮತ್ತು ಚಿಂತನೆ ಭಿನ್ನವಾಗುತ್ತದೆ.

ಹತ್ತು ಎಕರೆ ಸೀಲಿಂಗ್‌ನ ನಂತರ ದೊಡ್ಡ ರೈತ ಎಂಬ ಪ್ರಶ್ನೆ ಬರುವುದಿಲ್ಲ ಎಂಬ ಗೆಳೆಯರ ವಾದವನ್ನೂ, ಶ್ರೀಮಂತ ರೈತ–ಬಡ ರೈತ ಎಂಬ ವಿಂಗಡಣೆಯಿಂದ ರೈತ ಸಂಘಟನೆಯನ್ನೊಡೆಯುತ್ತಿರುವ ರಾಜಕಾರಣಿಗಳ ಕುತಂತ್ರಗಳನ್ನೂ ಎಚ್ಚರಿಕೆಯಿಂದ ಗಮನಿಸುತ್ತಾ ಆಸ್ತಿ ಸಂಬಂಧದ ಬಗ್ಗೆ ಹೇಳುವುದಾದರೆ–

ಹೆಚ್ಚು ಎಕರೆ ಹೊಂದಿರುವ ಶ್ರೀಮಂತ ಭೂಮಾಲಿಕ ಮತ್ತು ಕಡಿಮೆ ಎಕರೆ ಹೊಂದಿದ ಸಣ್ಣ ಭೂಮಾಲಿಕನನ್ನು ಸಂಘಟನೆಯ ದೃಷ್ಟಿಯಿಂದ ವರ್ಗದ ದೃಷ್ಟಿಯಿಂದ ಒಂದೇ ರೈತ ಎಂದುಕೊಂ

ತರೂ ಅವರ ನಡುವೆ ಇರುವ ವರ್ಗದ ಗರಿಷ್ಠ ಅಂತರ ಏನಿದೆಯೋ ಅದನ್ನು ಕಡಿಮೆ ಮಾಡಲು ರೈತಸಂಘದಲ್ಲಿ ಕಾರ್ಯಕ್ರಮಗಳು ಸಿಗುತ್ತಿಲ್ಲ. ಸಂಘಟನೆಯು ಭೂರಹಿತ ಕೃಷಿ ಕೂಲಿಗಾರರನ್ನೂ ಒಳಗೊಂಡರೂ ಭೂಸಮಸ್ಯೆ ನೀಗಿಸುವಲ್ಲಿ ವಿಫಲವಾಗುವ ಸಾಧ್ಯತೆಗಳೇ ಹೆಚ್ಚು. ಯಾಕೆಂದರೆ ಶೇ. 50 ಕ್ಕಿಂತ ಹೆಚ್ಚು ಭಾಗ ರೈತರು ಸಾಮಾನ್ಯವಾಗಿ ಬಲಿಷ್ಠ ಜಾತಿಯವರೇ ಆಗಿರುವುದರಿಂದ, ದಿನ ಬಳಕೆ ವಸ್ತುಗಳ ಬೆಲೆ ಸೂಚ್ಯಂಕವನ್ನಾಧರಿಸಿ ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿ ನಿಗದಿಯಾದರೂ ಕನಿಷ್ಠ ಕೂಲಿ ನೀಡಲಾರದ್ದಕ್ಕೆ ಮಾಲಿಕ ಮತ್ತು ಕಾರ್ಮಿಕನ ಸಂಬಂಧಗಳು–ಒಡೆಯ ಮತ್ತು ಗುಲಾಮನ ಸಂಬಂಧಗಳಂತಿರುವುದೇ ಕಾರಣವಾಗುತ್ತದೆ. ನೀರಾವರಿ ಆಧಾರಿತ ಪ್ರದೇಶಗಳಲ್ಲೂ ರೈತ ತನ್ನ ಉತ್ಪನ್ನಕ್ಕೆ ನ್ಯಾಯವಾದ ಬೆಲೆ ಕೇಳುವುದು ಅತ್ಯಂತ ಸಮಂಜಸವಾದ ಪ್ರಶ್ನೆಯಾದರೂ ನ್ಯಾಯವಾದ ಕೃಷಿ ಕೂಲಿ ನೀಡುವಲ್ಲಿ ಹಿಂಜರಿಯುತ್ತಾ ಹೋಗುವುದು ಅತ್ಯಂತ ದುರಂತದ ಸಮಾಚಾರವಾಗುತ್ತದೆ.

ಇಂತಹ ಸಮಸ್ಯೆಗಳನ್ನೆಲ್ಲಾ ನೋಡಿದಾಗ ಸೈದ್ಧಾಂತಿಕ ಸ್ಪಷ್ಟತೆ ಇರುವ ಸಂಘಟನೆಯ ನಾಯಕತ್ವ ತನ್ನದೇ ಆದ ಸುಧೀರ್ಘ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದರೂ ಆಸ್ತಿ ಸಂಬಂಧ ಮತ್ತು ಮೇಲ್ಜಾತಿಯ ಹಿತಾಸಕ್ತಿಯನ್ನಿಟ್ಟುಕೊಂಡ ಕೆಲವು ಶಕ್ತಿಗಳು ಸಂಘಟನೆಯಲ್ಲಿ ಆಶ್ರಯ ಪಡೆಯುತ್ತ ಹೋಗುತ್ತವೆ.

ದಲಿತ ಸಂಘರ್ಷ ಸಮಿತಿಯು ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಜಮೀನಿನ ಒಡೆತನದ ಬಗ್ಗೆ ಹೋರಾಟ ನಡೆಸಿರುವ ವಿರೋಧಾಭಾಸಗಳನ್ನು ಬಿಟ್ಟರೆ ಆಸ್ತಿ ಹಕ್ಕನ್ನು ರದ್ದುಗೊಳಿಸುವ ಒಟ್ಟು ದೃಷ್ಟಿಕೋನವನ್ನಿಟ್ಟುಕೊಂಡ ಸಂಘರ್ಷ ಸಮಿತಿ ನಾಯಕತ್ವ ತಾತ್ಕಾಲಿಕವಾದ ಯಾವ ಸುಧಾರಣೆಗಳಿಗೂ ಸಮ್ಮತಿಸುವುದಿಲ್ಲ ಎಂದು ಭಾವಿಸಿದ್ದೇನೆ. ರೈತ ಸಂಘದ ಭೂ ಆಕ್ರಮಣ ಚಳುವಳಿ ಮತ್ತು ಕೃಷಿ ಕೂಲಿಯ ಧೋರಣೆಗೂ, ಸಂಘರ್ಷ ಸಮಿತಿಯ ಭೂ ಒಡೆತನಕ್ಕಾಗಿ ನಡೆಸುವ ಹೋರಾಟ ಮತ್ತು "ಭೂಮಾಲಿಕರ ದೌರ್ಜನ್ಯಗಳ ವಿರುದ್ಧ ಧಿಕ್ಕಾರ" ದ ಕೂಗಿಗೂ ಒಟ್ಟಾರೆ ವ್ಯವಸ್ಥೆಯೇ ಕಾರಣವಾಗಿದೆಯೇ ವಿನಃ ಕಾರ್ಯಕ್ರಮದಲ್ಲಿ ತಪ್ಪಿಲ್ಲ ವೆನ್ನಿಸುತ್ತವೆ.

ತನ್ನದೇ ಆದ ಸೈದ್ಧಾಂತಿಕ ಸ್ಪಷ್ಟತೆಯನ್ನು ಪಡೆದ ಎರಡೂ ಸಂಘಟನೆಯ ನಾಯಕತ್ವಗಳಲ್ಲಿ ರೈತ ಸಂಘ ಮಧ್ಯಮ ವರ್ಗ ಅಥವಾ ಮೇಲ್ವರ್ಗದಿಂದ ಮತ್ತು ಮಧ್ಯಮ ಜಾತಿ ಅಥವಾ ಬಲಿಷ್ಠ ಜಾತಿಯಿಂದ ಬಂದ ನಾಯಕತ್ವವನ್ನು ಹೊಂದಿರುವಂಥದ್ದು. ದಲಿತ ಸಂಘರ್ಷ ಸಮಿತಿಗೆ ಕೆಳಮಧ್ಯಮ ವರ್ಗದಿಂದ ಅಥವಾ ಕೆಳವರ್ಗದಿಂದ ಮತ್ತು ಕೆಳ ಜಾತಿಯಿಂದ ಬಂದ ನಾಯಕತ್ವ ಹೊಂದಿರುವಂಥದ್ದು.

ಕೆಳಜಾತಿಯಿಂದ ಮತ್ತು ಕೆಳವರ್ಗದಿಂದ ಬಂದ ನಾಯಕತ್ವ ಶೋಷಿತ ವರ್ಗವನ್ನು ಪ್ರಜ್ಞೆಯಲ್ಲಿಟ್ಟುಕೊಂಡು ಬಡತನ ಮತ್ತು ಸಾಮಾಜಿಕ ಸಮಸ್ಯೆಗಳ ದೃಷ್ಟಿಯಿಂದ ಗಟ್ಟಿಯಾದ ನಾಯಕತ್ವವನ್ನು ಕೊಡಬಲ್ಲದು. ಇದಕ್ಕಾಗಿಯೇ ಕ್ರಾಂತಿಯ ಮುಂಚೂಣಿ ವ್ಯವಸ್ಥೆಯ ನಿರ್ಮಾಣದ ಶಕ್ತಿ ಹೆಚ್ಚಾಗಿ ದಲಿತ ಸಂಘರ್ಷ ಸಮಿತಿಗಿರುವುದಕ್ಕೆ ಕಾರಣ ಇವತ್ತು ಕೆಳಸ್ತರದಲ್ಲಿರುವ ದಲಿತ ಜನಾಂಗ ಯಾವುದೇ ನಮೂನೆಯ ಸಮಸ್ಯೆಗಳಿಂದಲೂ ಹೊರತಾಗಿರುವುದರಿಂದ.

ಎಲ್ಲಾ ಜಾತಿಯ ನೊಂದ ಜನಗಳಿಗಾಗಿ ಸಮಾನತೆಯ ಸಮಾಜವನ್ನು ಕಟ್ಟುವ ಶಕ್ತಿ ಸಂಘರ್ಷ ಸಮಿತಿಯಂತಹ ಸಂಘಟನೆಗಳಿಗಿರುವುದಕ್ಕೆ ಕಾರಣ ಒಂದೊಂದು ಜಾತಿ ಮತ್ತು ಒಂದೊಂದು ವರ್ಗದವನಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಸಮಸ್ಯೆಗಳಿದ್ದರೆ (ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ) ಅಸ್ಪೃಶ್ಯನಿಗೆ ಅವೆಲ್ಲವೂ ಸಮಸ್ಯೆಗಳಾಗುವುದರಿಂದ.

ಎರಡೂ ಸಂಘಟನೆಗಳ ಕಾರ್ಯಕ್ರಮಗಳು ಒಂದಲ್ಲ ಒಂದು ರೀತಿ ಹಳ್ಳಿಯ ವ್ಯವಸ್ಥೆಯ ರಿಪೇರಿಯೇ ಆಗಿದ್ದರೂ ರೈತ ಸಂಘದ ಕಾರ್ಯಕ್ರಮಗಳಲ್ಲಿ ಇಡಿಯಾಗಿ ರೈತ ವರ್ಗವೂ, ಸಂಘರ್ಷ ಸಮಿತಿ ಕಾರ್ಯಕ್ರಮಗಳಲ್ಲಿ ಇಡಿಯಾಗಿ ದಲಿತ ಸಮೂಹವೂ ಪಾಲ್ಗೊಳ್ಳುತ್ತಿಲ್ಲ. ಎರಡೂ ಸಂಘಟನೆಗಳು ಎರಡನೆಯ ಹಂತದ ನಾಯಕತ್ವದ ತಯಾರಿ ಮಾಡುವಲ್ಲಿ ವಿಫಲಗೊಂಡಿರುವುದು ಮತ್ತು ಮುಸ್ಲಿಮರು, ಮತಾಂತರಗೊಂಡ ಕ್ರಿಶ್ಚಿಯನ್ನರು, ಮಹಿಳೆಯರು, ಬೀದಿಪಾಲಾದ ವೃತ್ತಿನಿರತ ಜಾತಿಗಳು ಮೊದಲಾದವರ ಸಮಸ್ಯೆಗಳನ್ನು ಹೋರಾಟದಲ್ಲಿ ತೊಡಗಿಸಿಕೊಳ್ಳದಿದ್ದಲ್ಲಿ ಸಂದಿಗ್ಧ ಸ್ಥಿತಿಯಲ್ಲಿ ಅಪಾಯಕರ ಸ್ಥಿತಿಯನ್ನೆದುರಿಸುವ ಸಾಧ್ಯತೆಗಳಿವೆ.

ಸಧ್ಯದ ಸ್ಥಿತಿಯಲ್ಲಿ ರೈತ ಸಂಘಟನೆಯಲ್ಲಿ ಜಾತಿಯನ್ನು ಕಾಣುತ್ತಾ ಕೂರುವುದು ಎಷ್ಟೊಂದು ಕೆಟ್ಟ ರೀತಿಯಲ್ಲಿರುತ್ತದೋ, ಜಾತಿಯಂತಹ ಸಾಮಾಜಿಕ ಸಮಸ್ಯೆಯನ್ನು ಕೈಗೆತ್ತಿಕೊಳ್ಳದಿದ್ದರೆ ರೈತ ಸಂಘದ ಬೆಳವಣಿಗೆಯೂ ಅಷ್ಟೇ ಕೆಟ್ಟ ರೀತಿಯಲ್ಲಿರುತ್ತದೆ. ಕೃಷಿ ಉತ್ಪನ್ನಕ್ಕೆ ಸಂಬಂಧಿಸಿದ ಆರ್ಥಿಕ ಸಮಸ್ಯೆಗಳತ್ತ ಹೋರಾಡುತ್ತ ಆ ಮೂಲಕ ಹೊಸ ಸಮಾಜದ ನಿರ್ಮಾಣ ದ. ಸಂ. ಸಮಿತಿಗೆ ಕೇವಲ ಥಿಯರಿಯಾದರೆ ರೈತ ಸಂಘಕ್ಕೆ

> ಎರಡೂ ಸಂಘಟನೆಗಳ ಕಾರ್ಯಕ್ರಮಗಳು ಒಂದಲ್ಲ ಒಂದು ರೀತಿ ಹಳ್ಳಿಯ ವ್ಯವಸ್ಥೆಯ ರಿಪೇರಿಯೇ ಆಗಿದ್ದರೂ ರೈತ ಸಂಘದ ಕಾರ್ಯಕ್ರಮಗಳಲ್ಲಿ ಇಡಿಯಾಗಿ ರೈತ ವರ್ಗವೂ, ಸಂಘರ್ಷ ಸಮಿತಿ ಕಾರ್ಯಕ್ರಮಗಳಲ್ಲಿ ಇಡಿಯಾಗಿ ದಲಿತ ಸಮೂಹವೂ ಪಾಲ್ಗೊಳ್ಳುತ್ತಿಲ್ಲ.

ಹೆಚ್ಚು ಪ್ರಾಕ್ಟಿಕಲ್ ಆಗಿರುತ್ತದೆ. ಜಾತಿಯಂಥ ಸಾಮಾಜಿಕ ಸಮಸ್ಯೆ, ಭೂಮಿಯ ಪುನರ್ ಹಂಚಿಕೆಯಂಥ ಕ್ರಾಂತಿಕಾರಿ ಕಾರ್ಯಕ್ರಮಗಳು ದಲಿತ ಸಂಘರ್ಷ ಸಮಿತಿಗೆ ಹೆಚ್ಚು ಪ್ರಾಕ್ಟಿಕಲ್ ಆದರೆ ರೈತ ಸಂಘಕ್ಕೆ ಅತ್ಯಂತ ಕಡಿಮೆ ಪ್ರಾಕ್ಟಿಕಲ್ ಆಗುತ್ತದೆ.

ಎರಡೂ ಸಂಘಟನೆಗಳು ಎಡ ಪ್ರಜಾಸತ್ತಾತ್ಮಕ ಸಂಘಟನೆಗಳಾದರೂ ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಮುಂತಾದ ಕಾರ್ಯಕ್ರಮಗಳ ಬಗ್ಗೆ ತಮ್ಮನ್ನು ತಾವು ಇನ್ನೂ ಪ್ರಕಟಪಡಿಸಿಕೊಂಡಿಲ್ಲವಾದ ಕಾರಣ ಎರಡನ್ನೂ ಒಟ್ಟುಗೂಡಿಸಬಹುದಾದ ಅಂಶಗಳ ಬಗ್ಗೆ ಹೇಳುವುದು ಕಷ್ಟ. ಯಾಕೆಂದರೆ ಈಗಾಗಲೇ ಭಾಷಾ ಚಳುವಳಿ ಬಗ್ಗೆ ಒಂದೊಂದು ಸಂಘಟನೆಯೂ ಒಂದೊಂದು ಅಭಿಪ್ರಾಯವನ್ನು, ಗಾಂಧೀಜಿಯ ಬಗ್ಗೆಯೂ ಒಂದೊಂದು ಅಭಿಪ್ರಾಯವನ್ನು, ವಿಧಾನಸಭಾ ಚುನಾವಣೆ ಸಮಯದಲ್ಲಿ ಮತದಾನ ಬಹಿಷ್ಕರಿಸಬೇಕೆ ಎಂಬ ಬಗ್ಗೆ ದ್ವಂದ್ವಾಭಿಪ್ರಾಯವನ್ನು ಸಂಘಟನೆಗಳು ನೀಡಿ ಅತ್ಯಂತ ಕೆಳಸ್ತರದಲ್ಲಿರುವ ಕಾರ್ಯಕರ್ತರಿಗೆ ದಿಕ್ಕುಗೆಡಿಸುತ್ತಿದ್ದವು.

ಎರಡೂ ಸಂಘಟನೆಗಳು ತಮ್ಮ ಹೋರಾಟದಲ್ಲಿ ಸಾಂಸ್ಕೃತಿಕ ಚಳುವಳಿಯನ್ನು ಒಂದು ಅಂಗವನ್ನಾಗಿಸಿಕೊಂಡಾಗ ಕನಸು ಕಂಡಿರುವ ಹೊಸ ಸಂಸ್ಕೃತಿಯೊಂದರ ಸಕಾಲಿಗೆ ರಕ್ತ ಮಾಂಸ ತುಂಬಿಕೊಂಡಂತಾಗುತ್ತದೆ. ಕೆಲವು ಸಾಮಾನ್ಯ ಕಾರ್ಯಕ್ರಮಗಳಲ್ಲಿ ಎರಡೂ ಸಂಘಟನೆ ಒಟ್ಟುಗೂಡಿ ಕೆಲಸ ಮಾಡದಿದ್ದರೆ ಸದಾ ಹಣ ಮತ್ತು ಜಾತಿಯ ಉಪಯೋಗವನ್ನು ಪಡೆಯುತ್ತಾ ಬಂದ ಕೊಳೆಗಡುಕ ರಾಜಕೀಯ ಪಕ್ಷಗಳು ಯಾವ ಹೆದರಿಕೆಯೂ ಇಲ್ಲದೆ "ಸಮಾಜವಾದೀ ಪ್ರಜಾಪ್ರಭುತ್ವ" ದ ಹೆಸರಿನಲ್ಲಿ ತಮ್ಮ ಕೊಳೆಗಡುಕ ಕೈಂಕರ್ಯವನ್ನು ಮುಂದುವರಿಸಿಕೊಂಡು ಹೋಗುತ್ತವೆ. ಅವು ಸುಲಿಗೆಯಿಲ್ಲದ ಸಮಾನತಾ ಸಮಾಜದ ಕನಸನ್ನು ದಶಕ ದಶಕಗಳ ಹಿಂದಕ್ಕೆ ತಳ್ಳುತ್ತವೆ. ○

ಅಪ್ರಬುದ್ಧ ರೈತ ಸಂಘಗಳು: ದಲಿತರ ಪಾಲಿಗೆ ನರಕ

ಕರ್ನಾಟಕದ ಲೆಕ್ಕವಿಲ್ಲದಷ್ಟು ಹಳ್ಳಿಗಳಲ್ಲಿ ನೇರವಾಗಿ ರೈತಸಂಘದವರಿಂದಲೇ ದಲಿತರಿಗೆ ಸಾಮಾಜಿಕ ಕಿರುಕುಳಗಳು ನಡೆಯುತ್ತಿದ್ದರೂ ರೈತ ಸಂಘದ ನಾಯಕರು ಈ ಬಗ್ಗೆ ಕಿಂಚಿತ್ತೂ ಯೋಚಿಸಿದಂತೆ ಕಾಣುತ್ತಿಲ್ಲ. ಇಲ್ಲಿ ದಾಸರ ಹಳ್ಳಿಯ ಈ ಕಥೆ ನೋಡಿ :

ಕೃಷ್ಣಪ್ಪ ಚಿಲ್ಲಹಮಡು

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ, ದಾಸರಹಳ್ಳಿ ಸುಮಾರು 150-200 ಕುಟುಂಬಗಳ ಗ್ರಾಮ. ಮಧುಗಿರಿ, ಕೊರಟಗೆರೆ ತುಮಕೂರಿಗೆ ಹಾದು ಹೋಗುವ ರಸ್ತೆ ಬದಿಯಲ್ಲಿರುವ ಈ ಗ್ರಾಮದ ವಿಶೇಷತೆ ಎಂದರೆ ಈಗ್ರಾಮದಲ್ಲಿಹೆಚ್ಚು ವಿದ್ಯಾವಂತರಿರುವುದು. ನವಲಗುಂದ, ನರಗುಂದ ಶಿವಮೊಗ್ಗ ಕಡೆಗಳಿಂದ ಪ್ರಭಾವಿತಗೊಂಡ ಪ್ರಗತಿ ಪರ ಸಂಘಟನೆ ಎಂದು ಹೇಳಿಕೊಳ್ಳುತ್ತಿರುವ ರೈತ ಸಂಘದ ಶಾಖೆಯೂ ಈ ಗ್ರಾಮದಲ್ಲಿದ್ದು ಸಂಘದ ನಿಬಂಧನೆಗಳ ಬೋರ್ಡ್ ಇದೆ. ಈ ದೇಶದ ಮಾಮೂಲಿ ಸಂಪ್ರದಾಯದ ಸಮಾಜದ ನಡವಳಿಕೆಗಳಂತೆ ತಾ|| 16-8-83 ರಂದು ಈ ಊರಿನ ಮಾರಿ ಜಾತ್ರೆ ದಲಿತರಿಗೆ ಇತಿಹಾಸ ಪ್ರಸಿದ್ಧಿ ದಿನ ವಾಯಿತು. ಸಂಜೆ 5-6 ಗಂಟೆ. ಗ್ರಾಮ ತಳಿರು ತೋರಣ, ರಂಗವಲ್ಲಿ ಅದ್ದೂರಿ ವಾದ್ಯ, ತಮ್ಮಟೆ ಸದ್ದುಗಳಿಂದ ವಿಜೃಂಭಿಸತೊಡಗಿತ್ತು. ಮಾರಿಗೆ ಆರತಿ ಅರ್ಪಣೆ ಅನಿವಾರ್ಯವಾಗಿತ್ತು, ಸವರ್ಣೀಯರ ಆರತಿಗಳು ರೆಡಿ ಆಗಿದ್ದವು. ಇನ್ನು ಹರಿಜನರ ಆರತಿಗಳು ರೆಡಿ ಆಗುತ್ತಿತ್ತು. ಮೊದಲು ಮೂರು ಜನ ಯಜಮಾನರ ಮನೆಗಳಿಂದ ಆರತಿಗಳು ಹೊರಡಬೇಕು ಅಂತ ಒಂದು ಸುದ್ದಿ, ಇನ್ನೊಂದು ಕಡೆ ಯಾರಾದರೂ ಆಗಲಿ ಸಾಲಾಗಿ ಒಂದು ಕಡೆಯಿಂದ ಆರತಿ ಹೊರಡಲಿ ಎಂದು ಇನ್ನೊಂದು ವಾದ. ಜಾತ್ರೆ ಪ್ರಯುಕ್ತ ಊರ ಸವರ್ಣೀಯ ಹಣವಂತರೆಲ್ಲ ಕಂಠ ತುಂಬ ಕುಡಿದಿದ್ದರು. ಸವರ್ಣೀಯರಿಂದ ಸಾಲ ಪಡೆದು ಮಾರಿ ಜಾತ್ರೆ ಜನಜಂಗುಳಿಯೊಂದಿಗೆ ದಲಿತರೂ ಕುಡಿದು ಪಾಲ್ಗೊಂಡಿದ್ದರು. ಕುಡಿದ ಅಮಲಿನಲ್ಲಿ ದಲಿತರಿಗೂ ಸವರ್ಣೀಯರಿಗೂ ಗಲಾಟೆಯಾಯಿತು, ಕಾರಣ ಬೇಗ ಆರತಿ ಹೊರಡಲಿ ಎಂಬುದೊಂದೆ.

ಮೈಲನ ಹಳ್ಳಿಯಿಂದ ಬಂದಿದ್ದ ಮಾದಿಗರ ನರಸಿಂಹಯ್ಯ ಮತ್ತು ದಾಸರಹಳ್ಳಿ ಮುದ್ದಯ್ಯನನ್ನು ಸವರ್ಣೀಯರು ಹೊಡೆದು ಎಳೆದು ತಂದು ಗುಂಡಿಗೆ ಎತ್ತಿ ಎಸೆದರು. ತರುಣ ನರಸಿಂಹಯ್ಯ ಬಿದ್ದ ಕಡೆಯಿಂದ ಎದ್ದೇಳಲು ಒದ್ದಾಡಿದಾಗ ಕಾಲುಗಳು ಸವರ್ಣೀಯರಿಗೆ ತಗುಲಿದವು. ಎದ್ದು ಕೈಯಲ್ಲಿ ಚಪ್ಪಲಿ ಹಿಡಿದ.

ಚಪ್ಪಲಿ ಎತ್ತಿದನೆಂದು ಊರೆಲ್ಲಾ ಗುಂಪು ಕೂಡಿ ಬಂದು ಕೂಗಿ ಕೆಟ್ಟ ಕೆಟ್ಟ ಮಾತುಗಳಿಂದ ಬೈಯ್ದರು. ಜನ ನೋಡಿ ದಂಗಾದ ದಲಿತರು ಮುದ್ದಯ್ಯ ಮತ್ತು ನರಸಿಂಹಯ್ಯನನ್ನು ಮನೆಯಲ್ಲಿ ಕೂಡಿಹಾಕಿದರು. ಬಟ್ಟೆಯೆಲ್ಲ ಚಿಂದಿಯಾಗಿದ್ದ, ಜೇಬಲ್ಲಿದ್ದ 15 ರೂಪಾಯಿಗಳನ್ನು ಕಳಕೊಂಡ ನರಸಿಂಹಯ್ಯ ಮತ್ತು ಮುದ್ದಯ್ಯ ದಲಿರಿಂದ ಗೃಹಬಂಧನಕ್ಕೊಳಗಾದರು.

ತಕ್ಷಣ ಮಾಜಿ ಛೇರ್‌ಮನ್ ಒಕ್ಕಲಿಗರ ಡಿ. ವಿ. ಮಾರಣ್ಣ ಯಾರೂ ಆರತಿ ತರಬೇಡಿ, ಈರ ನಾಗಯ್ಯ ವಾದ್ಯ ಮಾಡಬೇಡಿ, ನಮ್ಮ ಜೊತೆ ಬರಬೇಡಿ ಎಂದು ಆಜ್ಞೆ ಮಾಡಿದರು.

ಗಂಟಪ್ಪ ಎಂಬ ಅಡ್ಡ ಹೆಸರಿನ ನೀರಗಂಟಿ ಈರಕ್ಯಾತಪ್ಪ ನ್ಯಾಯ ಇತ್ಯರ್ಥ ಆಗುವವರೆಗೂ ಯಾರೂ ಬರಕೂಡದು, ಒಂದು ಪಕ್ಷ ಬಂದರೆ ಒಬ್ಬನಿಗೆ 10,000 ರೂ. ಖರ್ಚಾಗಲಿ ಖೂನಿ ಮಾಡ್ತೀವಿ, ನಾವು ಮಾದಿಗರನ್ನು ಖೂನಿ ಮಾಡದಿದ್ದರೆ ಹೆಂಗಸರ ಹುಚ್ಚೆ ಯೊಯ್ದು ನನ್ನ ಮೀಸೆ ಬೋಳಿಸುತ್ತೇನೆ ಎಂದ. ಹದಿನೆಂಟು ವರ್ಷದ ಡಿ. ವಿ. ಮಂಜುನಾಥ ಕಾಲೋನಿ ಹತ್ತಿರದಿಂದ ದೇವಸ್ಥಾನದವರೆಗೂ ಯಾಕೆ ಆರತಿಗಳನ್ನು ತರಬೇಕಿತ್ತು, ಅಲ್ಲೇ ನ್ಯಾಯ ಮಾಡಿ ಆಮೇಲೆ ತರಬೇಕಿತ್ತು ಎಂದ.

ಮುಗ್ಧ ಮನಸ್ಸಿನ ಮಂಜು ಸವರ್ಣೀಯನಾದರೂ ನ್ಯಾಯವಾಗಿ ಹುಟ್ಟಿದ್ದ ಅಂತ ಕಾಣುತ್ತೆ. ಎಲ್ಲ ಹರಿಜನರೂ ನಡಿರೋ ಹೋಗೋಣ ಆರತಿ ಬೆಳಗೋಣ ಆದದ್ದು ಆಗಲಿ ಎಂದು ಕರೆದುಕೊಂಡು ಹೋದ. ಕೆಲವು ಜನ ಹರಿಜನರು ಹೆದರಿ ವಾಪಸ್ ಬಂದರು. ಇನ್ನು ಕೆಲವರಿಗೆ ಪೂಜಾರಿ ಕಾಯಿ ಒಡೆದು ಕೊಟ್ಟ. ತಮ್ಮಷ್ಟಕ್ಕೆ ತಾವೇ ಆರತಿಗಳನ್ನು ಬೆಳಗಿಕೊಂಡು ಹರಿಜನರು ಬಂದರು.

ಊರಗೌಡ ಬಿ. ನಾಗಣ್ಣನ ಮನೆ ಮುಂದೆ ಸವರ್ಣೀಯ ರೈತ ಸಂಘದ ಮುಖಂಡರಾದ ಡಿ. ವಿ. ರಾಮಯ್ಯ (ಅಧ್ಯಕ್ಷ), ಡಿ. ವಿ. ನಾಗರಾಜ, ಶಿವಣ್ಣ, ರಘುರಾಮ, ರಾಮಯ್ಯ, ಮಲ್ಲೇಶಯ್ಯ, ವೀರಕ್ಯಾತಪ್ಪ, ಶ್ರೀನಿವಾಸಮೂರ್ತಿ (ಬ್ರಾಂಚ್ ಪೋಸ್ಟ್ ಮಾಸ್ಟರ್), ಪ್ರಸಾದ್ ಕೆ. ಇ. ಬಿ. ಎಸ್ ಓ ಬ್ಯಾಲ್ಯ, ಮಿಲ್ಕ್ ಡೈರಿ ಸೆಕ್ರೆಟರಿ ರಾಮಕೃಷ್ಣ ಮುಂತಾದ ಸುಮಾರು 150 ಜನ ಸಭೆ ಸೇರಿದರು. "ಕಾಲೋನಿ ಜನಾನ ವಿಶ್ವಾಸವಾಗಿ ಬೆಳಸಿಕೊಂಡಿದ್ದಕ್ಕೆ ನಮ್ಮನ್ನೇ ಚಪ್ಪಲಿಯಲ್ಲಿ ಹೊಡಿಯಾಕೆ ಬಂದರು. ಆದ್ದರಿಂದ ಹರಿಜನರನ್ನು ಯಾರು ಕರಿಬ್ಯಾಡ್ರಿ, ಹೋಟೆಲ್‌ನಲ್ಲಿ ಕಾಫಿ, ತಿಂಡಿ ಕೊಡಬ್ಯಾಡಿ, ಡೈರಿಯಲ್ಲಿ ಹಾಲು ಹಾಕಬೇಡಿ, ಅಂಗಡಿಯಲ್ಲಿ ಸಾಮಾನು ಕೊಡಬ್ಯಾಡಿ, ಯಾರು ಕೂಲಿ ಕರೀಬ್ಯಾಡಿ" ಅಂತ ತೀರ್ಮಾನ ಮಾಡಿದರು. ಅಲ್ಲೇ ಪಕ್ಕದಲ್ಲಿ ನಿಂತಿದ್ದ ಹರಿಜನ ಗಂಗಪ್ಪ ಮತ್ತು ಹನುಮಂತರಾಯಪ್ಪ ಇವರನ್ನು "ನಿಮ್ಮವರನ್ನೆಲ್ಲ ಕರ್ಸಿ ನ್ಯಾಯ ಮಾಡಾನ" ಎಂದರಂತೆ. ಅಷ್ಟಕ್ಕಾಗಲೇ ಸಮಯ ರಾತ್ರಿ 3 ಗಂಟೆ ತಿಳಿದ ಇವರು ಈಗ ಬ್ಯಾಡ ನ್ಯಾಯ ಸಿಗಲ್ಲ ಅಂದರಂತೆ.

ಊರಲ್ಲಿ ಅಂಗಡಿಇಟ್ಟಿರುವ ರಮೇಶ್, ರಘು, ದಶರಥ ಸೀನಪ್ಪ ಮತ್ತು ಹೋಟೆಲ್ ಶಿವಣ್ಣ ಸಭೆ ತೀರ್ಮಾನದಂತೆ ಸಾಮಾನು ಕೊಡುವುದನ್ನು ನಿಲ್ಲಿಸಿದರು. ಅಲ್ಲಿಗೆ 16-8-83ರಂದು ಪ್ರಾರಂಭವಾದ ಗಲಾಟೆ 19-8-83ರವರೆಗೂ ಹರಿಜನರು ಕಾದು ನೋಡಿದರು. ಆದರೂ ಈ ತಿಳಿಗೇಡಿ ರೈತಸಂಘದ ಮುಖಂಡರು ಸಾಮಾಜಿಕ ಬಹಿಷ್ಕಾರವನ್ನು ಸಡಿಲಗೊಳಿಸಲಿಲ್ಲ.

ಹರಿಜನರಲ್ಲೆ ವಿದ್ಯಾವಂತ ಜಯರಾಮಯ್ಯ ಮತ್ತು ಇತರರು ಸೇರಿ ಸ್ಥಳೀಯ ಕೊರಟಗೆರೆ ಪೋಲೀಸ್‌ಗೆ ದೂರುಕೊಟ್ಟರು. ತಕ್ಷಣ ಎಸ್. ಪಿ. ಡಿ. ವೈ. ಎಸ್. ಪಿ. ಎಸ್ ಐ. ಮತ್ತು ಪೋಲೀಸ್ ಸಿಬ್ಬಂದಿ ಬಂದು ಸವರ್ಣೀಯರನ್ನು ಮತ್ತು ಹರಿಜನರನ್ನ ಕರೆಯಿಸಿ ಸಾಕಷ್ಟು ತಿಳುವಳಿಕೆ ಕೊಟ್ಟು ಬಹಿಷ್ಕಾರ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಒತ್ತಾಯಿಸಿ ರಾಜಿ ಮಾಡಿಸಿದರು.

ಈ ಎಲ್ಲದರಿಂದ ಸವರ್ಣೀಯರಿಗೆ ಕೊಂಚ ಅವಮಾನವಾಯಿತೆಂದು ಕಾಣುತ್ತದೆ. ತದ ನಂತರ ತಾನಾಗೇ ರೈತಸಂಘದ ನಿಬಂಧನೆ ಬೋರ್ಡ್ ಸವರ್ಣೀಯ ಮನೆ ಸೇರಿತು. ರೈತಸಂಘಕ್ಕೆ ಅಧ್ಯಕ್ಷ ರಾಜಿನಾಮೆ ಕೊಟ್ಟಿದ್ದಾರೆ. ಇದು ಪ್ರಗತಿಪರ ಸಂಘಟನೆ ಎಂದು ಹೇಳಿಕೊಂಡು ಮಾಡುತ್ತಿರುವ ರೈತಸಂಘದ ಒಂದುಕಾರ್ಯಕ್ರಮ.

ಇಷ್ಟಾದರೂ ಹಾಲು ಡೈರಿಯಲ್ಲಿ ಹರಿಜನರಿಗೆ ಹಾಲು ಮಾರಾಟ ಮಾಡುತ್ತಿಲ್ಲ, ಕೂಲಿನಾಲಿ ಕುರಿತ ಇಲ್ಲ. 50 ವರ್ಷದ ದಲಿತ ನಾಗಮ್ಮ "ನೋಡಿ ಸ್ವಾಮಿ ಬೇರೆ ಊರಿಂದ ಕೂಲಿ ಮಾಡಿ ಜೀವನ ಮಾಡ್ತಾ ಇದ್ದೇವೆ. ನೆರೆ ಊರಿಂದ ಬಂದು ಕತ್ತಲಲ್ಲಿ ಬೇಸಿಕೊಂಡು ತಿನ್ನಬೇಕು— ಸ್ವಾಮಿ" ಅಂತ ಕಣ್ಣೀರು ಸುರಿಸಿದಳು.

ಗಾಯದ ಮೇಲೆ ಕೂತ ನೊಣ: ನಮ್ಮ ಕ್ರೂರ ನೌಕರಶಾಹಿ

ಳ್ಳಿಗಾಡಿನ ದಲಿತರು ಮತ್ತು ರೈತರ ಕ್ತ ಹೀರುತ್ತಿರುವ ಈ ಕ್ರೂರ ೌಕರಶಾಹಿ ವಿರುದ್ಧ ದಲಿತರು ುತ್ತು ರೈತರ ಸುಸಂಘಟಿತ ೋರಾಟ ನಡೆಯಬೇಕಾಗಿದೆ.

ಇತ್ತೀಚೆಗೆ ಒಂದು ದಿನ ನಾನು ನನ್ನ ಗೆಳೆಯರ ಜತೆ ನಮ್ಮ ತಾಲ್ಲೂಕಾಫೀಸಿಗೆ ಹೋಗಿದ್ದೆ. ನನ್ನ ಳೆಯರಿಗೆ ಜಾತಿಪತ್ರ ತುಂಬ ತುರ್ತಾಗಿ ಬೇಕಿತ್ತು. ್ರೈವಿಂಗ್ ತರಬೇತಿಗೆ ಅರ್ಜಿಸಲ್ಲಿಸಲು ಅದು ಡೆಯ ದಿನವಾಗಿತ್ತು. ಕೂಡಲೇ ಜಾತಿ ಪತ್ರದ ುಮಾಸ್ತರನ್ನು ಕಂಡೆವು. ಆತನದು ಎಮ್ಮೆಯಂಥ ಧಾನ ಸ್ವಭಾವ. ಅರ್ಧಘಂಟೆ ಅವನೆದುರು ನಿಂತಿ ್ದರೂ ನಮ್ಮ ಕಡೆ ನೋಡಲಿಲ್ಲ. ಕೊನೆಗೆ ನನ್ನ ಗೆಳೆಯನೊಬ್ಬ ಸದರಿ ಗುಮಾಸ್ತೆಗೆ ಕೈ ಮುಗಿದು ುನಕರಗುವಂತೆ ತನ್ನ ಪರಿಸ್ಥಿತಿಯನ್ನು ಬಣ್ಣಿಸಿದ. 'ಇವತ್ತು ಅರ್ಜಂಟಾಗಿ ಕ್ಯಾಸ್ಟ್ ಸರ್ಟಿಫಿಕೇಟ್ ೇಕು ಸರ್, ದಯವಿಟ್ಟು ಕೊಡ್ಲಿ'' ಸದರಿ ುಮಾಸ್ತೆ ತನಗೆ ಮಾಮೂಲಾದ ರೆವಿನ್ಯೂ ಗತ್ತಿ ಲ್ಲಿ, 'ಹೌದಾ ? ಅಷ್ಟೇನಾ ?' ಅಂದು ; ತಕ್ಷಣವೆ ನಿ ಬದಲಾಯಿಸಿ ; ಅದೆಂಗ್ರಿ ಆಗುತ್ತೆ ? ಇವತ್ತೇ ಂದು ಇವತ್ತೇ ಕೇಳ್ತೀರಲ್ಲ ? ಇದೇನು ನಿಮ್ಮ ತಾವನ ಮನೇನಾ ?

ನಾವ್ಯಾರು ಮಾತನಾಡಲಿಲ್ಲ. ಅವನ ಮಾತಿನ ೋಡಿಗೆ ಮೌನವಾಗಿದ್ವೊ. ನಾವು ನಿಂತ ಜಾಗ ಿಂದ ಕದಲದೆ ಇರುವುದನ್ನು ನೋಡಿ ಆತನಿಗೆ ೇಸರವಾಗಿರಬೇಕು. ಆತ ಎದ್ದು ಹೋಗಿ ಪಕ್ಕದ ಪಾಟಿನಿಂದ ಸಾವಿರಾರು ಅರ್ಜಿಗಳ ಒಂದು ದೊಡ್ಡ ಗಂಟನ್ನೇ ತಂದು ನಮ್ಮೆದುರು ಒಗೆದ. ''ನೋಡಿ ೇಕಾದ್ರೆ ಈ ಅರ್ಜಿಗಳು ಬಂದು ಎರಡು ತಿಂಗಳ ಮೇಲಾಗಿದೆ. ನಾವಿನ್ನೂ ಕ್ಯಾಸ್ಟ್ ಸರ್ಟಿಫಿಕೇಟ್ ಇಶ್ಯೂ ಮಾಡಿಲ್ಲ.''

ಸಕಾಲದಲ್ಲಿ ತುರ್ತಾಗಿ ಜಾತಿಪತ್ರ ಕೊಡದಿದ್ರೆ ಅದು ನಿಮ್ಮ ಬೇಜವಾಬ್ದಾರಿತನ : ಅಲ್ಲದೆ ಅದು ಿಮ್ಮ ಇಲಾಖೆಗೂ ಅವಮಾನ. ಅದಕ್ಕೆ ಜನರು ಹೊಣೆಗಾರರಾಗ್ತಾರಾ?'' ನಾನವನಿಗೊಂದು ಪ್ರಶ್ನೆ ಸೆದೆ. ಅವನಿಗದು ಅರ್ಥವಾಗಲಿಲ್ಲ. ಮತ್ತೂ ಹೀಗೆ ಹೇಳಿದ : ' ರೀ ನೀವು ನಮ್ಮ ಸಾಹೇಬರನ್ನ ಕಾಣ್ರೆ ೇಕಾದ್ರೆ.''

ಇವರೆಲ್ಲ ಗಾಯದ ಮೇಲೆ ಕೂತ ನೊಣಗಳಂಥ ಅಧಿಕಾರಿಗಳು. ಸಮಾಜದ ಹೃದಯದ ಮೇಲಿನ ಭ್ರಷ್ಟತೆಯ ಹುಣ್ಣುಗಳನ್ನು ದೊಡ್ಡದು ಮಾಡುವುದೇ ಇವರ ಕಸಬು. ಆತನನ್ನು ಅವನ ಪಾಡಿಗೆ ಬಿಟ್ಟು ನಾವು ತಾಸೀಲ್ದಾರ್ ಸಾಹೇಬರನ್ನು ಕಾಣಲು ಹೋಗಬೇಕು. ಸಾಹೇಬರ ಛೇಂಬರಿನ ಹೊರಗೆ ಗೋಡೆಯ ಮೇಲೆ ತಗುಲಿ ಹಾಕಿದ ಬೋರ್ಡೊಂದಿದೆ. ಅದರ ಬರಹದ ಒಟ್ಟು ಸಾರಾಂಶ ಇಂತಿದೆ ; ಸಾರ್ವಜನಿಕರಿಗೆ ಏನಾದರೂ ಕೆಲಸವಾಗಬೇಕಾದಲ್ಲಿ ನೇರವಾಗಿ ಅವರು ತಾಸೀಲ್ದಾರ್ ಸಾಹೇಬರನ್ನು ಭೇಟಿ ಮಾಡಬೇಕು. ಅವರ ಕೈ ಕೆಳಗಿನ ನೌಕರರನ್ನು ಭೇಟಿಯಾಗಿ ತೊಂದರೆ ಕೊಡಬಾರದು.

ನಮ್ಮ ತಾಸೀಲ್ದಾರರಿಗೆ ಇಷ್ಟಾದರೂ ಕಾಮನ್ ಸೆನ್ಸ್ ಇದೆಯಲ್ಲ ಅಂತ ನಮಗೆಲ್ಲಖುಷಿಯಾಯ್ತು. ಬೋರ್ಡು ಹೇಳಿದಂತೆ ನಾವು ಸಾಹೇಬರ ಕೋಣೆಗೆ ನಡೆದೆವು. ಅಲ್ಲಿದ್ದ ಬಾಗಿಲಾಳು ನಮ್ಮ ಮೇಲೆ ಹಸಿದ ಚಿರತೆಯಂತೆ ಎರಗಿದ.

''ಏನ್ರೀ ನಿಮಗೆ ಒಂಚೂರು ಮಾನ ಮರ್ಯಾದೆ ಇಲ್ವ ? ಸಾಹೇಬರ ಛೆಂಬರು ಅಂದ್ರೆ ಧರ್ಮರಾಯನ ಛತ್ರಾನ ?

ಮುಳ್ಳೂರು ನಾಗರಾಜು

''ಯಾಕ್ರೀ ಚಿಕ್ಕ ಸಾಹೇಬ್ರೇ ಎಗರಾಡ್ತೀರಿ ?'' ಎಂದೆ. ಆತನಿಗೆ ತಾನೇ ತಾಸೀಲ್ದಾರ ಎಂಬಷ್ಟು ಖುಷಿಯಾಯ್ತು.''

''ಸಾಹೇಬ್ರು ಒಳಗಿಲ್ಲ ಸ್ವಾಮೀ'' ಅಂದ ವಿನಮ್ರವಾಗಿ.

''ಈಗೆಷ್ಟು ಗಂಟೆ ?''

''ಒಂದು ಗಂಟೇನು ಇರ್ಬಹುದು ಎರಡು ಗಂಟೇನು ಇರ್ಬಹುದು''.

ಗಂಟೆ ರೂಲ್ಸಿಲ್ಲ

''ಹಾಗಾದ್ರೆಸಾಹೇಬ್ರು ಇನ್ನೂಯಾಕ್ಬಂದಿಲ್ಲ?''

''ಅವರು ಸಾಹೇಬ್ರಲ್ವ ? ಅವರಿಗೆ ಗಂಟೆ ರೂಲ್ಸಿಲ್ಲ. ಯಾವಾಗ್ಲಾದ್ರೂ ಬರ್ಬಹುದು, ಯಾವಾಗ್ಲಾದ್ರೂ ಹೋಗ್ಬಹುದು''

''ಸರಿ ಅವರಿಲ್ಲದೆ ಕೆಲ್ಸ ಹೆಂಗೆ ನಡೆಯುತ್ತೆ ?''

''ನಾವೆಲ್ಲ ಇಲ್ವ ನಡಸ್ತೀವಿ''

''ಅದೂ ಸರೀನೆ ನೀನು ಸೈನು ಮಾಡಿದ್ರೆ ಅವರು ಸೈನ್ ಮಾಡಿದಂತಾಗ್ತದ ?''

''ಸೈನು ಮಾಡಿಸ್ಬೇಕಾ ಹಂಗಾದ್ರೆ ಒಳಗಡೆ ಅವ್ರೆ ನೋಡ್ರಿ'' ಬಾಯ್ತಪ್ಪಿನಿಂದ ಆತ ಸತ್ಯ ಹೇಳಿದ್ದ.

''ಸರಿ ಬಿಡಪ್ಪ ಸಾಹೇಬ್ರನ್ನ ನೋಡ್ತೀವಿ''

''ಆ ಿ ನೆಟ್ಟಗೆ ಹೊಂಟೋಯ್ತಿರಲ್ಲ ನಿಂತ್ಕಳ್ರಿ''

''ಯಾಕೆ ತಡಿತೀಯ ಬಿಡಯ್ಯ''–ಅಂದೆ ಕೊಂಚ ಗಡುಸಾಗಿ.

ಆತ ಹ್ಯಾಪ್ ನಗೆ ನಗುತ್ತಾ ''ಸುಮ್ನೆ ಅಂದೆ ಸಾರ್, ಅವರಿಲ್ಲ ಸಾಹೇಬ್ರು, ಅವರು ಬಂದಾಗ ನಾನೇ ಸೈನು ಮಾಡಿಸಿಕೊಡ್ತೀನಿ''.

ನಾನು ಮತ್ತು ಸ್ನೇಹಿತರು ಅಸಹನೆಯಿಂದ ಕುದಿಯುತ್ತಾ ಅಲ್ಲೇ ಹತ್ತಿರದಲ್ಲಿದ್ದ ಮರದ ಬೆಂಚಿನ ಮೇಲೆ ಶಿಲಾ ವಿಗ್ರಹಗಳಂತೆ ಕೂತೆವು. ಹತ್ತು ನಿಮಿಷ ಸಂದಿರಬಹುದು. ಊಟದ ಕ್ಯಾರಿಯರ್ ಹಿಡಿದ ನಿವೃತ್ತ ಜವಾನನೊಬ್ಬ (ಸಾಹೇಬರ ಸಂಬಂಧಿಕ) ಸಾಹೇಬರ ಛೇಂಬರ್ ಹೊಕ್ಕ.

ನನ್ನ ಸ್ನೇಹಿತನೊಬ್ಬ ಜವಾನನ ಹತ್ತಿರಕ್ಕೆ ನೆಗೆದು ''ಸಾಹೇಬ್ರು ಇಲ್ಲ ಕ್ಯಾರಿಯರ್ ಹೋಯ್ತು'' ನಮ್ಮನ್ನು ಬೆನ್ನು ಬಿಡದ ಬೇತಾಳಗಳೆಂದು ಭಾವಿಸಿದ ಜವಾನನು-''ಸಾಹೇಬ್ರು ಅವ್ರೆ ಯಾರನ್ನೂ ಒಳಗೆ ಬಿಡಬೇಡ ಅಂತೇಳವ್ರೆ'' ಎಂದ.

''ಯಾರು ಒಳಗಿರವ್ರು?''

''ಅದ್ಯಾರೊ ಅವ್ರೆ ಅವ್ರು ಸಿನೇತಗಾರ್ರು''.

''ಸರಿ ಬಿಡು ಒಳಗಡೆ ಹೋಗಿ ಒಂದೇ ಒಂದು ಸೈನು ಮಾಡಿಸ್ಕೊಂಡು ಜಾಗ ಖಾಲಿ ಮಾಡ್ತೀವಿ'' ಅಂದೆ.

''ಒಸಿ ಇರಿ, ಸಾಹೇಬ್ರು ಊಟ ಮಾಡ್ತವ್ರೆ. ಅದಾಗ್ಲಿ ನಾನೇ ಬಿಡ್ತೀನಿ'' ಕೊಂಚ ನಯವಾದ ದನಿಯಲ್ಲಿ ನಮ್ಮನ್ನು ನಂಬಿಸಲು ಪ್ರಯತ್ನ ಪಟ್ಟ. ನಾವದಕ್ಕೆ ಮಣಿಯದೆ ಅವನನ್ನು ನೂಕಿಕೊಂಡೇ ಸಾಹೇಬರ ಛೇಂಬರಿಗೆ ನುಗ್ಗಬೇಕಾಯ್ತು.

''ಯಾರ್ರೀ ಅದು ? ಯಾಕೆ ಹಾಗೆ ನುಗ್ಗಿದ್ದು. ನಮ್ಮ ಪರ್ಮಿಷನ್ ಕೇಳದೆ ಒಳಕ್ಕೆ ಹೇಗೆ ಬಂದ್ರಿ ?'' ಸಾಹೇಬರು ಪ್ರಶ್ನೆಯ ಮಳೆಗರೆದರು.

''ನಿಮ್ಮ ಪರ್ಮಿಷನ್ ಕೇಳಕ್ಕಾಗಿ ಒಳಗಡೆ ಬಂದ್ವಿ ಸಾರ್ ಕ್ಷಮಿಸಿ', ಅಂದೆ. ಸಾಹೇಬರು ಬೆಪ್ಪಾದರು. ಯಾವ ರೀತಿ ಪ್ರತಿಕ್ರಿಯಿಸಬೇಕಂತ ಅವರಿಗೆ ಗೊತ್ತಾಗಲಿಲ್ಲ.

ಮಹಿಳೆಯರ ಕ್ಷೇಮಾಭ್ಯುದಯ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳು

ಮಹಿಳೆಯರ ಜೀವನ ಸುಧಾರಣೆಗೆ ಸರಕಾರ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅದರಲ್ಲೂ ದುರ್ಬಲ ವರ್ಗದ ಮಹಿಳೆಯರು ಸ್ವಯಂಉದ್ಯೋಗ ಕಲ್ಪಿಸಿಕೊಳ್ಳಲು ಅನುಕೂಲವಾಗುವಂತಹ ತರಬೇತಿ ಮತ್ತು ಧನ ಸಹಾಯ ಕಾರ್ಯಕ್ರಮಗಳು ಅವರ ಬಾಳಿನಲ್ಲಿ ಭರವಸೆ ಮೂಡಿಸಿವೆ.

○ ಅನಾಥ ಮಹಿಳೆಯರು, ವಿಧವೆಯರು, ದೇವದಾಸಿ ಹಾಗೂ ಪರಿಶಿಷ್ಟ ಜಾತಿ–ಜನಾಂಗದ ಮಹಿಳೆಯರ ಜೀವನ ಪುನರ್‌ವ್ಯವಸ್ಥೆಗಾಗಿ 'ಗೃಹ ಕಲ್ಯಾಣ ನಿಧಿ' ಯೋಜನೆಯಂತೆ ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು 1000 ರೂ. ಗಳವರೆಗೆ ಸಾಲ : ಸಹಾಯಧನ ಸೌಲಭ್ಯದ ಅವಕಾಶ.

○ ರೇಷ್ಮೆ, ಕಸೂತಿ ಮುಂತಾದುವುಗಳಲ್ಲಿ ತರಬೇತಿ ನೀಡಲು ಮುಂದೆ ಬರುವ ಮಹಿಳಾ ಮಂಡಳಿಗಳಿಗೆ ವರ್ಷಕ್ಕೆ 2000ರೂ ಸಹಾಯ ಧನ ನೀಡಿಕೆ.

○ ದುರ್ಬಲ ವರ್ಗದ ಮಹಿಳೆಯರ ಅಭಿವೃದ್ಧಿಗೆ ಆದಾಯೋತ್ಪನ್ನ ಚಟುವಟಿಕೆಗಳ ಯೋಜನೆ ಅಥವ 'ಗೃಹ ಕಲ್ಯಾಣ ಯೋಜನೆ' ಈಯೋಜನೆಯಂತೆ ವ್ಯಾಪಾರ, ಪಶುಪಾಲನೆ ಕೋಳಿ ಮತ್ತು ಕುರಿ ಸಾಕಾಣಿಕೆ, ಕೈಮಗ್ಗ, ಕರಕುಶಲ ಮುಂತಾದ ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ರಾಷ್ಟ್ರೀಕೃತ ಬ್ಯಾಂಕಗಳಿಂದ ಶೇಕಡ4ರ ಬಡ್ಡಿದರದಲ್ಲಿ ಸಾಲ ಹಾಗೂ ಅಂತಹ ಸಾಲದ ಮೇಲೆಶೇಕಡ 25ರಷ್ಟು ರಿಯಾಯಿತಿ ಸೌಲಭ್ಯ. ಪ್ರತಿಯೊಬ್ಬ ಮಹಿಳೆಯರು 5,000 ರೂಗೆ ಮೀರದಂತೆ ಈ ಸೌಲಭ್ಯವನ್ನು ಪಡೆಯಬಹುದು.

○ ಬಡ ಮತ್ತು ಅಗತ್ಯವಿರುವ ಮಹಿಳೆಯರಿಗೆ ಸ್ವಯಂ ಉದ್ಯೋಗವಕಾಶ ಕಲ್ಪಿಸಲು ವೃತ್ತಿಪರ ತರಬೇತಿ : ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವ್ಯವಸ್ಥೆ.

○ ಸ್ವಇಚ್ಛೆಯಿಂದ ಸೇರಲು ಬಯಸುವ ನಿರಾಶ್ರಿತ ಮಹಿಳೆಯರು ಮತ್ತು ಬಾಲಕಿಯರಿಗೆ ಸ್ವಾಗತ ಕೇಂದ್ರಗಳು ಮತ್ತು ರಾಜ್ಯಗೃಹಗಳ ಸೌಲಭ್ಯ.

○ ರಾಜ್ಯದ ಮನ್ನಣೆ ಪಡೆದ ಮಹಿಳಾ ತರಬೇತಿ ಕೇಂದ್ರಗಳ ಮೂಲಕ ವಿಶೇಷ ತರಬೇತಿ ಪಡೆದು ಉದ್ಯೋಗ ಕೈಕೊಳ್ಳಲು ವರ್ಷಕ್ಕೆ 500ರೂ. ನೆರವು.

○ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೇಂದ್ರಗಳಲ್ಲಿರುವ ಸಮಾಜ ಕಲ್ಯಾಣ (ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ) ಇಲಾಖೆಯ, ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬೇಕು.

○ ವಿಧವಾ ವಿವಾಹಕ್ಕಾಗಿ 3000 ರೂ. ಸಹಾಯ ಧನ.

○ ದೇವದಾಸಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿರುವ ನಿರ್ಗತಿಕ ಮತ್ತು ಅನಾಥ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಳ್ಳಲು ಮುಂದಾದವರಿಗೆ 3000ರೂ. ಸಹಾಯಧನ.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು.

"ಅಯ್ಯೋ, ನಾನು ಊಟ ಮಾಡಿದ ಮೇಲೆ ಬರಬೇಕಿತ್ತು ?"

"ಸಾರ್ ಬೆಳಗಿನ ಹನ್ನೊಂದು ಗಂಟೆಯಿಂದ-ಮೂರು ಗಂಟೆವರೆಗೂ ನಿಮಗೋಸ್ಕರ ಕಾದಿದ್ದೀವಿ. ನಿಮ್ಮ ಸೈನಾಗಬೇಕಿತ್ತು".

"ಆದ್ರೆ ಕ್ಲರ್ಕ್ ಇಲ್ವ ? ಅವರನ್ನ ನೋಡಬೇಕಿತ್ತು"

"ನಿಮ್ಮ ಬೋರ್ಡ್‌ನಲ್ಲಿ ನಿಮ್ಮನ್ನೇ ನೋಡ್ಬೇಕು ಅಂತಿದೆಯೆಲ್ಲ"

"ತಲೆಹರಟೆ ಹೊಡೀಬೇಡ್ರಿ, ಬೋರ್ಡಿನಲ್ಲಿ ಇರುತ್ತೆ ಸಾವಿರ ಏನು ಮಾಡಕಾಗುತ್ತೆ ?"

"ಸಾರ್ ಬೆಳಗಿನಿಂದ ನಾವು ಊಟ ಮಾಡಿಲ್ಲ. ದಯವಿಟ್ಟು ಸೈನ್ ಮಾಡಿಕೊಡಿ. ನಾವು ಹೋಗ್ತೀವಿ" ಎಂದ ನನ್ನೊಬ್ಬ ಸ್ನೇಹಿತ.

"ನೀವು ಊಟ ಮಾಡದೆ ಇದ್ರೆ ಅದಕ್ಕೆ ನಾನೇನು ಮಾಡಬೇಕು ?" ಸಾಹೇಬರ ಮುಗ್ಧ ಪ್ರಶ್ನೆ ನನಗೆ ಕೆಂಡದಂಥ ಕೋಪ ತರಿಸಿತು.

"ರೀ ನೀವು ತಗೋಳ್ತಿರೋದು ಊಟ ಮಾಡೋದಕ್ಕಲ್ಲ. ನಮಗೆ ಸೈನು ಮಾಡಿ ಕೊಡೋದಕ್ಕೆ. ನಮ್ಮ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ನಿಮಗೆ ಕೂಲಿ ಕೊಡ್ತಿದೆ ಗೊತ್ತಾ ?"

ಸಾಹೇಬರು ತಣ್ಣಗಾದರು. ಎಷ್ಟು ತಣ್ಣಗಾದರು ಎಂದರೆ ನಮ್ಮ ಮುಖ ನೋಡುವುದಕ್ಕೂ ಆಗದಷ್ಟು ಭಯ ಅವರಿಗೆ ಶುರುವಾಗಿತ್ತು.

ನನ್ನ ಮತ್ತೊಬ್ಬ ಸ್ನೇಹಿತ: "ನಿಮಗೆ ಸರ್ಕಾರ ಕೂಲಿ ಕೊಡ್ತಿದೆ. ನಾವು ಸರ್ಕಾರಕ್ಕೆ ಕೂಲಿ ಕೊಡ್ತ ಇದ್ದೀವಿ, ಗೊತ್ತಾ ?"

ಅವಾಕ್ಕಾದರೂ

ಜನ ಸಮುದಾಯದಿಂದ ಬಂದ ಸಾಮಾನ್ಯ ಹುಡುಗರಿಂದ ತಾಸೀಲ್ದಾರ್ ಸಾಹೇಬರು ಈ ಬಗೆಯ ಪ್ರಶ್ನೆಗಳನ್ನು ನಿರೀಕ್ಷಿಸಿರಲಿಲ್ಲ. ಅವರು ಅವಾಕ್ಕಾದರು. ಕೂಡಲೇ ಸೈನು ಮಾಡಿದರು.

ನಾವು ಹೊರಗಡೆ ಬಂದಾಗ ನೂರಾರು ಜನರು ಸಾಹೇಬರಿಗಾಗಿ ಕಾದಿದ್ದರು. ತಮ್ಮ ನಾನಾ ಕಷ್ಟ ಕಣ್ಣೀರುಗಳಿಗೆ ಈ ಆಫೀಸು ಪರಿಹಾರ ದೊರಕಿಸಬಹುದೆಂಬ ಆಸೆಯನ್ನು ನಂಬಿದವರು ಅವರಾದಿದ್ದರು. ಯುಗಾಂತರಗಳಿಂದಲೂ ಅವರನಂಬಿಕೆಗಳು ಹಾಗೇ ಇವೆ.


ಹೊರಗಡೆ ಆಫೀಸಿನ ಅಂಗಳದಲ್ಲಿ ಹರಕಲು ಚೆಡ್ಡಿ ಧರಿಸಿದ ಹಸಿವಿನಿಂದ ಕಂಗಲಾಗಿದ್ದ ಹಳ್ಳಿಗನೊಬ್ಬ ಎಗರಾಡುತ್ತಿದ್ದ;

"ನನ್ನ ಹೆಂಡ್ತಿ ತಾಲಿ ಓಲೆ ಎಲ್ಲನು ಮಾರಿ ಈ ಸೂಳೆಮಗನಿಗೆ ಕೊಟ್ನಲ್ಲಪ್ಪೋ: ಬೇವಾರ್ಸಿ ನನ್ನ ಮಗ ಮೋಸ ಮಾಡುದ್ನಲ್ಲಪ್ಪೋ, ಅಯ್ಯೋ ಸಿವನೆ ನೀನಾರು ಕಣ್ಣುಬುಡಬಾರ್ದ ? ಈ ಪ್ರಪಂಚ ಉರುದೋಗಬಾರ್ದ ?" ನಮ್ಮ ನಾಡಿನ ಬಡ ಹಳ್ಳಿಗನ ಪ್ರತೀಕವಾದ ಆತ ತುಂಬ ಸಂಕಟದಿಂದ ಹಲುಬುತ್ತಿದ್ದ. ಅವನ ಗೋಳು ಕೇಳಲು ಯಾರ ಕಿವಿಗಳೂ ರೆಡಿಯಿರಲಿಲ್ಲ.

ಮೆಟ್ಟಿಲುಗಳಿಲ್ಲದ ಮಹಡಿ ಹತ್ತಿದ ಮಹಾದೇವ

'ಗಾಂಧಿ' ಚಿತ್ರದ ಬಗ್ಗೆ ದೇವನೂರ ಮಹಾದೇವ ಬರೆದ ಲೇಖನ ಈಗಾಗಲೇ ಪ್ರಕಟವಾಗಿ ದಲಿತ ಸಂಘರ್ಷ ಸಮಿತಿಯ ಗೆಳೆಯರ ಸಿಟ್ಟಿಗೆ ಮತ್ತು ಚಿಂತನೆಗೆ ಕಾರಣವಾಗಿದೆ. ಈ ಸಂಬಂಧವಾಗಿ ಬರುತ್ತಿರುವ ನೂರಾರು ಪ್ರತಿಕ್ರಿಯೆಗಳಲ್ಲಿ ಆಯ್ದು ಮುಂದಿನ 'ಪಂಚಮ' ಸಂಚಿಕೆಗಳಲ್ಲೂ ಪ್ರಕಟಿಸಬೇಕೆಂದಿದ್ದೇವೆ. ಇಲ್ಲಿ ಪ್ರಕಟಿಸಿರುವ ಪ್ರತಿಕ್ರಿಯೆ ದಲಿತ ಸಂಘರ್ಷ ಸಮಿತಿಯ ಅಡಿಕಲ್ಲಿನಂತಿರುವ ವೆಂಕಟೇಶ್ ಅಪರೂಪಕ್ಕೆ ಬರೆದದ್ದು. —ಸಂಪಾದಕ

ದೇವನೂರು ಮಹಾದೇವರವರು ಬರೆದಿರುವ ಲೇಖನ ದಲಿತ ಸಂಘಟನೆಯಲ್ಲಿ ಬಹಳ ಗೊಂದಲ ತಂದಿಟ್ಟು ಎಂದೂ ಬರೆಯದಿರುವ ನನ್ನನ್ನು ಬರೆಯುವಂತೆ ಮಾಡಿದೆ. ಮಹಾದೇವ ಪ್ರಧಾನವಾಗಿ ಗಾಂಧಿ ಚಿತ್ರ ಮತ್ತು ದಲಿತ ಸಂಘಟನೆಯ ಹತ್ತು ಹಲವಾರು ವಿಷಯಗಳನ್ನು ಬರೆದಿರುತ್ತಾರೆ. ಇವರು, ಸಂಘಟನೆಗೆ ಸ್ಪಷ್ಟವಾದ ಸೈದ್ಧಾಂತಿಕ ನಿಲುವು ನೀಡಬೇಕಾದವರೇ ಬಹಿರಂಗ ಚರ್ಚೆಯನ್ನು ಗಮನದಲ್ಲಿಟ್ಟುಕೊಂಡು ಬರೆದಿರುವರೆಂದೆನಿಸುತ್ತದೆ. 'ದ್ಯಾವನೂರು' ಪುಸ್ತಕ ಮಹಾದೇವ ಬರೆದಾಗ ಇದ್ದ ಸಿಟ್ಟು ರೋಷ ನಿಖರವಾದ ತನ್ನ ಅನಿಸಿಕೆಯನ್ನು ನೇರವಾಗಿ ಹೇಳಿರುತ್ತಾರೆ. ತದನಂತರ ಬರೆದ 'ಒಡಲಾಳ'ದಲ್ಲಿ ತನ್ನೆಲ್ಲಾ ಗೊಂದಲಗಳನ್ನು ತಂದಿಟ್ಟಿರುತ್ತಾರೆ. ಈಗ ಬರೆದಿರುವ ಈ ಲೇಖನದಿಂದ ಮಹಾದೇವ ದುರ್ಬಲ ಮನಸ್ಸಿನವರಾಗಿದ್ದಾರೆ. ಸಮಾಜದ ವೈಜ್ಞಾನಿಕ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿ ಧ್ಯಾನೇ ಇಲ್ಲದವರಂತೆ ಕಾಣುತ್ತಾರೆ.



ದಲಿತಸಂಘಟನೆಯಲ್ಲಿ ಮಹಾದೇವವ್ಯಕ್ತಿಗತವಾಗಿದ್ದು ಸಂಘಟನೆಗೆ ಬದ್ಧವಾಗಿಲ್ಲ ಎಂದು ಲೇಖನದ ಪ್ರಾರಂಭದಲ್ಲೇ ವ್ಯಕ್ತವಾಗುತ್ತದೆ. ಗೋವಿಂದಯ್ಯನ ಪ್ರಸ್ತಾಪ ಇಲ್ಲಿ ಅನಿವಾರ್ಯವಾಗಿರಲಿಲ್ಲ. ಸಂಘಟನೆಯ ಕಾರ್ಯಕರ್ತರಾದ ಹರಿಹರಾನಂದ ಸ್ವಾಮಿ ಮತ್ತು ಬೆಟ್ಟಯ್ಯನವರ ಗುಣ ವಿಶ್ಲೇಷಣೆಯನ್ನು ಇವರು ಬೇಕೆಂದು ಪ್ರಸ್ತಾಪ ಮಾಡಿದಂತಿದೆ. ಈ ಲೇಖನವು ಸಂಘಟನೆಗೆ ನುಂಗಲಾರದ ತುತ್ತೇನಲ್ಲ. ಆದರೆ ದಲಿತ ಸಂಘಟನೆಯು ಇಂತಹದನ್ನೆಲ್ಲಾ ಅರಗಿಸಿಕೊಂಡು ತನ್ನ ರೂಪ, ದಿಕ್ಕನ್ನು ಸ್ಪಷ್ಟ ಮಾಡಿಕೊಳ್ಳಬೇಕಾಗಿದೆ.

ಇನ್ನು ಗಾಂಧಿ ಚಿತ್ರ ನೋಡಿರುವ ಮಹಾದೇವ ಅಂಬೇಡ್ಕರ್‌ರವರನ್ನು ಗಮನದಲ್ಲಿಟ್ಟುಕೊಂಡು ಹೇಳಿರುವ ಅಂಶಗಳು ಸ್ಪಷ್ಟವಾಗಿವೆ. ಸಾಮಾಜಿಕವಾಗಿ ಕೆಳಸ್ತರದತ್ತ ಗಾಂಧಿ ಚಲಿಸುವಂತಾಗಲು ಅಂಬೇಡ್ಕರರ ಅಧಮ್ಯ ಚೇತನ ಕಾರಣ ಎಂಬುದರಲ್ಲಿ ಏನೂ ಅನುಮಾನವಿಲ್ಲ ಎಂದಿರುವುದು ಚಾರಿತ್ರಿಕವಾದ ಸತ್ಯವನ್ನು ಗಮನದಲ್ಲಿಟ್ಟುಕೊಂಡು ಹೇಳಿದಂತಿದೆ. ಮುಂದುವರಿದು ಗಾಂಧಿಯದು ಭೂಮಿಯಂತೆ, ಒಂದು ಕ್ಷಣವೂ ನಿಲ್ಲದೆ ಚಲಿಸುವ ಚೇತನ ಎನ್ನುವುದು ನಂಬಲು ಅಸಾಧ್ಯವಾಗಿದೆ. ನೇರವಾಗಿ ಗಾಂಧಿ ಸಿದ್ಧಾಂತ ಹಲವಾರು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಮೊದಲನೆಯದಾಗಿ ಪ್ರಪಂಚದಾದ್ಯಂತ ಗಾಂಧಿ ಸಿದ್ಧಾಂತ ತುಳಿತಕ್ಕೊಳಪಟ್ಟವರ ದನಿ ಆಗುತ್ತಿಲ್ಲ ಯಾಕೆ ? ದಲಿತರು ಕೂಡ ಗಾಂಧಿಯನ್ನು ವೈಜ್ಞಾನಿಕವಾಗಿ ನಿರಾಕರಿಸುತ್ತಾರಲ್ಲವೆ ? ದಲಿತರ ದೃಷ್ಟಿಯಿಂದ ಗಾಂಧಿಯದು "ಚಲಿಸುವ ಚೇತನವಲ್ಲ, ಇದು ನಿಂತ ನೀರು" ಇದರಲ್ಲಿ ವಿಷಕ್ರಿಮಿಗಳು ತುಂಬಾ ಇದ್ದು ಕುಡಿಯಲೂ ಯೋಗ್ಯವಾಗಿಲ್ಲ. ಎಷ್ಟು ಸಾಧ್ಯವೋ ಅಷ್ಟು ಈ ನೀರನ್ನು ಕುದಿಸಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

ದಲಿತರ ದನಿಯಾದ ಅಂಬೇಡ್ಕರ್‌ರವರು ದಲಿತರಲ್ಲಿ ಸ್ವಾಭಿಮಾನ ತಂದರು. ದಲಿತರು ಪ್ರಜ್ಞಾವಂತರಾಗುತ್ತಿರುವುದು ಸವರ್ಣೀಯರಿಗೆ ನುಂಗಲಾರದ ತುತ್ತಾಗುತ್ತಿದೆ. ಅಂಬೇಡ್ಕರ್‌ರವರ ಸತತ ಪ್ರಯತ್ನದಿಂದ ಹಿಂದೂಗಳ ಮನಸ್ಸು ಬದಲಾವಣೆ ಮಾಡಲಾಗಲಿಲ್ಲ. ಆದರೆ ದಲಿತ ಸಂಘ ಒಂದು ಕ್ರಾಂತಿಕಾರಕ ಸಂಘಟನೆಯಾಗಿ ರೂಪಗೊಳ್ಳುವುದು ಅನಿವಾರ್ಯವಾಗಿದೆ. ಇಲ್ಲಿ ಜಾತಿ ನಾಶವಾಗುತ್ತದೆ. ಯಾಕೆಂದರೆ ಸವರ್ಣೀಯರನ್ನೊಳಗೊಂಡು ತುಳಿತಕ್ಕೆ ಒಳಪಟ್ಟ ಎಲ್ಲಾ ಜನರೂ ಹೋರಾಟದ ಮಾಧ್ಯಮದಿಂದ ಬಂದಿರುತ್ತಾರೆ.

ಮಹಾದೇವ ಗುರುತಿಸುವ ಗಾಂಧಿಯವರ ಎರಡೂ ಕೊರತೆಯಿಂದಾಗಿ ನಮ್ಮ ಯುಗದವ ತ

ರದ ಮನುಷ್ಯ ಗಾಂಧಿಯು ಎತ್ತರದ ಆಕಾಶ ಮೆಟ್ಟಿಲು ಎರಡು ಗೇಣು ಕಮ್ಮಿಯಾಗುತ್ತದೆ, ಎಂಬಿರುವುದು ಸರಿಯಲ್ಲ. ಗಾಂಧಿಯವರಿಗೆ ಸಾವಿರಾರು ಕೊರತೆಗಳು ಇದ್ದವು ಎಂಬುದನ್ನು ಅರ್ಥ ಮಾಡಿಕೊಳ್ಳಲು ಅಂಬೇಡ್ಕರ್ ದೃಷ್ಟಿಕೋನದಿಂದ ನೋಡಲು ಮಹಾದೇವರವರಿಗೆ ಸಾಧ್ಯವಿದೆ. ತಾವೇ ಹೇಳುವಂತೆ ಅಂಬೇಡ್ಕರ್‌ರವರ ಕಠೋರತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎಂಬಿರುವುದು ಸ್ಪಷ್ಟತೆ ಕೊಡುತ್ತದೆ. ಬೇಕೆಂದು ಗಾಂಧಿಯವರನ್ನು ಆಕಾಶದೆತ್ತರಕ್ಕೆ ತೆಗೆದುಕೊಂಡು ಹೋಗಿರುವುದು ಮೆಟ್ಟಿಲುಗಳಿಲ್ಲದ ಮಹಡಿ ಹತ್ತಿದಂತಿದೆ.

ಮಹಾದೇವ, 'ವಸ್ತುಸ್ಥಿತಿಯನ್ನು ಗಮನಕ್ಕೆ ತಂದು ಅಹಿಂಸೆಯನ್ನು ಹೇಳುತ್ತಿದ್ದ, ಗೆಳೆಯರು ಕೇಳುತ್ತಿರಲಿಲ್ಲ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಂಬೇಡ್ಕರ್‌ರವರು ಕೂಡ ಬೌದ್ಧರಾದುದು ಅಹಿಂಸೆಯ ದೃಷ್ಟಿಯಿಂದ ಎಂದು ಹೇಳುತ್ತಾರೆ. ಆದರೆ ಸಾಮಾಜಿಕವಾಗಿ ಅಂಬೇಡ್ಕರ್‌ರವರು ತುಂಬಾ ವೈಜ್ಞಾನಿಕವಾಗಿ ಸ್ಪಂದಿಸಿರುತ್ತಾರೆ. ಇಲ್ಲಿ ಅಂಬೇಡ್ಕರ್ ಮತ್ತು ಗಾಂಧಿ ನಂಬಿದ್ದ ಅಹಿಂಸಾ ಸಿದ್ಧಾಂತಕ್ಕೆ ಅಜಗಜಾಂತರ ಅಂತರವಿದೆ. ಉದಾ- 1930 ರಲ್ಲಿ ಗಾಯಕ್‌ವಾಡ್ ನಾಯಕತ್ವದಲ್ಲಿ ಕಲಾರಂ ದೇವಸ್ಥಾನದ ಪ್ರವೇಶಕ್ಕಾಗಿ ಅಹಿಂಸಾತ್ಮಕವಾದ ಚಳುವಳಿ ಪ್ರಾರಂಭವಾಗುತ್ತದೆ. ಇದಕ್ಕೆ ಅಂಬೇಡ್ಕರ್‌ರವರ ಪೂರ್ಣ ಬೆಂಬಲವಿರುತ್ತದೆ. ಆಗ ಈ ಪ್ರಾಂತ್ಯದಲ್ಲಿಯೇ ಗಾಂಧಿಯವರು ದಂಡಿ ಪ್ರಯಾಣ ಮಾಡುತ್ತಿದ್ದರು. ಹದಿನೈದು ಸಾವಿರಕ್ಕೂ ಮೇಲ್ಪಟ್ಟು ದಲಿತರು ಈ ಚಳುವಳಿಯಲ್ಲಿ ಭಾಗವಹಿಸಿ ತೀವ್ರಸ್ಥಾಯಿ ಮುಟ್ಟಿಸಿದ್ದರು. ಇದರಿಂದ ಕುಪಿತಗೊಂಡ ಸವರ್ಣೀಯರು ಒಂದು ವರ್ಷದ ಕಾಲ ದೇವಸ್ಥಾನ ತೆಗೆಯಲಿಲ್ಲ. ಸಂಘಟಿತರಾಗಿ ದಬ್ಬಾಳಿಕೆಯನ್ನು ಮುಂದುವರೆಸಿದರು. ಇದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಸತ್ಯಾಗ್ರಹಿಗಳನ್ನು ಎರಡು ವರ್ಷಗಳ ಕಾಲ ಬಂಧನದಲ್ಲಿ ಇರಿಸಿದರು. ಆಗ ಇದರಿಂದ ಕುಪಿತಗೊಂಡ ಅಂಬೇಡ್ಕರ್‌ರವರು ದೇವಸ್ಥಾನ ಚಳುವಳಿಯನ್ನು ಕೈಬಿಟ್ಟರು. ತದನಂತರ ಗಾಂಧೀಜಿ ದಲಿತರ ದೇವಸ್ಥಾನ ಪ್ರವೇಶಕ್ಕೆ ತುಂಬಾ ಪ್ರಯತ್ನ ಪಟ್ಟರು. ಗಾಂಧಿಯವರು ತರಲು ಪ್ರಯತ್ನಿಸಿದ ದೇವಸ್ಥಾನದ ಕಾನೂನು ಮಸೂದೆಯನ್ನು ಅಂಬೇಡ್ಕರ್‌ರವರು ವಿರೋಧಿಸಿದರು. ಇದರಿಂದ ಅಂಬೇಡ್ಕರ್‌ರವರು ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳು ಬಹಳ ವೈಜ್ಞಾನಿಕವಾಗಿರುತ್ತಿದ್ದವು. ಆದ್ದರಿಂದ ಸಾಮಾಜಿಕವಾಗಿ ಅಂಬೇಡ್ಕರ್‌ರವರು ಗಾಂಧಿಗಿಂತ ತೀವ್ರವಾದಿಯಾಗಿದ್ದರೆಂದು ತಿಳಿಯಬೇಕಾಗುತ್ತದೆ.

ಎನ್. ವೆಂಕಟೇಶ್

ಈ ದೇಶದ ಹತ್ತಾರು ಸಂಘಟನೆಗಳು ಎದುರಿಸಿದ ಸಮಸ್ಯೆಯನ್ನೇ ಈಗ ದಲಿತ ಸಂಘರ್ಷ ಸಮಿತಿ ಎದುರಿಸುತ್ತಿದೆ. ಪ್ರತಿ ಸಂಘಟನೆ ಅಥವಾ ರಾಜಕೀಯ ವಿಷಯಗಳಲ್ಲಿ ತೀವ್ರಗಾಮಿಗಳು ಮಂದಗಾಮಿಗಳು ಇದ್ದೇ ಇರುತ್ತಾರೆ. ಇವೆರಡರ ಮಧ್ಯೆ ಸಾಮಾಜಿಕ ಸಂಘರ್ಷ ಇರುತ್ತದೆ. ಬ್ರಿಟಿಷರಿಂದ ಗಾಂಧಿಜಿ ಸ್ವತಂತ್ರ ಪಡೆದದ್ದು ಒಂದು ರೀತಿ ಸುಲಭದ್ದು ಎಂದು ವ್ಯಕ್ತಪಡಿಸಿದ ಮಹಾದೇವರವರು ಚಳುವಳಿಯ ಬೆಳವಣಿಗೆಯನ್ನು ಅರ್ಥಮಾಡಿಕೊಂಡಿಲ್ಲ.

1939 ರಲ್ಲಿ ತ್ರಿಪುರಾದಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಯಲ್ಲಿ ಮುಂದಾಳುಗಳ ಪರವಾಗಿ ಪಟ್ಟಾಭಿಯನ್ನು ಗಾಂಧೀಜಿ ಪ್ರತಿಪಾದಿಸುತ್ತಾರೆ. ಆಗ ಸುಭಾಸ್ ಚಂದ್ರಬೋಸ್ ತೀವ್ರಗಾಮಿಯಾಗಿದ್ದು ಪೈಪೋಟಿಗೆ ನಿಲ್ಲುತ್ತಾರೆ. ಇದರಿಂದ ಸುಭಾಸ್‌ಚಂದ್ರಬೋಸ್‌ಗೆ 1575 ಓಟುಗಳು ಪಟ್ಟಾಭಿಗೆ 1375 ಓಟುಗಳು ಬಂದು ಬೋಸ್ ಗೆಲ್ಲುತ್ತಾರೆ. ಇದರಿಂದ ಗಾಂಧೀಜಿಗೆ ತಾನುನಂಬಿದ್ದ ಅಹಿಂಸಾ ಸಿದ್ಧಾಂತ ಕಾರ್ಯಕ್ರಮದಲ್ಲಿ ಬಹುಸಂಖ್ಯಾತರಿಗೆ ನಂಬಿಕೆ ಇಲ್ಲ ಎಂದು ಕುಪಿತಗೊಂಡು ಸಹಚರರೊಂದಿಗೆ ರಾಜೀನಾಮೆ ನೀಡುತ್ತಾರೆ.

ಪ್ರತಿಕ್ರಿಯೆ

ನಮಗೆ ಗಾಂಧೀಜಿ ಕೂಡ ಸಂಘಟನಾತ್ಮಕ ತೀರ್ಮಾನಕ್ಕೆ ಬದ್ಧನಾಗಿರುತ್ತಿರಲಿಲ್ಲ, ವ್ಯಕ್ತಿಗತವಾದ ತೀರ್ಮಾನಗಳನ್ನು ಬಲವಂತವಾಗಿ ಜನರ ಮೇಲೆ ಹೇರುತ್ತಿದ್ದನಲ್ಲದೆ ಸರ್ವಾಧಿಕಾರಿ ಕೂಡ ಆಗಿದ್ದ ಎಂದೆನಿಸುತ್ತದೆ. ಮಹಾದೇವರವರಲ್ಲಿ ಗಾಂಧೀಜಿಯವರ ಮೇಲಿನ ನಂಬಿಕೆ ಇದೆಯೆಂದು ಈ ಲೇಖನದಿಂದ ಅನಿಸುತ್ತದೆ.

ಸಂಘಟನೆಯ ಕಾರ್ಯಕರ್ತರ ಗುಣವಿಶ್ಲೇಷಣೆ ಮತ್ತು ದೇವಲಾಪುರದ ಭೂ ಹೋರಾಟವನ್ನು ತಂದಿರುವುದು ಅನಾವಶ್ಯಕವಾಗಿದೆ. ಬಹಳ ದಿವಸದಿಂದ ತನ್ನ ಮನಸ್ಸಿನಾಳದಲ್ಲಿನ ಆತಂಕ ವ್ಯಕ್ತಪಡಿಸಲು ಈ ಗಾಂಧಿ ಚಿತ್ರ ಉಪಯೋಗಿಸಿಕೊಂಡಿರುತ್ತಾರೆ ಎಂದು ಅನುಮಾನ ಬರುತ್ತದೆ. ದೇವಲಾಪುರ ಭೂ ಹೋರಾಟ ಎರಡು ತಿಂಗಳು ಸತತವಾಗಿ ನಡೆದು ಕಾಡು ಕತ್ತರಿಸಿ ಬೆಳೆ ಬೆಳೆದು ಸಹಜವಾಗಿ ಬೇಗ ಇತ್ಯರ್ಥ ಮಾಡಿಕೊಳ್ಳುವ ಕಾತರದಿಂದ ಧರಣಿ ಮಾಡಿದ್ದರು. ಸಹಜವಾಗಿ ಅಧಿಕಾರಿಗಳ ನಿರ್ಲಕ್ಷ್ಯತೆಯ ಬಗ್ಗೆ ಪ್ರಸ್ತಾಪ ಬಂದಿರುತ್ತದೆ. ಆದರೆ ಮಹಾದೇವರವರು ಅದನ್ನೇ ದೊಡ್ಡದು ಮಾಡಿ ಅಧಿಕಾರಿಯ ಪರ ವಹಿಸುವುದು ಸರಿಯಲ್ಲ. ಇದುವರೆವಿಗೂ ದೇವಲಾಪುರಕ್ಕೆ ಹೋಗದ ಮಹಾದೇವರಿಗೆ ಎಷ್ಟರಮಟ್ಟಿಗೆ ಆತಂಕವಿದೆ ಎಂದು ತಿಳಿದುಕೊಳ್ಳುವುದು ಕಷ್ಟವೇನಲ್ಲ. ತನಗಿದ್ದ ಆತಂಕ ಗಾಂಧಿಚಿತ್ರದಿಂದ ದೃಢೀಕರಿಸಿಕೊಂಡು ಅಹಿಂಸೆ ಒಂದು ಬದುಕು ಎಂದುಕೊಂಡಿದ್ದಾರೆ. ದೇವಲಾಪುರದ ಚಳುವಳಿಯಿಂದ ಅಧಿಕಾರಿಗಳು, ಸರ್ಕಾರ, ಏನು, ಎತ್ತ ಎಂದು ನಮ್ಮ ಜನರಲ್ಲಿ ಪ್ರಜ್ಞೆ ಬೆಳಸಬೇಕಾದ ಮಹಾದೇವರವರು ಸರ್ಕಾರದ ಪರ ವಹಿಸಿರುವುದು ವಿಷಾದಕರ ಸಂಗತಿ.

ದಲಿತ ಸಂಘರ್ಷ ಸಮಿತಿಗೆ ತನ್ನದೇ ರೂಪಿಲ್ಲದೆ, ತನ್ನದೇ ದಾರಿಗಳಿಲ್ಲದೆ, ದಿಕ್ಕೆಡುತ್ತಿದೆ ಎಂದು ಹೇಳುವ ಮಹಾದೇವ ಎಷ್ಟರಮಟ್ಟಿಗೆ ಅಶಿಸ್ತಿನವ ಎಂದರೆ ಎಂದೂ ಸಂಘಟನಾತ್ಮಕ ದೃಷ್ಟಿಯಿಂದ ಸಂಘಟನೆಯಲ್ಲಿ ಬಾಯಿಬಿಟ್ಟವನಲ್ಲ. ಇದ್ದಕ್ಕಿದ್ದ ಹಾಗೆ ಬಹಿರಂಗವಾಗಿ ಚರ್ಚಿಸುವುದರಿಂದ ಸಂಘಟನೆಗೆ ಬೇಗ ರೂಪ ಮತ್ತು ದಾರಿ ಸಿಗುವುದಾದರೆ ಶ್ಲಾಘನೀಯ. ಹೀಗಿದ್ದು ಕೂಡ ಸಂಘಟನೆಯಲ್ಲಿ ವಸ್ತುಸ್ಥಿತಿ ಅರ್ಥೈಸುವುದರಲ್ಲಿ ಮಹಾದೇವರವರ ಪಾತ್ರ ಬಹಳ ದೊಡ್ಡದು. ದಲಿತರಿಗೆ ತೀವ್ರವಾದ ನೋವಿರುವುದರಿಂದ ತೀವ್ರವಾದಿಯಾಗಲು ನಿರಂತರವಾದ ಪ್ರಯತ್ನ ಇರಬೇಕಾಗುತ್ತದೆ. ನಮ್ಮನ್ನು ಆಳುತ್ತಿರುವ ಸರ್ಕಾರ ಮತ್ತು ನಮ್ಮ ಪರಿಸರ ಹಿಂಸೆಯಿಂದಿರುತ್ತದೆ. "ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂಬುದು" ಒಂದು ಸಾಮಾನ್ಯ ಸಾಮಾಜಿಕ ನಿಯಮ. ಇದನ್ನು ಸಂಘಟನೆಯ ನಮ್ಮ ಅನುಭವಗಳು ಸ್ಪಷ್ಟಪಡಿಸಿವೆ. ಮಹಾದೇವರವರ ಈ ಲೇಖನ ನಿರ್ದಿಷ್ಟವಾದ ಸೈದ್ಧಾಂತಿಕ ನೆಲಗಟ್ಟನ್ನು ಬೇಗ ಕಂಡುಕೊಳ್ಳುವ ಸಾಧ್ಯತೆಯನ್ನು ಹೆಚ್ಚು ಮಾಡಿದೆ ಎಂದೆನಿಸುತ್ತದೆ.

ಕ್ಷಮಿಸಿ

'ಪಂಚಮ' ವಿಶೇಷ ಸಂಚಿಕೆಗೆಂದೇ ದೇವನೂರ ಮಹಾದೇವ ಅವರು ಬರೆದ ಗಾಂಧಿ ಚಿತ್ರದ ಬಗೆಗಿನ ಲೇಖನ ಪಂಚಮ ಬಿಡುಗಡೆಯಾಗುವ ಮೊದಲೇ ಅದು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದುದಕ್ಕೆ, ಅದನ್ನೇ ಪುನಃ ನಮ್ಮ ಓದುಗರಿಗೆ ಓದಿಸಬೇಕಾಗಿರುವುದಕ್ಕೆ ಕ್ಷಮೆ ಕೋರುತ್ತೇವೆ.

—ಸಂಪಾದಕ

ರಾಗಿಮುದ್ದೆ ಸೊಪ್ಪಿನ ಸಾರಿಗಾಗಿ ದಲಿತ ವಿದ್ಯಾರ್ಥಿ ಒಕ್ಕೂಟದ ಆಂದೋಳನ

ತೀರ್ಥರೂಪ ಸಮಾನರಾದ ಉಪಕುಲಪತಿಗಳಿಗೆ
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು-6

ತಾ|| 5-9-83ರಂದು ದಲಿತ ವಿದ್ಯಾರ್ಥಿ ಒಕ್ಕೂಟವು ಸಭೆ ಸೇರಿ ಕೆಳಗಿನ ಅಂಶಗಳನ್ನು ಚರ್ಚಿಸಿ ತಮಗೆ ವಿನಂತಿಸಲು ನಿರ್ಧರಿಸಲಾಯಿತು :

(1) ವಿಶ್ವವಿದ್ಯಾನಿಲಯವು ನಡೆಸುವ ಹಾಸ್ಟೆಲ್‌ಗಳಲ್ಲಿ ಊಟದ ಬಿಲ್ಲು ಮುನ್ನೂರು ರೂಪಾಯಿಗೂ ಹೆಚ್ಚು ಬರುತ್ತಿರುವುದರಿಂದ ಬಡ ವಿದ್ಯಾರ್ಥಿಗಳು ಬೀದಿ ಪಾಲಾಗುತ್ತಾರೆ. ತಿಂಗಳೊಂದಕ್ಕೆ ಊಟಕ್ಕೆ ಮುನ್ನೂರು ರೂಪಾಯಿ ಹಣಕಟ್ಟಬಲ್ಲ ಸಿರಿವಂತರು ಎಲ್ಲಾರೂ ಬದುಕಬಲ್ಲರು. ಅದಕ್ಕಾಗಿ ಹಾಸ್ಟೆಲ್‌ಗಳನ್ನು ಬಡವಿದ್ಯಾರ್ಥಿಗಳಿಗಾಗಿ ನಡೆಸಿ ಎಂದು ವಿನಂತಿಸುವೆವು. ಆದ್ದರಿಂದ–

ಬೇಡಿಕೆ : ರಾಗಿಹಿಟ್ಟು ಸೊಪ್ಪಿನಸಾರು ಹಾಸ್ಟೆಲ್ ಊಟವಾಗಲಿ.

(2) ಹಳ್ಳಿಗಾಡಿನ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನಲ್ಲಿ ಸೀಟು ಸಿಗದಿದ್ದಲ್ಲಿ, ಓದು ನಿಲ್ಲಿಸಿ ಊರು ಸೇರಬೇಕಾಗುತ್ತದೆ. ನಗರಗಳಲ್ಲು ಇನ್ನೂ ಇರುವ ಅನಾಗರೀಕ ಜಾತಿಯತೆಯಿಂದಾಗಿ ದಲಿತರಿಗೆ ಮನೆಮಠ ಸಿಗದ ಪರಿಸ್ಥಿತಿ ಇದೆ. ಆದ್ದರಿಂದ,

ಬೇಡಿಕೆ : ಹಾಸ್ಟೆಲ್ ಸೀಟಲ್ಲಿ ಶೇಕಡಾ 50 ದಲಿತರಿಗೆ ಮೀಸಲಾಗಿರಲಿ.

ಮೇಲಿನ ಎರಡೂ ಬೇಡಿಕೆಗಳನ್ನು ಈಡೇರಿಸಿ ಎಂದು ಪ್ರಾರ್ಥಿಸುತ್ತೇವೆ. ಈಡೇರದಿದ್ದಲ್ಲಿ ಅನಿವಾರ್ಯವಾಗಿ ಸತ್ಯಾಗ್ರಹಕ್ಕೆ ನಮ್ಮನ್ನು ತಾವು ದೂಡುತ್ತೀರಿ. ಆಗಲೂ ಶಾಂತಿಯುತವಾಗಿ ಅತಿಥಿ ಗೃಹ ಮತ್ತು ವಿಭಾಗದ ರೂಮುಗಳಲ್ಲಿ ಹಾಗೂ ವಾರ್ಡನ್, ಡೀನ್ ಕುಲಪತಿಗಳ ಮನೆಗಳನ್ನು ನಮ್ಮ ಮಾತೃಪಿತೃಗಳ ಮನೆಗಳೆಂದು ಭಾವಿಸಿ, ಅಲ್ಲಿ ವಾಸಿಸುತ್ತಾ, ಅಂಬಲಿ ಕಾಯಿಸಿಕೊಂಡು ಕುಡಿದು ನಮ್ಮ ಓದು ಮುಂದುವರಿಸುತ್ತೇವೆ.

ಈ ಶಾಂತಿ ಚಳುವಳಿಗೆ ವಿಶ್ವವಿದ್ಯಾನಿಲಯವಾಗಲಿ ಪೋಲೀಸರಾಗಲಿ ಭಂಗತಂದರೆ ಹಾಸ್ಟೆಲ್‌ನಲ್ಲಿ ಸೀಟು ಸಿಗದೆ ಊರಿಗೆ ಹೋಗುವ ಬದಲು ಜಾಮೀನ್ ಕೊಡದೆ ಜೈಲಲ್ಲಿ ಎರಡೂ ವರ್ಷಗಳನ್ನು ಕಳೆಯಲು ನಿಶ್ಚಯಿಸಿದ್ದೇವೆ. ತಾವು ಮೇಲಿನ ಎರಡೂ ಬೇಡಿಕೆಗಳನ್ನು ಈಡೇರಿಸಿ ಅಥವಾ ನಮ್ಮನ್ನು ಜೈಲಿಗೆ ಕಳಿಸಿ ಎಂದು ಪ್ರಾರ್ಥಿಸುವೆವು.

ತಮ್ಮ ವಿಶ್ವಾಸಿಗಳು
ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು.

ಯಾವ ಜನಾಂಗದವರು 'ಪ್ರಗತಿ' ಪರರಾದರೂ ಆ ಜನಾಂಗದ ಹಿತಕ್ಕೆ ತಕ್ಕಂತೆ 'ಪ್ರಗತಿ' ಎಂಬುದು ಹಿಗ್ಗಿರುವುದು ಅಥವಾ ಕುಗ್ಗಿರುವುದು ಜಾತಿಯಿಂದಾದ ಭಾರತದ ಮಟ್ಟಿಗೆ ಸಂಪೂರ್ಣ ನಿಜವಾದ ಮಾತು. ಇದರಿಂದಲೇ ದಲಿತರು ಪ್ರಗತಿಪರರಾದರೆ ಅವರ ವಸ್ತುಸ್ಥಿತಿಯಿಂದಾಗಿಯೇ ಸಂಪೂರ್ಣ ಪ್ರಗತಿಪರರಾಗಿರುತ್ತಾರೆ ಎಂಬುದನ್ನು, ಮೈಸೂರಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ಇತ್ತೀಚೆಗೆ ರಾಗಿಹಿಟ್ಟು ಸೊಪ್ಪಿನ ಸಾರು ಹಾಸ್ಟೆಲ್‌ನ ಊಟವಾಗಲಿ ಎಂಬ ಚಳವಳಿಯು ನಿಜವಾಗಿಸುತ್ತದೆ. ದಲಿತರೆಲ್ಲರಿಗೂ ಈ ಚಳವಳಿಯಿಂದಾಗಿ ಹಾಸ್ಟೆಲ್‌ನಲ್ಲಿ ಸೀಟು ಸಿಗುವಂತಾದರೂ ಅದಷ್ಟಕ್ಕೆ ತೃಪ್ತಿಪಡದ ಹಸಿವು ಯಾತನೆಯ ಹಿನ್ನೆಲೆಯ ವಿದ್ಯಾರ್ಥಿ ಒಕ್ಕೂಟವು ಸ್ಕಾಲರ್‌ಷಿಪ್ ಸಿಗದ, ಮೂನ್ನೂರೂ ಬಿಲ್ಲು ಕಟ್ಟಲಾಗದ ಇತರೆ ಬಡ ವಿದ್ಯಾರ್ಥಿಸಮೂಹದ ಹಸಿವು ಯಾತನೆಯನ್ನು ತನ್ನದನ್ನಾಗಿ ಮಾಡಿಕೊಂಡು ಹೋರಾಟಕ್ಕೆ ನಿಂತಿದೆ. ಈ ಹೋರಾಟವು ದಿಕ್ಕಿಲ್ಲದ ಸಮಾಜಕ್ಕೆ ದಿಕ್ಕು ಕೊಡಬಲ್ಲಷ್ಟು ಆಳ ವ್ಯಾಪ್ತಿ ಪಡೆದಿದೆ.

ರಾಗಿಮುದ್ದೆ ಸೊಪ್ಪಿನ ಸಾರಿನ ಚಳುವಳಿಗೆ ತಂದೆತಾಯಿಗಳೇ ಮುಂದಾಗಿ

ದಲಿತ ವಿದ್ಯಾರ್ಥಿ ಒಕ್ಕೂಟವು ಸಲ್ಲಿಸಿದ ಮನವಿಗೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಎರಡನೆ ಬೇಡಿಕೆಯನ್ನು ಹೆಚ್ಚುಕಮ್ಮಿ ಈಡೇರಿಸಿದರು. ದಲಿತ ವಿದ್ಯಾರ್ಥಿಗಳ ಹಾಸ್ಟೆಲ್ ಸಮಸ್ಯೆ ಬಗೆಹರಿಯಿತು.

ಆದರೆ ವಿದ್ಯಾರ್ಥಿ ಒಕ್ಕೂಟದ ಪ್ರಮುಖ ಮೊದಲನೆ ಬೇಡಿಕೆಯಾದ 'ರಾಗಿಮುದ್ದೆ ಸೊಪ್ಪಿನ ಸಾರು ಹಾಸ್ಟೆಲು ಊಟವಾಗಲಿ, ಎಂಬುದು ಈಡೇರಿಲ್ಲ. ಈ ಬಗ್ಗೆ ಮೈಸೂರು ಜಿಲ್ಲಾ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಶ್ರೀ ಶಂಭುಮ್ಮ ಅವರನ್ನು ಕೇಳಿದಾಗ, ಈ ಸಮಸ್ಯೆಯನ್ನು ರಾಜ್ಯದಾದ್ಯಂತವಾಗಿಸಿ ಲಕ್ಷಾಂತರ ಸಹಿ ಸಂಗ್ರಹಿಸಿ ಏಪ್ರಿಲ್ 14ರಂದು ಸಭೆ ನಡೆಸಿ ಎಲ್ಲಾ ಕಡೆಯಿಂದಲೂ ಒತ್ತಾಯ ತರಲಾಗುವುದೆಂದು ತಿಳಿಸಿದರು. ದಲಿತ ವಿದ್ಯಾರ್ಥಿಗಳಿಗೆ ಸ್ವಲ್ಪವಾದರೂ ಸ್ಕಾಲರ್‌ಷಿಪ್ ಬರುವುದರಿಂದ ಅವರು ಹಾಸ್ಟೆಲ್‌ನಲ್ಲಿ ಕಷ್ಟಪಟ್ಟಾದರೂ ಇರಬಹುದು. ಆದರೆ ತಿಂಗಳಿಗೆ 300 ರೂಪಾಯಿ ಹಾಸ್ಟೆಲ್ ಬಿಲ್ಲು ಕಟ್ಟಲಸಾಧ್ಯವಾದ ಮುಸ್ಲಿಮರು, ಕುಂಬಾರರು, ಹಜಮರಾದಿ ಬಡ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕನಸಾಗಿದೆಯೆಂದು ತಿಳಿಸಿದರು. ಆದಕ್ಕಾಗಿ ರಾಷ್ಟ್ರಪತಿ, ಪ್ರಧಾನಮಂತ್ರಿ ಶಿಕ್ಷಣಮಂತ್ರಿ ಯೂನಿವರ್ಸಿಟಿ ಗ್ರ್ಯಾಂಡ್ ಕಮಿಷನ್ ಮತ್ತು ಮುಖ್ಯಮಂತ್ರಿಗಳಿಗೆ ಈ ಕೆಳಕಂಡ ಮನವಿ ಮಾಡಿ ಎಂದು ವಿನಂತಿಸಲಾಗಿದೆ.

ಮನವಿ
ರಾಗಿ ಮುದ್ದೆ ಸೊಪ್ಪಿನ ಸಾರು ಹಾಸ್ಟೆಲ್ ಊಟವಾಗಲಿ

ಮಾನ್ಯರೇ,

ಈ ಕೆಳಗೆ ಸಹಿ ಮಾಡಿರುವ ವಿದ್ಯಾರ್ಥಿ/ತಂದೆ/ತಾಯಿಯಾದ ನಾನು ತಮ್ಮಲ್ಲಿ ವಿನಂತಿಸುವುದು ಏನೆಂದರೆ–ಸರ್ಕಾರಗಳು ವಿಶ್ವವಿದ್ಯಾನಿಲಯಗಳು ನಡೆಸುತ್ತಿರುವ ಹಾಸ್ಟೆಲುಗಳ ಬಿಲ್ಲು ತಿಂಗಳಿಗೆ 200ರಿಂದ400ರೂ.ಗಳು ಮೀರಿ ಬರುತ್ತಿದ್ದು ಈ ದೇಶದಲ್ಲಿ ಹುಟ್ಟಿದ ಬಡವ ಮಾತ್ರದವನು ಆ ಬಿಲ್ಲು ಕಟ್ಟಿ ಅಲ್ಲಿ ಬದುಕದಂಥ ಪರಿಸ್ಥಿತಿ ಇದೆ, ಮೇಲಿನಷ್ಟು ಹಣ ಕಟ್ಟಬಲ್ಲವನು ಎಲ್ಲಾದರೂ ಬದುಕಬಲ್ಲನಾದ್ದರಿಂದ ಹಾಸ್ಟೆಲ್ಲನ್ನು ಬಡವರಿಗಾಗಿ ನಡೆಸಿ ಎಂದು ಒತ್ತಾಯಿಸುತ್ತಿದ್ದೇವೆ. ರಾಗಿಹಿಟ್ಟುಸೊಪ್ಪಿನಸಾರು ಹಾಸ್ಟೆಲ್ ಊಟವಾಗಲಿಎಂದುವಿನಂತಿಸುತ್ತಿದ್ದೇವೆ. ವಂದನೆಗಳೊಡನೆ

ವಿಳಾಸ : ....
....
(ಸಹಿ)